# ಆರ್ಜವ-ವಾಣಿ



ಪ್ರವಚನಕಾರರು

ಪರಮ ಪೂಜ್ಯ ಆಚಾರ್ಯ ಶ್ರೀ 108 ಆರ್ಜವಸಾಗರ ಮಹಾರಾಜರು

# ಪ.ಪೂ. ಆಚಾರ್ಯ ಶ್ರೀ 108
# ಆರ್ಜವಸಾಗರ ಮಹಾರಾಜರ
# ಪರಿಚಯ



| | | |
|---|---|---|
| ಜನ್ಮನಾಮ | : | ಪಾರಸಚಂದ ಜೈನ |
| ತಂದೆ | : | ಶ್ರೀ ಶಿಖರಚಂದ ಜೈನ |
| ತಾಯಿ | : | ಶ್ರೀಮತಿ ಮಾಯಾಬಾಯಿ ಜೈನ |
| ಜನ್ಮ ದಿನಾಂಕ | : | 11.09.1967 (ಭಾದ್ರ ಶುಕ್ಲ ಅಷ್ಟಮಿ) |
| ಜನ್ಮ ಸ್ಥಳ | : | ಘುಟೇರಾ ಕಲಾ, ದಮೋಹ (ಮಧ್ಯ ಪ್ರದೇಶ) |
| ಬಾಲ್ಯದ ದಿನಗಳು | : | ಪಥರಿಯಾ ಜಿ. ದಮೋಹ |
| ಶಿಕ್ಷಣ | : | ಬಿ.ಎ (ಪ್ರಥಮ ವರ್ಷ) ಡಿಗ್ರಿಕಾಲೇಜ(ದಮೋಹ) |
| ಬ್ರಹ್ಮಚರ್ಯವ್ರತ | : | 19.12.1984 ಅತಿಶಯ ಕ್ಷೇತ್ರ ಪನಾಗರ (ಮಧ್ಯ ಪ್ರದೇಶ) |
| ಏಳನೇ ಪ್ರತಿಮಾ | : | 1984 ಸಿದ್ಧಕ್ಷೇತ್ರ ಆಹಾರಜೀ |
| ಕ್ಷುಲ್ಲಕ ದೀಕ್ಷೆ | : | 8.11.1985 ಸಿದ್ಧಕ್ಷೇತ್ರ ಆಹಾರಜೀ |
| ಐಲಕ ದೀಕ್ಷೆ | : | 10.07.1987 ಅತಿಶಯ ಕ್ಷೇತ್ರ ಥುಬೋನಜೀ |
| ಮುನಿ ದೀಕ್ಷೆ | : | 31.03.1988 ಮಹಾವೀರ ಜಯಂತಿ ಸಿದ್ಧಕ್ಷೇತ್ರ ಸೋನಾಗಿರಿಜೀ |
| ದೀಕ್ಷಾಗುರು | : | ಪ.ಪೂ ಆಚಾರ್ಯ ಶ್ರೀ 108 ವಿದ್ಯಾಸಾಗರ ಮಹಾರಾಜರು |
| ಆಚಾರ್ಯಪದ | : | 25.01.2015 (ಮಾಘ ಶುಕ್ಲ ಷಷ್ಠಿ) ಸಮಾಧಿ ಪೂರ್ವ ಆಚಾರ್ಯ ಶ್ರೀ ಸೀಮಂಧರಸಾಗರರಿಂದ |
| ಕೃತಿಗಳು | : | ಧರ್ಮಭಾವನಾ ಶತಕ, ಜೈನಾಗಮ ಸಂಸ್ಕಾರ, ತೀರ್ಥೋದಯಕಾವ್ಯ, ಪರಮಾರ್ಥಸಾಧನಾ, ಬಚಪನಕಾ ಸಂಸ್ಕಾರ, ಸಮ್ಯಕ್ ಧ್ಯಾನ ಶತಕ ಜೈನಧರ್ಮ ಮೇ ಕರ್ಮ ವ್ಯವಸ್ಥಾ, ನೇಕ ಜೀವನ ಪರ್ಯೂಷಣ ಪಿಯೂಷ, ಸಾಮ್ಯ ಭಾವನಾ, ಆರ್ಜವವಾಣಿ, ಆರ್ಜವ ಕವಿತಾಯೇ |
| ಪದ್ಯಾನುವಾದ | : | ಗೋಮ್ಮಟೇಶ ಥುಧಿ, ವಾರಸಾಣುವೆಕ್ಖಾ, ಇಷ್ಟೋಪದೇಶ, ಸಮಾಧಿ ತಂತ್ರ |

# ಆರ್ಜವ-ವಾಣಿ

## ಪರಮ ಪೂಜ್ಯ ಆಚಾರ್ಯ ಶ್ರೀ 108 ಆರ್ಜವ ಸಾಗರ ಮಹಾರಾಜರ ಪತ್ರಿಕೆಗಳಲ್ಲಿ ಪ್ರಕಟವಾದ ಮಂಗಲ ಪ್ರವಚನಗಳ ಸಂಗ್ರಹ


–ಮೂಲ ಹಿಂದಿ ಪ್ರವಚನಕಾರರು–

**ಆಚಾರ್ಯ ಶ್ರೀ 108 ಆರ್ಜವ ಸಾಗರ ಮಹಾರಾಜರು**

–ಸಂಗ್ರಹಕಾರರು–

**ಓಂ ಪ್ರಕಾಶ್ ಗುಪ್ತಾ,** ಅಲವರ, ರಾಜಸ್ಥಾನ

**ಡಾ. ಅಜಿತ ಕುಮಾರ ಜೈನ,** ಭೋಪಾಲ, ಮಧ್ಯಪ್ರದೇಶ

–ಕನ್ನಡಾನುವಾದ–

**ಪ್ರೊ. ಜೀವಂಧರಕುಮಾರ ಕುಬೇರಪ್ಪ ಹೋತಪೇಟಿ**

ಶ್ರವಣಬೆಳಗೊಳ, ಕರ್ನಾಟಕ

09448179946



–ಪ್ರಕಾಶಕರು–

**ಶ್ರೀ ಸುರೇಶ ಧರೆಪ್ಪ ಶ್ರೀಗೋನ ಮತ್ತು ಶ್ರೀಮತಿ ಆಶಾ ಸುರೇಶ ಶ್ರೀಗೋನ**

ಬೆಂಗಳೂರು

ಆರ್ಜವ–ವಾಣಿ : ಮೂಲ ಹಿಂದಿ

ಪ್ರವಚನಕಾರರು : ಆಚಾರ್ಯ ಶ್ರೀ 108 ಆರ್ಜವಸಾಗರ ಮಹಾರಾಜರು

ಸಂಗ್ರಹಕಾರರು : ಪತ್ರಕಾರ ಓಂಪ್ರಕಾಶ ಗುಪ್ತಾ, ಅಲವರ
ಡಾ. ಅಜಿತ ಕುಮಾರ ಜೈನ, ಭೋಪಾಲ

ಕನ್ನಡಾನುವಾದ : ಪ್ರೊ. ಜೀವಂಧರಕುಮಾರ ಕುಬೇರಪ್ಪ ಹೋತಪೇಟಿ
ಶ್ರವಣಬೆಳಗೊಳ

ಪ್ರಕಾಶನ ವರ್ಷ : 2017

ಪ್ರತಿಗಳು : 504

ಬೆಲೆ : ಸದುಪಯೋಗ

ಪ್ರಕಾಶಕರು ಹಾಗೂ ಪ್ರತಿಗಳು ದೊರೆಯುವ ಸ್ಥಳ : ಶ್ರೀ ಸುರೇಶ ಧರೆಪ್ಪ ಶ್ರೀಗೋನ ಶ್ರೀಮತಿ ಆಶಾ ಸುರೇಶ ಶ್ರೀಗೋನ ದಂಪತಿಗಳು
ಫ್ಲಾಟ್ ನಂ. 012,
ಕಲ್ಪತರು ಲೇಕ್ ವ್ಯೂ ಅಪಾರ್ಟ್‌ಮೆಂಟ್,
ಪುಟ್ಟೇನಹಳ್ಳಿ 7ನೇ ಫೇಸ್,
ಬೆಂಗಳೂರು – 560 078
ಮೊಬೈಲ್ : 9739228106

ಅಕ್ಷರ ಸಂಯೋಜನೆ ಹಾಗೂ ಮುದ್ರಣ : ಕೀರ್ತಿ ಪ್ರಿಂಟರ್ಸ್
'ಓಂಕಾರ', #240–ಎಫ್, 2ನೇ 'ಡಿ' ಅಡ್ಡರಸ್ತೆ,
2ನೇ 'ಬಿ' ಮುಖ್ಯರಸ್ತೆ, ಗಿರಿನಗರ 1ನೇ ಹಂತ,
ಬೆಂಗಳೂರು – 560 085
ದೂರವಾಣಿ : 080–26722034/26722059

# ಸಂಗ್ರಹಕಾರರ ನುಡಿ

ಭಗವಾನ ವೃಷಭನಾಥ–ಭಗವಾನ್ ಮಹಾವೀರರಂತಹ ತೀರ್ಥಂಕರರು ಹಾಗೂ ದಿಗಂಬರ ಋಷಿ–ಮುನಿಗಳಿಂದ ಈ ಭಾರತ ಭೂಮಿಯು ಪವಿತ್ರವಾಗಿದ್ದಿತು ಹಾಗೂ ಜಾತಿ–ಮತಗಳಿಲ್ಲದ ಪಟ್ಟಣ **'ಅಲವರ'** ಧರ್ಮನಗರದ ರೂಪದಲ್ಲಿ ಚರ್ಚಿತವಾಗಿದೆ. ಇದನ್ನು ತಪೋಭೂಮಿ ಎಂದೂ ಸಹ ಕರೆಯಲಾಗಿದೆ. ಯೋಗಿರಾಜ ಭರ್ತೃಹರಿಗಳಂತಹ ಅನೇಕ ಮಹಾನ್ ಆತ್ಮಗಳು ಈ ಭೂಮಿಯಲ್ಲಿ ಘೋರ ತಪಸ್ಸು ಮಾಡಿ ಇಲ್ಲಿಯ ಮಣ್ಣನ್ನು ಧನ್ಯಗೊಳಿಸಿದ್ದಾರೆ. ಈ ಪಾವನ ಭೂಮಿಯಲ್ಲಿ ವಿಭಿನ್ನ ಧರ್ಮದ ಸಾಧುಗಳು–ಸಂತರು ಆಗಾಗ ಬಂದು–ಹೋಗುತ್ತಿರುತ್ತಾರೆ. ಆದರೆ ಅವರಲ್ಲಿ ಜೈನ ಸಂತರ ವಿಷಯ ವಿಶೇಷವೇ ಬೇರೆಯಾಗಿರುತ್ತದೆ. ಇವರಲ್ಲಿ ವಿಶೇಷವಾಗಿ ದಿಗಂಬರ ಮುನಿರಾಜರ ದರ್ಶನವಾದಾಗ ಮನಸ್ಸು ಹಾಗೂ ರೋಮ–ರೋಮಗಳು ಪುಲಕಿತವಾಗುತ್ತವೆ. ಈ ಪಂಚಮಕಾಲದಲ್ಲಿಯೂ ಸಹ ಇಂತಹ ಕಠೋರ ನಿಯಮ, ಸಂಯಮ ಹಾಗೂ ತಪ, ಸಾಧನೆಯುಳ್ಳವರು ತ್ಯಾಗಿ ಹಾಗೂ ವೀತರಾಗಿ ಸಂತರು ಇರುವುದೇ ಇದಕ್ಕೆ ಕಾರಣವಾಗಿದೆ. ನನ್ನ ಯಾವ ಅಜ್ಞಾತ ಪುಣ್ಯದ ಪ್ರತಿಫಲ ಇದಾಗಿದೆಯೋ ನನಗೆ ಗೊತ್ತಿಲ್ಲ. ನನಗೆ ಯಾರೇ ದಿಗಂಬರ ಮುನಿರಾಜರು ಅಥವಾ ಜೈನ ಸಾಧು–ಸಂತ–ಸಾಧ್ವಿಗಳ ಆಗಮನದ ಸಮಾಚಾರ ದೊರೆತಾಗ ನಾನು ಅವರ ದರ್ಶನಾರ್ಥಿಯಾಗಿ ಓಡಿ ಬರುತ್ತೇನೆ. ಅವರ ಮಂಗಲ ಉಪದೇಶ ಕೇಳುವ ಅವಕಾಶ ಸಿಕ್ಕಾಗ ನನ್ನ ಅಂತರ್ ಮನಸ್ಸು ಇಂತಹ ಐದು ಮಹಾವ್ರತಧಾರಿ ಸಾಧುಸಂತರ ಪವಿತ್ರವಾಣಿಯನ್ನು ಜನರಿಗೆ ತಲುಪಿಸಲು ನನ್ನ ಪ್ರಯತ್ನ ನಡೆದಿರುತ್ತದೆ. ಮಾತೆ ಸರಸ್ವತಿ ಹಾಗೂ ಜಿನವಾಣಿ ಮಾತೆಯರ ಕೃಪೆ ಮತ್ತು ಆಶೀರ್ವಾದದಿಂದಾಗಿ ಸುಮಾರು 40 ವರ್ಷಗಳಿಂದ ನನಗೆ ಸುಮಾರು 200 ಕ್ಕಿಂತಲೂ ಹೆಚ್ಚು ದಿಗಂಬರ ಮುನಿಗಳ, ಜೈನ ಸಂತರ, ಸಾಧ್ವಿಗಳ, ಆರ್ಯಿಕೆಯರ ಮಂಗಲಮಯವಾಣಿ ಕೇಳಿ, ಅವುಗಳನ್ನು ನನ್ನ ಲೇಖನಿಯಿಂದ ಸಾವಿರಾರು ಲಕ್ಷಾಂತರ ಜನರ ವರೆಗೆ ನಮ್ಮ ದೈನಿಕ ಸಮಾಚಾರ ಪತ್ರ **"ರಾಜಸ್ಥಾನ ಟಾಯಿಮ್ಸ"**ನ ಮಾಧ್ಯಮದಿಂದ ತಲುಪಿಸುವ ನಿರಂತರ ಅವಕಾಶ ನನಗೆ ಪ್ರಾಪ್ತವಾಗಿದೆ ಹಾಗೂ ಈಗಲೂ ಸಹ ಆಗುತ್ತಲಿದೆ.

ಇದೇ ಪಾವನ ಸಂದರ್ಭದಲ್ಲಿ ದೇಶದ ಸುವಿಖ್ಯಾತ ದಿಗಂಬರ ಜೈನ ಆಚಾರ್ಯ ಸಂತ ಶಿರೋಮಣಿ ಪರಮ ಪೂಜ್ಯ ಶ್ರೀ ವಿದ್ಯಾಸಾಗರ ಮಹಾರಾಜರ ಮತ್ತೋರ್ವ ಪರಮ ಶಿಷ್ಯ ಗುರುವರರಾದ ಶ್ರೀ ಆರ್ಜವಸಾಗರರು ತಮ್ಮ ಸಂಘ ಸಹಿತ ಅಲವರನಲ್ಲಿ 20.2.2010 ರಂದು ಮಂಗಲ ಪ್ರವೇಶ ಮಾಡಿದರು. ಪೂಜ್ಯ ಗುರುದೇವರು ಅಲವರಗೆ ಬಂದ ದಿನದಿಂದ ಪ್ರತಿದಿನ ಅವರ ದರ್ಶನ ವಂದನೆ ಅಷ್ಟೇ ಅಲ್ಲ, ಬದಲಾಗಿ ಅವರ ಅಮೃತ ಸಮಾನ ವಾಣಿಯ ಸಂಪೂರ್ಣ ರಸಪಾನ ಮಾಡುವ ಸೌಭಾಗ್ಯ ನನ್ನದಾಗಿದ್ದಿತಲ್ಲದೇ, ಆ ವಾಣಿಯನ್ನು ಜನರಿಗೆ ತಲುಪಿಸುವ ನಿಮಿತ್ತವೂ ಆಯಿತು. ಹಾಗೆ ನೋಡಿದರೆ ಪ್ರತಿಯೊಬ್ಬ ಸಂತರಲ್ಲಿ ಅವರವರದೇ ಆದ

ಅನೇಕ ಸುಂದರ ಸಂಗತಿಗಳು ಕಂಡು ಬರುತ್ತದೆ. ಆದರೆ **ಪೂಜ್ಯ ಗುರುದೇವ ಶ್ರೀ ಆರ್ಜವ ಸಾಗರ** ಮುನಿರಾಜರಲ್ಲಿರುವ ವಿಶೇಷತೆ ಎಂದರೆ ಅವರು ಕಾಣುವ ಹಾಗೂ ಹೇಳುವ ರೀತಿ ಎಷ್ಟು ಸಹಜ, ಸರಳ ಹಾಗೂ ಸೌಮ್ಯವಾಗಿದೆಯೋ ಅಷ್ಟೇ ತತ್ತ್ವಜ್ಞಾನದಲ್ಲಿ ಬಹಳ ಆಳದಲ್ಲಿಳಿಯಲು ದಕ್ಷರಾಗಿದ್ದಾರೆ. ಅವರ ಅಂತರಯಾತ್ರೆಯ "ಸಮ್ಯಕ್ ಧ್ಯಾನ"ದ ಆಧಾರದ ಮೇಲಿರುವ ಮಂಗಲ ಪ್ರವಚನಗಳಲ್ಲಿ ಬಹಳ ಸೂಕ್ಷ್ಮ ವಿವೇಚನೆಯ ಆಂತರಿಕ ಅನುಭವ ಉದ್ಘಾಟನೆಯಾಯಿತು. ಅವರು ವಾಸ್ತವಿಕವಾಗಿ ಬಹಳ ಅದ್ಭುತ ಹಾಗೂ ಮನಸ್ಸಿಗೆ ಭಾರಿ ಪರಿಣಾಮ ಉಂಟುಮಾಡುವರಾಗಿದ್ದರು. ತಪವಿಲ್ಲದೇ ನಿಜವಾದ ಅರ್ಥಾತ್ ಸಮ್ಯಕ್ ಜ್ಞಾನ ಹಾಗೂ ಧ್ಯಾನ ಆಗುವುದಿಲ್ಲವೆಂದು ಹೇಳುತ್ತಾರೆ. ನನಗೆ ಒಬ್ಬ ಶ್ರಾವಕರಿಂದ ಅವರು ಆಜೀವನ ಸಿಹಿ ಮತ್ತು ಉಪ್ಪು ತ್ಯಾಗ ಮಾಡಿದ್ದಾರೆಂದು ಹಾಗೂ ಬಹಳ ಕಠಿಣ ಸಾಧನೆಯ ಮಾರ್ಗದಲ್ಲಿ ಸಾಗುತ್ತಿರುವರೆಂದು ತಿಳಿದು ಬಂದಿತು. ಈ ಕಾರಣದಿಂದಾಗಿ ಅವರು ತತ್ತ್ವದೃಷ್ಟಿಯಿಂದ ತಮ್ಮ ಅಂತರ ಜ್ಞಾನದ ಅಮೃತವಾಣಿಯನ್ನು ಹೇಳಬಲ್ಲವರಾಗಿದ್ದಾರೆಂದು ಅನಿಸಿತು. ಗಂಗಾ ನದಿಯಂತೆ ಅವರ ಪವಿತ್ರವಾಣಿಯ ಅಮೃತಧಾರೆ ಹರಿಯುತ್ತಲಿದೆ.

ನಾನು, ತಮ್ಮ ಸಂಪೂರ್ಣ ಇಂದ್ರಿಯಗಳ ಹಾಗೂ ಚಂಚಲ ಮನದ ಮೇಲೆ ಅಧಿಕಾರ ಸಾಧಿಸಬಲ್ಲ ಇಂತಹ ಮಹಾನ್ ತ್ಯಾಗಿ ಮುನಿರಾಜರ ಸಂಗದಲ್ಲಿ ವಿಹಾರದಲ್ಲಿ ಕಾಲು ನಡಿಗೆಯಿಂದ ಸಾಗುವ ಅವಕಾಶ ನನಗೂ ದೊರೆಯುತ್ತದೆ ಎಂದು ಕನಸಿನಲ್ಲಿಯೂ ಯೋಚಿಸಿರಲಿಲ್ಲ. ಸ್ಕೀಮ ನಂ.10ರಲ್ಲಿ ಇರುವ ಜೈನ ಭವನದಿಂದ ಅವರು ವಿಹಾರ ಮಾಡಿದಾಗ ಅನಾಯಾಸವಾಗಿ ಅವರೊಡನೆ ಸಾಗುವ ಭಾವ ನನ್ನ ಮನಸ್ಸಿನಲ್ಲಿ ಉಂಟಾಗಿ ನಾನು ಅಚಲನಾಗಿ ಹೊರಟುಬಿಟ್ಟೆ. ಪೂಜ್ಯ ಶ್ರೀಗಳ ಹಿಂದೆ-ಹಿಂದೆ ಅನ್ಯ ಶ್ರದ್ಧಾಳು ಜನರೊಂದಿಗೆ ನಾನು ಹೋಗುತ್ತಲಿದ್ದೆ, ಮತ್ತೆ ಯಾವ ಪುಣ್ಯವೋ ಗೊತ್ತಿಲ್ಲ, ತಿಜಾರಾರೋಡ ಲೇಲ್ಯಾಂಡ ಚೌಕನಲ್ಲಿ ಜೊತೆಗಿದ್ದ ಕೆಲವು ಸಹೋದರರು ಹಿಂದಿರುಗಲು ಆಶೀರ್ವಾದ ಪಡೆಯುತ್ತಿದ್ದಾಗ ಗುರುದೇವರ ಪಾವನ ದೃಷ್ಟಿ ನನ್ನ ಮೇಲೆ ಬಿದ್ದಿತು. ಅವರು ಮೆಲ್ಲನೆ ಮುಗಳ್ನಕ್ಕರು ಹಾಗೂ ಅಲ್ಲಿಂದ ನನಗೆ ಪೂಜ್ಯ ಮುನಿರಾಜರೊಂದಿಗೆ ಇರಬೇಕಾಗಿದ್ದಿತು, ಅಲ್ಲಿಯವರೆಗೆ ರಸ್ತೆಯಲ್ಲಿ ಪೂಜ್ಯ ಮುನಿರಾಜರು ನಾನು ನನ್ನ ಜೀವನದಲ್ಲಿ ಕೇಳಿರದ ಅನೇಕ ಪಾವನ ಪ್ರಸಂಗಗಳನ್ನು ಕೇಳುವ ಅವಕಾಶ ದೊರಕಿತು. ಅದರಿಂದಾಗಿ ಶಬ್ದಗಳಲ್ಲಿ ಹೇಳಲಾರದಂತಹ ಆನಂದದ ಲಹರಿಗಳು ತುಂಬಿ ಬಂದವು. ಓರ್ವ ಅಜೈನನ ಬಗ್ಗೆ ಪೂಜ್ಯ ಆರ್ಜವಸಾಗರಜೀ ಗುರುದೇವರು ಇಂದಿಗೂ ನಾನು ಗದ್ಗದಿತನಾಗಿ ನತಮಸ್ತಕನಾಗುವಷ್ಟು ಕೃಪೆ ತೋರಿದರು. ಆ ದುರ್ಲಭ ಪಾವನ ಕ್ಷಣವನ್ನು ನಾನು ಎಂದಿಗೂ ಮರೆಯಲಾರೆ.

ಪೂಜ್ಯ ಗುರುದೇವರ ಅಲವರ ಪ್ರವಾಸದ ಸಂದರ್ಭದಲ್ಲಿ 21 ಪ್ರವಚನಗಳಾದದ್ದು ಹಾಗೂ ಅವುಗಳನ್ನು ನನ್ನ ಮನಸ್ಸಿನ ಜೋಳಿಗೆಯಲ್ಲಿ

ತುಂಬಿಕೊಂಡು ಸಾವಿರಾರು ಜನರಿಗೆ ತಲುಪಿಸಿ, ಈ ಮಂಗಲವಾಣಿಯಿಂದ ವಂಚಿತರಾದವರನ್ನು ತೃಪ್ತ ಗೊಳಿಸಿರುವುದು ಒಂದು ಪಾವನ ಸಂಯೋಗವಾಗಿದೆ. 'ಸತ್ಸಂಗ ಪ್ರವಚನದ ವಿಶೇಷ ಕಾಲಂ'ನ ರೂಪದಲ್ಲಿ ಪ್ರಕಾಶಿತವಾದ ಅವರ ಉಪದೇಶಗಳ ಸಮಾಚಾರ ಪತ್ರಿಕೆಗಳ ಕಟಿಂಗ್‌ನ ಆಧಾರದಿಂದ ಪರಮ ಮುನಿಭಕ್ತ ಹಾಗೂ ವಯೋವೃದ್ಧ ವರಿಷ್ಠ ಸಮಾಜಸೇವಿ ಶ್ರೀ ಬದ್ರಿಪ್ರಸಾದ ಜೈನರು ಈಗ ಪುಸ್ತಕರೂಪದಲ್ಲಿ ಸಂಗ್ರಹ ಮಾಡಿ ದೇಶದಲ್ಲೆಲ್ಲಾ ತಲುಪಿಸುವ ಅತ್ಯಂತ ಶ್ರೇಷ್ಠ ಕಾರ್ಯ ಮಾಡುತ್ತಿದ್ದಾರೆ. ಅವರು ಈ ಹಿಂದೆಯೂ ಸಹ ಮುನಿರಾಜ ಶ್ರೀ ಪಾವನಸಾಗರ ಮಹಾರಾಜರ ಪ್ರವಚನ ಸಂಕಲನದ ಆಧಾರದಿಂದ **"ಪಾವನ ವಾಣಿ"**ಯ ಪ್ರಕಾಶನ ಮಾಡಿ ಜ್ಞಾನದಾನದ ದಿಶೆಯಲ್ಲಿ ತಮ್ಮ ಆರ್ಥಿಕ ಸಹಯೋಗ ಮಾಡಿದ್ದರು. ಈಗ **'ಆರ್ಜವ ವಾಣಿ'**ಯನ್ನು ಪ್ರಕಾಶನ ಮಾಡುತ್ತಿದ್ದಾರೆ. ಇಬ್ಬರೂ ವೀತರಾಗಿ ಸಂತ ಆಚಾರ್ಯ ವಿದ್ಯಾಸಾಗರ ಮಹಾರಾಜರ ಶಿಷ್ಯರಾಗಿದ್ದಾರೆ. ಅವರ ಇನ್ನೊಬ್ಬ ಪರಮ ಶಿಷ್ಯ ಮುನಿಶ್ರೀ ಸುಧಾಸಾಗರ ಮಹಾರಾಜರು 1999 ರಲ್ಲಿ ಅಲವರ ದಲ್ಲಿ ಚಾತುರ್ಮಾಸ ಮಾಡಿದ್ದರು. "ಸುಧಾವಾಣಿ", "ಅಮೃತವಾಣಿ", "ಪಾವನವಾಣಿ"ಗಳಂತೆ "ಆರ್ಜವ ವಾಣಿ"ಯು ಸಹ ಈ ಪಂಚಮಕಾಲದ ಅಂಧಕಾರದಲ್ಲಿ ದೀಪದ ಒಂದು ಕುಡಿಯಾಗಿ ನಿಶ್ಚಯವಾಗಿ ಪ್ರಕಾಶ ನೀಡುತ್ತದೆಂದು ಆಶಿಸುತ್ತೇನೆ.

ಪೂಜ್ಯ ಮುನಿರಾಜರ ಚರಣಗಳಲ್ಲಿ ಮತ್ತೆ–ಮತ್ತೆ
ಕೋಟಿ–ಕೋಟಿ ವಂದನೆಗಳೊಂದಿಗೆ

**ಓಂಪ್ರಕಾಶ ಗುಪ್ತಾ**

'ರಾಮ ಕೃಪಾ'
ತಿಲಕ ಮಾರ್ಕೆಟ್ ಸಮೀಪ, ಅಲವರ
ರಾಜಸ್ಥಾನ, 9001059799, 9414422225

# ಮುನ್ನುಡಿ

ಪರಮ ಪೂಜ್ಯ ಗುರುವರ ಶ್ರೀ ಆರ್ಜವಸಾಗರ ಮಹಾರಾಜರ ಚಾತುರ್ಮಾಸ 2004 ರಲ್ಲಿ ಮಧ್ಯಪ್ರದೇಶದ ರಾಜಧಾನಿ ಭೋಪಾಲ ನಲ್ಲಿ ಆಗುವುದರ ಜೊತೆಗೆ ಅಲ್ಲಿ ಎರಡು ಪಂಚಕಲ್ಯಾಣಗಳು ತುಲನೆ ಮಾಡಲಾಗದ ಪ್ರಭಾವನೆಯೊಂದಿಗೆ ಸಂಪನ್ನಗೊಂಡವು. ಈ ಶ್ರೀ ವಿಹಾರದಲ್ಲಿ ಗುರುಗಳ ಶ್ರೀ ಮುಖದಿಂದ ಸರಳವಾದ ಸಾರಗರ್ಭಿತ ಪ್ರವಚನಗಳನ್ನು ಕೇಳುವ ಅವಕಾಶ ಪ್ರಾಪ್ತವಾಗಿದ್ದಿತು. ಪ್ರವಚನದ ಶೈಲಿಯಲ್ಲಿ ಸರಳತೆಯೊಂದಿಗೆ ಪ್ರಖರತಾಪೂರ್ಣ ಪ್ರವಚನವು ಕರ್ಣ ಇಂದ್ರಿಯದಲ್ಲಿ ಸುಗಮವಾಗಿ ಪ್ರವೇಶ ಮಾಡಿ ಸಾಮಾನ್ಯ ವ್ಯಕ್ತಿಗಳಿಗೂ ಸಹ ಹೃದಯಂಗಮವಾಗುತ್ತಿದ್ದಿತು.

ದೇಶದ 13 ಪ್ರಮುಖ ರಾಜ್ಯಗಳಲ್ಲಿ ಪ್ರವಚನಗಳು ಹಾಗೂ ಪಂಚಕಲ್ಯಾಣ ಮುಂತಾದ ಕಾರ್ಯಕ್ರಮಗಳ ಮಾಧ್ಯಮದಿಂದ ಧರ್ಮದ ಪ್ರಭಾವನೆ ಮಾಡುತ್ತಾ ಮಹಾರಾಜರ ವಿಹಾರವಾಗಿದೆ ಹಾಗೂ ಆಗುತ್ತಲಿದೆ. ಪರಮ ಪೂಜ್ಯ ಮಹಾರಾಜರ ಮುಖಾರವಿಂದದಿಂದ ಹೊರ ಬರುವ ಪ್ರತಿಯೊಂದು ಶಬ್ದ ಬಾಲ–ಆಬಾಲರು ಹಾಗೂ ವೃದ್ಧ–ವ್ಯಕ್ತಿಗಳ ಮನಸ್ಸಿನಲ್ಲಿಯೂ ಸಹ ಅಮೃತವಾಗಿ ಪ್ರವಚನ ಅಚ್ಚಳಿಯದ ಮುದ್ರೆಯಾಗುತ್ತಲಿದೆ. ಸಾಮಾನ್ಯ ಶ್ರಾವಕರು ಪ್ರವಚನ ಕೇಳಿ ವ್ರತ–ನಿಯಮ ಮುಂತಾದವುಗಳನ್ನು ಸ್ವೀಕರಿಸಲು ತತ್ಪರರಾಗಿ ಬಿಡುತ್ತಾರೆ. ವಿಶೇಷವಾಗಿ ಷೋಡಶಕಾರಣ ಪರ್ವದ ವ್ರತ ಹೊಂದಲು ಶ್ರಾವಕರು ವಿಶೇಷ ಪ್ರೇರಿತರಾಗಿ ದೃಢತಾಪೂರ್ವಕ ನಿಯಮ ಪಡೆದು ಧನ್ಯರಾಗಿ ಬಿಡುತ್ತಾರೆ. ಪ್ರವಚನದ ಸಮಯದಲ್ಲಿ ಅಸಾಮಾನ್ಯ ವ್ಯಕ್ತಿಗಳು ಸಹ ಅಹಂಕಾರ, ವಿಕಾರ, ಮಿಥ್ಯಾತ್ವ ಕುಪರಂಪರೆ, ದುಷ್ಟ ಚಿಂತನೆ ರೂಪದ ಭಾವದಿಂದ ರಹಿತರಾಗಿ ತಮ್ಮ ವ್ಯಾಪಾರ, ನೌಕರಿ, ಮನೆ ಇತ್ಯಾದಿಗಳ ಚಿಂತೆಯನ್ನು ಬಿಟ್ಟು ಪೂರ್ಣ ಆನಂದವನ್ನು ಪಡೆಯುತ್ತಾರೆ. ಪ್ರವಚನದ ಸಂದರ್ಭದಲ್ಲಿ ಮಹಾರಾಜರಿಂದ ಮಿಥ್ಯಾತ್ವವನ್ನು ವಿಸ್ತಾರ ಪೂರ್ವಕವಾಗಿ ಖಂಡನೆ ಮಾಡಿ ಸಾಮಾನ್ಯ ವ್ಯಕ್ತಿಗಳಿಗೆ ಸಮ್ಯಗ್‌ದೃಷ್ಟಿಯನ್ನಾಗಿ ಮಾಡುವ ಅಭೂತಪೂರ್ವ ದೃಶ್ಯ ಈಗಲೂ ನಮ್ಮೆದುರಿಗೆ ನಿಲುತ್ತದೆ. ಕುರೀತಿಗಳು ಹಾಗೂ ರೂಢಿವಾದವನ್ನು ನಿರ್ಮೂಲನೆಯು ಸಹ, ಪ್ರವಚನ ಶೈಲಿಯ ಪ್ರಮುಖತೆಯಾಗಿರುತ್ತದೆ. ಪ್ರವಚನ ಮಾಲೆಯಲ್ಲಿ ಯಾರೇ ಇದ್ದರೂ ಅವರು ಯಾವುದೇ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಪ್ರವಚನವನ್ನು ಬಿಟ್ಟು ಹೋಗುವ ಇಚ್ಛೆಯನ್ನು ಹೊಂದುವುದಿಲ್ಲ. ಅವರಿಗೆ ಸಮಯದ ಜ್ಞಾನವಿರದು ಅಲ್ಲದೆ ಎಲ್ಲವನ್ನೂ ಮರೆತು ಕೇವಲ ಪ್ರವಚನ ಕೇಳುವಲ್ಲಿ ತಲ್ಲೀನರಾಗುತ್ತಾರೆ. ಪ್ರಶಸ್ತ ಧ್ಯಾನದ (ಆರ್ತ ಹಾಗೂ ರೌದ್ರ ಧ್ಯಾನಗಳನ್ನು ಬಿಟ್ಟು) ಪ್ರವಚನ ಮಾಲೆಯಿಂದ ಕೇಳುಗರ ನಕಾರಾತ್ಮಕ ವಿಚಾರಧಾರೆಯ ಪರಿವರ್ತನೆ ನಕಾರಾತ್ಮಕ ವಿಚಾರಗಳಲ್ಲಿ ಬದಲಾಗಿಬಿಡುತ್ತದೆ. ಅದರಿಂದ ವ್ಯಕ್ತಿಯು ಪ್ರಸನ್ನತೆ ಹಾಗೂ ಸಂತುಷ್ಟಿಯನ್ನು

ಹೊಂದಿ ಸಂಸ್ಕೃತಿಯ ಶಿಕ್ಷಣದೊಂದಿಗೆ ಸುಸಂಸ್ಕಾರಗಳ ಹಾಗೂ ಜೀವನ ಮೌಲ್ಯಗಳು ಪ್ರತಿಯೊಬ್ಬ ವ್ಯಕ್ತಿಗಳ ಜೀವನ ಹಾಗೂ ಪರಿವಾರದಲ್ಲಿ ಮಹತ್ವಪೂರ್ಣಸ್ಥಾನ, ನೀಡುವ ಪ್ರೇರಣೆಯು ಗುರುಗಳ ಪ್ರವಚನಗಳಲ್ಲಿ ಇರುತ್ತದೆ, ಪರಿವಾರದ ಮುಖ್ಯ ಸದಸ್ಯರು ತಾಯಿ–ತಂದೆ–ಮಗ, ಅತ್ತೆ–ಸೊಸೆ ಇವರುಗಳ ಸಂಬಂಧದಲ್ಲಿ ತಂದೆಯ ಸನ್ಮಾನದ ಹಿರಿಮೆ, ತಾಯಿ–ತಂದೆಗಳ ಬಗ್ಗೆ ಕರ್ತವ್ಯದ ಸೀಮೆಯನ್ನು ಮಾಡಬಾರದು. ಸಂಸ್ಕಾರ ಹೀನ ಸಂತಾನದ ಜೀವನ ಮೌಲ್ಯವಿಲ್ಲವೆಂದು ತಿಳಿದಿರುವ ಕಾರಣ ಸಂಸ್ಕಾರಗಳು ಕಾಣೆಯಾಗಿರುವುದು ಇತ್ಯಾದಿಗಳು ಗುರುಗಳ ಪ್ರವಚನಗಳಲ್ಲಿ ಈ ಎಲ್ಲವುಗಳಿಗೆ ಮಹತ್ವ ನೀಡಿರುವುದರಿಂದ ಪಾರಿವಾರಿಕ ಸದಸ್ಯರ ನಡುವೆ ಸದ್ಭಾವನೆ ಹಾಗೂ ವಾತ್ಸಲ್ಯಪೂರ್ಣ ವಾತಾವರಣ ರೂಪುಗೊಳ್ಳಲು ಕಾರಣವಾಗುತ್ತದೆ.

ಗುರುಗಳು ದೇಶದ ಅನೇಕ ರಾಜ್ಯಗಳಲ್ಲಿ ವಿಭಿನ್ನ ಪ್ರಸಂಗಗಳಲ್ಲಿ ಪರ್ವಗಳಲ್ಲಿ ಮಾಡಿದ ಪ್ರವಚನಗಳ ಮಹತ್ವಪೂರ್ಣ ಅಂಶಗಳನ್ನು ಈ ರಚನೆಯಲ್ಲಿ ಸಮಾವೇಶ ಗೊಳಿಸಿರುವುದು ಅವಿಸ್ಮರಣೀಯ ಪ್ರಶಂಸನೀಯ ಹಾಗೂ ಉಪಮಾರಹಿತ ಪ್ರಯತ್ನವಾಗಿದೆ. ಆಶಯವಷ್ಟೇ ಅಲ್ಲ, ಬದಲಾಗಿ ಈ ರಚನೆಗಳು ಪ್ರತಿಯೊಬ್ಬ ಮನುಷ್ಯನ ಜೀವನದಲ್ಲಿ ಸದ್‌ಭಾವನೆ ವಾತ್ಸಲ್ಯಪೂರ್ಣ ಅಹಿಂಸಕ, ಸಫಲತಾಪೂರ್ಣ ಆನಂದಮಯ ಹಾಗೂ ಸಕಾರಾತ್ಮಕ ಜೀವನ ಶೈಲಿಯಲ್ಲಿ ರೂಪಿಸುವ ಉದ್ದೇಶ ಅವಶ್ಯವಾಗಿ ಪೂರ್ಣಗೊಳಿಸುವ ವಿಶ್ವಾಸವೂ ಇದೆ. ಇದೇ ಭಾವನೆಯೊಂದಿಗೆ ಆಚಾರ್ಯಶ್ರೀಗಳ ಚರಣಗಳಲ್ಲಿ ಶತ–ಶತ ವಂದನೆಗಳು. ಗುರುಗಳಾದ ಆಚಾರ್ಯ ಶ್ರೀ ಆರ್ಜವಸಾಗರ ಮಹಾರಾಜರಿಂದ ನೀಡಿರುವ ಅವು ಅಲವರ ನಗರ ಅಥವಾ ರಾಂಚಿನಗರದ ಪ್ರವಚನಗಳಿರಬಹುದು ಅಥವಾ ಕ್ಯಾಸೆಟ್ಸ್, ಸಿ.ಡಿ ಮುಂತಾದವುಗಳಿಂದ ನಮಗೆ ಪ್ರವಚನಾಂಶಗಳು ಗುರುಗಳ ಭಕ್ತರಿಂದ ದೊರೆತಿರಬಹುದು ಅವರಿಗೆ ಧನ್ಯವಾದಗಳು. ಮುಂದೆಯೂ ಸಹ ನಮಗೆ ಇಂತಹ ಪ್ರವಚನಗಳನ್ನು ದೊರಕಿಸಿಕೊಟ್ಟು ಅಥವಾ ಜನರಿಗೆ ತಲುಪಿಸಿ ಪುಣ್ಯಾರ್ಜಕರಾಗುತ್ತೇವೆ ಹಾಗೂ ಅವರಿಗೆ ಮನಃಪೂರ್ವಕವಾಗಿ ಧನ್ಯವಾದಗಳನ್ನು ಅರ್ಪಿಸಲಾಗುತ್ತದೆ.

ಇಂತಿ ಚರಣ ಸೇವಕ
**ಡಾ. ಅಜಿತಕುಮಾರ ಜೈನ**
ಭ.ಮಹಾವೀರ ಆಚರಣ ಸಂಸ್ಥಾ ಸಮಿತಿ
ಭೋಪಾಲ

# ಅನುವಾದಕರ ನುಡಿ

ಶ್ರಮಣ ಪರಂಪರೆಯ ಆಚರಣೆಗಳನ್ನು ಯಥಾವತ್ತಾಗಿ ಪಾಲಿಸುತ್ತಿರುವ ನಿರ್ಗ್ರಂಥ ಮುನಿಗಳಲ್ಲಿ ಸಂತ ಶಿರೋಮಣಿ ಆಚಾರ್ಯ ಶ್ರೀ 108 ವಿದ್ಯಾಸಾಗರ ಮುನಿಮಹಾರಾಜರ ಅನೇಕ ಶಿಷ್ಯರುಗಳಲ್ಲಿ ಪ್ರಮುಖರಾದವರು **ಆಚಾರ್ಯ ಶ್ರೀ 108 ಆರ್ಜವಸಾಗರ** ಮುನಿಮಹಾರಾಜರು. ರತ್ನತ್ರಯಗಳ ಸಾಕ್ಷಾತ್ಕಾರವನ್ನು ಈ ಮುನಿಶ್ರೀಗಳಲ್ಲಿ ಕಾಣಬಹುದಾಗಿದ್ದು, ಮನ–ವಚನ–ಕಾಯಗಳ ಏಕಾಗ್ರತೆಯನ್ನು ಸಾಧಿಸಿ ತಮ್ಮ ರತ್ನತ್ರಯ ಮಾರ್ಗವನ್ನು ಪ್ರಶಸ್ತಗೊಳಿಸಿ ಕೊಂಡಿರುವುದಷ್ಟೇ ಅಲ್ಲ. ಆ ಮಾರ್ಗದಲ್ಲಿ ತಮ್ಮ ಭಕ್ತ ಸಮೂಹವನ್ನು ಕರೆದೊಯ್ಯಬೇಕೆಂಬ ಸಹಜವಾದ ಅನುಕಂಪ ಭಾವವನ್ನು ಹೊಂದಿರುವ ಪೂಜ್ಯರು ಅನೇಕ ಕೃತಿಗಳನ್ನು ರಚಿಸಿದ್ದು, ಇದು ನಾನು ಅನುವಾದ ಮಾಡಿ ಕನ್ನಡಿಗರಿಗೆ ತಲುಪಿಸಲು ಮಾಡಿರುವ ಮೂರನೇ ಕೃತಿಯಾಗಿದೆ.

ಆತ್ಮೀಯ ಧರ್ಮಬಂಧುಗಳು ಮಿತ್ರರೂ ಆದ ಬೆಂಗಳೂರಿನ ಶ್ರೀ ಬಿ.ಎಲ್. ಪಚ್ಚಣ ಮತ್ತು ಮಕ್ಕಳು, ಶ್ರೀ ಎ. ಪ್ರಸನ್ನಕುಮಾರರು ಹಾಗೂ ಅನೇಕ ಬಂಧು ಮಿತ್ರರು ಮುನಿಶ್ರೀಗಳ ಎರಡು ಕೃತಿಗಳನ್ನು ಹೊರತರಲು ತನು, ಮನ, ಧನದಿಂದ ಸಹಕರಿಸಿದ್ದಾರೆ. ಕಳೆದ ವರ್ಷದ(2016) ಅಕ್ಟೋಬರ್‌ನಲ್ಲಿ ಶ್ರೀ ಎ. ಪ್ರಸನ್ನಕುಮಾರರು ಏರ್ಪಡಿಸಿದ್ದ ತೀರ್ಥಯಾತ್ರೆಯ ಸಂದರ್ಭದಲ್ಲಿ ಮಧ್ಯಪ್ರದೇಶದ ಭೋಪಾಲ ಸಮೀಪದ ಮಂಡಿದೀಪದಲ್ಲಿ ಚಾತುರ್ಮಾಸ ಕೈಗೊಂಡಿದ್ದ ಪೂಜ್ಯ ಮುನಿಶ್ರೀಗಳ ಸಾನಿಧ್ಯದಲ್ಲಿ ಅವರ **"ಪರ್ಯೂಷಣ ಪಿಯೂಷ"** ಕೃತಿಯ ಬಿಡುಗಡೆಯಾಯಿತು. ಆ ಕೃತಿಯನ್ನು ಬಿಡುಗಡೆ ಮಾಡಿ ನಮ್ಮೆಲ್ಲ ಯಾತ್ರಿಕರನ್ನು ಆಶೀರ್ವದಿಸಿದ ಮುನಿಶ್ರೀಗಳು ತಮ್ಮ ಇನ್ನೊಂದು ಕೃತಿಯನ್ನು ಅನುವಾದ ಮಾಡಲು ಆದೇಶಿಸಿ ನೀಡಿದ ಕೃತಿಯೇ **"ಆರ್ಜವವಾಣಿ"**. ಅವರು ಆಶೀರ್ವಾದ ಮಾಡಿ ನನಗೆ ಆ ಕೃತಿಯನ್ನು ನೀಡಿದೊಡನೆ ಅದನ್ನು ಕನ್ನಡಾನುವಾದದ ಪ್ರಕಾಶಕರಾಗಲು ಪ್ರಾಯೋಜಕರಾಗಿ ನಮ್ಮ ಯಾತ್ರೆಯಲ್ಲಿದ್ದ ಶ್ರೀ ಸುರೇಶ ಹಾಗೂ ಶ್ರೀಮತಿ ಆಶಾ ದಂಪತಿಗಳು ಮುಂದೆ ಬಂದಿದ್ದರಿಂದ ಈ ಕೃತಿ ಈಗ ನಿಮ್ಮ ಮುಂದಿದೆ. ಈ ದಂಪತಿಗಳು ಮೂಲತಃ ತೇರದಾಳದವರಾಗಿದ್ದು ಸದ್ಯ ಬೆಂಗಳೂರು ನಿವಾಸಿಯಾಗಿ ತಮ್ಮ ನಿವೃತ್ತ ಜೀವನವನ್ನು ಸ್ವಾಧ್ಯಾಯದಲ್ಲಿ ಧರ್ಮ ಚಿಂತನೆಯಲ್ಲಿ ಶುಭಧ್ಯಾನದಲ್ಲಿ ತೊಡಗಿಸಿದ್ದು ತಮ್ಮ ತಂದೆ–ತಾಯಿಗಳ ಸ್ಮರಣೆಯಲ್ಲಿ ಈ ಕೃತಿ ಹೊರಬರಲು ಕಾರಣರಾಗಿದ್ದಾರೆ. ಅಲ್ಲದೇ ಅವರು ತಮ್ಮ ಹಿರಿಯರಿಗೆ ನಿಷ್ಠೆ–ಭಕ್ತಿಯನ್ನು ವ್ಯಕ್ತಪಡಿಸಿ ಧನ್ಯರಾಗಿದ್ದಾರೆ. ನ್ಯಾಯದಿಂದ ಸಂಪಾದಿಸಿರುವ ತಮ್ಮ ಸಂಪತ್ತನ್ನು ಆಚಾರ್ಯಶ್ರೀಗಳ ಮೂಲಕ ಹೊರಬಂದ ಜಿನವಾಣಿಯನ್ನು ಪ್ರಕಟಿಸಲು ಸಹಕರಿಸಿರುವ ಅವರಿಗೆ ಧನ್ಯವಾದಗಳು ಹಾಗೂ ಅಭಿನಂದನೆಗಳು.

ಈ ಕೃತಿಯಲ್ಲಿರುವ ಪೂಜ್ಯಮುನಿಶ್ರೀಗಳ ಪ್ರವಚನಗಳನ್ನು ಮೂಲ ಹಿಂದಿ

ಭಾಷೆಯಲ್ಲಿ ಸಂಗ್ರಹಿಸಿದ ಅಲವರ (ರಾಜಸ್ಥಾನ)ದ ಜೈನೇತರ ಪತ್ರಕರ್ತ ಶ್ರೀ ಓಂಪ್ರಕಾಶ ಗುಪ್ತಾ ಹಾಗೂ ಅವರ ಸ್ನೇಹಿತರಾದ ಜೈನಬಂಧು ಡಾ. ಅಜಿತಕುಮಾರ ಜೈನ (ಭೋಪಾಲ)ರವರು ಈ ಪ್ರವಚನಗಳ ಬಗ್ಗೆ ಮುನಿಶ್ರೀಗಳ ವ್ಯಕ್ತಿತ್ವ–ಚಾರಿತ್ರಗಳ ಬಗ್ಗೆ ಹೊಂದಿರುವ ಅಭಿಪ್ರಾಯಗಳನ್ನು ಓದಿದಾಗ ಅವರು ಮುನಿಶ್ರೀಗಳ ಬಗ್ಗೆ ಹೊಂದಿರುವ ಭಕ್ತಿ, ನಿಷ್ಠೆ ಎಂತಹದೆಂದು ಊಹಿಸಬಹುದು ಅವರ ಈ ಕಾರ್ಯ ಅಭೂತಪೂರ್ವವಾಗಿದ್ದು ಇಬ್ಬರೂ ಸಹ ಇದೇ ರೀತಿಯಾಗಿ ಅನೇಕ ಮುನಿಪುಂಗವರ ಪ್ರವಚನ ಮಾಲೆಗಳನ್ನು ರಾಜಸ್ಥಾನ ಟೈಮ್ಸ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರಲ್ಲದೇ ಪುಸ್ತಕ ರೂಪದಲ್ಲಿಯು ತಂದು ಲಕ್ಷಾಂತರ ಜನರಿಗೆ ಮುನಿಶ್ರೀಗಳ ವಿಚಾರಧಾರೆಯನ್ನು ತಲುಪಿಸಿ ಜಿನವಾಣಿಯ ಪ್ರಸಾರ ಪ್ರಭಾವ ಕಾರ್ಯದಲ್ಲಿ ಅದ್ವಿತಿಯ ಕಾರ್ಯ ಮಾಡಿದ್ದಾರೆ, ಅವರಿಗೆ ಅಭಿನಂದನೆಗಳು.

ಈ ಕೃತಿಯನ್ನು ಕನ್ನಡ ಭಾಷೆಗೆ ಅನುವಾದಿಸಲು ಆಶೀರ್ವಾದ ಮಾಡಿ ನನಗೂ ಭವ್ಯನಾಗಲು ಅನುವು ಮಾಡಿಕೊಟ್ಟ ಪರಮ ಪೂಜ್ಯ ಮುನಿಶ್ರೀಗಳಿಗೆ ಅನಂತ ನಮನಗಳು.

'ಜೈನಾಗಮ ಸಂಸ್ಕಾರ', 'ಪರ್ಯೂಷಣ ಪಿಯೂಷ' ಕೃತಿಗಳನ್ನು ಸ್ವಾಗತಿಸಿರುವಂತೆ ಈ ಕೃತಿಯನ್ನು ಕರ್ನಾಟಕದ ಜೈನ ಬಂಧುಗಳು ಸ್ವಾಗತಿಸುತ್ತಾರೆಂದು ಭಾವಿಸುತ್ತೇನೆ. ಮೊದಲಿನ ಎರಡೂ ಕೃತಿಗಳ ಪ್ರತಿಗಳು ಮುಗಿದು ಹೋಗಿದ್ದು ಶಾಸ್ತ್ರದಾನ ಮಾಡಬಯಸುವವರು ಇವುಗಳನ್ನು ಮುದ್ರಿಸಲು ಬಯಸಿದರೆ ನನ್ನ ಗಮನಕ್ಕೆ ತಂದಲ್ಲಿ ಇರಬಹುದಾದ ಮುದ್ರಣ ದೋಷಗಳನ್ನು ಸರಿಪಡಿಸಿ ಕೊಡುತ್ತೇನೆ.

ಈ ಕೃತಿಯನ್ನು ಹೊರತರುವಲ್ಲಿ ನಮ್ಮ ಪ್ರವಾಸಿ ತಂಡ ಅದನ್ನು ಅನುಮೋದಿಸಿದ್ದು, ಅದನ್ನು ಕಾರ್ಯಗತಗೊಳಿಸುವಲ್ಲಿ ಅಕ್ಷರವಿನ್ಯಾಸ, ಪುಟವಿನ್ಯಾಸ ಸುಂದರ ಮುದ್ರಣದ ಜವಾಬ್ದಾರಿಯನ್ನು ಹೊತ್ತು ಸಹಕರಿಸಿದ ಕೀರ್ತಿ ಪ್ರಿಂಟರ್ಸ್‌ನ ಶ್ರೀ ವಿದ್ಯಾನಂದರಿಗೂ ಹಾಗೂ ಅವರ ತಂದೆಯವರಾದ ಶ್ರೀ ಜಯಕೀರ್ತಿಯವರಿಗೂ ಹಾಗೂ ಅವರ ಸಿಬ್ಬಂದಿವರ್ಗಕ್ಕೂ ಹೃದಯಪೂರ್ವಕ ಧನ್ಯವಾದಗಳು.

ಶ್ರುತಪಂಚಮಿ
30.05.2017

**ಪ್ರೊ.ಜೀವಂಧರಕುಮಾರ ಕುಬೇರಪ್ಪ ಹೋತಪೇಟಿ**
ಶ್ರವಣಬೆಳಗೊಳ 573135
ಮೊಬೈಲ್:09448179946

# ಪ್ರಕಾಶಕರ ನುಡಿ

ಆತ್ಮೀಯ ಸ್ನೇಹಿತರಾದ ಶ್ರೀ ಎ. ಪ್ರಸನ್ನಕುಮಾರರು 2016ರ ಅಕ್ಟೋಬರ್ 12 ರಿಂದ 25 ರವರೆಗೆ ಮಾಂಗಿ–ತುಂಗಿ ದರ್ಶನಾರ್ಥ ಯಾತ್ರೆಯನ್ನು ಏರ್ಪಡಿಸಿ ಅದನ್ನು ಮಧ್ಯಪ್ರದೇಶದ ವರೆಗೂ ವಿಸ್ತರಿಸಿದ್ದರು. ಆಗ ಭೋಪಾಲ ಸಮೀಪದ ಮಂಡಿದೀಪನಲ್ಲಿ ಪೂಜ್ಯ ಮುನಿಶ್ರೀ 108 ಆರ್ಜವಸಾಗರ ಮಹಾರಾಜರು ವರ್ಷಾಯೋಗ ಕೈಗೊಂಡಿದ್ದರು. ಅಲ್ಲಿ ನಮ್ಮ ಪ್ರವಾಸ ತಂಡ ಮುನಿಶ್ರೀಗಳು ರಚಿಸಿದ್ದ 'ಪರ್ಯೂಷಣ ಪಿಯೂಷ' ಗ್ರಂಥದ ಕನ್ನಡ ಅನುವಾದ ಕೃತಿಯನ್ನು ಲೋಕಾರ್ಪಣೆ ಮಾಡುವ ಕಾರ್ಯವಿದ್ದಿತು ಅದರಂತೆ ನಾವು ಅವರ ಸನ್ನಿಧಿಗೆ 18.10.2016 ರಂದು ತಲುಪಿ ಅವರ ದರ್ಶನ ಪಡೆದು ಅಲ್ಲಿಯ ದಿಗಂಬರ ಜೈನ ಸಮಾಜದ ಸಮ್ಮುಖದಲ್ಲಿ ಮುನಿಶ್ರೀಗಳಿಂದ ಗ್ರಂಥ ವಿಮೋಚನೆ ಮಾಡಿಸಿ ಅವರ ಆಶೀರ್ವಚನವನ್ನು ಸಹ ಕೇಳಿ ಪ್ರಭಾವಿತರಾದೆವು.

ಈಗಾಗಲೇ ಪೂಜ್ಯ ಮುನಿಶ್ರೀಗಳಿಂದ ರಚಿತವಾಗಿದ್ದ "ಜೈನಾಗಮ ಸಂಸ್ಕಾರ" ಹಾಗೂ "ಪರ್ಯೂಷಣ ಪಿಯೂಷ" ಗ್ರಂಥಗಳ ಕನ್ನಡಾನುವಾದಗಳನ್ನು ನಾವು ನೋಡಿದ್ದು ಆ ಕೃತಿಗಳನ್ನು ಕನ್ನಡಕ್ಕೆ ಅನುವಾದ ಮಾಡಿದ್ದ ಪ್ರೊ. ಜೀವಂಧರಕುಮಾರ ಕೆ.ಹೋತಪೇಟಿಯವರು ನಮ್ಮ ಪ್ರವಾಸದಲ್ಲಿದ್ದರು ಮುನಿಶ್ರೀಗಳು ಪರ್ಯೂಷಣ ಪಿಯೂಷ ಗ್ರಂಥವನ್ನು ವಿಮೋಚನೆ ಮಾಡಿ ನೀಡಿದ ಪ್ರವಚನ ಹಾಗೂ ಅವರ ರತ್ನತ್ರಯ ಧರ್ಮಾಚರಣೆ ನಮ್ಮೆಲ್ಲರನ್ನು ಬಹುವಾಗಿ ಆಕರ್ಷಿಸಿದ್ದಿತು. ಆಗ ಮುನಿಗಳು ತಮ್ಮ ಕೆಲವು ಕೃತಿಗಳನ್ನು ಅನುವಾದ ಮಾಡಲು ಜೀವಂಧರಕುಮಾರರಿಗೆ ನೀಡಿದಾಗ ನಾವು ನಮ್ಮ ತಾಯಿಯವರ ಹೆಸರಿನಿಂದ ಶಾಸ್ತ್ರದಾನ ಮಾಡಲು ಒಂದು ಪುಸ್ತಕವನ್ನು ಪ್ರಕಾಶನಕ್ಕೆ ತರಲು ಸಮ್ಮತಿ ನೀಡಿದೆವು, ಅದರಂತೆ ಈಗ ಶ್ರೀ ಜೀವಂಧರಕುಮಾರರು ಮುನಿಗಳ ಪ್ರವಚನ ಸಂಗ್ರಹ **'ಆರ್ಜವವಾಣಿ'** ಕೃತಿಯನ್ನು ಅನುವಾದ ಮಾಡಿಕೊಟ್ಟಿದ್ದಾರೆ. ಈ ಕಾರ್ಯಕ್ಕಾಗಿ ನಾವು ಅವರನ್ನು ಅಭಿನಂದಿಸಿ ಧನ್ಯವಾದಗಳನ್ನು ಸಮರ್ಪಿಸುತ್ತೇವೆ.

ಮುನಿಶ್ರೀಗಳ ಮೂಲಕ ಜಿನವಾಣಿಯನ್ನು ಜನರಿಗೆ ತಲುಪಿಸಲು. ಅವಕಾಶ ದೊರೆತಿದ್ದಕ್ಕಾಗಿ ನಮಗೆ ಅತೀವ ಸಂತಸವಾಗಿದೆ. ಈ ಕಾರ್ಯದಲ್ಲಿ ಸಹಕಾರ ನೀಡಿದ ಎಲ್ಲರಿಗೂ ನಮ್ಮ ವಂದನೆಗಳು ಜೈ ಜಿನೇಂದ್ರ.

ಬೆಂಗಳೂರು **ಶ್ರೀ ಸುರೇಶ ಹಾಗೂ ಆಶಾ ದಂಪತಿಗಳು**

ಶ್ರುತಪಂಚಮಿ

# ಶಾಸ್ತ್ರ ದಾನಿಗಳು



## ಶ್ರೀಮತಿ ಚಂದ್ರಾಬಾಯಿ ಧರೆಪ್ಪ ಶ್ರೀಗೋನ

**ಜಮಖಂಡಿ ತಾಲ್ಲೂಕು, ತೇರದಾಳ**

# ವಿಷಯ–ಸೂಚಿ


| | | |
|---|---|---|
| 1. | ಧರ್ಮ– ನಮ್ಮ ಅಂತರಂಗದಲ್ಲಿ ಇಳಿಯಬೇಕು | ೧ |
| 2. | ಭಕ್ತಿಯಲ್ಲಿ ನಿಯಮ–ಸಂಯಮದ ಅವಶ್ಯಕತೆ | ೩ |
| 3. | ಈ ಸಂಸಾರ ಒಂದು ಬೀಸುವಕಲ್ಲಿನಂತಿದೆ | ೫ |
| 4. | ಸುಖವು ಹೊರಗಿಲ್ಲ ನಮ್ಮ ಅಂತರಂಗದಲ್ಲಿಯೇ ಇದೆ | ೭ |
| 5. | ಧರ್ಮ ಮಾಡುವಾಗ ಸಾಂಸಾರಿಕ ಇಚ್ಛೆಗಳಿರಬಾರದು | ೯ |
| 6. | ಸಾಧು–ಸಂತರು ಶಸ್ತ್ರ ಚಿಕಿತ್ಸೆ ಮಾಡಲು ಬರುತ್ತಾರೆ | ೧೧ |
| 7. | ಧರ್ಮದ ಸಂಸ್ಕಾರದಿಂದಲೇ ಸಂಸ್ಕೃತಿ ಉಳಿಯುತ್ತದೆ | ೧೩ |
| 8. | ಯಾರ ಭಾವನೆ ಹೇಗಿರುವುದೋ ಹಾಗೆಯೇ ಅವರ ಪರಿಣಾಮ | ೧೫ |
| 9. | ಧ್ಯಾನದಲ್ಲಿ ಧರ್ಮದ ಅವಲಂಬನೆಯ ಆವಶ್ಯಕತೆ ಇದೆ | ೧೭ |
| 10. | ವಿಕಲ್ಪಗಳು ಕಡಿಮೆಯಾದಷ್ಟು ಶಾಂತಿ | ೧೯ |
| 11. | ಸಂಸಾರದಲ್ಲಿ ಉದಾಸೀನನಾದವನೇ ಭಕ್ತನಾಗುತ್ತಾನೆ | ೨೧ |
| 12. | ಸಮ್ಯಕ್ ಧ್ಯಾನವೇ ಪರಮಾತ್ಮನನ್ನಾಗಿಸುತ್ತದೆ | ೨೩ |
| 13. | ಶರೀರದೊಂದಿಗೆ ಆತ್ಮನ ಉಪಚಾರದ ಆವಶ್ಯಕತೆ ಇದೆ | ೨೫ |
| 14. | ಗಾಂಧೀಜೀಯವರ ಮೂರು ಮಂಗಗಳು ಇಂದಿಗೂ ಪ್ರೇರಕ | ೨೬ |
| 15. | ಯಾರ ವರ್ತಮಾನ ಸರಿ ಇದೆಯೋ ಅವರ ಭವಿಷ್ಯವು ಸರಿ | ೨೮ |
| 16. | ತ್ಯಾಗವಿಲ್ಲದೇ ಜೀವನದಲ್ಲಿ ಶಾಂತಿ ಇಲ್ಲ | ೩೦ |
| 17. | ರೌದ್ರಧ್ಯಾನವು ಜೀವನದಲ್ಲಿ ಎಲ್ಲಕ್ಕಿಂತ ದೊಡ್ಡಬಾಧಕ | ೩೨ |
| 18. | ಈ ಶರೀರವೂ ಬಾಡಿಗೆ ಮನೆಯಾಗಿದೆ | ೩೫ |
| 19. | ಪುರುಷಾರ್ಥವಿಲ್ಲದೇ ಯಾವುದೇ ಸಫಲತೆ ಇಲ್ಲ | ೩೮ |
| 20. | ಧರ್ಮದ ರಕ್ಷಣೆ ಧರ್ಮದಿಂದಲೇ ಆಗಬಲ್ಲದು | ೪೦ |
| 21. | ಸಪ್ತವ್ಯಸನಗಳಿಂದ ದೂರವಿರುವವರೇ ನಿಜವಾದ ಭಕ್ತರು | ೪೨ |
| 22. | ಭಾವನೆಗಳ ಶುದ್ಧಿಯಲ್ಲಿ ಪರಿಣಾಮಗಳ ನಿರ್ಮಲತೆ | ೪೪ |
| 23. | ಚಾತುರ್ಮಾಸ–ಧರ್ಮದ ಗಳಿಕೆಯ ಕಾಲವಾಗಿದೆ | ೪೬ |
| 24. | ಚಾತುರ್ಮಾಸ–ಧನವಿಲ್ಲ; ಧರ್ಮಗಳಿಕೆಯ ಕಾಲ | ೪೬ |
| 25. | ತ್ಯಾಗವು ಮನುಷ್ಯನನ್ನು ಭಗವಂತನನ್ನಾಗಿ ಮಾಡುತ್ತದೆ | ೪೭ |
| 26. | ಮೋಕ್ಷ ಸಪ್ತಮಿಯ ದಿನ–ಅತ್ಯಂತ ಪಾವನವಾದದ್ದು | ೪೭ |
| 27. | ಸುಖವಾಗಿರಬೇಕೆಂದರೆ ಹಿಂಸೆಯನ್ನು ತ್ಯಜಿಸಿ | ೪೮ |

| | | |
|---|---|---|
| 28. | ಸಂಸಾರದಿಂದ ಪಾರು ಮಾಡುವುದೇ ತೀರ್ಥ | ೪೮ |
| 29. | ಗುರಿ ಸಾಧಿಸುವಲ್ಲಿ ಬಾಧಕವಾಗಿರುವ ಕಾರಣಗಳನ್ನು ತಿಳಿಯುವುದು ಅವಶ್ಯಕ | ೪೯ |
| 30. | ಸಾಂಸಾರೀಕ ಸುಖವು ಕರ್ಮಗಳ ಅಧೀನವಾಗಿದೆ | ೪೯ |
| 31. | ಧ್ಯಾನದಲ್ಲಿ ಬಾಧಕ ತತ್ತ್ವಗಳನ್ನು ತಿಳಿಯುವುದು ಅವಶ್ಯಕವಾಗಿದೆ | ೫೦ |
| 32. | ಏಕಾಗ್ರತೆಗಾಗಿ ಸಾತ್ವಿಕ ಆಹಾರದ ಅವಶ್ಯಕತೆ | ೫೦ |
| 33. | ನಿಜವಾದ ಧ್ಯಾನ ಸಾಧುವಿಗೆ ಮಾತ್ರ ಆಗಬಲ್ಲದು | ೫೧ |
| 34. | ಆಹಾರವನ್ನು ಯಾವಾಗಲೂ ಹಸಿವೆಗಿಂತ ಕಡಿಮೆ ಸ್ವೀಕರಿಸಬೇಕು | ೫೧ |
| 35. | ಮನಸ್ಸನ್ನು ನಿಯಂತ್ರಿಸುವವರೇ ಎಲ್ಲವನ್ನು ಪಡೆಯುತ್ತಾರೆ | ೫೨ |
| 36. | ಸ್ವೀಕರಿಸುವ ಆಹಾರ ಹೇಗೋ ಹಾಗೆಯೇ ಮನಸ್ಸು | ೫೩ |
| 37. | ಸಂತರ ಸಾನಿಧ್ಯ ಸೌಭಾಗ್ಯದಿಂದ ದೊರೆಯುತ್ತದೆ | ೫೩ |
| 38. | ಬಾಲ್ಯದಲ್ಲಿಯೇ ಧರ್ಮ ಸಂಸ್ಕಾರ ನೀಡಿರಿ | ೫೪ |
| 39. | ಆತ್ಮನ ಸ್ವಭಾವಕ್ಕೆ ಧರ್ಮವೆನ್ನುತ್ತಾರೆ | ೫೫ |
| 40. | ಪರೋಪಕಾರ ಬುದ್ಧಿಯನ್ನು ಪ್ರಕೃತಿಯಿಂದ ಕಲಿಯಿರಿ | ೫೫ |
| 41. | ದಾನವು ಕೈಗಳ ಆಭರಣವಾಗಿದೆ | ೫೬ |
| 42. | ತೀರ್ಥಂಕರ ಪದವಿಯು ಸರ್ವೋತ್ಕೃಷ್ಟ | ೫೬ |
| 43. | ತ್ಯಾಗವಿಲ್ಲದೇ ಎಲ್ಲಿದೆ ಆತ್ಮವೈಭವ | ೫೭ |
| 44. | ಬೇರೆಯವರ ಗುಣಗಳನ್ನು ಗಮನಿಸಬೇಕು | ೫೭ |
| 45. | ಧ್ಯಾನದಿಂದ ಶರೀರ ಮತ್ತು ಮನಸ್ಸು ಆರೋಗ್ಯಕರವಾಗಿರುತ್ತವೆ | ೫೮ |
| 46. | ಸಾಂಸಾರಿಕ ಸುಖವನ್ನಲ್ಲ; ನಿಜವಾದ ಸುಖವನ್ನು ಪಡೆಯಿರಿ | ೫೮ |
| 47. | ಧ್ಯಾನದ ಅರ್ಥ–ಭಾವನೆ ಮತ್ತು ವಿಚಾರಗಳ ಏಕಾಗ್ರತೆಯಾಗಿದೆ | ೫೯ |
| 48. | ಚಾರಿತ್ರವೇ ಮಾನವ ಜೀವನದ ಸುಂದರತೆ | ೫೯ |
| 49. | ಅಹಿಂಸೆಯ ಸ್ಥಾನ ಸರ್ವೋತ್ಕೃಷ್ಟ | ೬೦ |
| 50. | ಸಮ್ಯಗ್‌ದರ್ಶನದ ಪಾಠವನ್ನು ಓದಿಸಿದರು–ಆರ್ಜವ ಸಾಗರರು | ೬೧ |
| 51. | ವಿಶ್ವಾಸದ ಮೇಲೆಯೇ ಸಮಸ್ತ ವಿಶ್ವನಿಂತಿದೆ | ೬೧ |
| 52. | ಶಾಲೆಯ ಶಿಕ್ಷಣದೊಂದಿಗೆ ಧರ್ಮದ ಶಿಕ್ಷಣವು ಅವಶ್ಯ | ೬೨ |
| 53. | ಇತರರ ಸುಖ–ಶಾಂತಿಗಾಗಿ ಪ್ರಯತ್ನಶೀಲರಾಗಿರಿ | ೬೨ |
| 54. | ಧರ್ಮಾತ್ಮರು ಸಾಧುಗಳ ಆಚರಣೆಗಳನ್ನು ವಿರೋಧಿಸುವುದಿಲ್ಲ | ೬೩ |
| 55. | ದಿಗಂಬರ ಅವಸ್ಥೆಯೇ ಪೂರ್ಣ ಸುಖಕಾರಿಯಾಗಿದೆ | ೬೪ |

56. ಯಾರನ್ನಾದರೂ ಭಗವಂತನನ್ನಾಗಿ ಮಾಡಲಾಗದು ೬೪
57. ಛಲ, ಕಪಟ ಹಾಗೂ ಮಾಯಾಚಾರಗಳ ಧ್ಯಾನದಿಂದ ದುರ್ಗತಿ ೬೫
58. ಧರ್ಮವಿದ್ದಲ್ಲಿಯೇ ಸಂಪತ್ತು ೬೫
59. ಧರ್ಮದಿಂದ ಎಲ್ಲ ಸುಖಗಳ ಪ್ರಾಪ್ತಿ ೬೬
60. ಕೆಟ್ಟ ಸಂಗತಿಗಳನ್ನು ತ್ಯಜಿಸಿರಿ ೬೬
61. ಕಾಮ ಮತ್ತು ಭೋಗಗಳು ಮುಕ್ತಿಗೆ ಬಾಧಕಗಳು ೬೭
62. ದೇಶದಲ್ಲಿ ಹಿಂಸೆಯ ವಾತಾವರಣ ರೂಪಗೊಳ್ಳುತ್ತಲಿದೆ ೬೭
63. ಸದ್ಗುರುವಿನ ಆಶೀರ್ವಾದದಿಂದ ಜೀವನವು ಸಾಧಿಸಬೇಕು ೬೮
64. ಧ್ಯಾನಕ್ಕಾಗಿ ಮನಸ್ಸಿನ ಮೇಲೆ ವಿಜಯ ಸಾಧಿಸಬೇಕು ೬೮
65. ಜೈನದರ್ಶನವು ತನ್ನಲ್ಲಿಯೇ ಪೂರ್ಣವಿಜ್ಞಾನವಾಗಿದೆ ೬೯
66. ಲೋಭವು ಎಲ್ಲ ಪಾಪಗಳ ಬೇರು ೬೯
67. ಜೀವ ಹತ್ಯೆಯು ಎಲ್ಲಕ್ಕಿಂತ ದೊಡ್ಡ ಪಾಪ ೭೦
68. ಅಹಿಂಸೆ ಮತ್ತು ಶಾಕಾಹಾರದ ಪಾಠಗಳನ್ನು ಮುನಿಗಳು ಓದಿಸಿದರು ೭೦
69. ವಿಧ್ಯಾರ್ಥಿಗಳು ಸಫಲ ಹಾಗೂ ಸುರಕ್ಷಿತ ಭವಿಷ್ಯದ ಸಿಹಿಯನ್ನು ಅನುಭವಿಸಿದರು ೭೦
70. ಓಂಕಾರ ಮಂತ್ರವು ಮಹಾನ್ ಆಗಿದೆ ೭೧
71. ತೀರ್ಥಂಕರರ ದಿಗ್ದರ್ಶನ ಆವಶ್ಯಕವಾಗಿದೆ ೭೧
72. ಯಾರನ್ನು ಜೈನ ಶ್ರಾವಕರೆಂದು ತಿಳಿಯುವುದು ೭೨
73. ನಿತ್ಯವು ದೇವದರ್ಶನ ಮಾಡಿರಿ ೭೨
74. ಜೈನನ ಗುರುತು ೭೨
75. ಪೂಜೆಯ ಮಹತ್ವದಿಂದ ಜೀವನ ಸಫಲ ೭೩
76. ಜೈನಧರ್ಮ ಏನಿದೆ? ೭೪
77. ರತ್ನತ್ರಯಗಳ ಸ್ವರೂಪ ತಿಳಿಯಿರಿ ೭೪
78. ಮೋಕ್ಷ ಮಹಲ್‌ನ ಮೊದಲ ಮೆಟ್ಟಿಲು–ಸಮ್ಯಗ್ ದರ್ಶನ ೭೪
79. ಸಮ್ಯಗ್ ಜ್ಞಾನವು ಮಹಿಮಾ ಸ್ವರೂಪಿಯಾಗಿದೆ ೭೫
80. ಮೋಕ್ಷಮಾರ್ಗದಲ್ಲಿ ಶ್ರೇಷ್ಠಸ್ಥಾನ ಸಮ್ಯಕ್‌ಚಾರಿತ್ರಕ್ಕಿದೆ ೭೫
81. ಸಪ್ತ ತತ್ತ್ವಗಳು ಎರಡು ತತ್ತ್ವಗಳಲ್ಲಿವೆ ೭೬
82. ತ್ರಿಲೋಕ ವರ್ಣನೆಯಿಂದ ಸಂವೇಗ(ಭಾವನೆ) ಉಂಟಾಗುತ್ತದೆ ೭೬

| | | |
|---|---|---|
| 83. | ಭಕ್ತಿಯಿಂದ ಅಪೂರ್ವಲಾಭ | ೭೭ |
| 84. | ಸಲ್ಲೇಖನದಿಂದ ಮರಣವನ್ನು ಗೆಲ್ಲಬೇಕು | ೭೭ |
| 85. | ಪರ್ವಗಳಲ್ಲಿ ವ್ರತಗಳ ಮಹಾತ್ಮ್ಯೆ ಹೇಗೆ? | ೭೮ |
| 86. | ಅಷ್ಟ ಕರ್ಮಗಳ ಮರ್ಮವನ್ನು ತಿಳಿಯಿರಿ | ೭೮ |
| 87. | ಪರಿಣಾಮಗಳ ಅಳತೆಯಾಗಿದೆ–ಗುಣಸ್ಥಾನಗಳು | ೭೯ |
| 88. | ಅಧ್ಯಾತ್ಮದಲ್ಲಿ ಸ್ವರೂಪಾಚರಣೆ | ೮೦ |
| 89. | ಉಪಯೋಗವನ್ನು ಪಡೆಯುವ ಕ್ರಮ | ೮೦ |
| 90. | ಅನೇಕಾಂತ ದೃಷ್ಟಿ ಮಹತ್ವಪೂರ್ಣವಾಗಿದೆ | ೮೦ |
| 91. | ಜೀವನದಲ್ಲಿ ನೈತಿಕತೆ ಮತ್ತು ಶಿಷ್ಟಾಚಾರಗಳ ಅವಶ್ಯಕತೆ ಇದೆ | ೮೧ |
| 92. | ಒಂದು ಜೀವದ ರಕ್ಷಣೆ–ಮೇರು ಪರ್ವತದಷ್ಟು ಚಿನ್ನ ದಾನಕ್ಕೆ ಸಮಾನವಾಗಿದೆ | ೮೨ |
| 93. | ನಿರ್ಮಲ ಭಾವನೆಗಳು ಭಕ್ತಿಯಲ್ಲಿ ಅತಿಶಯಕಾರಿಗಳಾಗುತ್ತವೆ | ೮೨ |
| 94. | ಅಹಿಂಸೆಯಿಂದ ಪ್ರಕೃತಿಯ ಭೂಕಂಪ ಮುಂತಾದ ಪ್ರಕೋಪಗಳು ನಿಲ್ಲುತ್ತವೆ | ೮೩ |
| 95. | ಮಂತ್ರಗಳಲ್ಲಿ ಭಾವನೆಗಳ ಮಹತ್ವ ದೊಡ್ಡದಾಗಿದೆ | ೮೪ |
| 96. | ಆತ್ಮನ ಗುಣಗಳೇ ಆತ್ಮನ ಅಲಂಕಾರ | ೮೫ |
| 97. | ಏಕಾಗ್ರತೆಗೆ ಧ್ಯಾನ ಅವಶ್ಯವಾಗಿದೆ | ೮೫ |
| 98. | ನಮ್ಮ ದೇಶವು ಅಹಿಂಸೆ ಮತ್ತು ಅಧ್ಯಾತ್ಮದ ಭೂಮಿಯಾಗಿದೆ | ೮೬ |
| 99. | ಆಧ್ಯಾತ್ಮಿಕ ಧ್ಯಾನದಿಂದ ಕರ್ಮಗಳ ನಿರ್ಜರೆಯಾಗುತ್ತದೆ | ೮೭ |
| 100. | ಪೃಥ್ವಿ, ಅಗ್ನಿ ಇತ್ಯಾದಿ ಪಂಚ ಧಾರಣೆಗಳಿಂದ ಮನಸ್ಸಿನ ಮೇಲೆ ವಿಜಯ | ೮೭ |
| 101. | ಜ್ಞಾನಿಯ ಆಭಾಮಂಡಲ ಪ್ರಭಾವಕವಾಗಿರುತ್ತದೆ | 88 |
| 102. | ಶಿಕ್ಷಣದಲ್ಲಿ ಸಂಸ್ಕಾರ ಹಾಗೂ ಶಾಕಾಹಾರಗಳ ಸಂದೇಶವಿರಲಿ | 89 |
| 103. | ಆದಿನಾಥರು ಕರ್ಮ ಮಾಡುವ ಉಪದೇಶ ನೀಡಿದರು | ೯೦ |
| 104. | ಸಂಯಮಪೂರ್ಣ ಜೀವನದಿಂದ ಆತ್ಮಿಕ ಶುದ್ಧಿ | ೯೦ |
| 105. | ತೆಂಗಿನಕಾಯಿಯಿಂದ ಮೋಕ್ಷಮಾರ್ಗದ ಶಿಕ್ಷಣ ಸಿಗುತ್ತದೆ | ೯೧ |
| 106. | ಶಾಸ್ತ್ರಗಳಲ್ಲಿ ಧರ್ಮದ ಮಹಿಮೆಯನ್ನು ಹಾಡಿದ್ದಾರೆ | ೯೨ |
| 107. | ಕರ್ಮಗಳ ಮಹಾನತೆಯಲ್ಲಿ ಜನ್ಮದ ಸಾರ್ಥಕತೆ | ೯೨ |
| 108. | ಸ್ಯಾದ್ವಾದ–ಶೈಲಿಯು ವಚನಗಳ ಪರಿಷ್ಕರಣೆ ಮಾಡುತ್ತದೆ | ೯೪ |

# ಆರ್ಜವ-ವಾಣಿ

ಮಂಗಲಾಚರಣೆ

ಧಮ್ಮೋ ಮಂಗಲಮುಕ್ಕಿಟ್ಠಂ, ಅಹಿಂಸಾ ಸಂಯಮೊ ತವೋ ।
ದೇವಾವಿ ತಸ್ಸ ಪಣಮಂತಿ, ಜಸ್ಸ ಧಮ್ಮೇ ಸಯಾಮಣೋ ॥
(ದಶಭಕ್ತಿ ಸಂಗ್ರಹ)

## 1. "ಧರ್ಮ ನಮ್ಮ ಅಂತರಂಗದಲ್ಲಿ ಇಳಿಯಬೇಕು"

ನೀವು ಮೋಕ್ಷವನ್ನು ಇಚ್ಛಿಸುವಿರಾ? ನೀವು ಸುಖಿಗಳಾಗಬೇಕೆ? ನೀವು ಶಾಂತಿಯಿಂದ ಬದುಕ ಬೇಕೆ? ಇದಕ್ಕಿರುವ ಸರಳ ಉಪಾಯವೆಂದರೆ ಧರ್ಮವನ್ನು ನಿಮ್ಮ ಅಂತರಂಗದಲ್ಲಿ ಇಳಿಸಲು ಪ್ರಾರಂಭಿಸಿ. ಧರ್ಮ ನಿಮ್ಮ ಅಂತರಂಗವನ್ನು ತಲುಪಿದಾಗ ನಿಶ್ಚಿತವಾಗಿ ತಮ್ಮ ಪರಿಣಾಮ ಶುಭ ಹಾಗೂ ಪವಿತ್ರವಾಗಲು ಸಿದ್ಧವಾಗುತ್ತದೆ ಮತ್ತು ಪರೋಪಕಾರದ ಭಾವನೆ ವಾಸ್ತವಿಕವಾಗಿ ಚರಿತಾರ್ಥ ವಾಗಬಲ್ಲದು. ಪರೋಪಕಾರವೇ ಧರ್ಮದ ಮೂಲವಾಗಿದೆ. ಒಂದು ಮರ ಹಾಗೂ ತಿರ್ಯಂಚ ಪ್ರಾಣಿ ನಮಗೆ ನಿರಂತರವಾಗಿ ಪರೋಪಕಾರದ ಪ್ರೇರಣೆ ನೀಡುತ್ತಾ ಬಂದಿದೆ, ಆದರೆ ನಾವು ಮನುಷ್ಯರಾಗಿಯೂ ಮಾನವೀಯತೆಯನ್ನು ಅಳವಡಿಸಿಕೊಳ್ಳದಿರುವುದು ವಿಡಂಬನೆಯಾಗಿದೆ. ಎಲ್ಲಿ ನೋಡಿದರಲ್ಲಿ ಮನುಷ್ಯನೇ ಮನುಷ್ಯನನ್ನು ದ್ವೇಷಿಸುತ್ತಿದ್ದಾನೆ, ಆತನ ಶತ್ರುವಾಗುತ್ತಿದ್ದಾನೆ. ಆದ್ದರಿಂದಲೇ ದುಃಖ, ಅಶಾಂತಿ ಒತ್ತಡಗಳು ಉಕ್ಕಿ ಹರಿಯುತ್ತಲಿವೆ. ಇದಕ್ಕೆ ಮಾನವನೇ ಹೊಣೆಗಾರನಾಗಿದ್ದಾನೆಯೇ ವಿನಹ ಬೇರೆಯವರಲ್ಲ. ನಾವು ಧರ್ಮದ ಮೂಲ ಸ್ವರೂಪವನ್ನು ಬಿಟ್ಟಿದ್ದೇವೆ ಅದರಿಂದ ದೂರ ಸರಿಯುತ್ತಿದ್ದೇವೆ. ಆದ್ದರಿಂದಲೇ ಮನುಷ್ಯ ಮನುಷ್ಯನಿಂದ ಭಯಭೀತನಾಗಿದ್ದಾನೆ. ಆದ್ದರಿಂದ ಮೋಕ್ಷ ಸುಖ ಹಾಗೂ ಶಾಂತಿಗಳನ್ನು ಪಡೆಯಲು ಧರ್ಮವನ್ನು ನಮ್ಮ ಅಂತರಂಗದವರೆಗೆ ಕೊಂಡೊಯ್ಯಿರಿ ಅದಕ್ಕಾಗಿ ತಮ್ಮ ಗುರುವಿನ ಸಂಗತಿಯನ್ನು ತಮ್ಮ ಪರಮ ಸೌಭಾಗ್ಯವೆಂದು ಭಾವಿಸಬೇಕು. ಯಾಕೆಂದರೆ ಅಲ್ಲಿಂದಲೇ ನಿಜವಾದ ಜ್ಞಾನದ ಮಾರ್ಗ ದೊರೆಯಬಲ್ಲದು, ಪ್ರಭುವಿನ ಭಕ್ತಿಯ ಕಡೆಗೆ ಸಾಗಬಲ್ಲದು ಮತ್ತು ಜೀವನದಲ್ಲಿ ಬದಲಾವಣೆ ಅಸಂಭವವಾಗದು.

ಮರಕ್ಕೆ ನಾವು ಕಲ್ಲಿನಿಂದ ಹೊಡೆದಾಗಲೂ ಸಿಹಿ ಸಿಹಿಯಾದ ಫಲಗಳನ್ನು ನೀಡುತ್ತದೆ. ಒಂದು ಹಸು ಹುಲ್ಲು ತಿಂದು ನಮಗೆ ಅಮೃತದಂತಿರುವ ಹಾಲನ್ನು ನೀಡುತ್ತದೆ. ಆದರೆ ಮನುಷ್ಯನು ಪರೋಪಕಾರದಿಂದ ದೂರವಾಗಿದ್ದಾನೆ. ಇಂದು ಹಸುಗಳು ಕಸಾಯಿಖಾನೆಗೆ ಹೋಗುತ್ತಿದ್ದರೆ ಅದಕ್ಕೆ ಮನುಷ್ಯನೇ ಕಾರಣನಾಗಿದ್ದಾನೆ.

ಹಸು ಹಾಲು ಕೊಡುವುದನ್ನು ನಿಲ್ಲಿಸಿದಾಗ, ಅಲ್ಪಸಲ್ಪ ಹಣದ ಲೋಭದಿಂದಾಗಿ ಮಾನವನೇ ಅವುಗಳನ್ನು ಕಟುಕರಿಗೆ ಮಾರುತ್ತಿದ್ದಾನೆ. ಈ ಕಾರಣದಿಂದಾಗಿಯೇ ಕಸಾಯಿಖಾನೆಗಳ ಸಂಖ್ಯೆ ಹೆಚ್ಚುತ್ತಲಿವೆ. ಮೂಕ ಜೀವಿಗಳ ಚರ್ಮ, ನೆಣ, ರೆಕ್ಕೆ, ಮೂಳೆಗಳು ಹಾಗೂ ರಕ್ತದಿಂದಾಗುವ ತರಹ-ತರಹದ ವಸ್ತುಗಳ ನಿರಂತರ ಉಪಯೋಗ ಹೆಚ್ಚಾಗುತ್ತಿದೆ. ತರಹ-ತರಹದ ಸೌಂದರ್ಯ ವರ್ಧಕಗಳಷ್ಟೇ ಅಲ್ಲ ಔಷಧಿಗಳಲ್ಲಿಯೂ ಸಹ ಪಶುಗಳ ರಕ್ತ ಹಾಗೂ ಅಂಗಗಳ ಉಪಯೋಗವಾಗುತ್ತದೆ. ನಮಗೆ ಈ ವಿಷಯಗಳ ಜ್ಞಾನವಿಲ್ಲ ಹಾಗೂ ನಾವು ಇವುಗಳಿಗೆ ಅನುಮೋದನೆ ಮಾಡುತ್ತಿದ್ದೇವೆ ಎಂಬ ಕಲ್ಪನೆಯೂ ಇಲ್ಲ. ಹೀಗಿರುವಾಗ ಸುಖ ಮತ್ತು ಶಾಂತಿ ಹೇಗೆ ಸಿಕ್ಕೀತು?

ಅಹಿಂಸಕ ಜೀವನ ಶೈಲಿಯು, ಸಾಮಾನ್ಯ ಮಾತುಗಳಿಂದ ಬರುವಂತಹದಲ್ಲ, ಇದಕ್ಕಾಗಿ ಸ್ವಯಂ ಜಾಗೃತರಾಗಬೇಕು. ಧರ್ಮವನ್ನು ಆತ್ಮ ಸಾಕ್ಷಾತ್ಕಾರ ಮಾಡಿಕೊಂಡಾಗಲೇ ನಿಜವಾದ ಸುಖ ಹಾಗೂ ಸೀಮಾತೀತ ಶಾಂತಿ ಸಿಗಬಲ್ಲದು. ಜೀವನದಲ್ಲಿ ಜೀವಗಳ ಬಗ್ಗೆ ದಯೆ, ಕರುಣೆ ಹಾಗೂ ಒಬ್ಬರಿಗೊಬ್ಬರಲ್ಲಿ ಪರೋಪಕಾರದ ಭಾವನೆ ಇರದಿದ್ದರೆ ನಾವು ಈ ಮಾನವ ಜೀವನವನ್ನು ವ್ಯರ್ಥವಾಗಿ ಕಳೆಯುತ್ತಿದ್ದೇವೆಂದು ತಿಳಿಯಬೇಕು. ಪರೋಪಕಾರಕ್ಕಾಗಿ ಹಣ ಮಾತ್ರವೇ ಬೇಕೆಂದೇನೂ ಇಲ್ಲ. ಬದಲಾಗಿ ಮನಸ್ಸು ಹಾಗೂ ಶರೀರದಿಂದಲೂ ಏನಾದರೂ ಒಳ್ಳೆಯದನ್ನು ಮಾಡಲು ಸಾಧ್ಯವಾದರೆ ಅದು ಸಹ ಪರಮಾತ್ಮನ ನಿಜವಾದ ಪ್ರಾರ್ಥನೆಯಾಗಬಲ್ಲದು. ಈ ಕಾರಣದಿಂದಾಗಿಯೇ ಸಂತ ಸಮಾಗಮವನ್ನು ದುರ್ಲಭವೆನ್ನಲಾಗಿದೆ. ಯಾಕೆಂದರೆ ಸಂತರ ಸಾನಿಧ್ಯದಿಂದಲೇ ಅಜ್ಞಾನದ ಅವಸ್ಥೆ ದೂರವಾಗ ಬಲ್ಲದು. ಅಜ್ಞಾನ ಇರುವವರೆಗೆ ಮಿಥ್ಯಾತ್ವದ ಪೋಷಣೆ ಆಗುತ್ತಿರುತ್ತದೆ. ವಿಷಯಗಳ ಪೋಷಣೆಯಲ್ಲಿಯೇ ಜೀವನ ವ್ಯರ್ಥವಾಗಿ ಹೋಗಿ ಬಿಡುತ್ತದೆ. ಆದ್ದರಿಂದ ಹೊರಟುಹೋದ ಸಮಯದ ಪಶ್ಚಾತ್ತಾಪ ಪಡುವುದನ್ನು ಬಿಟ್ಟು, ಪ್ರಭುವಿನ ಭಕ್ತಿ, ಸಂತರ ಉಪದೇಶ ಹಾಗೂ ಶಾಸ್ತ್ರಗಳ ಜ್ಞಾನವನ್ನು ಅಂತರಂಗದ ವರೆಗೆ ತಲುಪಿಸಬೇಕಾಗಿದೆ, ಇಂತಹ ಹೊಸ ಆರಂಭವನ್ನು ಮಾಡಬೇಕಾಗಿದೆ.

ಸಂತ ಸಮಾಗಮ ಪ್ರಭು ಭಜನೆ, ತುಲಸಿ, ದುರ್ಲಭವಾದರೆ
ಸುತ ಪತ್ನಿ ಮತು ಲಕ್ಷ್ಮಿ ಪಾಪಿಗೂ ಸಹ ಪ್ರಾಪ್ತವಾಗುತ್ತವೆ.

# 2. ಭಕ್ತಿಯಲ್ಲಿ ನಿಯಮ–ಸಂಯಮದ ಅವಶ್ಯಕತೆ

ಭಕ್ತಿಯಾಗಿರಲಿ, ಸಾಧನೆಯಾಗಿರಲಿ ಅವುಗಳಲ್ಲಿ ನಿಯಮ–ಸಂಯಮ, ಶ್ರದ್ಧೆ ಮತ್ತು ಸಮರ್ಪಣೆ ಹಾಗೂ ವಿಶ್ವಾಸ ಇರದಿದ್ದರೆ ಅವುಗಳ ಪ್ರತಿಫಲ ದೊರೆಕುವುದಿಲ್ಲ. ನಿಯಮ–ಸಂಯಮಗಳೊಂದಿಗೆ ಪ್ರಭುವಿನ ಭಕ್ತಿ ಮಾಡಿದಾಗ ನಿಶ್ಚಿತವಾಗಿಯೂ ಅದರಿಂದ ಶಕ್ತಿ ದೊರೆಯುತ್ತದೆ. ತಮ್ಮ ಗುರುವಿನ ಬಗ್ಗೆ ಸಮರ್ಪಣೆ ಮತ್ತು ಧರ್ಮದ ಬಗ್ಗೆ ಸಂಪೂರ್ಣ ನಿಷ್ಠಾಭಾವ ಜಾಗೃತವಾದಾಗ ಪವಿತ್ರ ಹಾಗೂ ಸದೃಢತೆಯೊಂದಿಗೆ ಜೀವನವು ಸಹಜವಾಗಿ ಬದಲಾಗುತ್ತದೆ. ಕರ್ಮಗಳನ್ನು ಸಡಿಲು ಹಾಗೂ ತೆಳುವಾಗಿಸಲು ಪ್ರಭುವಿನ ಭಕ್ತಿಯ ಮಹತ್ವವನ್ನು ಎಲ್ಲ ಧರ್ಮಗಳು ಶ್ರೇಷ್ಠವೆಂದು ಹೇಳಿವೆ. ಭಕ್ತಿಯಲ್ಲಿಯೂ ನಿಷ್ಕಾಮ ಅಥವಾ ಮೋಕ್ಷದ ಆಶಯದಿಂದ ಮಾಡುವ ಭಕ್ತಿಯನ್ನು ಜಗತ್ತಿನಲ್ಲಿ ಶ್ರೇಷ್ಠವೆಂದು ಹೇಳಲಾಗಿದೆ. ಭಕ್ತಿಯಿಂದ ಮನಸ್ಸು ಸಂತೋಷಗಳಿಂದ ತುಂಬಿ ಹೋಗುತ್ತದೆ ಹಾಗೂ ಸಂಸಾರದ ಸ್ಥಾನದಲ್ಲಿ ಭಕ್ತರು ಪ್ರಭುವಿಗೆ ಶರಣಾಗತರಾದಾಗ ಪುಣ್ಯಕರ್ಮಗಳ ಸಂಚಯವಾಗುತ್ತದೆ. ಆದ್ದರಿಂದ ಪ್ರಭುವಿನ ಭಕ್ತಿಯ ಅವಕಾಶ ದೊರೆಕಿದಾಗ ಅದರಿಂದ ವಂಚಿತರಾಗಬಾರದು. ತಮ್ಮ ಇಂದ್ರಿಯಗಳ ಮೇಲೆ ಸಂಯಮ ಹೊಂದಲು ಇದೂ ಒಂದು ಮಾರ್ಗವಾಗಿದೆ. ಮನಸ್ಸನ್ನು ಪವಿತ್ರಗೊಳಿಸುವ ಒಂದು ಪಾವನ ರೀತಿಯೂ ಆಗಿದೆ.

ಪೂರ್ವ ಜನ್ಮದ ಪುಣ್ಯವಿರುವಾಗ ಮಾನವನಿಗೆ ಧನ ಆರೋಗ್ಯವಾದ ಶರೀರ ತುಂಬಿದ ಪರಿವಾರ, ಸುಖ–ವೈಭವ, ಅದೃಷ್ಟ ಎಲ್ಲವೂ ಸಿಗುತ್ತದೆ. ಆದರೆ ಪೂರ್ವ ಜನ್ಮಗಳ ಶುಭಕರ್ಮಗಳು ಯಾವವು ಎನ್ನುವುದನ್ನು ಯಾವಾಗಲಾದರೂ ಯೋಚಿಸಿದ್ದೀರಾ? ನಿಶ್ಚಿತವಾಗಿಯೂ ಆತ್ಮನು ಪ್ರಭುವಿನ ಭಕ್ತಿಯನ್ನು ನಿಯಮ–ಸಂಯಮ ಹಾಗೂ ಪೂರ್ಣ ಶ್ರದ್ಧೆಯಿಂದ ಮಾಡಿದಾಗ ಅದರ ಸುಪರಿಣಾಮ ದೊರೆಯುತ್ತದೆ. ರಾವಣನು ಸಹ ಭಕ್ತಿಯ ಶಕ್ತಿಯಿಂದಲೇ ಸೀಮಾತೀತವಾದ ಶಕ್ತಿಗಳನ್ನು ಪಡೆದಿದ್ದನು. ಆದರೆ ಆತ ಮಾಡಿದ ಒಂದು ತಪ್ಪಿನಿಂದಾಗಿ ಪತನದ ಕಡೆಗೆ ನೂಕಲ್ಪಟ್ಟನು. ರಾವಣನು ರಾಮನ ಸಮ್ಮುಖದಲ್ಲಿ ಸಾವನ್ನು ಪಡೆದರೂ, ರಾವಣನ ಭಕ್ತಿ ವ್ಯರ್ಥವಾಗಿಲ್ಲವೆಂದು ಇತಿಹಾಸ ಹೇಳುತ್ತದೆ. ಭಕ್ತಿಯ ಅಂಶ ಇಂದಿಗೂ ಅಡಗಿದೆ. ಆ ಆತ್ಮ ಯಾವುದಾದರೂ ಒಂದು ಭವದಲ್ಲಿ ತೀರ್ಥಂಕರನಾಗುವ ಮಾರ್ಗವನ್ನು ಪಡೆಯುತ್ತಾನೆ. ಭಕ್ತಿಯೊಂದಿಗೆ ಮನಸ್ಸು ಸೇರಿದಾಗಲೇ ಆತ್ಮನಿಗೆ ಸಂತೋಷಗಳು ಅನುಭವಕ್ಕೆ ಬರುವುದನ್ನು ಗಮನಿಸಬೇಕು. ಗೃಹಸ್ಥನಾಗಿಯೂ ಇದ್ದೂ ಸಹ, ಕರ್ಮಗಳ ನಿರ್ಜರೆಗಾಗಿ ಇದು ಶ್ರೇಷ್ಠ ಸಾಧನವಾಗಿದೆ. ಪರಮಾತ್ಮನ ಪೂಜೆಯು ಮನುಷ್ಯನನ್ನು ಒಂದು ದಿನ ಪೂಜ್ಯನನ್ನಾಗಿ ಮಾಡುತ್ತದೆ.

ಮನುಷ್ಯನ ಬಳಿ, ಸ್ವರ್ಗದ ದೇವತೆಗಳಿಗಿಂತಲೂ ಉನ್ನತ ಪದವಿ ಇದೆ. ಮನುಷ್ಯರೇ ನಿಯಮ–ಸಂಯಮ, ಭಕ್ತಿ–ಆರಾಧನೆ, ಪೂಜೆ–ಪಾಠ, ತಪ–ಧ್ಯಾನಗಳ ಅನುಷ್ಠಾನಗಳಿಂದ ಮುಕ್ತಿಯವರೆಗಿನ ಸಾಧನೆ ಮಾಡಬಹುದಾಗಿದೆ. ಆದ್ದರಿಂದಲೇ

ತಾನೇ ದೇವತೆಗಳು ಮನುಷ್ಯ ಜನ್ಮ ಪಡೆಯಲು ಬಯಸುತ್ತಾರೆ, ಮಾನವ ಜನ್ಮ ಪಡೆದೂ ಸಹ ನಾವು ಪರಮಾತ್ಮನ ಭಕ್ತಿ ಹಾಗೂ ಆತನ ಸದ್ಗುಣಗಳನ್ನು ನಮ್ಮ ಜೀವನದಲ್ಲಿ ಆತ್ಮ ಸಾಕ್ಷಾತ್ಕಾರ ಮಾಡಿಕೊಳ್ಳದಿದ್ದರೆ. ಈ ದುರ್ಲಭ ಜೀವನವನ್ನು ವ್ಯರ್ಥವಾಗಿ ಕಳೆದುಕೊಂಡಂತಾಗುತ್ತದೆ.

ಭಕ್ತಿ ಮಾಡುವುದಾದರೆ ಮಾಡು, ಸದಾ ಮೈನಾಸುಂದರಿಯ ಹಾಗೆ ।
ಛಲ, ಕಪಟಗಳೊಂದಿಗೆ ಮಾಡದಿರು ಭಕ್ತಿ, ಮಾಡಿದ್ದೆಯಾದರೆ ಪಡೆಯುವೆ
ಗತಿ ರಾವಣನ ಹಾಗೆ ॥
ನನ್ನಲ್ಲಿ ಅಡಗಿದ ಅಂತರಂಗವನ್ನು ಜಗದಲ್ಲಿ ನೋಡುವವರು
ಯಾರೆಂದು ಹೇಳದಿರು ।
ಪ್ರಭು ನೊಡುವನು ಜಗತ್ತಿನ ರೀತಿ–ನೀತಿಗಳನು ಸದಾ,
ಆದ್ದರಿಂದ ಹೊಂದು ಭಾವಶುದ್ಧಿಯನು ॥

## ಸದ್ಯ ಯಾವ ಪ್ರಳಯವೂ ಇಲ್ಲ.

ಕ್ರಿ.ಶ.2012 ರಲ್ಲಿ ಪ್ರಳಯವಾಗುತ್ತದೆ ಎಂಬ ಭಾವನೆ ಬಲವಾಗಿ ಬೇರೂರಿದ್ದಿತು. ಇಂತಹ ದುಷ್ಪ್ರಚಾರ ಹಾಗೂ ಪ್ರಳಯದ ಸುಳ್ಳು ಸುದ್ದಿ ಹರಡುವವರು ಜನರಲ್ಲಿ ಭ್ರಮೆಯನ್ನುಂಟು ಮಾಡಿದ್ದರು. ಈ ಪಂಚಮಕಾಲ ನಡೆಯುತ್ತಿದೆ. ಜೈನ ದರ್ಶನದ ಪ್ರಕಾರ ಪಂಚಮಕಾಲವು ಇನ್ನೂ ಹದಿನೆಂಟು ವರೆ ಸಾವಿರ ವರ್ಷಗಳ ಕಾಲವಿರುತ್ತದೆ. ಇದರ ನಂತರ 21 ಸಾವಿರ ವರ್ಷಗಳಷ್ಟು ಆರನೆಯದಾದ ದುಷಮ–ದುಷಮ ಕಾಲ ಬರುತ್ತದೆ. ಈ ಕಾಲ ಮುಗಿದ ನಂತರ ಪ್ರಳಯವಾಗುತ್ತದೆ.

ಈಗ ಜಗತ್ತಿನಲ್ಲಿ ಶ್ರದ್ಧೆ, ಭಕ್ತಿ, ಪೂಜೆ, ಆರಾಧನೆ, ತಪ, ಧ್ಯಾನದ ಭಾವನೆಗಳು ಬೇಕಾದಷ್ಟು ಇವೆ. ಇವೆಲ್ಲವು ಇರುವವರೆಗೆ ಯಾವ ಪ್ರಳಯವು ಆಗುವುದಿಲ್ಲ.

# 3. ಈ ಸಂಸಾರ ಒಂದು ಬೀಸುವಕಲ್ಲಿನಂತೆ

"ಚಲತೀ ಚಕ್ಕಿ ದೇಖಕರ, ದಿಯಾ ಕಬೀರ ರೋಯ ।
ದೋ ಪಾಟನ ಕೇ ಬೀಚ ಮೇ, ಸಾಬುತ ಬಚಾ ನ ಕೋಯ ॥"

ಸಂತ ಕಬೀರದಾಸರ ಈ ಪ್ರೇರಕ ಸಾಲುಗಳನ್ನು ಬಹುಶಃ ತಾವು ಸಹ ಜೀವನದಲ್ಲಿ ಬಹಳಸಾರಿ ಕೇಳಿ ಹಾಗೂ ಓದಿರಬಹುದು ಆದರೆ ಎಂದಾದರೂ ಈ ಸಾಲುಗಳ ಭಾವಾರ್ಥದ ಆತ್ಮ-ಚಿಂತನೆ ಮಾಡಿದ್ದೀರಾ? ನಿಜ ಸಂಗತಿ ಎಂದರೆ ಈ ಸಂಸಾರ ಒಂದು ಬೀಸುವಕಲ್ಲಿನಂತಿದೆ. ಇದರಲ್ಲಿ ಅನಾದಿಕಾಲದಿಂದ ರಾಗ-ದ್ವೇಷಗಳೆಂಬ ಎರಡು ಚಪ್ಪಡಿಗಳ ನಡುವೆ ಈ ಜೀವ ಹಿಟ್ಟಾಗುತ್ತಲಿದೆ. ಇಂದು ಸಹ ಇದೇ ಆಗುತ್ತಲಿದೆ ಹಾಗೂ ಆತ್ಮನು ಮೇಲಿಂದ ಮೇಲೆ ಜನ್ಮ-ಮರಣಗಳನ್ನು ಹೊಂದಿ ಸಂಸಾರದಲ್ಲಿ ಪರಿಭ್ರಮಣೆ ಮಾಡುತ್ತಲಿದೆ. ಸಂಸಾರರೂಪದ ಈ ಬೀಸುವ ಕಲ್ಲಿನಿಂದ ನಾವು ಹೇಗೆ ರಕ್ಷಿಸಿಕೊಳ್ಳಬೇಕೆಂದು, ಉಳಿಯುವ ಯಾವುದಾದರೂ ಉಪಾಯ ಇದೆ ಎಂದು ಎಂದಾದರೂ ಯೋಚಿಸಿದ್ದೀರಾ? ತಿರುಗುವ ಬಿಸುವಕಲ್ಲಿನಲ್ಲಿ ಹಿಟ್ಟಾಗುವುದರಿಂದ ಉಳಿಯುವ ಪುರುಷಾರ್ಥವನ್ನು ಮಾಡಬಲ್ಲವರು ಮುಕ್ತರಾಗಿ ಬಿಡುತ್ತಾರೆ ಅಥವಾ ಮುಂದೆಯಾದರೂ ಮುಕ್ತರಾಗುತ್ತಾರೆ. ತಿರುಗುತ್ತಿರುವ ಬೀಸುವಕಲ್ಲಿನಲ್ಲಿಯೂ, ಬೀಸುವ ಕಲ್ಲಿನ ಕೀಲಿನ ಜೊತೆಯಲ್ಲಿರುವ ಕೆಲವು ಧಾನ್ಯದ ಕಾಳುಗಳು ಉಳಿದು ಕೊಂಡಿರುತ್ತವೆ. ಧರ್ಮವು ಸಹ ಒಂದು ಕೀಲು ಆಗಿದೆ. ಧರ್ಮರೂಪದ ಕೀಲಿನ ಆಶ್ರಯವನ್ನು ಪಡೆದವರು ನಿಶ್ಚಿತವಾಗಿಯು ರಕ್ಷಣೆ ಹೊಂದಿರುತ್ತಾರೆ. ಆದ್ದರಿಂದಲೇ ಧರ್ಮವನ್ನು ತಾರಣಹಾರ ಮತ್ತು ಮುಕ್ತಿ ಮಾರ್ಗವೆಂದು ಹೇಳಲಾಗಿದೆ. ಧರ್ಮವನ್ನು ಯಾರು ಬೇಕಾದರೂ ಆಶ್ರಯಿಸ ಬಹುದು ಹಾಗೂ ಧರ್ಮದಲ್ಲಿ ಇಂದಿಗೂ ಸಹ ಮಹಾವೀರ, ಬುದ್ಧ, ರಾಮ, ಕೃಷ್ಣರ ಕಾಲದಲ್ಲಿ ಇದ್ದಷ್ಟೆ ಶಕ್ತಿ ಇದೆ. ಕೇವಲ ನಮ್ಮಲ್ಲಿ ನೋಡುವ ಹಾಗೂ ಧರ್ಮದ ಅನುಕರಣೆ ಮಾಡುವ ಅವಶ್ಯಕತೆ ಮಾತ್ರ ಇದ್ದು ಮತ್ತೆ ಸಂಸಾರದ ಬೀಸುವ ಕಲ್ಲಿನಲ್ಲಿ ಮೇಲಿಂದ ಮೇಲೆ ಹಿಟ್ಟಾಗುವ ಪ್ರಸಂಗ ಬರಲಾರದು. ಆತ್ಮನಲ್ಲಿ ಪರಮಾತ್ಮನಾಗುವ ಮಾರ್ಗ ತನಗೆ ತಾನೇ ಸ್ವತಃ ದೊರೆಯುತ್ತದೆ.

ಸಂಸಾರವೆಂಬ ಬೀಸುವಕಲ್ಲಿನಿಂದ ಹಿಟ್ಟಾಗುವದನ್ನು ತಪ್ಪಿಸಿಕೊಳ್ಳುವುದು ಹೇಗೆ, ಯಾರಿಗೆ ಶರಣಾಗತನಾಗುವುದು ಹಾಗೂ ಯಾರ ಅನುಕರಣೆ ಮಾಡಲಿ, ಈ ನಿರ್ಧಾರವನ್ನು ಸ್ವತಃ ತಾವೇ ಮಾಡಬೇಕಾಗುತ್ತದೆ. ಪಾಪ ಕಾರ್ಯಗಳಿಂದ ದೂರವಿರುವುದು ಪರಮಾತ್ಮನಿಗೆ ಶರಣಾಗುವುದು ಹಾಗೂ ಸಾಧು-ಸಂತರು ಉಪದೇಶಗಳನ್ನು ಅನುಸರಣೆ ಮಾಡುವುದರಿಂದ ಜೀವ ತನ್ನನ್ನು ರಕ್ಷಿಸಿಕೊಳ್ಳಬಹುದು. ತಾವು ರಾತ್ರಿ ಆಹಾರ ಸೇವನೆ ಮಾಡುತ್ತಾ, ಅಭಕ್ಷಗಳ ಸೇವನೆ ಮಾಡುತ್ತಾ, ಮಾದಕ ವಸ್ತುಗಳನ್ನು ಸೇವನೆ ಮಾಡುತ್ತಾ, ವ್ಯಸನ ಹಾಗೂ ಫ್ಯಾಶನ್‌ಗಳ ಗುಲಾಮರಾಗಿ, ಮಾತಿನ ಮೇಲೆ ನಿಯಂತ್ರಣವಿರದೇ ತನ್ನನ್ನು ಪರಮಾತ್ಮನ

ಭಕ್ತನೆಂದು ಭಾವಿಸುತ್ತಿದ್ದರೆ, ಸಂಸಾರದ ಬೀಸುವ ಕಲ್ಲಿನಿಂದ ಮುಕ್ತರಾಗಲು ಸಾಧ್ಯವಿಲ್ಲ. ದಯೆ ಇಲ್ಲದೆ ಅಹಿಂಸೆಯ ಭಾವನೆ ಇಲ್ಲದೇ, ಚಾರಿತ್ರವಿಲ್ಲದ ಯಾವ ಧರ್ಮವೂ ಇಲ್ಲ ಎನ್ನುವುದನ್ನು ಗಮನದಲ್ಲಿಡಬೇಕು. ಜೀವಗಳ ರಕ್ಷಣೆ ಧರ್ಮದ ಮೊದಲ ಮೆಟ್ಟಲಾಗಿದೆ ಹಾಗೂ ಕೋಪ ಮಾಡಿಕೊಳ್ಳುವುದು, ಮಾಯಾಚಾರ–ಲೋಭ, ರಾಗ–ದ್ವೇಷ, ಛಲ–ಕಪಟ ಇವೆಲ್ಲವೂ ಹಿಂಸೆಗೆ ಕಾರಣವಾಗಿವೆ. ಕ್ಷಮೆಯು ಧರ್ಮವಾಗಿದೆ. ತ್ಯಾಗವು ಧರ್ಮವಾಗಿದೆ. ನಮ್ಮ ಆತ್ಮನನ್ನು ಪಾಪಗಳಿಂದ ಬಿಡಿಸಿಕೊಳ್ಳುವ ಕಾರ್ಯ ಆಗದವರೆಗೆ ಸಂಸಾರದ ಬೀಸುವ ಕಲ್ಲಿನಲ್ಲಿ ನಿರಂತರವಾಗಿ ಹಿಟ್ಟಾಗಲೇ ಬೇಕು. ಪ್ರತಿಸಾರಿ ನಿಮಗೆ ಮಾನವ ಜನ್ಮವೇ ಸಿಗುವುದೆಂಬ ನಿಯಮವಿಲ್ಲ. ತಾವು ತಿರ್ಯಂಚ, ನಾರಕೀ, ಪಶು ಯೋನಿಗಳನ್ನು ಸಹ ಪಡೆಯಬಹುದು. ಇದೆಲ್ಲವೂ ತಮ್ಮ–ತಮ್ಮ ಕರ್ಮಗಳ ಲೆಕ್ಕಾಚಾರವಾಗಿದೆ. ಇದರಿಂದ ಸಂಸಾರದಲ್ಲಿ ಇಂದಿನ ವರೆಗೆ ಈ ಲೆಕ್ಕಾಚಾರದಿಂದ ಯಾರೂ ಬದುಕಿಲ್ಲ, ಬದುಕುವುದೂ ಇಲ್ಲ. ಯಾರೂ ಹೇಗೆ ಮಾಡಿರುವರೋ ಅವರಿಗೆ ಹಾಗೆಯೇ ಪರಿಣಾಮಗಳನ್ನು ಅನುಭವಿಸ ಬೇಕಾಗುತ್ತದೆ.

ಅನ್ನ, ಬಟ್ಟೆ ಹಾಗೂ ವಸತಿಗಳ ವ್ಯವಸ್ಥೆಯಿಂದಲೇ ಜೀವನವು ಸುಖಮಯವಾಗಲಾರದು. ಧರ್ಮದ ಸಂಪತ್ತನ್ನು ಸಹ ಜೊತೆ–ಜೊತೆಯಾಗಿ ಗಳಿಸಬೇಕಾಗುತ್ತದೆ. ಇದಕ್ಕಾಗಿ ಹಣವನ್ನೇನು ವೆಚ್ಚ ಮಾಡಬೇಕಾಗಿಲ್ಲ. ದುಡ್ಡು ಇರದಿದ್ದರೆ ಹಾಗೂ ಇದ್ದರೂ ಹೆಚ್ಚು ವೆಚ್ಚ ಮಾಡುವ ಮನಸ್ಸು ಇರದಿದ್ದರೂ ಪರವಾಗಿಲ್ಲ ಆದರೆ ಕಡಿಮೆ ಎಂದರೂ ತಮ್ಮ ಇಂದ್ರಿಯಗಳ ಮೇಲೆ ನಿಯಂತ್ರಣ, ಸಂಯಮ ತ್ಯಾಗದ ಭಾವನೆಗಳನ್ನು ಹೊಂದಿರಬೇಕು. ಇವುಗಳಲ್ಲಿ ಹಣದ ಅವಶ್ಯಕತೆಯೇ ಇಲ್ಲ. ನಿಮ್ಮ ಸಮ್ಯಕ್ ಜ್ಞಾನ ಎಷ್ಟೆಷ್ಟು ಆಳ ಹಾಗೂ ಪವಿತ್ರವಾಗ ತೊಡಗುವುದೋ ಆಗ ಧರ್ಮವು ಪಾರದರ್ಶಕವಾಗ ಬಲ್ಲದು. ಒಂದು ವೇಳೆ ಇಲ್ಲಿಯೂ ಮತ್ತು ಅಲ್ಲಿಯೂ ಸುಖ ಬೇಕಾದರೆ ಧರ್ಮಕ್ಕೆ ಶರಣಾಗಲೇ ಬೇಕು. ಧರ್ಮ (ಪುಣ್ಯ) ಮಾಡುವವರು ಒಂದು ದಿನ 'GOD' ಹಾಗೂ ಅಧರ್ಮ (ಪಾಪ) ಮಾಡುವವರು 'DOG' ಆಗುತ್ತಾರೆ. ಮನುಷ್ಯ ಜನ್ಮದಲ್ಲಿಯೇ ನಿಜವಾದ ಧರ್ಮದ ಸಂಪತ್ತನ್ನು ಗಳಿಸಬಹುದೆಂಬುದನ್ನು ಮರೆಯಬಾರದು. ಬೇರೆ ಜನ್ಮಗಳಲ್ಲಿ ಇದು ಸಾಧ್ಯವಿಲ್ಲ. ಸಂಸಾರದ ಬೀಸುವಕಲ್ಲಿನಲ್ಲಿ ಹಿಟ್ಟಾಗುವುದರಿಂದ ರಕ್ಷಿಸಿಕೊಳ್ಳುವ ಅವಕಾಶ ಈಗ ತಮಗಿದೆ, ಮತ್ತೆ ಧರ್ಮದ ಕೀಲಿನ ಶರಣು ಪಡೆಯುವ ಸು ಅವಸರ ಮತ್ತೆ ಸಿಗುವುದೋ ಇಲ್ಲವೋ ಗೊತ್ತಿಲ್ಲ.

ದೋ ಪಾಟನ ಕೇ ಬೀಚ ಮೇ, ಕೀಲ ತಹೀ ಜೋ ಕೋಯ ।
ತಾಕೇ ಶರಣನ ಜೋ ಗಯಾ, ಬಾಲನ ವಾಕೋ ಹೋಯ ॥

# 4. ಸುಖವು ಹೊರಗಿಲ್ಲ ನಮ್ಮ ಅಂತರಂಗದಲ್ಲಿಯೇ ಇದೆ

ಜಗತ್ತಿನಲ್ಲಿ ಇಂದು ಎಲ್ಲಿ ನೋಡಿದರಲ್ಲಿ ಮನುಷ್ಯ ದುಃಖಿಯಾಗಿದ್ದಾನೆ, ಆತಂಕ, ಒತ್ತಡ ಹಾಗೂ ಚಿಂತೆಗಳಿಂದ ಸುತ್ತುವರೆದಿದ್ದಾನೆ. ಎಲ್ಲರಿಗೂ ಸುಖ ಮತ್ತು ಶಾಂತಿ ಬೇಕಾಗಿದೆ. ಸುಖವನ್ನು ಪಡೆಯಲು ಮನುಷ್ಯ ಏನೆಲ್ಲ ಮಾಡುತ್ತಾನೆ, ಎಲ್ಲೆಲ್ಲಿ ಅಲೆದಾಡುತ್ತಾನೆ ಎನ್ನುವುದು ಗೊತ್ತಿಲ್ಲ. ಆದರೂ ಇರುವ ಸಂಗತಿ ಎಂದರೆ ನಿಜವಾದ ಸುಖ ಹಾಗೂ ಆತ್ಮಿಕ ಶಾಂತಿ ದೊರಕುತ್ತಿಲ್ಲ. ಸುಖ ಎಲ್ಲಿದೆ ಎಂದು ಯೋಚಿಸಿದ್ದೀರಾ? ಎಲ್ಲಿ ನಾವು ಸುಖವನ್ನು ಹುಡುಕುತ್ತಿದ್ದೇವೆ ಅಥವಾ ಯಾವ ವಸ್ತುಗಳಲ್ಲಿ ಹಾಗೂ ಸಾಧನಗಳಲ್ಲಿ ಸುಖವಿದೆ ಎಂದು ಭಾವಿಸಿದ್ದೇವೆ ಅದು ಸುಖವೇ? ಸುಖವು ಹೊರಗೆ ಇಲ್ಲ, ಆದರೆ ಅದು ನಮ್ಮ ಅಂತರಂಗದಲ್ಲಿಯೇ ಇದೆ ಎಂಬುದನ್ನು ಗಮನದಲ್ಲಿಡಬೇಕು. ಆ ಅನಂತಸುಖವನ್ನು ಪಡೆಯುವ ಒಂದೇ ಸಾಧನವೆಂದರೆ ಧರ್ಮವೇ ಆಗಿದೆ. ಸುಖವೇನೂ ಹೊರಗಿನ ವಸ್ತುವಲ್ಲ, ಅದು ಅಂತರಂಗದಲ್ಲಿ ಅನುಭವದ ವಸ್ತುವಾಗಿದೆ. ದೃಷ್ಟಿ ಬದಲಾದಾಗ ಸಂತೋಷ ಮತ್ತು ಸಮತಾಭಾವ ಜಾಗೃತವಾದಾಗ ಅಂತರಂಗದ ಆಳದಲ್ಲಿ ಇಳಿದಾಗ ಅಸೀಮ ಶಾಂತಿ ಹಾಗೂ ಪರಮ ಸುಖ ದೊರೆಯುತ್ತದೆ. ಈ ಸುಖವು ಪ್ರತಿಯೊಬ್ಬ ವ್ಯಕ್ತಿಯ ಒಳಗೆ ತುಂಬಿದೆ. ಆದರೆ ನಮ್ಮದೇ ಅಜ್ಞಾನದ ಕಾರಣ ಒಂದು ಮೃಗ ತನ್ನ ಬಳಿಯಲ್ಲಿಯೇ ಕಸ್ತೂರಿ ಇದ್ದಾಗ್ಯೂ ಅದರ ಸುಗಂಧದ ಹುಡುಕಾಟದಲ್ಲಿ ಓಡುತ್ತಲೆ ಇರುತ್ತದೆ. ಅದೇ ಸ್ಥಿತಿ ಭ್ರಮಿತ ಹಾಗೂ ದಾರಿ ತಪ್ಪಿರುವ ಮನುಷ್ಯನದಾಗಿದೆ. ಒಂದು ವೇಳೆ ನಿಜವಾಗಿಯೂ ನಿಜವಾದ ಸುಖ ಬೇಕಾದಲ್ಲಿ ತನ್ನನ್ನು ನೋಡುವ ತನ್ನನ್ನು ತಿಳಿಯುವ ಪುರುಷಾರ್ಥ ಮಾಡಿರಿ. ಅಂತರಂಗದ ಕಿರಣಗಳು ಮತ್ತೆ ಸ್ವತಃ ಸುಖದ ಪ್ರಕಾಶವನ್ನು ಉತ್ಪನ್ನ ಮಾಡುತ್ತವೆ.

ಇಚ್ಛೆಗಳು, ಕಾಮನೆಗಳು ಆಕುಲತೆಗಳು ಇರುವಲ್ಲಿ ಎಂದಿಗೂ ಸುಖವಿರುವುದಿಲ್ಲ. ಆದರೆ ಇಂದು ಜನ ಸಾಮಾನ್ಯರು ಹೆಚ್ಚು ಹೆಚ್ಚು ಹಣದಲ್ಲಿ ಸೌಕರ್ಯಗಳಲ್ಲಿ ಸುಖವಿದೆ ಎಂದು ಭಾವಿಸಿದ್ದಾರೆ, ಹಾಗೆಯೇ ಯೋಚಿಸುತ್ತಾರೆ. ಕೆಲವರಿಗೆ ತಮ್ಮ ಬಂಗಲೆಗಳಲ್ಲಿ, ಇನ್ನು ಕೆಲವರಿಗೆ ತಮ್ಮ ಫಾರಂ ಹೌಸಿನಲ್ಲಿ, ಕೆಲವರಿಗೆ ವಾಹನಗಳಲ್ಲಿ, ಇನ್ನು ಕೆಲವರಿಗೆ ಉನ್ನತ ಸ್ಥಾನ ಪಡೆಯುವುದರಲ್ಲಿ, ಕೆಲವರಿಗೆ ಮದುವೆ ಮಾಡಿಸುವುದರಲ್ಲಿ, ಕೆಲವರಿಗೆ ಶರೀರ ಸೌಂದರ್ಯವನ್ನು ರಕ್ಷಿಸಿಕೊಳ್ಳುವಲ್ಲಿ, ತಮ್ಮ ಸೌಂದರ್ಯದ ಪ್ರದರ್ಶನದಲ್ಲಿ, ಕೆಲವರಿಗೆ ಕಾರಖಾನೆಗಳ ಸ್ಥಾಪನೆಯಲ್ಲಿ, ಕೆಲವರಿಗೆ ತಮ್ಮ ಅಂಗಡಿಗಳಲ್ಲಿ, ಕೆಲವರಿಗೆ ಪದವಿಗಳನ್ನು ಹೊಂದುವುದರಲ್ಲಿ, ಕೆಲವರಿಗೆ ಇತರರ ಸಂಪತ್ತಿಯನ್ನು ಅಪಹರಿಸುವಲ್ಲಿ, ಕೆಲವರಿಗೆ ತಮ್ಮ ಸನ್ಮಾನ ಮಾಡಿಸಿಕೊಳ್ಳುವಲ್ಲಿ ಕೆಲವರಿಗೆ ತಮ್ಮ ವೈಭವವನ್ನು ಹೆಚ್ಚಿಸಿಕೊಳ್ಳುವಲ್ಲಿ ಸುಖದ ಅನುಭವವಾಗುತ್ತದೆ. ಸಂಸಾರೀ ಪ್ರಾಣಿಗಳು ಹೊರಗಿನ ಸವಲತ್ತುಗಳನ್ನೇ ಸುಖವೆಂದು ಭಾವಿಸಿದ್ದಾರೆ ಹಾಗೂ ಹಣಕ್ಕಾಗಿ ವ್ಯಾಕುಲ ಹಾಗೂ ಸ್ವಾರ್ಥಿಗಳಾಗಿ

ರಕ್ತ ಸಂಬಂಧವನ್ನು ಸಹ ಕಡೆಗಣಿಸುತ್ತಿದ್ದಾರೆ. ಈ ಭೌತಿಕ ಸಂಪತ್ತಿನಿಂದ ಜಗತ್ತಿನಲ್ಲಿ ಇಂದಿನವರೆಗೂ ಯಾರಿಗೂ ಸುಖ ದೊರೆತಿಲ್ಲ, ಬದಲಾಗಿ ದುಃಖವೇ ಹೆಚ್ಚಾಗಿದೆ. ಇಂದು ಸೌಲಭ್ಯಗಳ ಹಾಗೂ ಸಾಧನಗಳನ್ನು ಹೆಚ್ಚಿಸಿಕೊಳ್ಳುವ ಹಾಗೂ ಹೆಚ್ಚು ಹೆಚ್ಚು ಸಂಗ್ರಹ ಮಾಡಿಕೊಳ್ಳುವ ಚಿಂತನೆ ಹೆಚ್ಚಾಗಿರುವುದರಿಂದ ಜಗತ್ತಿನಲ್ಲಿ ಮನುಷ್ಯನಿಗೆ ಮನುಷ್ಯನೇ ಶತ್ರುವಾಗುತ್ತಿದ್ದಾನೆ. ಸಮ್ಯಕ್‌ಜ್ಞಾನ ಇಲ್ಲವಾಗಿರುವುದರಿಂದ ಮಿಥ್ಯಾತ್ವಪೂರ್ಣ ಅಜ್ಞಾನ ಹೆಚ್ಚಾಗಿರುವುದರಿಂದ ಮನುಷ್ಯನು ನಿಜವಾದ ಸುಖದಿಂದ ದೂರವಾಗಿದ್ದಾನೆ. ಆತ್ಮೀಕ ಸುಖ ಇಲ್ಲದೇ ಇರುವವರೆಗೆ ಶಾಂತಿಯೂ ಸಹ ಸಾಧ್ಯವಿಲ್ಲ, ಆತ್ಮೀಕ ಸುಖ ಇರುವಲ್ಲಿ ಪರಮಶಾಂತಿ ಇರುತ್ತದೆ.

ಎಲ್ಲಿಂದ ನಮ್ಮ ಸುಖ ಕಾಣೆಯಾಗಿದೆಯೋ ಅಲ್ಲಿಯೇ ನಾವು ಆ ಸುಖದ ಹುಡುಕಾಟವನ್ನು ನಡೆಸಬೇಕಾಗಿದೆ. ಸೂಜಿ ಎಲ್ಲಿ ಬಿದ್ದಿದೆಯೋ ಅಲ್ಲಿ ಬಿಟ್ಟು ಬೇರೆ ಕಡೆ ಹುಡುಕಿದರೆ ಅನ್ಯ ಸ್ಥಾನದಲ್ಲಿ ಅದು ಸಿಗುವುದೇ? ಹಾಗೆಯೇ ನಿಜವಾದ ಸುಖವನ್ನು ಸೌಲಭ್ಯಗಳಲ್ಲಿ ಹುಡುಕಿದರೆ ಅದು ಎಂದಿಗೂ ಸಿಗುವಂತಹದಲ್ಲ. ಅಂತರ್ ಚಕ್ಷುಗಳಿಂದ ತಾವು ತಮ್ಮನ್ನು ನೋಡುವಿರೋ ಆಗ ಅಂತರಂಗದ ಯಾತ್ರೆ ಪ್ರಾರಂಭವಾಗಬಲ್ಲದು. ಸ್ವತಃ ಅನಂತ ಸುಖದ ಭಂಡಾರ ಅನುಭವದಲ್ಲಿ ಬರುವುದು. ಆಗ ಸಾಂಸಾರಿಕ ಇಚ್ಛೆಗಳು ಇರಲಾರವು. ನಾನು ಯಾರು? ನಾನು ಎಲ್ಲಿಂದ ಬಂದಿದ್ದೇನೆ? ನಾನು ಏನು ಮಾಡಬೇಕಾಗಿದೆ? ಎಲ್ಲಿಗೆ ಹೋಗಬೇಕಾಗಿದೆ? ಈ ಪ್ರಶ್ನೆಗಳು ಸರಿಯಾದ ದಿಕ್ಕಿನೆಡೆಗೆ ಸಾಗುವಲ್ಲಿ ಸಹಾಯಕವಾಗಬಲ್ಲವು, ನಿಜವಾದ ಸುಖವನ್ನು ಪಡೆಯುವ ಇಂತಹ ಅವಕಾಶ ಪ್ರತಿಯೊಂದು ಜೀವಕ್ಕೂ ದೊರೆತಿದೆ ಹಾಗೂ ಅದರ ಎಲ್ಲಕ್ಕಿಂತ ದೊಡ್ಡ ಆಶ್ರಯ ಸಮ್ಯಕ್ ಜ್ಞಾನ, ದರ್ಶನ, ಚಾರಿತ್ರ ಮತ್ತು ತಪ ಸಹಿತ ವೀತರಾಗಿ ಸಂತರ ಸಾನಿಧ್ಯ ದೊರೆತಾಗಲೂ ಅಜ್ಞಾನಿಯು ಒಂದು ವೇಳೆ ಅಲೆದಾಡುತ್ತಿದ್ದರೆ ಅದು ಆ ಜೀವದ ದುರ್ಭಾಗ್ಯವಾಗಿದೆ. ಯಾರದಾದರೂ ಅಂತಹ ದುರ್ಭಾಗ್ಯವಿದ್ದರೆ ಅದನ್ನು ಈಗ ಸೌಭಾಗ್ಯವನ್ನಾಗಿ ಬದಲಾಯಿಸಬಲ್ಲ ಪುರುಷಾರ್ಥವನ್ನು ಮಾಡಬೇಕು ಯಾಕೆಂದರೆ ಇದು ಮಾನವ ಜೀವನದಲ್ಲಿಯೇ ಸಾಧ್ಯವಿದೆ. ಈಗ ನಮ್ಮ ಶರೀರದ ಪರಿಚಯವಲ್ಲ ಬದಲಾಗಿ ನಮ್ಮ ಆತ್ಮನ ಪರಿಚಯ ಹೇಗೆ ಆಗಬೇಕು ಎನ್ನುವುದರ ಚಿಂತನೆ ಮಾಡಬೇಕು, ಸರಿಯಾದ ಮಾರ್ಗ ದೊರಕಿ ಬಿಡುತ್ತದೆ. ಆತ್ಮನ ಮುಕ್ತಿರೂಪದ ಗುರಿಯನ್ನು ಮರೆಯದಿರುವವರು ಅನಂತ ಸುಖಗಳನ್ನು ಪಡೆಯಬಲ್ಲರು.

# 5. ಧರ್ಮ ಮಾಡುವಾಗ ಸಾಂಸಾರಿಕ ಇಚ್ಛೆಗಳಿರಬಾರದು

ಧರ್ಮದ ಬೀಜವು ಮೋಕ್ಷ ರೂಪದ ಬೆಳೆಯನ್ನು ಪಡೆಯಲು ಇದೆ ಆದರೆ ಸಂಸಾರದ ವಸ್ತುಗಳ ಆಕಾಂಕ್ಷೆಯಿಂದ ಧರ್ಮ ಮಾಡುವವರು ಅಜ್ಞಾನಿಗಳಾಗಿದ್ದಾರೆ. ಓರ್ವ ರೈತ ಹೊಲದಲ್ಲಿ ಬೀಜ ಹಾಕುವಾಗ ಆತನ ಗುರಿ ಒಳ್ಳೆಯ ಬೆಳೆಯನ್ನು ಪಡೆಯುವುದಾಗಿರುತ್ತದೆ. ಆತ ಎಂದಿಗೂ ಹುಲ್ಲು-ಕಡ್ಡಿ ಪಡೆಯಲು ಬೀಜವನ್ನು ಬೀತ್ತುವುದಿಲ್ಲ. ಹುಲ್ಲು ಸೊಪ್ಪು ಪಶುಗಳ ಹೊಟ್ಟೆ ತುಂಬಲು ಆಗುತ್ತದೆ, ಹೀಗೆಯೇ ಧರ್ಮದ ಬೀಜ ಮೋಕ್ಷ ರೂಪದ ಬೆಳೆ ಪಡೆಯಲು ಇರಬೇಕು ಆದರೆ ಅಜ್ಞಾನಿ ಮಾನವರು ಧರ್ಮದ ಬೀಜದಿಂದ ಉತ್ಪನ್ನವಾಗುವ ಹುಲ್ಲು-ಸೊಪ್ಪಿಗೆ ಸಮಾನವಾಗಿರುವ ಧನ-ಸಂಪತ್ತಿನಲ್ಲಿಯೇ ಹುಚ್ಚರಾಗಿ ದಾರಿ ತಪ್ಪಿ ಮೋಕ್ಷದ ಮಾರ್ಗವನ್ನು ಮರೆತಿರುವುದು ವಿಡಂಬನೆಯಾಗಿದೆ. ಮೋಕ್ಷದ ಭಾವನೆಯಿಂದ ಧರ್ಮದ ಬೀಜಾರೋಪಣೆಯಾದಾಗ ಧನ-ವೈಭವ, ಸುಖ-ಸೌಲಭ್ಯಗಳನ್ನು ಧರ್ಮವೆಂದು ಭಾವಿಸಿ ಅವುಗಳ ಬಯಕೆಯಲ್ಲಿಯೇ ಜೀವನವನ್ನು ಕಳೆದುಕೊಂಡು ಬಿಡುತ್ತಾರೆ. ಧರ್ಮ ಏನಿದೆ? ಇದರ ಮಹತ್ವವೇನಿದೆ? ಧರ್ಮವನ್ನು ಹೇಗೆ ಮಾಡಲಾಗುತ್ತದೆ ಎಂಬ ಸಂಗತಿಗಳನ್ನು ನಾವು ಮೊಟ್ಟಮೊದಲು ತಿಳಿಯಬೇಕು. ತತ್ತ್ವದೃಷ್ಟಿಯಿಂದ ಜ್ಞಾನ ಹೊಂದಿರಬೇಕು ಆಗಲೇ ಸರಿಯಾದ ಮಾರ್ಗವನ್ನು ಪಡೆಯಬಹುದು.

ಅಜ್ಞಾನತೆಯ ಕಾರಣ ಇಂದು ಎಲ್ಲಿ ನೋಡಿದರಲ್ಲಿ ಧರ್ಮ-ಕರ್ಮಗಳು ಸಂಸಾರದ ಇಚ್ಛೆಗಳು ಹಾಗೂ ಕಾಮನೆಗಳಿಂದ ಆಗುತ್ತಲಿವೆ. ದಾನ ಮಾಡುವಲ್ಲಿಯೂ ಮಾನ ಬಂದಿದೆ ಹಾಗೂ ಧರ್ಮವನ್ನು ಸಂಸಾರೀ ಇಚ್ಛೆಗಳ ಪೂರ್ತಿಗಳಿಗಾಗಿ ಮಾಧ್ಯಮವೆಂದು ಭಾವಿಸಲಾಗಿದೆ. ದಾನವಿರಲಿ ಅಥವಾ ಉಪಕಾರದ ಯಾವುದೇ ಕಾರ್ಯವಿರಲಿ ಅದು ಅಪೇಕ್ಷೆಗಳಿಲ್ಲದ್ದಾಗಿರಬೇಕು. ಆದರೆ ಇಂದು ಭಗವಂತನ ಮುಂದೆ ಭಕ್ತರು ಬಹಳ ಕಡಿಮೆ ಮತ್ತು ಭಿಕ್ಷುಕರು ಹೆಚ್ಚಾಗಿ ಬಿಟ್ಟಿದ್ದಾರೆ. ಕೆಲವರು ಭಗವಂತನಲ್ಲಿ ಧರ್ಮಕ್ಕೆ ಬದಲಾಗಿ ನೌಕರಿ ಬಯಸುತ್ತಾರೆ, ಕೆಲವರು ಅಧಿಕಾರ ಬಯಸುತ್ತಾರೆ, ಕೆಲವರು ಬಂಗಲೆ ಬಯಸುತ್ತಾರೆ, ಇನ್ನೂ ಕೆಲವರು ಕಾರಖಾನೆಗಳನ್ನು ಬಯಸುತ್ತಾರೆ. ಕೆಲವರಿಗೆ ತಮ್ಮ ಮದುವೆಯ ಬಯಕೆ ಇದೆ. ಇನ್ನು ಕೆಲವರಿಗೆ, ತಾವು ರೋಗಗಳಿಂದ ಮುಕ್ತರಾಗುವ ಕಾಮನೆ ಹೊಂದಿರುತ್ತಾರೆ. ಅರ್ಥಾತ್ ಭಿನ್ನ-ಭಿನ್ನ ರೀತಿಯ ಇಚ್ಛೆಗಳು ಕಾಮನೆಗಳು ಹಾಗೂ ಅಪೇಕ್ಷೆಗಳನ್ನು ಹೊಂದಿರುವ ಇಷ್ಟೊಂದು ಜನರ ಸಾಲು ಇದ್ದು ಅಂತಿಮವಾಗಿ ಭಗವಂತನಿಗೆ ಕಣ್ಣುಮುಚ್ಚಿಕೊಂಡು ಕುಳಿತುಕೊಳ್ಳಬೇಕಾಯಿತು. ವೀತರಾಗ ಭಗವಂತ ಜಿನನು ಸಂಸಾರೀ ವಸ್ತುಗಳನ್ನು ಹಾಗೂ ವೈಭವವನ್ನು ತ್ಯಾಗ ಮಾಡಿದ್ದಾನೆ. ಮತ್ತೆ ಆತನಿಂದ ಅವುಗಳನ್ನು ಬಯಿಸುವುದು ಮೂರ್ಖತೆ ಅಲ್ಲದೇ ಮತ್ತೇನು? ಭಗವಂತನ ಬಳಿ ಇರುವ ಜ್ಞಾನ, ತಪ, ಭಕ್ತಿ, ಕರುಣೆ, ಅಹಿಂಸೆ, ದಯೆ,

ಪರೋಪಕಾರ, ಶೀಲವ್ರತ, ಸಂತೋಷ ಮತ್ತು ಬದುಕು ಮತ್ತು ಬದುಕಲು ಬಿಡು ಎಂಬ ಮಂಗಲ ಭಾವನೆ ಇವುಗಳನ್ನು ಕೇಳಿದರೆ ನಿಶ್ಚಿತವಾಗಿಯೂ ಆತ್ಮನ ಕಲ್ಯಾಣವಾಗುತ್ತದೆ.

ಓರ್ವ ಸರಕಾರಿ ಕರ್ಮಚಾರಿಯು ತನ್ನ ಕಾರ್ಯವನ್ನು ಪೂರ್ಣಮಾಡಿ ತನ್ನ ಮೇಲಾಧಿಕಾರಿಗಳಿಗೆ ಪ್ರತಿದಿನವೂ–ನನಗೆ ವೇತನ ಸಿಗುವುದೋ ಇಲ್ಲವೋ ಎಂದು ಕೇಳಿದರೆ ಆತನನ್ನು ಹುಚ್ಚ ಎನ್ನುವುದಿಲ್ಲವೆ? ಕರ್ಮಚಾರಿಯು ದಿನವೂ ಕೆಲಸ ಮಾಡಿ ತಿಂಗಳ ಕೊನೆಗೆ ಪೂರ್ಣ ವೇತನ ಸಿಗುವುದು ಸ್ವಾಭಾವಿಕವಾಗಿದೆ; ಹೀಗೆಯೇ ನಾವು ಧರ್ಮದ ಬೀಜಾರೋಪಣೆ ಮಾಡಿ ಸಂಸಾರದ ಕಾಮನೆ ಮಾಡಿದರೆ ಆ ಕರ್ಮಚಾರಿಯಂತೆಯೇ ನಮ್ಮ ಸ್ಥಿತಿಯೂ ಇದೆ ಎಂದು ತಿಳಿಯ ಬೇಕು. ಸಾಂಸಾರಿಕ ವಸ್ತುಗಳಿಂದ ಮೋಹಿತರಾಗಿ ನಾವು ಅವುಗಳಲ್ಲಿಯೇ ಕಳೆದು ಹೋಗುತ್ತೇವೆ. ನಮಗೆ ಸಂಸಾರದಲ್ಲಿ ಇರುವಾಗ ಏನೆಲ್ಲಾ ದೊರೆಯುವುದೋ ಅದೆಲ್ಲವೂ ಹುಲ್ಲು–ಸೊಪ್ಪಿಗೆ ಸಮಾನ. ಸಂಸಾರದ ವೈಭವಗಳಿಂದ ಮುಖ ತಿರುಗಿಸುವ ಸಮ್ಯಕ್ ದೃಷ್ಟಿ ಆತ್ಮನೇ ಮೋಕ್ಷದ ಮಾರ್ಗದಲ್ಲಿ ಮುಂದೆ ಸಾಗಬಲ್ಲನು. ಆದ್ದರಿಂದ ಧರ್ಮ ಮಾಡುವಾಗ ಎಂದಿಗೂ ಸಂಸಾರದ ಯಾವುದೇ ಆಕಾಂಕ್ಷೆಯನ್ನು ಮಾಡಬಾರದು. ಭಕ್ತನಾಗಿ ಕೇವಲ ಭಗವಂತನ ಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸಂಸಾರದ ಸುಖಗಳು ಯಾರನ್ನೂ ಕೇಳದೇ ಹುಲ್ಲು–ಸೊಪ್ಪಿನ ಹಾಗೇ ಸ್ವತಃ ದೊರೆಯುತ್ತವೆ ಹಾಗೂ ಅವುಗಳನ್ನು ತ್ಯಜಿಸುವ ಭಾವನೆ ಹೊಂದಿ ಮುಂದೆ ಸಾಗಬೇಕು, ಆಗ ಉತ್ತಮ ಸುಖ–ಶಾಂತಿ ರೂಪದ ಬೇಳೆಯನ್ನು ಪಡೆದು ಈ ಮಾನವ ಜೀವನ ಸಾರ್ಥಕವಾಗುತ್ತದೆ.

> ಧರ್ಮ ಮಾಡುವುದು ಸಂಸಾರ ಸುಖ, ಧರ್ಮ ಮಾಡುವುದು ನಿರ್ವಾಣ
> ಧರ್ಮ ಪಂಥ ಸಾಧಿಸದೇ ನರನಾಗುವನು ತಿರ್ಯಂಚ ಸಮಾನ

# 6. ಸಾಧು–ಸಂತರು ಶಸ್ತ್ರಚಿಕಿತ್ಸೆ ಮಾಡಲು ಬರುತ್ತಾರೆ

ಸಾಧು–ಸಂತರು ಮಾನ–ಸನ್ಮಾನ ಪಡೆಯಲು ಗೃಹಸ್ಥರ ಮಧ್ಯೆ ಬರುವುದಿಲ್ಲ, ಬದಲಾಗಿ ಅವರು ಸಂಸಾರೀ ಪ್ರಾಣಿಗಳ ಉತ್ಥಾನಕ್ಕಾಗಿ ಆಧ್ಯಾತ್ಮಿಕ ಶಸ್ತ್ರಚಿಕಿತ್ಸೆ ಮಾಡಲು ಅವರ ಬಳಿ ಬರುತ್ತಾರೆ. ಯಾಕೆಂದರೆ ಜನರು ತಮ್ಮ ಧರ್ಮಗಳ ಸಂಸ್ಕಾರಗಳನ್ನು ಮರೆತು ಪಾಪ ಪ್ರವೃತ್ತಿಗಳಲ್ಲಿ ಮುಳುಗಿರುತ್ತಾರೆ ಅವರನ್ನು ಸರಿಯಾದ ಮಾರ್ಗದಲ್ಲಿ ತರಲು ಸಂತರೇ ಸರಿ. ಈ ಸಂಸಾರ ಇಂದಿಗೂ ಸಹ ಸಂತರ ಆಶೀರ್ವಾದದಿಂದಲೇ ಬದುಕಿದೆ. ಸಂತರೇ ಎಲ್ಲರ ಮುಂದೆ ಮನುಷ್ಯನ ಠಕ್ಕತನವನ್ನು ಬಹಿರಂಗ ಮಾಡಬಲ್ಲರು ಹಾಗೂ ಅವರ ಈ ಶಸ್ತ್ರಚಿಕಿತ್ಸೆ ಬಹಳಷ್ಟು ಕೆಲಸ ಮಾಡುತ್ತದೆ. ಭವ್ಯ ಜೀವಿಗಳಾಗಿರುವವರು ತಪ್ಪು ಮಾರ್ಗವನ್ನು ಬಿಟ್ಟು ಸರಿಯಾದ ಮಾರ್ಗಕ್ಕೆ ಬರುತ್ತಾರೆ ಹಾಗೂ ಅಭವ್ಯ ಜೀವಿಗಳಿಗೆ ಪ್ರಕೃತಿಯು ಒಂದು ದಿನ ಒಳ್ಳೆಯ ಪಾಠ ಕಲಿಸಿ ಪ್ರಾಯಶ್ಚಿತ್ತ ಹೊಂದಲು ಒತ್ತಡ ತರುತ್ತದೆ. ಆದ್ದರಿಂದ ಸಂತರ ಶಸ್ತ್ರ ಚಿಕಿತ್ಸೆಯಿಂದ ಓಡಿ ಹೋಗದೇ, ತಮ್ಮ ಪರಮ ಸೌಭಾಗ್ಯವೆಂದು ಭಾವಿಸಿ ಅವರು ನೀಡುವ ಕಹಿ ಔಷಧಿಯಿಂದ ತಮ್ಮನ್ನು ಸುಧಾರಿಸಿಕೊಳ್ಳಬೇಕು. ಸಂತರ ಛೀಮಾರಿ ಹಾಗೂ ಅವರ ಕಹಿ ವಚನಗಳಲ್ಲಿಯೂ ಆಶೀರ್ವಾದ ಅಡಗಿರುತ್ತದೆ. ನಮ್ಮ ಜೀವನವನ್ನು ಸುಖಮಯ ಹಾಗೂ ಮಂಗಲಮಯ ಮಾಡಿಕೊಳ್ಳಬೇಕೆಂದರೆ ಸಂತರ ಅಧ್ಯಾತ್ಮಿಕ ಸರ್ಜರಿಯಿಂದ ತನ್ನ ಆತ್ಮನ ಮೇಲೆ ಅಡಗಿರುವ ಕೆಡಕುಗಳನ್ನು ಅಳಿಸಿ ಬಿಡಬೇಕು. ಶರೀರದ ಉಪಚಾರ ಆಸ್ಪತ್ರೆಯಲ್ಲಿ ಆಗಿ ಬಿಡುತ್ತದೆ. ಆದರೆ ದೂಷಿತ ಹಾಗೂ ಅಪವಿತ್ರ ಮನದ ನಿದಾನ ಸಂತರ ಸಮಾಗಮದಿಂದಲೇ ಆಗುತ್ತದೆ.

ಸಂಸಾರಿ ಪ್ರಾಣಿಗಳಲ್ಲಿ ಈ ಲೋಭ ಮತ್ತು ಸ್ವಾರ್ಥದ ಪ್ರವೃತ್ತಿಗಳು ಹೆಚ್ಚಾಗಿದ್ದು ಜೈನ ಹಾಗೂ ಮಹಾಜನರ ಮಾಡಲು ಯೋಗ್ಯವಲ್ಲದ ಕಾರ್ಯಗಳನ್ನು ಮಾಡತೊಡಗಿದ್ದಾರೆ. ಅವುಗಳದೇ ಈ ದುಷ್ಪರಿಣಾಮಗಳಾಗಿದ್ದು ಧರ್ಮದ ಸಂಸ್ಕಾರಗಳು ವಿಕೃತವಾಗುತ್ತಲಿವೆ ಹಾಗೂ ನೈತಿಕ ಮೌಲ್ಯಗಳು ಬಹಳ ವೇಗವಾಗಿ ಕುಸಿಯುತ್ತಲಿವೆ. ನಿಜವಾದ ಜ್ಞಾನವಿಲ್ಲದಿರುವಾಗ ಮನುಷ್ಯನು ಲೋಭದಿಂದ ಅಂಧನಾಗಿ ನಿರ್ಧಯಿಯಾಗುತ್ತಾನೆ. ತನ್ನ ಮನ, ವಚನ ಹಾಗೂ ಕಾಯ ಶುದ್ಧವಾಗದಿದ್ದಾಗ ದುರ್ಭಾಗ್ಯ ಹಿಂದೆ ಬರುವುದು ತಪ್ಪುವುದಿಲ್ಲ, ಸತ್ಯವನ್ನು ಮರೆ ಮಾಚದೇ ಹಾಗೂ ಸತ್ಯದ ಮಾರ್ಗದಲ್ಲಿ ನಿರಂತರವಾಗಿ ನಾಯಕರಾಗಿರುವ ವೀತರಾಗಿ ಸಂತರ ಉಪದೇಶವನ್ನು ಮನಸ್ಸಿನ ಜೋಳಿಗೆಯಲ್ಲಿ ತುಂಬಿಕೊಳ್ಳಬೇಕು. ನಮ್ಮ ಆತ್ಮನ ಉಪಕಾರ ಮಾಡಿಕೊಳ್ಳಲು ಇದೇ ಉತ್ತಮ ಅವಕಾಶವಾಗಿದೆ. ಮನಸ್ಸಿನ ಸಂಪರ್ಕ ಪರಮಾತ್ಮನೊಂದಿಗೆಯಾದರೆ ಸೌಭಾಗ್ಯವು ಹೆಜ್ಜೆ ಹೆಜ್ಜೆಗೂ ಸುಖವನ್ನು ನೀಡುತ್ತದೆ. ಆದರೆ ನಮ್ಮಲ್ಲಿರುವ ಠಕ್ಕತನ ಹೋಗಿ ದೋಷಗಳನ್ನು ಬಿಡದೇ ದುರ್ಭಾಗ್ಯದಿಂದ ಬಿಡುಗಡೆ ಪಡೆಯಲು ಸಾಧ್ಯವಿಲ್ಲ ಎನ್ನುವುದನ್ನು ಗಮನದಲ್ಲಿಡಬೇಕು.

ಯಾರಿಗಾದರೂ ಉಪಕಾರ ಮಾಡುವುದು ಸಹ ದಾನವಾಗಿದೆ. ದಾನವನ್ನು ಪ್ರತಿಯೊಬ್ಬರೂ ಮಾಡಲಾರರು. ಬದಲಾಗಿ ಯಾರಲ್ಲಿ ದಾನದ ಭಾವನೆ ಜಾಗೃತವಾಗುವುದೋ, ಯಾರಲ್ಲಿ ಧರ್ಮದ ಸಂಸ್ಕಾರವಿದೆಯೋ ಅವರು ಮಾತ್ರ ದಾನ ಮಾಡಬಲ್ಲರು. ದಾನ ನೀಡುವುದರಿಂದ ಕರ್ಮಗಳ ಕ್ಷಯವಾಗುತ್ತದೆ ಹಾಗೂ ಪುಣ್ಯಾರ್ಜನೆ ಆಗಬಲ್ಲದು. ಶ್ರೇಷ್ಠ ಪಾತ್ರರಿಗೆ ಪೂರ್ಣ ಶ್ರದ್ಧೆ ಹಾಗೂ ನವಧಾ ಭಕ್ತಿಯಿಂದ ಆಹಾರದಾನ ನೀಡಿದಾಗ ತೀರ್ಥಂಕರ ಪ್ರಕೃತಿಯ ಬಂಧವಾಗುತ್ತದೆ. ದಾನದ ಜೊತೆಯಲ್ಲಿ ತಮ್ಮ ದೋಷಗಳ ನಿವಾರಣೆ ಮಾಡಿಕೊಂಡಿರಬೇಕು. ಈಗ ಕ್ಯಾನ್ಸರ್ ಅಂತಹ ರೋಗವು ಇದ್ದರೂ ಸಹ ತಂಬಾಕು ಸೇವನೆ ಮಾಡುತ್ತಾರೆ. ಶ್ವಾಸಕೋಶ ಹಾಳಾಗಿದ್ದರೂ ಬೀಡಿ–ಸಿಗರೇಟು ಸೇದುತ್ತಾರೆ. ಜೀವನ ನರಕಮಯವಾಗಿದ್ದರೂ ಸಹ ಮಾಂಸ, ಮಧ್ಯಗಳ ಸೇವನೆಯನ್ನು ಬಿಡುವುದಿಲ್ಲ. ಸ್ಥಿತಿಗಳು ಹೀಗಿರುವಾಗ ದಾನ–ಪುಣ್ಯದ ಪ್ರತಿಫಲ ಹೇಗೆ ಸಿಗಬಲ್ಲವು. ದಾನಕ್ಕಿಂತ ಮುಂಚೆ ಮರ್ಯಾದಿತ ಜೀವನ ಶೈಲಿ ಇರಬೇಕು. ವ್ಯಸನಗಳನ್ನು ತ್ಯಜಿಸಿರಬೇಕು ಕೆಟ್ಟ ಹವ್ಯಾಸಗಳಿಂದ ಮುಕ್ತರಾಗಿರಬೇಕು, ಆಗ ಮಾತ್ರ ನವಧಾ ಭಕ್ತಿಗಳಲ್ಲಿ ಪಾವಿತ್ರ್ಯತೆ ಬರಬಲ್ಲದು. ಮನಸ್ಸಿನ ಮಲಿನತೆಯನ್ನು ತೊಳೆದ ನಂತರ ದಾನ ಮಾಡಿದಾಗ ಶಿಲೆಯು ಸಹ ಚಿನ್ನವಾಗುತ್ತದೆ, ನಿಜವಾದ ಶ್ರದ್ಧೆಯು ಮನಸ್ಸು ಗಂಗಾಜಲದಂತೆ ಪಾವನವಿದ್ದಾಗ ಮಾತ್ರ ಹುಟ್ಟುತ್ತದೆ. ಪಾವನತೆಯ ಹೆಸರೇ ಧರ್ಮವಾಗಿದೆ. ದಾನ–ಧರ್ಮದ ಅನುಕರಣೆಯಿಂದ ನಮಗೆ ಒಳ್ಳೆಯದಾಗುವುದಲ್ಲದೆ ಬೇರೆಯವರಿಗೂ ಉಪಕಾರವಾಗುತ್ತದೆ. ಆತ್ಮನ ಅನಂತ ಸುಖಗಳನ್ನು ಪಡೆಯಲಾಗುತ್ತದೆ.

ಬೆಂಕಿ ಹತ್ತಿತು ಜಗದೊಳು, ರಾಶಿರಾಶಿ ಬೂದಿ ಉರುಳಿತು ।
ಜಗದೊಳು ಇರದೊಡೆ ಸಂತರು, ಜಗತ್ತು ಸುಟ್ಟು ಹೋಗುತ್ತಿದ್ದಿತು ॥

# 7. ಧರ್ಮದ ಸಂಸ್ಕಾರದಿಂದಲೇ ಸಂಸ್ಕೃತಿ ಉಳಿಯುತ್ತದೆ

"ಜೀವನದಲ್ಲಿ ಸುಖ-ಶಾಂತಿಯಿಂದ ಬದುಕ ಬೇಕೆಂದರೆ ಬಾಲ್ಯದಿಂದಲೇ ಮಕ್ಕಳಿಗೆ ಧರ್ಮದ ಸಂಸ್ಕಾರ ಕೊಡಬೇಕು. ಸಂಸ್ಕಾರದಿಂದಲೇ ಸಂಸ್ಕೃತಿ ಉಳಿಯುತ್ತದೆ ಹಾಗೂ ಸಂಸ್ಕೃತಿ ಸುರಕ್ಷಿತವಾಗಿರುವವರೆಗೆ ದೇಶದಲ್ಲಿ ಶಾಂತಿ ಇರುವ ಸಾಧ್ಯತೆ ಇದೆ. ಇಂದು ಮನೆ ಇರಲಿ ಅಥವಾ ಕುಟುಂಬವಿರಲಿ, ಸಮಾಜವಿರಲಿ ಅಥವಾ ಪ್ರದೇಶ, ದೇಶವಿರಲಿ ಅಥವಾ ರಾಷ್ಟ್ರವಿರಲಿ, ಎಲ್ಲೆಡೆಯಲ್ಲಿಯೂ ಅಶಾಂತಿ, ಒತ್ತಡ, ಹಿಂಸೆ, ಅರಾಜಕತೆ, ದುರಾಗ್ರಹ, ಪರಸ್ಪರ ದ್ವೇಷ ಹಾಗೂ ತಿರಸ್ಕಾರ ಹೆಚ್ಚಾಗುತ್ತಲಿದೆ, ಎನ್ನುವುದನ್ನು ಯಾವಾಗಲಾದರೂ ಯೋಚಿಸಿದ್ದೀರಾ? ಅದಕ್ಕೆ ಇರುವ ಒಂದೇ ಒಂದು ಕಾರಣ, ನಾವು ಹೇಗೆ ಹೇಗೆ ನಾವು ನಮ್ಮ ಧರ್ಮ ಸಂಸ್ಕಾರಗಳಿಂದ ವಿಮುಖರಾಗಿ ಪಾಶ್ಚಿಮಾತ್ಯ ಸಂಸ್ಕೃತಿಯ ಕಡೆ ವಾಲುತ್ತಿದ್ದೇವೆಯೋ ಹಾಗೆ ಹಾಗೆಯೇ ವಿಪರೀತ ಪರಿಸ್ಥಿತಿ ಉತ್ಪನ್ನವಾಗುತ್ತಲಿದೆ. ಇದಕ್ಕಾಗಿ ಬೇರೆ ಯಾರೂ ಕಾರಣರಲ್ಲ, ಸ್ವತಃ ನಾವೇ ದೋಷಿಗಳಾಗಿದ್ದೇವೆಂದು ಒಪ್ಪಬೇಕು. ಬಾಲ್ಯದಲ್ಲಿ ಧರ್ಮದ ಸಂಸ್ಕಾರ ನೀಡಬೇಕಾದ ಸಮಯದಲ್ಲಿ ನಾವು ಮಲಗಿರುತ್ತೇವೆ ಹಾಗೂ ಐವತ್ತೈದರ ವಯಸ್ಸಿನಲ್ಲಿ ನಮಗೆ ಧರ್ಮ-ಕರ್ಮಗಳು ನೆನಪಿಗೆ ಬರುತ್ತವೆ, ಬಾಲ್ಯದಲ್ಲಿ ನೀಡಿದ್ದ ಸುಸಂಸ್ಕಾರವೇ ಒಂದು ದಿನ ವಟವೃಕ್ಷವಾಗುತ್ತದೆ, ಅದರಿಂದಲೇ ಸಂತಸ, ಶಾಂತಿ, ಸುಖ, ಸನ್ಮಾನ ಹಾಗೂ ಸಂಸ್ಕೃತಿಗಳ ರಕ್ಷಣೆ ಆಗುತ್ತದೆ ಎಂಬ ಸಂಗತಿಯನ್ನು ನಾವು ಗಮನದಲ್ಲಿಡಬೇಕು. ಹಿಂದೆ ಆಗಿದ್ದು ಆಗಿ ಹೋಯಿತು, ಅದನ್ನು ಮರೆತು ಬಿಡಿ ಹಾಗೂ ಈಗ ತಮ್ಮ ವರ್ತಮಾನವನ್ನು ಸುಧಾರಿಸುವುದರೊಂದಿಗೆ ನಮ್ಮ ಮಕ್ಕಳಿಗೆ ಧರ್ಮದ ಸಂಸ್ಕಾರ ನೀಡುವುದನ್ನು ಪ್ರಾರಂಭಿಸಿ, ಆಗ ಧರ್ಮದ ರಕ್ಷಣೆ ಆಗಬಲ್ಲದು. ಧರ್ಮ ಕೇವಲ ನಿಮ್ಮ ರಕ್ಷಣೆಯನ್ನಷ್ಟೆ ಅಲ್ಲ ಬದಲಾಗಿ ಅಧ್ಯಾತ್ಮಿಕ ಸಮೃದ್ಧಿಯನ್ನೂ ಮಾಡಬಲ್ಲದು. ಆಗಲೇ ಜೀವನದ ನಿಜವಾದ ಸುಖ ದೊರೆಯಬಲ್ಲದು ಹಾಗೂ ಸಮಾಜ ಮತ್ತು ರಾಷ್ಟ್ರದಲ್ಲಿಯೂ ಸಮರಸತೆ ಸದ್‌ಭಾವನೆ ಹಾಗೂ ಸಹಿಷ್ಣುತೆ ವರ್ಧಿಸಬಲ್ಲದು.

ಬಾಲ್ಯದಲ್ಲಿ ಬಾಲಕನಿಗೆ ತಾಯಿಯೇ ಪ್ರಾಥಮಿಕ ಗುರುವಾಗಿರುತ್ತಾಳೆ ಯಾಕೆಂದರೆ ತಾಯಿ 9 ತಿಂಗಳುಗಳ ಕಾಲ ಮಗುವನ್ನು ತನ್ನ ಗರ್ಭದಲ್ಲಿ ಹೊಂದಿರುತ್ತಾಳೆ. ಆದ್ದರಿಂದ ಮಗುವಿನ ಮೇಲೆ ತಾಯಿಯ ವಾತ್ಸಲ್ಯ ಹೆಚ್ಚಾಗಿರುತ್ತದೆ. ಒಂದು ಕಾಲದಲ್ಲಿ ತಾಯಂದಿರು ತಮ್ಮ ಗರ್ಭದಿಂದಲೇ ಧರ್ಮದ ಸಂಸ್ಕಾರ ನೀಡಲು ಪ್ರಾರಂಭಿಸುತ್ತಿದ್ದರು; ಆದರೆ ಇಂದು ಎಲ್ಲವೂ ತಲೆಕೆಳಕಾಗಿದೆ. ಧರ್ಮದ ಸ್ಥಾನದಲ್ಲಿ ಸಿನೆಮಾಗಳ ಸಂಸ್ಕಾರ ಮಕ್ಕಳಲ್ಲಿ ಬರುತ್ತಲಿದೆ ಹಾಗೂ ಮನೆ-ಮನೆಗಳಲ್ಲಿ ದೂರದರ್ಶನವು ಈ ಕಾರ್ಯವನ್ನು ಬಹಳ ಸುಲಭವಾಗಿ ಮಾಡುತ್ತಲಿದೆ. ಮನೆ ಇರಲಿ ಅಥವಾ ಸಮಾಜಗಳಲ್ಲಿ ಏನಾಗುತ್ತಿದೆ ಎನ್ನುವುದು ಯಾರಿಗೂ ತಿಳಿಯದ ವಿಷಯವಲ್ಲ. ಪಾಪ ಪ್ರವೃತ್ತಿಗಳು ಕುಲ ಕಲಂಕಿತ ಹಾಗೂ ಧರ್ಮವಿಕೃತವಾಗುತ್ತಿದ್ದು.

ಅವುಗಳು ತಮ್ಮ ಪರಮ ಸೀಮೆಯನ್ನು ತಲುಪಿವೆ. ವಿದೇಶಿ ಸಂಸ್ಕೃತಿಯು ಯುವ ಪೀಳಿಗೆಯನ್ನು ಅತಿವೇಗದಿಂದ ಪತನದ ಕಡೆಗೆ ತಳ್ಳುತ್ತಿದ್ದು ಅದರಿಂದಾಗಿ ಹುಚ್ಚುತನ ಹೆಚ್ಚಾಗುತ್ತಲಿದೆ. ಹೀಗೆ ಆಗುತ್ತಿರುವ ಸಂಗತಿ ಯಾರಿಗೂ ಗೊತ್ತಿಲ್ಲ ಎನ್ನುವಂತಿಲ್ಲ, ಬದಲಾಗಿ ಎಲ್ಲರಿಗೂ ಭೀಭತ್ಸವಾಗುತ್ತಿರುವ ಸಂಗತಿ ಎಲ್ಲರಿಗೂ ತಿಳಿದಿದೆ, ಆದರೆ ದುಃಖದ ಸಂಗತಿ ಎಂದರೆ, ಜೈನರಿರಲಿ–ಅಜೈನರಿರಲಿ ಅವರೆಲ್ಲರೂ ತಿಳಿಯದವರಂತಿದ್ದು, ದುಷ್ಪರಿಣಾಮಗಳು ಎದುರಾದಾಗ ಅಳುವ ಅನಿವಾರ್ಯತೆಯನ್ನು ಎದುರಿಸುತ್ತಿದ್ದಾರೆ. ತಾಯಿ–ತಂದೆಗಳಿಗೇನೇ ಧರ್ಮದ ಸಂಸ್ಕಾರಗಳ ಬಗ್ಗೆ ಚಿಂತೆ ಇಲ್ಲದಿರುವಾಗ ಅವರ ಮಕ್ಕಳಲ್ಲಿ ಸಂಸ್ಕಾರ ಎಲ್ಲಿಂದ ಬರಬೇಕು?

ಕಲ್ಲಿನ ಪ್ರತಿಮೆ ಮಂತ್ರಗಳ ಸಂಸ್ಕಾರ ಪಡೆದ ಮೇಲೆ ಪೂಜ್ಯವಾಗಿ ಬಿಡುತ್ತದೆ ಎಂದಾಗ, ತಾಯಿ–ತಂದೆ ಮತ್ತು ಧರ್ಮಗುರುಗಳ ಮೂಲಕ ಕೊಡಲ್ಪಟ್ಟ ಸಂಸ್ಕಾರಗಳಿಂದ ಬಾಲಕರು ನಿಜವಾದ ಶ್ರಾವಕ ಹಾಗೂ ಭಕ್ತರಾಗಬಲ್ಲರು. ತಾಯಿ ತಂದೆಗಳು ಸ್ವತಃ ಸುಧಾರಿಸಿದಾಗ ವ್ಯಸನಗಳನ್ನು ತ್ಯಾಗ ಮಾಡಿದಾಗ ಪ್ರತಿನಿತ್ಯ ಜಿನಾಲಯಗಳಿಗೆ ತೆರಳಿದರೆ, ಸಂತರ ಪ್ರವಚನ ಕೇಳಿದರೆ, ಸ್ವಾಧ್ಯಾಯ ಹಾಗೂ ಪೂಜೆಗಳಲ್ಲಿ ತೊಡಗಿದರೆ ಆಗ ಅವರು ತಮ್ಮ ಮಕ್ಕಳಿಗೆ ಅಂತಹದೇ ಸಂಸ್ಕಾರ ನೀಡಬಲ್ಲರು. ಸ್ವತಃ ಸಮರ್ಪಣೆ ಭಾವ ಆಸ್ಥೆ, ವಿಶ್ವಾಸ ಹಾಗೂ ಶ್ರದ್ಧೆ ಹೆಚ್ಚು ಕಡಿಮೆಯಾದರೆ ಜೀವನವು ಅಮರ್ಯಾದಿತವಾಗಿ ಬಿಡುತ್ತದೆ. ಆದ್ದರಿಂದಲೇ ಕ್ಲೇಶ ಹಾಗೂ ಅಶಾಂತಿ ಹೆಚ್ಚಾಗುತ್ತಲಿವೆ. ಕೇವಲ ಭೌತಿಕ ಜ್ಞಾನ ಹಾಗೂ ಸಂಪತ್ತಿನಿಂದ ಎಂದಿಗೂ ಉನ್ನತಿ ಆಗದು; ಬದಲಾಗಿ ಅಧ್ಯಾತ್ಮಿಕ ಶಿಕ್ಷೆಯಿಂದಲೇ ಮಾನವೀಯ ವಿಕಾಸ ಹಾಗೂ ಮಾನವೀಯತೆ ಉತ್ಪನ್ನವಾಗಬಲ್ಲದು, ತ್ಯಾಗ, ಸಂಯಮ, ಸದಾಚಾರ, ದಯೆ, ಕರುಣೆ, ಪ್ರೇಮ, ವಾತ್ಸಲ್ಯ, ಮಾನವೀಯತೆ, ಉಪಕಾರ, ಸೇವಾ, ಹಿರಿಯರ ಸನ್ಮಾನ ಹಾಗೂ ಧರ್ಮದ ರಕ್ಷಣೆಯು ಧರ್ಮದ ಗಳಿಕೆ ಆದಾಗ ಆಗಬಲ್ಲದು, ಆದ್ದರಿಂದ ಕೋಮಲ ಮತ್ತು ಸರಳಾವಾಗಿರುವ ಮಕ್ಕಳಿಗೆ ಚಿಕ್ಕಂದಿನಿಂದಲೇ ಧರ್ಮದ ಸಂಸ್ಕಾರ ನೀಡುವುದನ್ನು ಎಂದಿಗೂ ಮರೆಯಬಾರದು. ಆಗ ತಾವು ಸುಖಿ ಹಾಗೂ ತಮ್ಮ ಅಸ್ಮಿತೆ–ಮರ್ಯಾದೆಯನ್ನು ಸುರಕ್ಷಿತವಾಗಿರಿಸಿಕೊಳ್ಳಬಹುದು, ವ್ಯಸನ, ಫ್ಯಾಶನ್ ಹಾಗೂ ಭೌತಿಕ ಪ್ರಗತಿಯಲ್ಲಿಯೇ ಮುಳುಗಿ ಹೋಗಿದ್ದರೆ ಒಂದು ದಿನ ಜೇಡರ ಬಲೆಯಲ್ಲಿ ಸ್ವತಃ ಸಿಲುಕಿ ಸಾಯಬೇಕಾಗಬಹುದು. ಆಗ ಅತ್ತರೆ ಏನೂ ಪ್ರಯೋಜನವಾಗದು. ಕರ್ಮಗಳ ಹೊಡೆತವನ್ನು ಸಹನೆ ಮಾಡಬೇಕಾಗುತ್ತದೆ.

# 8. ಯಾರ ಭಾವನೆ ಹೇಗಿರುವುದೋ ಹಾಗೆಯೇ ಅವರ ಪರಿಣಾಮ

ನನ್ನ ಜನ್ಮ ಸುಧಾರಿಸಲಿ, ಭವಿಷ್ಯ ಉಜ್ವಲವಾಗಲಿ, ಸಂಸಾರಚಕ್ರದಿಂದ ಬಿಡುಗಡೆ ಸಿಗಲಿ, ಎಂದು ಬಯಸಿದ್ದೀರಾ ಹಾಗಾದರೆ ಇವೆಲ್ಲವುಗಳನ್ನು ಸಾಧಿಸುವುದು ಹೇಗೆ? ಇದಕ್ಕಾಗಿ ಸದ್ಭಾವನೆ ಹೊಂದಿರುವುದು ಅವಶ್ಯಕವಿದೆ, ಧರ್ಮಕ್ಕೆ ಶರಣಾಗತನಾಗುವುದು ಶುಭಭಾವನೆ ಹೊಂದುವ ಮಾರ್ಗವೇ ವಿನಹ ಅನ್ಯಮಾರ್ಗವಿಲ್ಲ. ಹೇಗೆ ಯಾರ ಭಾವನೆ ಹೇಗಿರುವುದೋ ಅವರಿಗೆ ಹಾಗೆಯೇ ಒಳ್ಳೆಯ-ಕೆಟ್ಟ ಪರಿಣಾಮಗಳು ಆಗುತ್ತವೆ. ಭಾವನೆಗಳಿಂದಲೇ ಸಂಸಾರದ ವೃದ್ಧಿಯಾಗುತ್ತದೆ ಹಾಗೂ ಶುಭ ಭಾವನೆಯಿಂದ ಮೋಕ್ಷವು ಸಹ ದೊರೆಯುತ್ತದೆ. ಭಾವನೆಗಳೇ ಮನುಷ್ಯನನ್ನು ರಾಕ್ಷಸನನ್ನಾಗಿ ಹಾಗೂ ಮನುಷ್ಯನನ್ನಾಗಿ ಮಾಡುತ್ತವೆ. ಜಗತ್ತಿನಲ್ಲಿ ಇಂದು ದುಃಖದ ಯಾವುದಾದರು ದೊಡ್ಡ ಕಾರಣವಿದ್ದರೆ ಅದು ಶುಭ ಭಾವನೆಗಳ ಅಭಾವವಾಗಿದೆ. ಈ ಅಭಾವದ ಕಾರಣದಿಂದಲೇ ಪಾಪದ ಪ್ರವೃತ್ತಿಗಳು ನಿರಂತರ ಹೆಚ್ಚಾಗುತ್ತಲಿವೆ. ಭಾವನೆಗಳನ್ನು ಶುದ್ಧ, ಪವಿತ್ರ ಪಾವನ ಗೊಳಿಸಲು ಬೇಕಾದ ಮೂಲಗಳಿಂದ ನಾವು ದೂರ ಸರಿಯುತ್ತಿದ್ದೇವೆ. ಇದರ ಪರಿಣಾಮ ಸ್ವರೂಪ ಪಾಪಾಚಾರ ಹಾಗೂ ಮಿಥ್ಯಾತ್ವಗಳ ಚರಮ ಸೀಮೆಯನ್ನು ತಲುಪಿ ಸಂಸಾರದ ಸುಖಗಳನ್ನೇ ಸುಖವೆಂದು ಭಾವಿಸಿ ಬಿಟ್ಟಿದ್ದೇವೆ. ಆದರೆ ಅವು ಸುಖಗಳಲ್ಲ ಬದಲಾಗಿ ಸುಖಾಭಾಸಗಳಾಗಿವೆ. ಸುಖ ಆತ್ಮನದಾಗಿರುತ್ತದೆ ಹಾಗೂ ಅದು ಹೊರಗೆ ಇರದೇ ಅಂತರಂಗದಲ್ಲಿದೆ. ಅದಕ್ಕಾಗಿ ನಮಗೆ ಮೊದಲು ಭಾವನೆಗಳನ್ನು ಶುಭಗೊಳಿಸಬೇಕಾಗಿದೆ.

ನಮ್ಮ ಭಾವನೆಗಳು ಹೇಗಿವೆ? ಎಂದು ಚಿಂತನೆ ಮಾಡಬೇಕು. ಭಾವನೆಗಳೇ ನಮ್ಮನ್ನು ಸಂಸಾರದಲ್ಲಿ ಅಲೆದಾಡಿಸುತ್ತದೆ. ಭಾವನೆಗಳು ಸಂಸಾರದ ಮಾಯಾಜಾಲದಲ್ಲಿ ಸಿಲುಕಿಸಿದಾಗ ಭವದ ನಾಶ ಹೇಗೆ ತಾನೇ ಸಾಧ್ಯ? ಸಂಸಾರದಲ್ಲಿರುವವರು ಹೆಚ್ಚಿನ ಜನರು ಸಂಸಾರದ ಸುಖಗಳನ್ನೇ ಜೀವನದ ಧ್ಯೇಯವೆಂದು ತಿಳಿದಿರುವುದರಿಂದ ಸಂಸಾರ ವೃದ್ಧಿಯಾಗುತ್ತಲಿದೆ. ಪುಣ್ಯ ಪಾಪಗಳ ಶೃಂಖಲೆ ಮತ್ತೆ ಅವರ ಜೀವನದಲ್ಲಿ ಸಾಗುತ್ತಲಿರುತ್ತದೆ. ಅಶುಭ ಭಾವನೆಯಿಂದ ಕೂಡಿರುವವರ ಜೀವನ ಪಾಪಗಳಲ್ಲಿಯೇ ಮುಳುಗಿರುತ್ತದೆ ಹಾಗೂ ಶುಭ ಭಾವನೆಗಳಲ್ಲಿ ಮುಂದುವರೆಯುವವರ ಜೀವನವು ಸದ್ಗತಿಯ ಕಡೆಗೆ ಸಾಗುತ್ತಿರುತ್ತದೆ ಮತ್ತೆ ಅವರ ಸದ್ಭಾವನೆಗಳೇ ಮೋಕ್ಷ ಮಾರ್ಗದ ಸುಖಗಳನ್ನು ನೀಡುತ್ತವೆ. ಧರ್ಮದ ಸಂಸ್ಕಾರ ಯಾರ ಜೀವನದಲ್ಲಿ ಇದೆ ಹಾಗೂ ಧರ್ಮದ ಮಾರ್ಗದಲ್ಲಿ ಸಾಗುವವರಿಗೆ, ಅವರ ಭಾವನೆಗಳೇ ಒಂದು ದಿನ ಸಂಸಾರದ ಸುಖಗಳಿಂದ ದೂರವಾಗ ತೊಡಗುತ್ತವೆ. ರಾಗ-ದ್ವೇಷ, ವಿಷಯ-ವಾಸನಾ, ನನ್ನದು-ನಿನ್ನದು ಎಂಬ ಭಾವನೆಗಳು ದೂರವಾಗ ತೊಡಗುತ್ತವೆ ಹಾಗೂ ಭಾವನೆಗಳಲ್ಲಿ ವೀತರಾಗತೆ

ಬರತೊಡಗಿದಾಗ ಅಂತರಂಗದ ಸುಖದ ಅನುಭವ ಸ್ವತಃ ಆಗ ತೊಡಗುತ್ತದೆ. ಅದಕ್ಕೆ ಹೊರಗಿನ ಸುಖಗಳೊಂದಿಗೆ ಯಾವ ಸಂಬಂಧವು ಇಲ್ಲ. ಆ ಅಂತರಂಗದ ಸುಖವು ನೀರಿನಲ್ಲಿ ಅಡಗಿರುವ ಶೀತಲತೆಯ ಅನುಭವದಂತಿರುತ್ತದೆ.

ಹೊರಗೆ ಕಾಣುವ ಸುಖವು ಸುಖವಲ್ಲ. ಯಾಕೆಂದರೆ ಈ ಸುಖವು ಒಂದು ದಿನ ಬಿಟ್ಟು ಹೊಗುವಂತಹದು. ಸಂಯೋಗವಿರುವಲ್ಲಿ ವಿಯೋಗವೂ ಇದೆ. ದೊರೆತ ವಸ್ತುವು, ಅದು ಬಿಟ್ಟು ಹೋಗುತ್ತದೆ ಆದರೆ ಆತ್ಮನ ಸುಖವು ಕಣ್ಣುಗಳಿಗೆ ಕಾಣಿಸುವುದಿಲ್ಲ, ಅದು ಅನಂತ ಸುಖವಾಗಿದೆ. ಈ ಅನಂತ ಸುಖದ ಅನುಭವ ಹೊಂದಲು ಮೊದಲು ತಮ್ಮ ಭಾವನೆಗಳನ್ನು ಪವಿತ್ರಗೊಳಿಸಬೇಕು. ಅದಕ್ಕಾಗಿ ಧರ್ಮದ ಆಸರೆ ಪಡೆಯ ಬೇಕಾಗುತ್ತದೆ. ಜ್ಞಾನ, ದರ್ಶನ, ಚಾರಿತ್ರಗಳ ಮಹತ್ವ ಆಗಲೇ ತಿಳಿಯುತ್ತದೆ. ದೇವ, ಗುರು, ಶಾಸ್ತ್ರಗಳ ಅವಲಂಬನೆ ಅವಶ್ಯಕವಾಗಿದ್ದು ನಾವು ನಮ್ಮ ಅಶುಭ ಭಾವನೆಗಳನ್ನು ಶುದ್ಧಿ ಮಾಡಿ ಅವುಗಳನ್ನು ಶುಭ, ಶುದ್ಧಗಳಲ್ಲಿ ಪರಿವರ್ತನೆ ಮಾಡುವ ಅವಶ್ಯಕತೆ ಇದೆ. ಸಂಸಾರೀ ಪ್ರಾಣಿಗಳು ಧರ್ಮದ ಆಸರೆ ಇಲ್ಲದೆ ತಮ್ಮ ಭಾವನೆಗಳನ್ನು ಪಾವನಗೊಳಿಸಲಾರರು. ಸಂಸಾರದ ಭೋಗಗಳಿರಲಿ, ಅಥವಾ ವೈಭವ–ಸಂಪತ್ತಿನ ಲಾಲಸೆ ಇರಲಿ ನಾವು ಪಾಪ ಪುಣ್ಯಗಳ ಭೇದ ವಿಜ್ಞಾನವನ್ನು ತಿಳಿಯುತ್ತಾ ಸರಿಯಾದ ದಿಕ್ಕಿನಲ್ಲಿ ಸಾಗಿದಾಗಲೇ ಬಿಟ್ಟು ಹೋಗುತ್ತವೆ. ಆಗಲೇ ನಮ್ಮ ಆಕುಲತೆಗಳು ಕ್ಷಣ–ಕ್ಷಣ ಕಡಿಮೆಯಾಗುತ್ತವೆ. ಪರಿಗ್ರಹಗಳಿಂದ ಮನಸ್ಸು ದೂರವಾಗ ತೊಡಗುತ್ತದೆ. ಆಹಾರ–ಪಾನಿಯಗಳಲ್ಲಿ ವಿವೇಕ ಜಾಗೃತವಾಗುತ್ತದೆ ಹಾಗೂ ಸಂಯಮ ಹಾಗೂ ಸಾಧನೆಯ ಮಾರ್ಗ ಆತ್ಮನಿಗೆ ಸುಖದ ಅನುಭವವನ್ನು ಕೊಡತೊಡಗುತ್ತದೆ. ರಾಗ ಹೊಂದಿದ ಜೀವವು ಕರ್ಮಗಳನ್ನು ಬಂಧ ಮಾಡಿಕೊಳುತ್ತಾ ಇರುತ್ತದೆ ಆದರೆ ವೈರಾಗಿ ಜೀವನ ವರ್ಧಿಸುತ್ತಿರುವಾಗ ಕರ್ಮದ ಬಂಧನ ಸಡಿಲವಾಗ ತೊಡಗುತ್ತದೆ. ಆಗಲೇ ಜೀವ ಪರಮ ಶಾಂತಿಯನ್ನು ಪಡೆಯಬಲ್ಲದು.

ಕೆಟ್ಟ ಭಾವನೆಗಳು ಇದ್ದೊಡೆ, ಭವ ದುಃಖಗಳಲ್ಲಿ ವಾಸವು ।
ಶ್ರೇಷ್ಠ ಭಾವನೆಗಳಲ್ಲಿ ಇದ್ದೊಡೆ ಹತ್ತಿರವಿರುವುದು ಸುಖವು ॥

# 9. ಧ್ಯಾನದಲ್ಲಿ ಧರ್ಮದ ಅವಲಂಬನೆಯ ಆವಶ್ಯಕತೆ ಇದೆ

ಈ ಪಂಚಮಕಾಲದಲ್ಲಿ ಜಗತ್ತಿನಲ್ಲಿ ಯಾವುದಾದರೂ ಒಂದು ಧ್ಯಾನವನ್ನು ಮಾಡದೇ ಇರುವ ಆತ್ಮನಿಲ್ಲ. ತಾವು ಯಾವ ಧ್ಯಾನ ಮಾಡುತ್ತೀರಾ? ಸಂಸಾರದ ಧ್ಯಾನವನ್ನೇ ಅಥವಾ ನಿಮ್ಮ ಆತ್ಮ ಧ್ಯಾನವನ್ನೇ? ಸಂಸಾರಿ ಪ್ರಾಣಿಗಳಾಗಿರುವವರು ಧರ್ಮದ ಅವಲಂಬನೆ ಇಲ್ಲದೇ ಆತ್ಮನ ಧ್ಯಾನವನ್ನು ಎಂದಿಗೂ ಮಾಡಲಾರರು. ಯಾಕೆಂದರೆ ಸಂಸಾರೀ ಪ್ರಾಣಿಗಳು ಸಂಸಾರಿ ವಸ್ತುಗಳ ಲೋಭದಲ್ಲಿ ಎಷ್ಟೊಂದು ಸಿಲುಕಿದ್ದಾರೆಂದರೆ ಅವು ಅವರ ಧ್ಯಾನದಿಂದ ಎಂದಿಗೂ ಬೇರೆಯಾಗುವುದಿಲ್ಲ, ವ್ಯಕ್ತಿಯು ಪ್ರತಿದಿನ ಸಂಸಾರದ ಸುಖ–ಸಾಧನಗಳನ್ನೇ ಸಂಗ್ರಹಿಸುವಲ್ಲಿ, ವಿಷಯ ವಾಸನೆಗಳಲ್ಲಿ ಹಾಗೂ ರಾಗ–ದ್ವೇಷ ಮಾಡುವುದರಲ್ಲಿಯೇ ಲಿಪ್ತನಾಗಿರುತ್ತಾನೆ. ಅರ್ಥಾತ್ ಒಂದು ನಿಮಿಷ ಸಹ ಆತ ಅವುಗಳ ಧ್ಯಾನ ಮಾಡದೆ ಇರಲಾರ. ಆತನ ಮನಸ್ಸು ಎಷ್ಟೊಂದು ಚಂಚಲವಾಗಿದೆ ಎಂದರೆ ಆತನಿಗೆ ನಿದ್ದೆಯಲ್ಲಿಯೂ ಸಹ ಸಮಾಧಾನವಿಲ್ಲ. ಹಾಗಿರುವಾಗ ಆತ್ಮನ ಧ್ಯಾನ ಮಾಡಲು ಹೇಗೆ ಸಾಧ್ಯ? ಸಂಸಾರೀ ಪ್ರಾಣಿಗಳಿಗೆ ಸಮ್ಯಕ್ ಧ್ಯಾನಕ್ಕಾಗಿ ಧರ್ಮದ ಅವಲಂಬನೆ ಹೊಂದಲೇ ಬೇಕಾಗುತ್ತದೆ. ಆಗಲೇ ಅವರ ಧ್ಯಾನ, ಸಂಸಾರದ ಭೌತಿಕತೆಯ ಕ್ಷಣಭಂಗುರದ ಅರಿವಾಗಿ ಆತ್ಮನಲ್ಲಿ ಚಿಂತನೆ ಮಾಡ ತೊಡಗುವುದು, ಸಮ್ಯಕ್ ದರ್ಶನವಿಲ್ಲದೇ ಧರ್ಮದ ಅವಲಂಬನೆ ಪಡೆದು ಸಂಸಾರಿ ಪ್ರಾಣಿಗಳ ಧ್ಯಾನವು ಪಾವನ ಪವಿತ್ರವಾಗಲಾರದು. ಯಾಕೆಂದರೆ ಆ ಸಂಸಾರೀ ಜೀವ ಶಾರೀರಿಕ ಭೋಗವಸ್ತುಗಳಲ್ಲಿ ಲಿಪ್ತವಾಗಿರುತ್ತದೆ. ಅವುಗಳ ತ್ಯಾಗವಿಲ್ಲದೇ ಆತ್ಮ–ಧ್ಯಾನದ ಏಕಾಗ್ರತೆ ಅಸಂಭವವಾಗಿದೆ. ಆದ್ದರಿಂದ ಧರ್ಮದ ಅವಲಂಬನೆ ಹೊಂದಿ ಧ್ಯಾನದ ಉಪಯೋಗ ಮಾಡಿಕೊಂಡರೆ ಅದು ಪುಣ್ಯಸಂಚಯದ ಕಾರಣ ಹಾಗೂ ಕರ್ಮಗಳ ನಿರ್ಜರೆಯ ಮಾಧ್ಯಮವಾಗುತ್ತದೆ. ಪಾಪ ಪ್ರವೃತ್ತಿಗಳಿಂದ ಆತ್ಮನು ದೂರನಾದಾಗ ನಮ್ಮ ಆ ಸಮ್ಯಕ್ ಧ್ಯಾನ ಮೋಕ್ಷದ ಮಾರ್ಗವನ್ನು ತೋರಿಸಬಲ್ಲದು.

ಧ್ಯಾನವು ಒಂದು ತಪವಾಗಿದೆ ಹಾಗೂ ಆ ತಪದ ಮಹಿಮೆ ಇಂದಿಗೂ ಸಹ ಬಹಳ ಮಹತ್ವ ಪೂರ್ಣವಾಗಿದೆ. ಸಮ್ಯಕ್ ಧ್ಯಾನದಿಂದ ಮನಸ್ಸು ನಿರ್ಮಲ ಹಾಗೂ ಪವಿತ್ರವಾಗುತ್ತದೆ. ಆದರೆ ಚಿಂತೆಯಿಂದ ದೂರವಿದ್ದು ಚಿತ್ತವನ್ನು ಚಿಂತನೆಯಲ್ಲಿ ತೊಡಗಿಸುವುದು ನಾವು ಧರ್ಮದ ಯಾವುದಾದರೊಂದರ ಆಲಂಬನದಿಂದ ನಮ್ಮ ಮನಸ್ಸನ್ನು ಸಂಸಾರದಿಂದ ದೂರವಿರಿಸಿ ಅಧ್ಯಾತ್ಮದೊಂದಿಗೆ ಸೇರಿಸಿದಾಗ ಶಾಂತಿ ತನ್ನಷ್ಟಕ್ಕೆ ತಾನೇ ಅನುಭವಕ್ಕೆ ಬರುತ್ತದೆ. ಗೃಹಸ್ಥ ಜೀವನದಲ್ಲಿ ಇರುವ ವ್ಯಕ್ತಿ ಅವಲಂಬನೆ ಇಲ್ಲದೆ ಧರ್ಮ–ಧ್ಯಾನ ಮಾಡಲಾರರು. ಈ ಕಾರಣದಿಂದಲೇ ಆತ ಸಂಸಾರದ ಮಾಯಾಬಲೆಯಲ್ಲಿ ಸಿಲುಕಿದ್ದಾರೆ. ಆತನಿಗೆ ಪ್ರತಿದಿನ ಮನೆ–ಅಂಗಡಿ ಪರಿವಾರದ ಚಿಂತನೆ ಸತಾಯಿಸುತ್ತದೆ. ಹೊಟ್ಟೆ ಮತ್ತು ಪೆಟ್ಟಿಗೆಗಳನ್ನು ತುಂಬುವ ಆಸೆ ತನ್ನ ಶರೀರವನ್ನು ನೋಡಿಕೊಳ್ಳಲಾಗದಷ್ಟು ತೀವ್ರವಾಗಿರುತ್ತದೆ. ಇದರಿಂದಾಗಿ ಆತ

ಆತ್ಮಧ್ಯಾನವನ್ನು ಮಾಡಲಾರ. ನಮ್ಮೊಳಗೆ ಸಂಸಾರ ಇರದೇ ಅದರ ಬಗ್ಗೆ ಸಂಪೂರ್ಣ ತ್ಯಾಗದೊಂದಿಗೆ, ಭೋಗಗಳ ತ್ಯಾಗ ಮಾಡದೇ ಸಮ್ಯಕ್ ಧ್ಯಾನ ದೊರೆಯುವ ಸಂಭವವಿಲ್ಲ– ವಿರಕ್ತಿ ಭಾವ ಉಂಟಾದಾಗಲೇ ಆತ್ಮ ಧ್ಯಾನ ಉಂಟಾಗುತ್ತದೆ. ನಾವು ತ್ಯಾಗಿಗಳಾದಗಲೇ ಹೆಚ್ಚಿನ ಸಮಯವನ್ನು ಧರ್ಮಧ್ಯಾನದಲ್ಲಿ ತೊಡಗಿಸಿದಾಗ ಮೋಕ್ಷಮಾರ್ಗ ರೂಪಗೊಳ್ಳುತ್ತದೆ.

ಧ್ಯಾನದಲ್ಲಿ ಏಕಾಗ್ರತೆಯು ಬಹಳ ಕಷ್ಟದಿಂದ ಆಗುತ್ತದೆ. ಮನಸ್ಸಿನ ಚಂಚಲತೆಯ ಮೇಲೆ ಅಂಕುಶ ಹಾಕುವುದು ಸಾಧಾರಣ ಮಾತಲ್ಲ. ಓರ್ವ ಬಾಲಕನ ಮನಸ್ಸು ಆಕಡೆ–ಈಕಡೆ ಅಲೆದಾಡುವಂತೆ ಓರ್ವ ಸಾಮಾನ್ಯ ಪ್ರಾಣಿಯದಾಗಿದ್ದು ಅದರ ಮನಸ್ಸು ಸಹ ನಿರಂತರವಾಗಿ ಎಲ್ಲೆಲ್ಲಿ ಸಂಬಂಧವಿರುತ್ತದೋ ಅಲ್ಲಲ್ಲಿ ಅಲೆದಾಡುತ್ತಿರುತ್ತದೆ, ಆಗ ಅಲ್ಲಿ ಸಮೀಚೀನ ವ್ಯವಹಾರ ಅರ್ಥಾತ್ ಯಾವುದಾದರೂ ಆಲಂಬನ ಹೊಂದಿ ಧರ್ಮಧ್ಯಾನದಿಂದ ತಮ್ಮ ಮನ–ಚಿತ್ತವನ್ನು ಶುದ್ಧ–ಪವಿತ್ರ ಮತ್ತು ಪಾವನವನ್ನಾಗಿ ಮಾಡಬಹುದಾಗಿದೆ. ಸಂಸಾರೀ ಪ್ರಾಣಿಗೆ ನಿಶ್ಚಿಂತತೆ ಹೊಂದಲು ಧ್ಯಾನದ ಮಹತ್ವ ಬಹಳಷ್ಟಿದೆ, ಆದರೆ ಅದರ ಸಂಪರ್ಕ ಧರ್ಮದೊಂದಿಗೆ ಆಗುವುದಿಲ್ಲವೋ ಅದು ಉಪಯೋಗಿ ಎಂದು ಸಿದ್ಧವಾಗುವುದಿಲ್ಲ. ಸಮ್ಯಕ್ ಜ್ಞಾನವು ಸಹ ಧರ್ಮಧ್ಯಾನದಲ್ಲಿ ಆವಶ್ಯಕವಾಗಿದೆ ಹಾಗೂ ತ್ಯಾಗದ ಪ್ರವೃತ್ತಿಗಳು ಆಗಲೇ ಜಾಗೃತವಾಗುತ್ತವೆ. ಒಂದೆಡೆ ನಾವು ಪರಿಗ್ರಹವನ್ನು ಹೆಚ್ಚಿಸಿಕೊಳ್ಳುತ್ತಿದ್ದೇವೆ ಹಾಗಿರುವಾಗ ತ್ಯಾಗದ ಪ್ರವೃತ್ತಿ ಹೇಗೆ ಆಗಬಲ್ಲದು? ಆದ್ದರಿಂದ ಯಾವುದಾದರೂ ಅವಲಂಬನೆ ಹೊಂದಿ ನಮ್ಮ ಆತ್ಮನಿಗೆ ಶಾಂತಿ ಸಿಗುವಂತಹ ಪುರುಷಾರ್ಥವನ್ನು ಮಾಡಬೇಕು. ಶರೀರಕ್ಕೆ ಭೌತಿಕ ಸಂಪತ್ತು ಸಂತಸ ನೀಡಬಹುದು ಆದರೆ ಆತ್ಮನಿಗೆ ಅದು ಆ ಸಂತಸವನ್ನು ನೀಡಲಾರದು. ಧರ್ಮದ ಆಚರಣೆಯಿಂದಲೇ ಆತ್ಮನಿಗೆ ಶಾಂತಿ ದೊರೆಯುತ್ತದೆ. ನಾವು ಸಾಂಸಾರಿಕ ಸಂಪತ್ತು, ಸವಲತ್ತುಗಳು ಹಾಗೂ ಇಂದ್ರಿಯಗಳ ಗುಲಾಮತನಗಳಿಂದ ಮುಕ್ತರಾದಾಗಲೇ ಶೂನ್ಯದ ಧ್ಯಾನವಾಗುತ್ತದೆ ಎಂಬ ಮಾತನ್ನು ಗಮನದಲ್ಲಿಡಬೇಕು. ಹೀರೋ ಆಗಿ ಝೀರೋದ ಸಾಧನೆ ಅಥವಾ ಧ್ಯಾನವನ್ನು ಮಾಡಲಾಗುವುದಿಲ್ಲ. ಪದಾರ್ಥಗಳ ಮೇಲೆ ರಾಗ–ದ್ವೇಷಗಳು ಇರುವವರೆಗೆ ಪದಾರ್ಥಗಳ ಮೇಲೆಯೇ ಗಮನವಿರುತ್ತದೆ. ಆದ್ದರಿಂದ ನಮ್ಮ ಧ್ಯಾನವನ್ನು ನಿರ್ಮಲಗೊಳ್ಳಸಲು ಇದು ಅವಕಾಶವಾಗಿದ್ದು ಅದಕ್ಕಾಗಿ ತ್ಯಾಗ–ಧರ್ಮದ ಅವಲಂಬನೆ ಹೊಂದಿ ಮುಂದೆ ಸಾಗುತ್ತಾ ಇದ್ದರೆ ನಮ್ಮ ಗುರಿಯು ತಾನೇ ಸಿಗುತ್ತದೆ.

# 10. ವಿಕಲ್ಪಗಳು ಕಡಿಮೆಯಾದಷ್ಟು ಶಾಂತಿ

ಸಾಮಾನ್ಯವಾಗಿ ಪ್ರತಿಯೊಬ್ಬರೂ–ನನಗೆ ಶಾಂತಿ ಬೇಕು ಎಂದು ಹೇಳುತ್ತಾರೆ. ಆದರೆ ಶಾಂತಿ ನಮ್ಮಿಂದ ಯಾಕೆ ದೂರವಿದೆ ಎಂದು ಯಾವತ್ತಾದರೂ ಚಿಂತನೆ ಮಾಡಿದ್ದಾರಾ? ಧ್ಯಾನದಲ್ಲಿಯೂ ಸಹ ನಮ್ಮ ಮನಸ್ಸು ಯಾಕೆ ಸ್ಥಿರವಾಗಿರಲಾರದು? ಮನಸ್ಸಿನ ಚಂಚಲತೆಗೆ ಕಾರಣವೇನು? ನಿಜ ಸಂಗತಿ ಎಂದರೆ ಅಶಾಂತಿ ಅಥವಾ ಚಂಚಲ ಮನದ ಸ್ಥಿತಿಗೆ ನಾವು ಸ್ವತಃ ಜವಾಬ್ದಾರರಾಗಿದ್ದೇವೆ. ಜೀವನದಲ್ಲಿ ವಿವಿಧ ರೀತಿಯ ವಿಕಲ್ಪಗಳು ಹೆಚ್ಚಾಗುತ್ತಲೇ ಇವೆ ಹಾಗೂ ಆತಂಕಗಳು ಸಹ ಅಷ್ಟೇ ವೇಗವಾಗಿ ಹೆಚ್ಚುತ್ತಲಿವೆ. ಜೀವನ ಯಾಂತ್ರಿಕವಾಗಿದ್ದು ಪ್ರತಿದಿನ ಅಲ್ಲಿ–ಇಲ್ಲಿ ಓಡಾಡುವುದರಲ್ಲಿಯೇ ಸಮಯ ಕಳೆದು ಹೋಗುತ್ತದೆ. ಮನುಷ್ಯನ ಜೀವನದಲ್ಲಿ ವ್ಯಸ್ತತೆ ಹೆಚ್ಚಾದಷ್ಟು ಒತ್ತಡವು ಅಷ್ಟೇ ಹೆಚ್ಚಾಗುತ್ತಿದೆ. ಇದು ಬೇಕು, ಅದು ಬೇಕು, ಹಾಗಿರಬೇಕು, ಅವರಿಗೆ ಹೀಗೆ ಹೇಳಬೇಕು, ಅವರನ್ನು ಬೀಳಿಸಬೇಕು, ಅವರ ಕೀರ್ತಿಯನ್ನು ಹಾಳು ಮಾಡಬೇಕು, ಅವರ ಮೇಲೆ ಸೇಡು ತೀರಿಸಿಕೊಳ್ಳಬೇಕು, ಅವರನ್ನು ಕೀಳುಮಟ್ಟದವರೆಂದು ತೋರಿಸಬೇಕು ಅರ್ಥಾತ್ ಮನುಷ್ಯನ ಚಿಂತನೆಯ ನೆಟ್ವರ್ಕ್, ಆತನ ಇಚ್ಛೆಗಳ ಮಾರುಕಟ್ಟೆ, ರಾಗ–ದ್ವೇಷಗಳ ಸ್ಥಿತಿ, ಪರಿಗ್ರಹಗಳ ಲಾಲಸೆ, ವಿಷಯ ವಾಸನೆಯ ಆಕಾಂಕ್ಷೆಗಳು ಹಾಗೂ ಇಂದ್ರಿಯಗಳ ಇಚ್ಛೆಗಳ ಪೂರ್ತಿಗಾಗಿ ನಿತ್ಯ ಹೊಸ–ಹೊಸ ವಿಕಲ್ಪಗಳು ಉತ್ಪನ್ನವಾಗುತ್ತಾ ಸಾಗುತ್ತಲಿವೆ. ಮಿತಿಗೆ ಯಾವ ವಿವೇಕವು ಇಲ್ಲದಿರುವಾಗ ವಿಕಲ್ಪಗಳು ಹೆಚ್ಚುತ್ತಾ ಸಾಗುತ್ತವೆ. ಆದ್ದರಿಂದ ಪ್ರತಿಯೊಂದು ಕ್ಷೇತ್ರದಲ್ಲಿ ನಾವು ನಮ್ಮ ವಿಕಲ್ಪಗಳನ್ನು ಕಡಿಮೆ ಮಾಡಿಕೊಳ್ಳದಿದ್ದರೆ ವಾಸ್ತವಿಕ ಶಾಂತಿಯನ್ನು ಪಡೆಯಲು ಸಾಧ್ಯವಿಲ್ಲ. ನಾವು ನಮ್ಮ ನಿಯಮ–ಸಂಯಮವೆಂಬ ಹಗ್ಗದಿಂದ ಬಂಧಿಸಲ್ಪಟ್ಟಾಗಲೀ ನಮ್ಮ ಧರ್ಮ–ಧ್ಯಾನವು ಸಾರ್ಥಕವಾಗುತ್ತದೆ. ಆಗಲೇ ಉದ್ವೇಗ ಶಮನವಾಗಿ ಮನಸ್ಸು ಶಾಂತವಾಗುತ್ತದೆ. ನಮ್ಮ ಮನಸ್ಸನ್ನು ನಿಯಂತ್ರಿಸದೇ ಜಗತ್ತಿನಲ್ಲಿ ಯಾರೂ ಶಾಂತಿಯನ್ನು ಪಡೆದಿಲ್ಲ. ಯಾರ ಮನಸ್ಸು ನಿಯಂತ್ರಣದಲ್ಲಿದೆ ಅವರಿಗೆ ಮೋಕ್ಷಮಾರ್ಗ ಹಾಗೂ ಮೋಕ್ಷ ಅಸಂಭವವೇನಲ್ಲಾ.

ನಮ್ಮ ಆತ್ಮನನ್ನು ಪಾವನ ಹಾಗೂ ನಿರ್ಮಲ ಮಾಡಿಕೊಳ್ಳುವವರೇ ಸಮ್ಯಕ್ ಧ್ಯಾನದಿಂದ ಪರಮ ಶಾಂತಿಯನ್ನು ಪಡೆಯಬಲ್ಲರು. ಇದಕ್ಕಾಗಿ ಅವರು ತಮ್ಮ ಮನಸ್ಸನ್ನು ನಿಯಂತ್ರಿಸ ಬೇಕಾಗುತ್ತದೆ. ಇದಕ್ಕೆ ಎಲ್ಲಕ್ಕಿಂತ ಉತ್ತಮ ವಿಧಾನವೆಂದರೆ ಅವರು ನಿವೃತ್ತಿಯ ಕಡೆಗೆ ಸಾಗಬೇಕು. ತಮ್ಮ ಇಚ್ಛೆಗಳನ್ನು ಕಡಿಮೆ ಮಾಡುತ್ತಾ ಮನಸ್ಸನ್ನು ಹೆಚ್ಚು ಧರ್ಮಧ್ಯಾನದಲ್ಲಿ ತೊಡಗಿಸುತ್ತಿರಬೇಕು. ಧರ್ಮ–ಧ್ಯಾನ ಕೇವಲ ಮಂದಿರದಲ್ಲಿಯೇ ಆಗದೇ ಜೀವನದ ಪ್ರತಿ ಹೆಜ್ಜೆ ಹೆಜ್ಜೆಯಲ್ಲಿಯೂ ಆಗಬೇಕು. ನಾನು ಪ್ರಾಮಾಣಿಕವಾಗಿ ಜೀವನ ನಡೆಸುತ್ತೇನೆ. ಅಪ್ರಾಮಾಣಿಕತೆ ಅಥವಾ ಛಲ–ಕಪಟದಿಂದ ಹಣಗಳಿಸುವುದಿಲ್ಲ, ಅನ್ಯಾಯ–ಅನೀತಿಗಳಿಂದ ದೂರವಿರುತ್ತೇನೆ,

ಭ್ರಷ್ಟಾಚಾರ ಹಾಗೂ ಕಲಬೆರಕೆ ಎಂದಿಗೂ ಮಾಡುವುದಿಲ್ಲ. ಪತ್ನಿಯನ್ನು ಬಿಟ್ಟು ಎಲ್ಲರನ್ನು ತಾಯಿ-ಸಹೋದರಿ ಎಂದು ಭಾವಿಸುತ್ತೇನೆ, ಬ್ರಹ್ಮಚರ್ಯದಲ್ಲಿ ಮುಂದುವರೆಯುತ್ತೇನೆ, ಹೆಚ್ಚಿನ ಪರಿಗ್ರಹಗಳಿಂದ ದೂರವಿರುತ್ತೇನೆ, ಶಾಕಾಹಾರಿ ಜೀವನ ಶೈಲಿಯ ಪಾಲನೆ ಮಾಡುತ್ತೇನೆ, ಮಾದಕ, ವ್ಯಸನ, ಫ್ಯಾಶನ್‌ಗಳಿಂದ ದೂರವಿರುತ್ತೇನೆ. ನನ್ನ ಅವಶ್ಯಗಳನ್ನು ಸೀಮಿತಗೊಳಿಸುತ್ತಾ ನಿಜವಾದ ಜ್ಞಾನ, ನಿಜವಾದ ಭಕ್ತಿ, ನಿಜವಾದ ಸಾಮಾಯಿಕದಲ್ಲಿ ನಿರಂತರ ವೃದ್ಧಿಮಾಡುತ್ತಾ, ವ್ರತ-ಅಣುವ್ರತಗಳ ಪಾಲನೆ ಮಾಡುತ್ತೇನೆ. ಇಂತಹ ಪಾವನ ಸಂಕಲ್ಪಗಳಿದ್ದಾಗ ನಮ್ಮ ಜೀವನ ನಿರ್ಮಲವಾಗಬಲ್ಲದು. ಶುದ್ಧ ನೀರು ಎಲ್ಲರಿಗೂ ಒಳ್ಳೆಯದೆನಿಸುವಂತೆ, ನಮ್ಮ ಮನಸ್ಸು ಸಹ ನಿರ್ಮಲ, ಪವಿತ್ರ, ಶುದ್ಧವಾದಷ್ಟು ಆತ್ಮನಿಗೆ ಪರಮ ಶಾಂತಿ ಹಾಗೂ ಅಸೀಮ ಸುಖ ಪ್ರಾಪ್ತಿಯಾಗುತ್ತದೆ. ಜೀವನದ ವಾಸ್ತವಿಕ ಆನಂದವು ಸಹ ಇದರಲ್ಲಿಯೇ ಇದೆ. ಧಾರ್ಮಿಕ ಕಾರ್ಯಗಳ ಬಗ್ಗೆ ಪ್ರಸನ್ನತಾ ಭಾವ ಇರುವ ಆತ್ಮಗಳೇ ಮೋಕ್ಷಮಾರ್ಗದಲ್ಲಿ ಮುಂದೆ ಸಾಗಬಲ್ಲವು. ನಮ್ಮ ಕರ್ಮಗಳನ್ನು ನಾಶಪಡಿಸುವುದೇ ಮೋಕ್ಷಮಾರ್ಗದ ಯಾತ್ರೆಯನ್ನು ಮುಗಿಸಬಲ್ಲದು.

ಸಮುದ್ರದಲ್ಲಿ ತರಂಗಗಳು ಇರುವವರೆಗೆ ಅದು ಸ್ಥಿರವಾಗಿರುವಂತೆ ಕಾಣುವುದಿಲ್ಲ. ಹಾಗೆಯೇ ಮನಸ್ಸಿನಲ್ಲಿ ವಿಕಲ್ಪಗಳ ತರಂಗಗಳು ಇರುವವರೆಗೆ ಅದು ಶಾಂತವಾಗುವುದಿಲ್ಲ. ಮನಸ್ಸಿನ ತರಂಗಗಳು ಕೇವಲ ಹೇಳುವುದರಿಂದ ಕಡಿಮೆಯಾಗುವುದಿಲ್ಲ ಬದಲಾಗಿ ಅದಕ್ಕಾಗಿ ಮಿತಿಗಳನ್ನು ಹಾಕಬೇಕು. ಮಿತಿ ಇರದಿದ್ದರೆ ಜೀವನದ ಅವಶ್ಯಕತೆಗಳಿಗೆ ಮಿತಿ ಇರುವುದಿಲ್ಲ. ನಿಯಮ-ಸಂಯಮಗಳಿಂದ ನಾವು ನಮ್ಮ ಅವಶ್ಯಕತೆಗಳನ್ನು ಆಗಾಗ ಕಡಿಮೆ ಮಾಡುತ್ತಾ ಸಾಗಬೇಕು. ಆಗ ಒಂದು ದಿನ ಸಂಪೂರ್ಣ ತ್ಯಾಗಿ ಆಗಬಹುದು. ಗೃಹಸ್ಥ ಜೀವನದಲ್ಲಿಯೇ ಯಾವ ಮಿತಿಯೂ ಇರದಿದ್ದರೆ ಯಾವ ವ್ರತ ಅಣುವ್ರತದ ಭಾವವೇ ಆಗುವುದಿಲ್ಲವೆಂದ ಮೇಲೆ ತ್ಯಾಗಿ-ತಪಸ್ವಿ ಆಗುವುದು ಅಸಂಭವವಾಗಿದೆ, ಸಂಸಾರೀ ಜೀವನದಲ್ಲಿ ಮಿತಿ ಭಾವ ಬಂದಾಗ ಅವಶ್ಯಕಗಳನ್ನು ಕಡಿಮೆ ಮಾಡಬಹುದು, ವಿಕಲ್ಪಗಳಿಗೆ ತಡೆ ಹಾಕಬಹುದು. ಆಗಲೇ ಪರಿಗ್ರಹಗಳನ್ನು ತ್ಯಜಿಸಬಹುದು. ಆದ್ದರಿಂದ ನಮ್ಮ ಜೀವನ ಪದ್ಧತಿಗೆ ವಯಸ್ಸಾದಂತೆ ಅದನ್ನು ಸೀಮಿತ, ಸಂಯಮಿತ, ಶುದ್ಧ ಹಾಗೂ ಪಾವನಗೊಳಿಸುತ್ತಾ ಸಾಗಬೇಕು. ಅದಕ್ಕಾಗಿ ಸಮತಾಭಾವ, ಸರಳತೆ ಮತ್ತು ಸಾದಾ ಜೀವನ ಆವಶ್ಯಕ ಸಾಮಗ್ರಿಗಳಾಗಿದ್ದು ಇವುಗಳಿಂದ ಮುಂದೆ ಸಾಗಬೇಕು. ಸಂಯಮದಲ್ಲಿರಬೇಕು, ಎಲ್ಲ ಜೀವಗಳ ಬಗ್ಗೆ ಕರುಣಾಭಾವ ಹೊಂದಿರಬೇಕು. ನಮ್ಮ ಮನಸ್ಸಿನ ಪವಿತ್ರತೆಯೇ ಎಲ್ಲಕ್ಕಿಂತ ದೊಡ್ಡ ಸಾಧನವಾಗಿದ್ದು ಅದನ್ನು ಪವಿತ್ರಗೊಳಿಸುವ ಮಾರ್ಗದಲ್ಲಿ ಸಾಗಿದರೆ ಮನಸ್ಸೇ ಒಂದು ದಿನ ಮಂದಿರವಾಗುವುದೆಂಬುದು ಗಮನದಲ್ಲಿರಲಿ. ಘಾತಿಕರ್ಮಗಳು ನಾಶವಾದಾಗ ಪುಣ್ಯವು ಸಹ ತನ್ನಷ್ಟಕ್ಕೆ ತಾನೇ ನಿರ್ಜರೆಯಾಗುತ್ತದೆ. ಅದರಿಂದಲೇ ಪರಮ ಶಾಂತಿಯಷ್ಟೇ ಅಲ್ಲ ಬದಲಾಗಿ ಶಾಂತಿಯ ಪರಮ ಧಾಮ ಮೋಕ್ಷದ ವರೆಗೆ ಸಾಗಬಹುದು, ಆದ್ದರಿಂದ ಮನದ ಕಾವಲುಗಾರ ಸ್ವತಃ ನಾವೇ ಆಗಬೇಕು, ಮನಸ್ಸಿಗೆ

ಏನಾದರೊಂದು ಕೆಲಸವಿರಬೇಕು ಆದ್ದರಿಂದ ಅದನ್ನು ಪಾವನವಾಗಿಸಿರಲು ಒಳ್ಳೆಯ ಕೆಲಸದಲ್ಲಿ ತೊಡಗಿಸಿ ಅದರಿಂದಾಗಿ ಅದು ಪಾಪದಿಂದ ಉಳಿಯುತ್ತದೆ. ಮನಸ್ಸು ಪಾಪದಿಂದ ದೂರವಿದ್ದಷ್ಟು ಅದು ಸ್ವತಃ ಪುಣ್ಯವನ್ನು ಗಳಿಸುತ್ತದೆ ಹಾಗೂ ಶುಕ್ಲಧ್ಯಾನದಿಂದ ಆಗುವ ಸಮಸ್ತ ಕರ್ಮಗಳ ಸಮಾಪ್ತಿಯಲ್ಲಿಯೇ ಪರಮಶಾಂತಿ ಅಡಗಿದೆ.

# 11. ಸಂಸಾರದಲ್ಲಿ ಉದಾಸೀನನಾದವನೇ ಭಕ್ತನಾಗುತ್ತಾನೆ

ಪರಮಾತ್ಮನ ಭಕ್ತ ಯಾರಾಗಬಲ್ಲರು, ಇದನ್ನು ಯಾವಾಗಲಾದರೂ ಯೋಚಿಸಿದ್ದೀರಾ? ಹೇಳುವುದಾದರೆ ಪರಮಾತ್ಮನ ದಾಸರಾಗಲು ಯಾರೂ ಬಯಸುವುದೇ ಇಲ್ಲ ಎಂದು ಎಲ್ಲರೂ ಹೇಳುತ್ತಾರೆ. ಸಂಸಾರದಿಂದ ಉದಾಸೀನರಾದವರೇ ಪರಮಾತ್ಮನ ಭಕ್ತ (ದಾಸ) ರಾಗಬಲ್ಲರು. ಸಂಸಾರದಲ್ಲಿಯೇ ಮನಸ್ಸು ಅಲೆದಾಡುತ್ತಿದ್ದರೆ, ಸಂಸಾರದ ಸುಖ–ವೈಭವಗಳನ್ನೇ ಒಳ್ಳೆಯವು ಎಂದು ಭಾವಿಸಿ ಅವುಗಳಲ್ಲಿಯೇ ತೊಡಗಿದ್ದರೆ, ಅದೇ ಸಂಸಾರದ ಸುಖಗಳ ಕಾಮನೆ ಮಾಡುತ್ತಿದ್ದರೆ ಅವರೆಂದಿಗೂ ಪರಮಾತ್ಮನ ದಾಸರಾಗಲಾರರು. ವಿಷಯ ಭೋಗಗಳಲ್ಲಿ, ಇಂದ್ರಿಯ ಸುಖಗಳಲ್ಲಿ, ರಾಗ–ದ್ವೇಷ, ಮಾನ–ಸನ್ಮಾನ, ಲೋಭ–ಮೋಹ ಹಾಗೂ ಭೌತಿಕ ಸಂಪತ್ತನ್ನು ಹೆಚ್ಚಿಸುವಲ್ಲಿಯೇ ತೊಡಗಿದ್ದರೆ ಆ ಸಂಸಾರೀ ಪ್ರಾಣಿಗಳು ಪರಮಾತ್ಮನ ದಾಸರಾಗುವ ಅರ್ಹತೆಯನ್ನು ಹೊಂದಿಲ್ಲ. ಭವ್ಯ ಪ್ರಾಣಿಗಳಾಗಿರುವವರು ಪರಮಾತ್ಮನ ದಾಸರಾಗಬಲ್ಲರು ಹಾಗೂ ಸಂಸಾರದಿಂದ ಉದಾಸೀನರಾಗಿ ತಮ್ಮ ಮನಸ್ಸು ಹಾಗೂ ಚಿತ್ತವನ್ನು ಪರಮಾತ್ಮರಂತಾಗುವ ಪ್ರಯತ್ನ ಮಾಡಬಲ್ಲವರು ಆಸನ್ನ ಭವ್ಯರಾಗುತ್ತಾರೆ. ಆನಂತರ ಮತ್ತೆ ಅವರು ಪರಮಾತ್ಮನನ್ನು ಸಹ ಬಿಟ್ಟು 'ಅರ್ಹಂ'ರಂತೆ ಆಗಿ ತಮ್ಮ ಆತ್ಮನಲ್ಲಿಯೇ ಲೀನರಾಗಿ ಆತ್ಮನನ್ನು ಪರಮಾತ್ಮನನ್ನಾಗಿ ಮಾಡಿಬಿಡುತ್ತಾರೆ. ಇದನ್ನೇ ಮೋಕ್ಷವೆಂದು ಹೇಳುಲಾಗುತ್ತದೆ. ಸಂಪೂರ್ಣ ಕರ್ಮಗಳ (ಪಾಪ ಮತ್ತು ಪುಣ್ಯ)ನ್ನು ಕ್ಷಯ ಮಾಡುವವರೇ ಮೋಕ್ಷವನ್ನು ಪಡೆಯುತ್ತಾರೆ. ಆದ್ದರಿಂದ ಮೋಕ್ಷಮಾರ್ಗದಲ್ಲಿ ಸಾಗುವ ಮೊದಲ ಹೆಜ್ಜೆ ಸಂಸಾರದಿಂದ ಉದಾಸೀನನಾಗುವುದಾಗಿದೆ. ಅವರೇ ಮತ್ತೆ ಪರಮಾತ್ಮನ ನಿಜವಾದ ಭಕ್ತರಾಗಬಲ್ಲರು ಭಕ್ತರಲ್ಲಿಯೇ ಭಗವಂತರಾಗುತ್ತಾರೆ.

ಸಾಧಕನು ಸಂಸಾರದ ಸುಖ–ವೈಭವ, ವಿಷಯ, ವಾಸನಾಗಳಿಂದ ದೂರವಾದಾಗಲೇ ಸಮ್ಯಕ್ ಧ್ಯಾನವಾಗುತ್ತದೆ. ಅವುಗಳಲ್ಲಿ ಲಿಪ್ತತೆ ಇರುವ ವರೆಗೆ ರಾಗ–ದ್ವೇಷ ಹಾಗೂ ಭೋಗಗಳ ವಿಕಲ್ಪಗಳ ತರಂಗಗಳು ಅವರನ್ನು ಸಂಸಾರದಲ್ಲಿ ಅಲೆದಾಡಿಸುತ್ತವೆ ಹಾಗೂ ಅಳುವಂತೆ ಮಾಡುತ್ತವೆ. ದೇವಾಲಯವಿರಲಿ, ಅಥವಾ ಗುರುಗಳ ಸಾನಿಧ್ಯವಿರಲಿ ಅಲ್ಲಿಯೂ ಸಹ ಇಂದಿನ ಸ್ವಾರ್ಥಿ ಮನುಷ್ಯನು

ಸಂಸಾರದಿಂದ ಉದಾಸನಾಗಿ ಹೋಗಲಾರ ಎನ್ನುವುದು ವಿಡಂಬನೆಯಾಗಿ ತನ್ನ ಧನ, ವೈಭವ, ಪದವಿ, ಖ್ಯಾತಿ, ಸುಂದರತೆ ಅಥವಾ ಯಾವುದೇ ತರಹದ ಬಲ ಅಥವಾ ಮದಗಳ ಅಹಂಕಾರವನ್ನು ಹೊಂದಿರುತ್ತಾನೆ. ಆದ್ದರಿಂದಲೇ ಅದು ದುರ್ಗತಿಗೆ ಕಾರಣವಾಗುತ್ತವೆ. ಮಂದಿರದಲ್ಲಿ ಅಥವಾ ಗುರುಗಳ ಸನ್ನಿಧಿಯಲ್ಲಿ ಬಂದರೂ ಸಹ ತಾವು ತಮ್ಮ ಹಟವನ್ನು ಸಡಿಲಗೊಳಿಸದೇ ಹಾಗೂ ಸಂಸಾರದ ತ್ಯಾಗ ಮಾಡದಿದ್ದರೆ ಅಲ್ಲಿ ತಮ್ಮ ಪರಮಾತ್ಮನ ಬಗ್ಗೆ ಭಕ್ತಿ ಮತ್ತು ಗುರುಜನರ ಬಗ್ಗೆ ಶ್ರದ್ಧೆ ಹೊಂದಿಲ್ಲವೆಂದು ತಿಳಿಯಬೇಕು, ಬದಲಾಗಿ ಅವೆಲ್ಲವು ಕಾಟಾಚಾರದ ಧರ್ಮದ ಹೆಸರಲ್ಲಿ ತೋರಿಕೆಯು ಔಪಚಾರಿಕತೆಗಳ ಆಡಂಬರಗಳಾಗಿವೆ ಎಂದು ತಿಳಿಯಬೇಕು. ಈ ತರಹದ ಆಚರಣೆಗಳಿಂದ ಆತ್ಮನ ಉತ್ಥಾನ ಎಂದಿಗೂ ಆಗುವುದಿಲ್ಲ ಬದಲಾಗಿ ಹೊಸ ಅಶುಭ ಕರ್ಮಗಳ ಬಂಧವಾಗುತ್ತದೆ. ಕಡಿಮೆ ಎಂದರೂ ತಮ್ಮ ಆರಾಧ್ಯರ ಸಮ್ಮುಖದಲ್ಲಿಯಾದರೂ ಸರಳತೆಯೊಂದಿಗೆ ಸಂಸಾರವನ್ನು ತ್ಯಜಿಸಿ ಬರಬೇಕು. ಅದರಿಂದ ಒಂದು ದಿನ ಈ ಕ್ರಮ ಸಂಪೂರ್ಣ ಜೀವನ ಪದ್ಧತಿಯಲ್ಲಿ ಬರುವ ನಿಮಿತ್ತವಾಗಬಲ್ಲದು.

ಸೂರ್ಯನ ಕಿರಣಗಳನ್ನು ಒಂದು ಲೆನ್ಸನ ಮಾಧ್ಯಮದಿಂದ ಕೇಂದ್ರೀಕರಿಸಿ ಅವುಗಳನ್ನು ಹಾಳೆಯ ಮೇಲೆ ಬಿಟ್ಟಾಗ ಆ ಹಾಳೆಯು ಸುಟ್ಟು ಹೋಗುವಂತೆ, ರಾಗ–ದ್ವೇಷ, ಕಷಾಯಗಳು ಭೋಗಗಳ ಸಂಸಾರ ರೂಪದ ಸಾಮಗ್ರಿಗಳಿಂದ ಮನಸ್ಸನ್ನು ದೂರ ಮಾಡಿ ಏಕಾಗ್ರತೆಯೊಂದಿಗೆ ಪರಮಾತ್ಮನ ಧ್ಯಾನದಲ್ಲಿ ನಾವು ಲೀನರಾದಾಗ, ಆತ್ಮನಿಂದ ಹೊರಡುವ ಜ್ಞಾನ–ಧ್ಯಾನ ರೂಪದ ಸಮ್ಯಕ್ ಕಿರಣಗಳು ಕರ್ಮದ ಹಾಳೆಗಳನ್ನು ಸುಡುತ್ತವೆ. ಸಮ್ಯಕ್ ಜ್ಞಾನ ಪ್ರಕಟವಾದಾಗ ಧ್ಯಾನದ ನಿಜವಾದ ಅವಸ್ಥೆ ಆಗ ರೂಪಗೊಳ್ಳುತ್ತದೆ. ಈ ಜ್ಞಾನವು ಸಂಸಾರದಿಂದ ವಿಮುಖನಾಗದೇ ಸಾಧ್ಯವಾಗುವುದಿಲ್ಲ. ಸಾಂಸಾರಿಕ ವಿಷಯ ಭೋಗಗಳ ಜ್ಞಾನ ಭವ, ಭವಗಳ ಭ್ರಮಣೆ ಮಾಡಿಸುತ್ತದೆ ಹಾಗೂ ಆತ್ಮನ ಸಮ್ಯಕ್ ಜ್ಞಾನವು ಮೋಕ್ಷಮಾರ್ಗದ ಮಾರ್ಗ ಪ್ರದರ್ಶನವಾಗುತ್ತದೆ. ತಮ್ಮ ಮನಸ್ಸಿನಿಂದ ಇಂದ್ರಿಯಗಳ ಐದೂ ಕಿಡಕಿಗಳನ್ನು ಮೊದಲು ಮುಚ್ಚುವುದನ್ನು ಕಲಿಯಬೇಕು. ಆಮೆಯು ಯಾವುದೇ ವಿಧದ ಸಂಕಟದ ಅನುಭವವಾದಾಗ ತನ್ನ ಇಂದ್ರಿಯಗಳನ್ನು ತನ್ನಲ್ಲಿ ಎಳೆದುಕೊಂಡು ಅಡಗಿಸಿಕೊಳ್ಳುತ್ತದೆ. ಅದರಂತೆ ನಿಮ್ಮ ಅಂಗಗಳನ್ನು ನಿಯಂತ್ರಿಸುವ ಅಭ್ಯಾಸ ಮಾಡಿರಿ. ಆಗ ನಿಜವಾದ ಭಕ್ತಿ ಪರಮಾತ್ಮನ ಸೇವಕ ಹಾಗೂ ಮತ್ತು ಆತ್ಮ ಉತ್ಥಾನ ಸಾಧಿಸಬಲ್ಲ. ಭಕ್ತಿಗಿಂತ ಮೊದಲು ಸಮ್ಯಕ್ ಜ್ಞಾನವಾಗುವುದು ಅವಶ್ಯವಿದೆ. ಸಾಧು–ಸಂತರ ಆಗಮನವನ್ನು ನಡೆಯುವ–ಅಲೆದಾಡುವ ತೀರ್ಥದಂತೆ ಹಾಗೂ ಅವರ ಪಾವನ ಸಾನಿಧ್ಯವನ್ನು ತಮ್ಮ ಪರಮ ಸೌಭಾಗ್ಯವೆಂದು ಹೇಳಲಾಗಿದೆ. ಯಾರಿಗೆ ಯಾವ ಗುರುವೂ ಇರದಿದ್ದರೆ ಅವರ ಜೀವನವೇ ಪ್ರಾರಂಭವಾಗಿಲ್ಲ. ಗುರುವು ತೋರಿಸದಿದ್ದರೆ, ಪರಮಾತ್ಮನ ದರ್ಶನವೇ ಆಗದು. ಸಂಸಾರಿ ಪ್ರಾಣಿಗಳಿಗೆ ಈ ಕಾರಣದಿಂದಲೇ ಗುರುವಿನ ಸತ್ಸಂಗವನ್ನು ಅಮೃತ ಗಂಗೆಯಲ್ಲಿ ಮುಳುಗಿದಂತೆ ಎಂದು ಹೇಳಲಾಗಿದೆ. ಸಂಸಾರದಲ್ಲಿ ಉದಾಸೀನತೆಯ ಅವಶ್ಯಕತೆ ಯಾಕೆ ಇದೆ

ಎನ್ನುವುದನ್ನು ಅವರಿಂದ ನಾವು ಸರಿಯಾಗಿ ತಿಳಿದು ಆತ್ಮನ ಉತ್ಥಾನವನ್ನು ಮಾಡಿಕೊಳ್ಳ ಬಹುದು. ಪರಮಾತ್ಮನ ನಿಜವಾದ ದಾಸರಾದವರು ಒಂದಲ್ಲ ಒಂದು ದಿನ 'ಸೋಹಂ' ಅರ್ಥಾತ್ ಪರಮಾತ್ಮನಾಗುವ ಮಾರ್ಗದಲ್ಲಿ ಸಾಗಬಲ್ಲರು ಹಾಗೂ ಒಂದಲ್ಲ ಒಂದು ದಿನ 'ಅರ್ಹಮ್' ಅರ್ಥಾತ್ ಸ್ವಯಂ ಮೋಕ್ಷ ಪಡೆದು ತಮ್ಮ ಆತ್ಮನನ್ನು ಪರಮಾತ್ಮನನ್ನಾಗಿ ಮಾಡಬಲ್ಲರು ಎಂಬುದು ಗಮನದಲ್ಲಿರಲಿ. ಮೋಕ್ಷವೇ ಪರಮ ತತ್ತ್ವದ ಪ್ರಾಪ್ತಿಯಾಗಿದೆ.

# 12. ಸಮ್ಯಕ್ ಧ್ಯಾನವೇ ಪರಮಾತ್ಮನನ್ನಾಗಿಸುತ್ತದೆ

ಇಂದು ಜಗತ್ತಿನಲ್ಲಿ ಧ್ಯಾನದ ಬಗ್ಗೆ ಬಹಳ ಕಲರವವಾಗುತ್ತಲಿದೆ. ಅಲ್ಲಲ್ಲಿ ಧ್ಯಾನದ ಶಿಬಿರಗಳು ಏರ್ಪಾಟಾಗುತ್ತಿರುತ್ತವೆ. ಧ್ಯಾನದ ಗಾಳಿ ವಿವಿಧ ರೀತಿಯ ತರಗತಿಗಳಿಂದ ಹಾಗೂ ಅವುಗಳಿಂದ ಭಿನ್ನಭಿನ್ನ ರೀತಿಯಲ್ಲಿ ಆಯೋಜನವಾಗುತ್ತಿದೆ. ಯಾಕೆಂದರೆ ಇಂದು ಮನುಷ್ಯ ಬಹಳಷ್ಟು ಒತ್ತಡ ಹಾಗೂ ಅಶಾಂತಿಯ ನೆಲೆಯಲ್ಲಿ ಸಾಗುತ್ತಿದ್ದಾನೆ, ಆದ್ದರಿಂದ ಧ್ಯಾನವು ಆತನಿಗೆ ಮಾನಸಿಕ ಶಾಂತಿಯನ್ನು ನೀಡುತ್ತದೆ. ಆದರೆ ಪರಮಾತ್ಮರಾಗುವವರು ಅರ್ಥಾತ್ ಪರಮ ಆತ್ಮಸುಖವನ್ನು ಪಡೆಯುವವರು ಹೇಗೆ ಅದನ್ನು ಸಾಧಿಸಿದರು ಎಂದು ಯಾವಾಗಲಾದರೂ ಯೋಚಿಸಿದ್ದೀರಾ? ನೀವು ಜಿನಮಂದಿರಕ್ಕೆ ಹೋದಾಗ ನಿಮಗೆ ಅಲ್ಲಿ ಎಲ್ಲೆಡೆ ವೀತರಾಗ ಭಗವಂತನು ಧ್ಯಾನಸ್ಥ ಅವಸ್ಥೆಯಲ್ಲಿಯೇ ಕಂಡುಬರುತ್ತಾನೆ. ಕೆಲವರು ಪದ್ಮಾಸನದಲ್ಲಿದ್ದರೆ ಇನ್ನು ಕೆಲವರು ಖಡ್ಗಾಸನ ಮುದ್ರೆಯಲ್ಲಿ ಕಂಡು ಬರುತ್ತಾರೆ. ಅವರ ಆ ಶಾಂತಚಿತ್ತ ಧ್ಯಾನಸ್ಥ ಸ್ವರೂಪವು ನಮಗೆ ಸಂಸಾರದ ಆಗುಹೋಗುಗಳಿಂದ ಮುಕ್ತಿಯ ಮಾರ್ಗ ಇದೇ ಎಂಬ ಬೋಧನೆಯಾಗುತ್ತದೆ. ಸಮ್ಯಕ್ ಧ್ಯಾನದಿಂದಲೇ ಪರಮಾತ್ಮ ನಾಗುತ್ತಾನೆಂಬುದು ಗಮನದಲ್ಲಿರಲಿ. ಧ್ಯಾನವೇ ಸರ್ವೋತ್ತಮ ತಪವಾಗಿದೆ. ಅದರ ಮಾಧ್ಯಮದಿಂದಲೇ ನಾವು ನಮ್ಮ ಶರೀರದ ಗುಲಾಮಿತನವನ್ನು ಬಿಟ್ಟು ಆತ್ಮ–ತತ್ತ್ವದ ಅನ್ವೇಷಣೆ ಮಾಡಬಲ್ಲೆವು. ಜಗತ್ತಿನಲ್ಲಿ ಆಗಿರುವ ಎಲ್ಲ ಮಹಾಪುರುಷರು ಧ್ಯಾನದ ಮೂಲಕವೇ ತಮ್ಮ ಅಂತರಯಾತ್ರೆಯನ್ನು ಮಾಡಿ ಮಹಾತ್ಮರಾಗಿದ್ದಾರೆ, ಜಗತ್ತಿನಲ್ಲಿ ಇಂದಿಗೂ ಸಹ ಸಾಧು–ಸಂತರು, ಋಷಿ–ಮಹರ್ಷಿ, ತಪಸ್ವಿ, ತ್ಯಾಗಿ ಮತ್ತು ಸಂಯಮಿ ಆತ್ಮಗಳು ಧ್ಯಾನ ಹಾಗೂ ಸಾಮಾಯಿಕದಿಂದಲೇ ತಮ್ಮ ಕರ್ಮಗಳ ನಿರ್ಜರೆ ಮಾಡುತ್ತಿದ್ದಾರೆ. ಗೃಹಸ್ಥ ಜೀವನದಲ್ಲಿ ಇರುವವರು ಸಹ ಧ್ಯಾನವನ್ನು ಶುದ್ಧ ಹಾಗೂ ಸಾತ್ವಿಕತೆಯಿಂದ ಮಾಡಿದರೆ ಅವರು ಸಹ ನಿರೋಗಿ ಕಾಯದಿಂದಲೇ ಆತ್ಮ ಶಾಂತಿಯನ್ನು ಪಡೆಯಬಲ್ಲರು.

ಧ್ಯಾನ ಮಾಡುವುದಕ್ಕಿಂತ ಮುಂಚೆ ನಾವು ಅದಕ್ಕಾಗಿ ಸಹಯೋಗಿಯಾಗಿರುವ ಸಾಮಗ್ರಿಗಳೇನಿವೆ, ಇದನ್ನು ತಿಳಿಯುವುದು ಅತ್ಯಂತ ಅವಶ್ಯಕವಾಗಿದೆ, ಆಗಲೇ ನಮ್ಮ

ಧ್ಯಾನವು ಪವಿತ್ರ ಹಾಗೂ ಪಾವನವಾಗಬಲ್ಲದು. ಧ್ಯಾನಕ್ಕಾಗಿ ದ್ರವ್ಯ ಕ್ಷೇತ್ರ, ಕಾಲ ಹಾಗೂ ಭಾವದ ಶುದ್ಧಿ ತೀರಾ ಅವಶ್ಯವಾಗಿದೆ. ಜನರ ಆಹಾರ ಮಾಂಸಾಹಾರವೇ ಆಗಿದ್ದರೆ, ಮಧ್ಯಪಾನ ಮಾಡುವವರಾಗಿದ್ದರೆ, ಮಾದಕ ವಸ್ತುಗಳಾದ ಬೀಡಿ, ಸಿಗರೇಟು, ಗುಟಕಾ ಮುಂತಾದವುಗಳನ್ನು ಸೇವಿಸುತ್ತಿದ್ದರೆ. ರಾತ್ರಿಭೋಜನ ಹಾಗೂ ಕಂದಮೂಲ ಸೇವನೆ ಮಾಡುತ್ತಿದ್ದರೆ ಅವರ ಧ್ಯಾನ ಹೇಗೆ ತಾನೇ ಪವಿತ್ರವಾದೀತು? ರಾಗ–ದ್ವೇಷ ತುಂಬಿರುವವರಲ್ಲಿ ಮಾನ ಕಷಾಯ ಹೊಂದಿರುವವರಲ್ಲಿ, ಇಂದ್ರಿಯ ಸಂಯಮ ಇರದಿರುವವರಲ್ಲಿ, ಧರ್ಮದಲ್ಲಿಯೂ ರಾಜಕೀಯ ಮಾಡುವವರು, ಭೋಗಗಳಲ್ಲಿ ಲಿಪ್ತರಾಗಿರುವವರು ಹಿಂಸಕ ಕೃತ್ಯ ಮಾಡುವವರು– ಇಂತಹವರು ಧ್ಯಾನದಿಂದ ಎಂದಿಗೂ ಶಾಂತಿ ಪಡೆಯಲಾರರು. ದಯಾಭಾವ ಹೊಂದಿರುವವರು, ಅಹಿಂಸಕರು, ಮಾನವೀಯತೆ ಹೊಂದಿರುವವರು ಗುರುಗಳ ಬಗ್ಗೆ ಶ್ರದ್ಧಾಭಾವ ಹೊಂದಿರುವವರು, ಪರಮಾತ್ಮನ ಬಗ್ಗೆ ಸಮರ್ಪಣ ಭಾವ ಹೊಂದಿರುವಂತಹ ಆತ್ಮಗಳೇ ಸದ್ಗುಣಗಳಿಂದ ಪೂರ್ಣರಾಗಿ ತಮ್ಮ ಧ್ಯಾನದಲ್ಲಿ ಲೀನರಾಗ ಬಲ್ಲರು. ಜಗತ್ತಿನ ಎಲ್ಲ ಪ್ರಾಣಿಗಳ ಬಗ್ಗೆ ಕರುಣೆ ಹೊಂದಿ, ಅಖಂಡ ಬ್ರಹ್ಮಚರ್ಯವನ್ನು ಪಾಲಿಸುತ್ತಾ, ಮೋಹ–ಮಾಯಗಳಿಂದ ದೂರವಿದ್ದು ನಿಗ್ರಂಥ ಅವಸ್ಥೆ, ಸಂಸಾರೀ ವೈಭವಗಳನ್ನು ತಿರಸ್ಕರಿಸುವವರೇ ಸಮ್ಯಕ್ ಧ್ಯಾನದ ಎತ್ತರವನ್ನು ತಲುಪ ಬಲ್ಲರು. ಇಂತಹ ಭವ್ಯ ಆತ್ಮಗಳೇ ಆತ್ಮನನ್ನು ಪರಮಾತ್ಮರನ್ನಾಗಿ ಮಾಡಬಲ್ಲರು.

ಕಷ್ಟದಿಂದ ಪಡೆದ ವಸ್ತುಗಳು ಹೆಚ್ಚು ಸುಖ ನೀಡುತ್ತವೆ. ನಾವು ಎಷ್ಟು ಕಷ್ಟಗಳನ್ನು ಸಹಿಸಿಕೊಳ್ಳುತ್ತೇವೆಯೋ ಅಷ್ಟೇ ಹೆಚ್ಚು ಸುಖ ದೊರೆಯುತ್ತದೆ ಆದರೆ ಇಂದು ಮನುಷ್ಯ ಯಾವುದೇ ರೀತಿಯ ಕಷ್ಟಗಳನ್ನು ಹೊಂದಲು ಬಯಸುವುದಿಲ್ಲ. ಆದ್ದರಿಂದಲೇ ಆತನ ಶರೀರ ರೋಗಗ್ರಸ್ತವಾಗುತ್ತಲಿದೆ. ಓರ್ವ ರೋಗಿ ವ್ಯಕ್ತಿಯ ಮನಸ್ಸು ಹೇಗೆ ಶಾಂತಿಯನ್ನು ಹೊಂದಬಲ್ಲದು? ಆತನ ಧ್ಯಾನ ಎಂದಿಗೂ ಸುಖದ ಅನುಭವವನ್ನು ಕೊಡುವುದಿಲ್ಲ. ಶರೀರದ ವ್ಯವಸ್ಥೆಗಳು ಹಾಗೂ ಸಂಸಾರದ ವಸ್ತುಗಳನ್ನೇ ಹೆಚ್ಚಿಸುವಲ್ಲಿ ಮನುಷ್ಯ ನಿರಂತರ ಲೀನನಾಗುತ್ತಿರುವಾಗ ಸಂಪೂರ್ಣ ಜಗತ್ತಿನಲ್ಲಿ ಅಶಾಂತಿ ಹರಡಿದೆ. ಆಹಾರವೇ ತಾಮಸಿಕವಾಗುತ್ತಿರುವಾಗ ಆತನ ಧ್ಯಾನ ಸಾಧನೆ ಹೇಗೆ ಸಾತ್ವಿಕವಾಗಬಲ್ಲದು? ವಿಷಯ ಭೋಗಗಳಲ್ಲಿಯೇ ಸುಖವೆಂದು ಭಾವಿಸುವವರು ಎಂದಿಗೂ ಧ್ಯಾನದ ಮಹತ್ವವನ್ನು ತಿಳಿಯಲಾರರು. ಧ್ಯಾನವೊಂದು ಸರ್ವಶ್ರೇಷ್ಠ ತಪವಾಗಿದೆ ಹಾಗೂ ಅದನ್ನು ಪವಿತ್ರತೆಯೊಂದಿಗೆ ಅಂಗೀಕಾರ ಮಾಡದಿದ್ದರೆ ಅದು ಶಾಂತಿಯನ್ನು ನೀಡಲು ಸಹಾಯಕವಾಗದು; ಮುಕ್ತಿಯ ಮೂಲ ಕಾರಣವು ಸಹ ಆತ್ಮಧ್ಯಾನವೇ ಆಗಿದೆ. ಆದರೆ ಅದರ ಮೂಲ ಸ್ವರೂಪವನ್ನು ತಿಳಿಯದೇ ಮತ್ತು ಅದಕ್ಕನುಕೂಲಕರ ಜೀವನ ಪದ್ಧತಿಯನ್ನು ಅಳವಡಿಸಿಕೊಳ್ಳದೇ ಎಂದಿಗೂ ಯಾರಿಗೂ ಮುಕ್ತಿ ಸಿಕ್ಕಿಲ್ಲ. ಉತ್ಕೃಷ್ಟ ಧ್ಯಾನದ ಅವಸ್ಥೆಯಲ್ಲಿ ಮಾತುಕತೆಯಷ್ಟೇ ಅಲ್ಲ ಅಂತರ್ಜಲವು ಸಹ ಬಿಟ್ಟು ಹೋಗುತ್ತದೆ. ಇದರಿಂದ ಧ್ಯಾನಾವಸ್ಥೆಯು ಸಮಸ್ತ ಜಗತ್ತಿನ ಸರ್ವೋತ್ಕೃಷ್ಟ ಅವಸ್ಥೆ ಎಂದು ಸಿದ್ಧವಾಗುತ್ತದೆ.

ಧ್ಯಾನದಲ್ಲಿಯೂ 16 ವಿಭಿನ್ನ ಭೇದಗಳಿವೆ. ಶುಕ್ಲಧ್ಯಾನದ ಅವಸ್ಥೆ ಇರುವಾಗ ಅಷ್ಟ ಕರ್ಮಗಳು ಸಂಪೂರ್ಣ ನಾಶವಾಗಿ ಸರ್ವಜ್ಞತೆಯು ಪ್ರಾಪ್ತವಾಗುತ್ತದೆ. ಯಾಕೆಂದರೆ ಈಗಿನ ಪಂಚಮಕಾಲದಲ್ಲಿ ಶುಕ್ಲ ಧ್ಯಾನವು ಬಹಳ ಕಠಿಣವಾಗಿದೆ. ಆದ್ದರಿಂದ ಧರ್ಮಧ್ಯಾನದಿಂದ ನಮ್ಮ ಆತ್ಮನನ್ನು ನಿರ್ಮಲ ಹಾಗೂ ಪವಿತ್ರವನ್ನಾಗಿ ಮಾಡಬಹುದು. ನಾವು ಆರ್ತಧ್ಯಾನ ಹಾಗೂ ರೌದ್ರಧ್ಯಾನದಿಂದ ರಕ್ಷಿಸಿಕೊಳ್ಳಬೇಕಾಗಿದೆ ಯಾಕೆಂದರೆ ಇವುಗಳಿಂದ ಸಂಸಾರದ ಪರಿಭ್ರಮಣೆ ಇನ್ನೂ ಹೆಚ್ಚಾಗುತ್ತದೆ. ಆದ್ದರಿಂದ ಧ್ಯಾನಕ್ಕಿಂತ ಮೊದಲು ನಮ್ಮ ಜೀವನ ಪದ್ಧತಿಯನ್ನು ಧರ್ಮಮಯವನ್ನಾಗಿ ಮಾಡ ಬೇಕಾಗುತ್ತದೆ. ಆಗಲೇ ಮನಸ್ಸು, ಬುದ್ಧಿ ಮತ್ತು ಚಿತ್ತ ಪಾವನ ಹಾಗೂ ಪವಿತ್ರವಾಗಬಲ್ಲವು. ಆಗಲೇ ನಮ್ಮ ಧ್ಯಾನ ಸ್ವಾಭಾವಿಕ ರೂಪದಿಂದ ಶರೀರ ಮತ್ತ ಮನಸ್ಸು ಎರಡನ್ನೂ ನಿರ್ಮಲ ಮಾಡುತ್ತದೆ ಆತ್ಮನಿಗೆ ಇರುವ ವಾಸ್ತವಿಕ ಶಾಶ್ವತ ಸುಖವು ಸಹ ಆಗ ಪ್ರಾಪ್ತವಾಗುತ್ತದೆ.

## 13. ಶರೀರದೊಂದಿಗೆ ಆತ್ಮನ ಉಪಚಾರದ ಅವಶ್ಯಕತೆ ಇದೆ

ನಮ್ಮ ಶರೀರವನ್ನು ಆರೋಗ್ಯಕರವಾಗಿಡಲು ಹಾಗೂ ರೋಗದ ನಿದಾನ ಮಾಡಿಸಲು ಸಾಮಾನ್ಯವಾಗಿ ಪ್ರತಿಯೊಬ್ಬರಿಗೂ ಚಿಂತೆ ಇರುತ್ತದೆ ಆದರೆ ಆತನು ತನ್ನ ಆತ್ಮನಿಗೆ ಸಂಬಂಧಿಸಿದಂತೆ ಯೋಚಿಸುವುದೇ ಇಲ್ಲ. ಈ ಕಾರಣದಿಂದಾಗಿ ಜಗತಿನಲ್ಲಿ ಪಾಪ ಪ್ರವೃತ್ತಿಗಳು ಹೆಚ್ಚಾಗುತ್ತಲಿವೆ. ಮನುಷ್ಯನಿಗೆ ಉಪಚಾರ ಮಾಡಿಸುವ ಬಹಳ ಅವಶ್ಯಕವಿದೆ. ಆಗ ಸುಖ-ಶಾಂತಿಯಿಂದ ಜೀವನದ ನಿರ್ವಹಣೆ ಮಾಡ ಬಹುದು.

ರೋಗಿಗೆ ಉಪಚಾರ ಮಾಡಿಸಲು ಡಾಕ್ಟರ ಅಥವಾ ವೈದ್ಯರ ಬಳಿಗೆ ಹೋಗ ಬೇಕಾಗುವಂತೆ ನಮ್ಮ ಆತ್ಮನ ಮೇಲೆ ಅಂಟಿರುವ ಭವ-ಭವಗಳ ಅಶುಭ ಕರ್ಮಗಳಿಂದ ಬಿಡುಗಡೆ ಪಡೆಯಲು ಸಂತರ ಬಳಿ ಹೋಗ ಬೇಕಾಗುತ್ತದೆ. ಸ್ವತಃ ತಮ್ಮ ಕರ್ಮಗಳನ್ನು ನಿರ್ಜರೆ ಮಾಡಲು ಬಹಳ ಕಠಿಣ ಸಾಧನೆ ಮಾಡುತ್ತಿರುವವರೇ ಆತ್ಮನ ಸರಿಯಾದ ಉಪಚಾರವನ್ನು ಹೇಳಬಲ್ಲರು. ಶರೀರ ನಿರೋಗಿಯಾಗದಿದ್ದರೆ ಏನೂ ತೊಂದರೆ ಇಲ್ಲಾ, ಆದರೆ ಆತ್ಮನು ಈ ಮನುಷ್ಯ ಜನ್ಮದಲ್ಲಿಯೂ ಉಪಚಾರ ಮಾಡದಿದ್ದರೆ ಮುಂದೆ ಅಂತಹ ಸಂದರ್ಭ ದೊರೆಯುತ್ತದೋ. ಇಲ್ಲವೋ ಎನ್ನುವುದು ಗೊತ್ತಿಲ್ಲ ಎನ್ನುವುದನ್ನು ಗಮನದಲ್ಲಿಡಬೇಕು.

# 14. ಗಾಂಧೀಜೀಯವರ ಮೂರು ಮಂಗಗಳು ಇಂದಿಗೂ ಪ್ರೇರಕ

ಮಹಾತ್ಮಾಗಾಂಧಿ ಈ ನಶ್ವರ ಸಂಸಾರದಲ್ಲಿರದಿದ್ದರೂ ಅವರ ಆದರ್ಶಗಳು ಇಂದಿಗೂ ಜೀವಂತವಾಗಿವೆ, ಅವರ ಮೂರು ಮಂಗಗಳ ಸಂದೇಶ ಮಹತ್ವಪೂರ್ಣ ಹಾಗೂ ಪ್ರೇರಕವಾಗಿದ್ದು ಅವುಗಳನ್ನು ಜೀವನದಲ್ಲಿ ಆಳವಾಗಿ ತಿಳಿದು ಅಳವಡಿಸಿ ಕೊಂಡರೆ ಮಾನವ ಜೀವನವೇ ಸಫಲವಾಗಿ ಬಿಡುತ್ತದೆ. ಗಾಂಧೀಜೀಯವರ ಮೂರು ಮಂಗಗಳು ಕೆಟ್ಟದ್ದನ್ನು ನೋಡಬೇಡ, ಕೆಟ್ಟದ್ದನ್ನು ಹೇಳಬೇಡ ಹಾಗೂ ಕೆಟ್ಟದ್ದನ್ನು ಕೇಳಬೇಡ ಎಂಬ ಶಿಕ್ಷಣವನ್ನು ನೀಡುತ್ತದೆ. ಆದರೆ ವಾಸ್ತವಿಕವಾಗಿ ಅವರ ಈ ಪ್ರೇರಕ ಸಂದೇಶಗಳ ಉಲ್ಲಂಘನೆ ಹೆಚ್ಚಾಗುತ್ತಲಿದೆ. ಆದ್ದರಿಂದಲೇ ಜಗತ್ತಿನಲ್ಲಿ ಅಶಾಂತಿ, ಜಗಳ, ಒತ್ತಡ ಹಿಂಸೆ ಮತ್ತು ಪಾಪಾಚಾರಗಳಲ್ಲಿ ವೃದ್ಧಿಯಾಗುತ್ತಲಿದೆ. ಸಮಾಜ ವಿರಲಿ ಅಥವಾ ರಾಷ್ಟ್ರವಿರಲಿ, ನಮ್ಮ ಮನೆ ಇರಲಿ ಅಥವಾ ಕುಟುಂಬವಿರಲಿ ಅವುಗಳಲ್ಲಿ ಅಶಾಂತಿಯ ಮೂಲಕಾರಣ ನಾವಾಡುವ ಮಾತುಗಳಲ್ಲಿ ವಿವೇಕ ಇಲ್ಲದಿರುವುದಾಗಿದೆ. ಭಾಷೆಯೇ ಕುಟಿಲತೆಯಿಂದ ಕೂಡಿದ್ದರೆ, ಹಾಗೂ ರಾಗ–ದ್ವೇಷ ಹೆಚ್ಚಿಸುವಂತಹದಾಗಿರುವಂತಿದ್ದರೆ, ಮನೆ–ಮನೆಗಳಲ್ಲಿ ಮಹಾಭಾರತವಿರುತ್ತದೆ. ಯೋಚಿಸಿ ತಿಳಿದು ವಿವೇಕ ಹಾಗೂ ವಿನಯದೊಂದಿಗೆ ಮಾತನಾಡಿದರೆ ವಚನ ಸಿದ್ಧಿಯು ಯೋಗವು ಆಗಬಲ್ಲದು. ನಾವು ಕೆಟ್ಟದ್ದನ್ನು ಮಾತನಾಡಿದರೆ ಮನಸ್ಸಿನಲ್ಲಿ ಕಲುಷಿತ ಉತ್ಪನ್ನವಾಗುತ್ತದೆ ಹಾಗೂ ಅಲ್ಲಿ ಮನಸ್ಸು ತರಹ–ತರಹದ ಅಪರಾಧ ಹಾಗೂ ಪಾಪ ಪ್ರವೃತ್ತಿಗಳಿಗೆ ಕಾರಣವಾಗುತ್ತದೆ. ಇದಕ್ಕಾಗಿಯೇ ಧರ್ಮ ಆಚರಣೆಗಳನ್ನು ಜೀವನದ ಎಲ್ಲಕ್ಕಿಂತ ದೊಡ್ಡ ಸಾಧ್ಯಗಳೆಂದು ಹೇಳಿದೆ. ಧರ್ಮದ ಜೊತೆ ಇರುವುದರಿಂದಲೇ ಉತ್ತಮ ಸಂಸ್ಕಾರ ರೂಪಗೊಳ್ಳುತ್ತದೆ. ಮನ, ವಚನ, ಕಾಯ ಮೂರರಲ್ಲಿಯೂ ನಿರ್ಮಲತೆ ಪವಿತ್ರತೆ ಸಹಜತೆ ಹಾಗೂ ಸರಳತೆ ಬರಬಲ್ಲವು. ಆಗ ನಾವು ಪರಮಾತ್ಮನ ಶುದ್ಧ ಧ್ಯಾನ, ಆಧ್ಯಾತ್ಮಿಕ ಭಕ್ತಿ ಸಹಗುರುಜನರ ಬಗ್ಗೆ ಸಮರ್ಪಿತರಾಗಿ ನಮ್ಮನ್ನು ಧ್ಯಾನಿಯನ್ನಾಗಿ ಮಾಡಿಕೊಳ್ಳಬಹುದು.

ವ್ಯಕ್ತಿ ಹೆಚ್ಚು ಕೆಟ್ಟದ್ದನ್ನು ನೋಡುತ್ತಿದ್ದರೆ ಹಾಗೂ ಕೆಟ್ಟ ಮಾತುಗಳನ್ನೇ ಹೆಚ್ಚಾಗಿ ಕೇಳುತ್ತಿದ್ದರೆ ಆಗ ಅವುಗಳ ದುಷ್ಪರಿಣಾಮಗಳು ಎದುರಿಗೆ ಕಾಣುತ್ತಿರುತ್ತವೆ. ಆಸೆ, ಸ್ವಾರ್ಥ, ಸುಳ್ಳು, ಕಪಟತನ, ಮೋಸ–ಮಾಯಾಚಾರಗಳು. ಈ ಕಾರಣದಿಂದಾಗಿ ಹೆಚ್ಚಾಗುತ್ತಲಿವೆ. ಆಹಾರ–ಪಾನೀಯಗಳಿರಲಿ, ಅಥವಾ ವೇಷ, ಭೂಷಣಗಳಿರಲಿ ಅವೆಲ್ಲವೂ ವಿಕೃತವಾಗಲು ಮೂಲಕಾರಣ ಇವೆ ಆಗಿವೆ. ಮನುಷ್ಯ ಸಾಮಾನ್ಯವಾಗಿ ಒಳ್ಳೆಯದಿರಲಿ ಅಥವಾ ಕೆಟ್ಟದ್ದಾಗಿರಲಿ ಆತನು ಅನ್ಯರಲ್ಲಿ ನೋಡಿ ಅದನ್ನು ಸ್ವೀಕರಿಸುತ್ತಾನೆ. ಯಾಕೆಂದರೆ ಕೆಟ್ಟ ಸಂಗತಿಗಳು ಹೆಚ್ಚಾಗಿ ಬೆಳೆಯುತ್ತಲಿವೆ ಹಾಗೂ ಅವುಗಳಲ್ಲಿ ನಿರಂತರವಾಗಿ ಪಾಪಗಳ ವೃದ್ಧಿಯಾಗುತ್ತಲಿದೆ. ಈಗಂತೂ ಶರೀರವನ್ನು ಅಲಂಕರಿಸುವ ಪ್ರಯತ್ನ ಎಷ್ಟರಮಟ್ಟಿಗೆ ಸಾಗಿದೆ ಎಂದರೆ ಅದೊಂದು ಅಂಗಾಂಗ

ಪ್ರದರ್ಶನವಾಗಿ ಜನರು ಚಪ್ಪಾಳೆ ಹೊಡೆಯುತ್ತಿದ್ದಾರೆ, ಹೆಚ್ಚಾಗಿ ಅಪಸಂಸ್ಕೃತಿಯನ್ನು ಹರಡುವಲ್ಲಿ ಮಹಿಳೆಯರು ಲಜ್ಜೆ ಹಾಗೂ ನಾಚಿಕೆ ಕೊನೆಗೊಂಡಿದೆ ಎನ್ನುವ ಹಾಗೇ ಸಂಸ್ಕಾರ ಹೀನರಾಗುತ್ತಿದ್ದಾರೆ. ಹೀಗಿರುವಾಗ ನಮ್ಮ ಧರ್ಮ ಸಂಸ್ಕೃತಿ ಹೇಗೆ ಉಳಿದೀತು? ಮೊದಲು ಮಹಿಳೆಯರು ತಮ್ಮ ಪತಿಗಾಗಿಯೇ ಶೃಂಗಾರ ಮಾಡಿಕೊಳ್ಳುತ್ತಿದ್ದರು. ಆದರೆ ಈಗ ಮನೆಯಿಂದ ಹೊರಗೆ ಹೊರಟಾಗ ಫ್ಯಾಶನ್ ನಾಚುವಂತಹ ಪ್ರದರ್ಶನ ಮಾಡುತ್ತಾರೆ. ಮನೆ ಒಳಗೆ ಇರುವಾಗ ಫ್ಯಾಶನ್ ಮಾಡಿಕೊಳ್ಳದೇ ಮನೆಯಿಂದ ಹೊರ ಬರುವಾಗ, ಉತ್ತೇಜನ ಉತ್ಪನ್ನ ಮಾಡುವಂತಹ ವಿವಿಧ ರೀತಿಯ ಹೊಳಪಿನ ಅಸಭ್ಯತನದ ಫ್ಯಾಶನ್ ಮಾಡಿ ಕೊಳ್ಳುತ್ತಾರೆ. ಮನೆಯ ಹೊರಗೆ ಫ್ಯಾಶನ್ ಪ್ರದರ್ಶನ ಯಾರಿಗಾಗಿ? ಹೀಗಿರುವಾಗ ಧರ್ಮಧ್ಯಾನ ಹೇಗಾದೀತು? ಸಂಸ್ಕೃತಿ ಹೇಗೆ ತಾನೇ ಬದುಕೀತು?

ಜೀವನದಲ್ಲಿ ಯಾವುದೇ ರೀತಿಯ ಮರ್ಯಾದೆ ಇರದಿರುವಾಗ ಭಕ್ತಿ, ಧ್ಯಾನ, ಸಾಮಾಯಿಕದ ಸ್ವರೂಪ ಹೇಗೆ ತಾನೇ ಇರಬಲ್ಲವು? ಉಣ್ಣುವ, ಕುಡಿಯುವ, ಮಾತನಾಡುವ, ನೋಡುವ, ಕೇಳುವ, ಗೃಹಸ್ಥ ಧರ್ಮ ಪಾಲನೆ ಮಾಡುವ ವಿಷಯಗಳಲ್ಲಿ ವಿವೇಕವೇ ನಷ್ಟವಾಗಿರುವಾಗ ಸಮ್ಯಕ್ ಜ್ಞಾನ ಹಾಗೂ ಸಮ್ಯಕ್ ಧ್ಯಾನ ಆಗಲಾರವು. ಜೀವನವನ್ನು ಸಾರ್ಥಕ ಪಡಿಸ ಬೇಕೆಂದರೆ ಹಾಗೂ ಆತ್ಮತತ್ತ್ವದ ಮಹತ್ವವನ್ನು ತಿಳಿಯ ಬೇಕೆಂದರೆ, ಸಮ್ಯಕ್ ಧರ್ಮದ ಇತಿ ಮಿತಿಗಳನ್ನು ಜೀವನದಲ್ಲಿ ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳಲೇ ಬೇಕು. ಧಾರ್ಮಿಕ ಮರ್ಯಾದೆಗಳಿಂದ ಜೀವನದಲ್ಲಿ ಅನುಕಂಪ ಭಾವದ ಉತ್ಪತ್ತಿಯಾಗುತ್ತದೆ. ಸಮತಾಭಾವ ಜಾಗೃತವಾಗುತ್ತದೆ. ಜೀವನವು ಸರಳ, ಸಹಜ, ವಿನಮ್ರವಾಗುತ್ತದೆ. ಸರಳ ಹಾಗೂ ಸಾತ್ವಿಕವಿಚಾರಧಾರೆಗಳ ತರಂಗಗಳು ಹೆಚ್ಚಾಗತೊಡಗುತ್ತದೆ. ಮತ್ತೆ ಜೀವನದಲ್ಲಿ ಗೌರವ ತೋರುವ ಹಾಗೂ ಸಮರ್ಪಣೆ ಭಾವ ಸ್ವತಃ ತಾನೇ ಬಂದು ಬಿಡುತ್ತದೆ. ಸದ್ಗುಣಗಳಿಂದ ಪರಿಪೂರ್ಣರಾದವರೇ ಭಗವಂತ ಸದ್ಗುರು ಹಾಗೂ ಪೂಜ್ಯ ಪುರುಷರ ಚರಣಗಳಿಗೆ ವಂದಿಸಬಲ್ಲರು. ಫಲಗಳಿಂದ ಕೂಡಿದ ಮರವೇ ವಿನಯದಿಂದ ಬಾಗಿದಂತೆ ತೋರುತ್ತದೆ. ಇಂತಹ ವಿನಯ ಹಾಗೂ ಜ್ಞಾನದ ಅವಸ್ಥೆಯನ್ನು ಹೊಂದಿರುವವರೇ ಒಂದು ದಿನ ತ್ಯಾಗ–ವೈರಾಗ್ಯಗಳ ಮಹತ್ವವನ್ನು ತಿಳಿದು ಮೋಕ್ಷದ ದಾರಿಯಲ್ಲಿ ಹೊರಡುತ್ತಾರೆ. ಗಾಂಧೀಜಿಯ ಮಂಗಗಳ ಆವಶ್ಯಕತೆ ಆಗ ಅವರಿಗೆ ಇರುವುದಿಲ್ಲ. ಅವರು ಅವುಗಳಿಗಿಂತ ಬಹಳಷ್ಟು ಮುಂದೆ ಸಾಗಿರುತ್ತಾರೆ.

# 15. ಯಾರ ವರ್ತಮಾನ ಸರಿ ಇದೆಯೋ ಅವರ ಭವಿಷ್ಯವೂ ಸರಿ

ಜಗತ್ತಿನ ಯಾವುದೇ ಜೀವವಿರಲಿ ಅದಕ್ಕೆ ದುಃಖ–ಸುಖ ಅದರ ಕರ್ಮಗಳ ಅನುಸಾರವಾಗಿರುತ್ತದೆ. ವಾಸ್ತವಿಕ ಸಂಗತಿ ಎಂದರೆ ಯಾವುದೇ ಜೀವ ದುಃಖವನ್ನು ಬಯಸುವುದಿಲ್ಲ. ಆದರೆ ಕರ್ಮದ ಅಧೀನದಲ್ಲಿರುವ ಅದಕ್ಕೆ ಒಳ್ಳೆಯ–ಕೆಟ್ಟ ಎಲ್ಲ ಪರಿಸ್ಥಿತಿಗಳನ್ನು ಸಹಿಸಲೇ ಬೇಕಾಗುತ್ತದೆ. ಪ್ರಕೃತಿಯ ಈ ಒಂದು ವ್ಯವಸ್ಥೆಯಲ್ಲಿ ಯಾರೂ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ. ಪರಮಾತ್ಮನು ಸಹ ಯಾರದೇ ದುಃಖ ಸುಖಗಳನ್ನು ಕಡಿಮೆ–ಹೆಚ್ಚು ಮಾಡಲಾಗುವುದಿಲ್ಲ; ಆತ ಸ್ವತಃ ಕಷ್ಟ–ಸುಖಗಳನ್ನು ಸಹಿಸಿಯೇ ಮಹಾನ್ ಆಗಿದ್ದಾನೆ. ಕರ್ಮಗಳು ಆತನನ್ನೂ ಸಹ ಬಿಟ್ಟಿಲ್ಲ. ಅವರು ಮಹಾವೀರರಾಗಿರಲಿ, ಪಾರ್ಶ್ವನಾಥರಾಗಿರಲಿ, ಕೃಷ್ಣನಾಗಿರಲಿ–ಏಸುಕ್ರಿಸ್ತನಾಗಿರಲಿ ಅಥವಾ ಗುರುನಾನಕ, ಇವರೆಲ್ಲರೂ ಸಹ ವಿಪರೀತ ಪರಿಸ್ಥಿತಿಗಳನ್ನು ಎದುರಿಸಿರಬೇಕು. ಕಷ್ಟಗಳಲ್ಲಿ ಮುಗಳ್ನಗುತ್ತಾ ಇರುವವರನ್ನೇ ಜಗತಿನಲ್ಲಿ ಇರುವ ಮಾನವರು ಅವರ ಚರಣಗಳಿಗೆ ನಮಿಸುತ್ತಾರೆ. ಅವರು ಉಪಸರ್ಗಗಳಿಂದ ಎಂದಿಗೂ ವಿಚಲಿತ ಅಥವಾ ಭಯಭೀತರಾಗುವುದಿಲ್ಲ. ತಮ್ಮ ಧರ್ಮದ ಮಾರ್ಗದಲ್ಲಿ ನಾಯಕರಾಗಿ ಸಮರ್ಪಿತ ಹಾಗೂ ಸ್ಥಿರವಾಗಿರುವವರೇ ಕರ್ಮಗಳಿಂದ ಬಿಡುಗಡೆ ಹೊಂದಿರುತ್ತಾರೆ. ಯಾರ ವರ್ತಮಾನವು ಸರಿ ಇದೆಯೋ, ಅವರ ಭವಿಷ್ಯವೂ ನಿಶ್ಚಿತವಾಗಿಯೂ ಚೆನ್ನಾಗಿರುತ್ತದೆ. ಯಾರ ಪುರುಷಾರ್ಥ ಹೇಗಿರುವುದೋ ಅವರಿಗೆ ಅಂತಹ ಪರಿಣಾಮ ದೊರೆಯುತ್ತದೆ. ಆದ್ದರಿಂದ ನಮಗೆ ನಮ್ಮ ವರ್ತಮಾನವನ್ನು ಚೆನ್ನಾಗಿ ಪಾವನಮಯವಾಗಿ ಹಾಗೂ ಸರ್ವಶ್ರೇಷ್ಠವನ್ನಾಗಿ ಮಾಡಲೇ ಬೇಕು, ಆಗಲೇ ಈ ಮಾನವ ಜನ್ಮದ ಸಾರ್ಥಕತೆ ಸಿದ್ಧವಾಗುತ್ತದೆ.

ಜ್ಞಾನದ ಮಾಧ್ಯಮದಿಂದ ಉತ್ತಮವಾದ ಸರಿಯಾದ ಪುರುಷಾರ್ಥ ಮಾಡಿದರೆ ವರ್ತಮಾನವು ಸುಧಾರಿಸುತ್ತದೆ ಹಾಗೂ ಭವಿಷ್ಯವು ಸಹ ಒಳ್ಳೆಯದಾಗುತ್ತದೆ. ಆದರೆ ಮೊದಲು ನನ್ನ ಜ್ಞಾನ ಸರಿಯೇ, ಶುದ್ಧವೇ, ಪಾವನ–ಪವಿತ್ರವೇ, ನಿರ್ಮಲವಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಸ್ವತಃ ನಿರೀಕ್ಷಣೆ ಪರೀಕ್ಷಣೆ ಮಾಡಿಕೊಳ್ಳಬೇಕು. ನನ್ನ ಜ್ಞಾನ ಸಂಸಾರದ ಕಾರ್ಯಗಳಲ್ಲಿಯೇ ಅಥವಾ ಪಾಪ ಪ್ರವೃತ್ತಿಗಳಲ್ಲಿಯೇ ಉಪಯೋಗವಾಗುತ್ತಿದೆಯೇ? ಹೀಗೆ ನಮ್ಮ ಒಳ್ಳೆಯ ಕೆಟ್ಟ ಸಂಗತಿಗಳ ನಿರ್ಣಯವನ್ನು ನಾವು ಸ್ವತಃ ಮಾಡಿಕೊಳ್ಳಬಹುದು. ಪಾಪದ ಪ್ರವೃತ್ತಿಗಳನ್ನು ಸರಿ ಎಂದು ಭಾವಿಸಿದರೆ ಹಾಗೂ ಅವುಗಳಲ್ಲಿಯೇ ತೊಡಗಿದ್ದರೆ, ವರ್ತಮಾನ ಹಾಳಾಗುತ್ತಲಿದೆ, ಭವಿಷ್ಯವನ್ನು ಸಹ ಹಾಳು ಮಾಡುತ್ತಲಿದೆ. ಸಂಸಾರೀ ಭೌತಿಕ ಜ್ಞಾನದಿಂದ ಎಂದಿಗೂ ಯಾವುದೇ ಜೀವದ ಕಲ್ಯಾಣವಾಗಿಲ್ಲ, ಆಗುವುದಿಲ್ಲ. ಆತ್ಮಕಲ್ಯಾಣದ ಜ್ಞಾನ ಧರ್ಮದಿಂದಲೇ ಆಗುತ್ತದೆ. ಆಗಲೇ ಸಮ್ಯಕ್‌ದರ್ಶನ, ಸಮ್ಯಕ್ ಜ್ಞಾನ ಹಾಗೂ ಸಮ್ಯಕ್ ಚಾರಿತ್ರಗಳ ಬಹಳ ಮಹತ್ವವಿದೆ. ಸಮ್ಯಕ್ ಜ್ಞಾನಿಯು ತನ್ನ

ಜೀವನದಲ್ಲಿ ಅನೇಕ ನಿಯಮ ಸಂಕಲ್ಪ ವ್ರತಗಳನ್ನು ಸ್ವೀಕರಿಸಿ ತನ್ನ ವಿಚಾರಗಳನ್ನು ಪಾವನ ಮಾಡಿಕೊಳ್ಳುತ್ತಾನೆ. ಆಗ ಮನಸ್ಸಿನ ಶುದ್ಧಿಯು ಆಗುತ್ತದೆ, ಮನಸ್ಸೇ ಸಾಧನೆಯ ಆಧಾರವಾಗಿದೆ. ಮನಸ್ಸಿನಲ್ಲಿ ಸಮ್ಯಕ್ ಜ್ಞಾನವಾದಾಗ ವ್ರತ-ನಿಯಮ ಬಹಳ ಸಹಜವಾಗಿ ರೂಪಗೊಳ್ಳುತ್ತದೆ. ಮರ್ಯಾದೆ ಸಂಯಮ ಹಾಗೂ ಸಮಾಧಾನ ಇವೆಲ್ಲವೂ ಅಶುಭ ಕರ್ಮಗಳಿಂದ ರಕ್ಷಿಸಿಕೊಳ್ಳುವಲ್ಲಿ ಸಹಯೋಗ ಆಗುತ್ತದೆ. ಆಗ ವರ್ತಮಾನವು ಸುಧಾರಿಸುತ್ತದೆ.

ಪಾಪ ಮಾಡಿಸುವ ವಿಚಾರಗಳು, ಬಹಳ ಸಹಯೋಗಿಯಾಗಿರುತ್ತವೆ. ನಮ್ಮ ಮನಸ್ಸನ್ನು ಸ್ವತಃ ನಿಯಂತ್ರಿಸ ಬೇಕಾಗುತ್ತದೆ. ಆಗಾಗ ಆಳವಾಗಿ ನಮ್ಮ ಮನಸ್ಸು ಎಲ್ಲಿಯೋ ಹೊಗುತ್ತಲಿದೆ ಅದನ್ನು ಹಿಡಿದು ಸರಿಯಾದ ಮಾರ್ಗದಲ್ಲಿ ತರಬೇಕು. ಧ್ಯಾನವು ಆಧ್ಯಾತ್ಮದ ಆಧಾರವಾಗಿದ್ದು ಇದೇ ಪದ್ಧತಿಯಿಂದ ಸಾಕಾರವಾಗಬಲ್ಲದು. ತಪ್ಪಿನಿಂದ ಸರಿ ಹಾಗೂ ಪಾಪಗಳಿಂದ ಪುಣ್ಯದ ಕಡೆಗೆ ಮನಸ್ಸನ್ನು ತರುವಲ್ಲಿ ಆಧ್ಯಾತ್ಮದ ಸರ್ವಶ್ರೇಷ್ಠ ಪಾತ್ರವಿದೆ, ಆದರೆ ನಾವು ಆಧ್ಯಾತ್ಮದಿಂದ ದೂರ ಸರಿಯುತ್ತಿದ್ದೇವೆ ಹೀಗಿರುವಾಗ ಮನಸ್ಸು ಹಾಗೂ ವಿಚಾರಗಳು ಹೇಗೆ ಶುದ್ಧಿಯಾಗಬಲ್ಲವು? ಮನಸ್ಸು ಗಲೀಜು, ದೂಷಿತ ಹಾಗೂ ಸಂಕೀರ್ಣವಾಗಿರುವಾಗ ಪಾಪಕರ್ಮಗಳಲ್ಲಿ ನಮ್ಮ ಅಜ್ಞಾನತೆಯು ಆವರಿಸಿ ಬಿಡುತ್ತದೆ. ಆದ್ದರಿಂದ ಇಲ್ಲಿ ನಾವು ಧರ್ಮವು ನಮ್ಮ ಸಹಾಯಕ ಎನ್ನುವುದನ್ನು ಮರೆಯಬಾರದು. ಅದರ ವಿನಹ ನಾವು ಜೀವನದ ಸುಧಾರಣೆಯನ್ನು ಮಾಡಲಾರೆವು. ಧ್ಯಾನವಿರಲಿ, ಅಥವಾ ಜ್ಞಾನವಿರಲಿ ನಾವು ಧರ್ಮಕ್ಕೆ ಶರಣಾಗಿ ಮುಂದೆ ಸಾಗಿದಾಗಲೇ ನಮ್ಮ ವರ್ತಮಾನವನ್ನು ಒಳ್ಳೆಯದನ್ನಾಗಿ ಮಾಡಿಕೊಳ್ಳಬಹುದು. ಒಳ್ಳೆಯದನ್ನಾಗಿ ಮಾಡಿಕೊಳ್ಳಲು ಇರುವ ಸಾಮಗ್ರಿಗಳನ್ನು ನಾವು ಉಪಯೋಗಿಸಿಕೊಳ್ಳಲೇಬೇಕು. ಆಗಲೇ ಭವ-ಭವಗಳ ಅಶುಭ ಕರ್ಮಗಳಿಂದ ಬಿಡುಗಡೆ ಹೊಂದಬಹುದು. ಆದ್ದರಿಂದ ಕರ್ಮಗಳನ್ನು ಪೂರ್ಣವಾಗಿ ನಿರ್ಜರೆ ಮಾಡುವ ಮೋಕ್ಷ ಮಾರ್ಗವು ಸಿಗಬಲ್ಲದು. ಇಂತಹ ದುರ್ಲಭವಾದ ಮಾನವ ಜನ್ಮವನ್ನು ಪಡೆದು ಸಹ ನಮ್ಮ ವರ್ತಮಾನವನ್ನು ಈಗಲೂ ಉತ್ತಮಗೊಳಿಸುವ ಪುರುಷಾರ್ಥ ಮಾಡದಿದ್ದರೆ ಇದಕ್ಕಿಂತ ದೊಡ್ಡ ತಪ್ಪು ಜೀವನದಲ್ಲಿ ಬೇರೆ ಯಾವುದು ಇರಲಿಕ್ಕಿಲ್ಲವೆಂದು ತಿಳಿಯಬೇಕು. ವಿಚಾರಗಳ ವೀಣೆಯಲ್ಲಿ ಪರ ಚಿಂತನದ ತಂತಿ ಈಗಲಾದರೂ ನುಡಿಸಬೇಕು.

ನಮ್ಮ ನಮ್ಮ ಅಂಗಡಿಗಳಿವೆ, ನಮ್ಮ ನಮ್ಮ ಖಾತೆಗಳು
ಯಾರು ಹೇಗೆ ಕಾರ್ಯ ಮಾಡುತ್ತಾರೋ, ಹಾಗೆಯೇ ಫಲ ಪಡೆಯುತ್ತಾರೆ.

# 16. ತ್ಯಾಗವಿಲ್ಲದೇ ಜೀವನದಲ್ಲಿ ಶಾಂತಿ ಇಲ್ಲ

ನಾವು ಎಷ್ಟೆಷ್ಟು ಸಂಗ್ರಹ ಮಾಡುತ್ತೇವೆಯೋ ಅಷ್ಟಷ್ಟು ಅಶಾಂತಿಯ ಕಾರಣ ಉತ್ಪನ್ನವಾಗುತ್ತದೆ. ಅಧಿಕಾಧಿಕ ಭೌತಿಕ ಸಂಪತ್ತನ್ನು ಸಂಗ್ರಹಿಸುವ ಅಥವಾ ಅದರ ಸುರಕ್ಷಣೆ ಮಾಡುವಲ್ಲಿ ಶಾಂತಿ ಸಿಗುವ ಹಾಗಿದ್ದರೆ. ತೀರ್ಥಂಕರ ಆದಿನಾಥ ಹಾಗೂ ಶಾಂತಿನಾಥರಂತಹ ವೈಭವಶಾಲಿ ಜೀವಗಳು ಮೋಕ್ಷ ಪುರುಷಾರ್ಥ ಸಾಧಿಸಲು ಕಾಡಿಗೆ ಯಾಕೆ ಹೋಗುತ್ತಿದ್ದರು. ಅಪಾರ ಸಂಪತ್ತಿನ ಒಡೆಯರಾಗಿದ್ದ ಅವರಿಗೆ ಮುಕ್ತಿಯ ಮಾರ್ಗದಲ್ಲಿ ಆ ಸಂಪತ್ತು ಬಾಧಕವಾಗಿದೆ ಎಂದು ತಿಳಿದಾಗ ಅವರು ರಾಗವನ್ನು ಬಿಟ್ಟು ತ್ಯಾಗಿಗಳಾದರು. ತ್ಯಾಗವಿಲ್ಲದೇ ಜೀವನದಲ್ಲಿ ಎಂದಿಗೂ ಶಾಂತಿ ಸಿಗಲಾರದು. ಆತ್ಮನಲ್ಲಿ ಶಾಂತಿ ಇದ್ದಾಗಲೇ ನಿಜವಾದ ಸುಖ ದೊರೆಯುತ್ತದೆ. ಭೌತಿಕ ಸುಖವು ಒತ್ತಡ ಹಾಗೂ ಚಿಂತೆಯ ಉತ್ಪನ್ನಕ್ಕೆ ಕಾರಣವಿರುವಾಗ ಈ ಅಮೂಲ್ಯ ಜೀವನವನ್ನು ಪರಿಗ್ರಹ ಸಂಗ್ರಹ ಮಾಡುವಲ್ಲಿಯೇ ಯಾಕೆ ಹಾಳುಮಾಡಿ ಕೊಳ್ಳಬೇಕು. ರತ್ನ, ವಜ್ರ, ವೈಡೂರ್ಯಗಳಿಂದ ನಿರ್ಮಿತ ಅರಮನೆಗಳನ್ನು ತ್ಯಾಗ ಮಾಡಿದವರಿಂದ ನಾವು ಏನನ್ನಾದರೂ ಪ್ರೇರಣೆ ಪಡೆಯಬಾರದೆ? ಕಾರು, ಬಂಗಲೆ ಸಿಮೆಂಟಿನ ಮನೆಗಳನ್ನು ನಿಲ್ಲಿಸುವಲ್ಲಿಯೇ ಜೀವನವನ್ನು ಕಳೆದುಕೊಳ್ಳಬಾರದು. ಬದಲಾಗಿ ತ್ಯಾಗದ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು. ಅವುಗಳನ್ನು ಒಂದಲ್ಲ ಒಂದು ದಿನ ಬಿಡಲೇ ಬೇಕು. ಅವು ಇಲ್ಲಿಯೇ ಉಳಿಯುವಂತಹವು, ಅವುಗಳ ಹಿಂದೆ ಹೋಗಿ ಯಾಕೆ ಹುಚ್ಚರಾಗಬೇಕು? ಒಮ್ಮೆಲೇ ಅವುಗಳನ್ನು ತ್ಯಾಗ ಮಾಡಲು ಸಾಧ್ಯವಾಗದಿದ್ದರೆ ಸ್ವಲ್ಪ–ಸ್ವಲ್ಪವಾದರೂ ಸರಿ ಸಾಂಸಾರಿಕ ವಸ್ತುಗಳನ್ನು ಕಡಿಮೆ ಮಾಡುತ್ತಾ ಸಾಗಬೇಕು. ಇದರಿಂದ ಬಯಕೆಗಳ ಹಸಿವು ಕಡಿಮೆಯಾದೀತು ಹಾಗೂ ಒಂದು ದಿನ ಸಂಪೂರ್ಣ ತ್ಯಾಗದ ಭಾವನೆ ಜಾಗೃತವಾಗಬಹುದು. ಬಾಲ್ಯದಿಂದ ಐವತ್ತೈದನೇ ವಯಸ್ಸಿನ ನಂತರವೂ ಸಂಗ್ರಹ ಮಾಡುವ ಹಾಗೂ ಅವುಗಳ ಸುರಕ್ಷಣೆ ಮಾಡುವುದರಲ್ಲಿಯೇ ಜೀವನ ಕಳೆದುಹೋಗುತ್ತಲಿದೆ ಎನ್ನುವುದೇ ವಿಡಂಬನೆಯಾಗಿದೆ. ಇದೇ ಜಗತ್ತಿನಲ್ಲಿ ಅಶಾಂತಿಗೆ ಕಾರಣವಾಗಿದೆ. ಭೌತಿಕ ಸಂಪತ್ತನ್ನು ಹೆಚ್ಚಿಸಿಕೊಳ್ಳುವ ಹುಚ್ಚಿನಲ್ಲಿ ಮನುಷ್ಯ ಮನುಷ್ಯರ ನಡುವೆ ಗೋಡೆ ಬೆಳೆದು ಬಿಟ್ಟಿದೆ ಹಾಗೂ ಈ ಹುಚ್ಚಿನ ಕಾರಣ ಪರಸ್ಪರರ ಸಂಬಂಧಗಳಲ್ಲಿ ಅಂತರ ಹೆಚ್ಚಾಗುತ್ತಲಿದೆ. ಇದನ್ನು ಈಗ ಸಮಯ ಇರುವಾಗಲೇ ಅದರಿಂದ ಮುಕ್ತರಾಗಬೇಕು. ಇಲ್ಲವಾದಲ್ಲಿ ಅಶಾಂತಿಯ ಭವ ಭವಗಳಲ್ಲಿ ಅಲೆದಾಡಿಸುತ್ತದೆ.

ಮಹಾಪುರುಷರ ಜನ್ಮ ಜಯಂತಿ ಇರಲಿ ಅಥವಾ ಮೋಕ್ಷ ದಿನವಿರಲಿ ಆ ದಿನಗಳೆಲ್ಲಾ ಪೂಜ್ಯ ಹಾಗೂ ಧನ್ಯವಾಗಿರುತ್ತವೆ. ಮಹಾಪುರುಷರನ್ನು ನಾವು ಕೇವಲ ಜ್ಞಾಪಿಸಿಕೊಳ್ಳುವುದಷ್ಟೇ ಅಲ್ಲ ಬದಲಾಗಿ ಅವರ ತ್ಯಾಗ, ಸಂಯಮ, ಹಾಗೂ ಶಿಕ್ಷಣದ ರೂಪದಲ್ಲಿರುವ ಉಪದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಆಗಲೇ ನಮ್ಮ ಆತ್ಮನ ಉತ್ಥಾನವಾಗುತ್ತದೆ. ಧರ್ಮದ ರಥವನ್ನು ನಾವು ಒಟ್ಟಾಗಿ ಮುಂದೆ

ಸಾಗಿಸಬೇಕಾಗಿದೆ, ಆಗ ಧರ್ಮದ ಪ್ರಭಾವನೆ ಹಾಗೂ ಅದರ ಮೂಲ ಶಾಂತಿ, ಸುಖಗಳ ಸಾಮ್ರಾಜ್ಯವನ್ನು ಪಡೆಯುವ ಶಕ್ತಿ ದೊರೆಯುತ್ತದೆ ಹಾಗೂ ಸುರಕ್ಷಿತವಾಗಿರುತ್ತದೆ. ಕೇವಲ ಸೌಲಭ್ಯಗಳು ಅಥವಾ ಭೌತಿಕ ಸಂಪತ್ತಿನ ಅಭಿವೃದ್ಧಿಯಲ್ಲಿಯೇ ಜೀವನ ಸಾಗುತ್ತಿದ್ದರೆ, ಅದರಿಂದ ಅಶಾಂತಿಯ ಮೋಡಗಳು ಇನ್ನೂ ದಟ್ಟವಾಗುತ್ತವೆ. ಅದರಿಂದ ಮನೆ ಇರಲಿ ಅಥವಾ ಸಮಾಜವಿರಲಿ, ಎಲ್ಲ ಸ್ಥಾನಗಳಲ್ಲಿ ಅಶಾಂತಿಯ ಚಟುವಟಿಕೆಗಳು ಹೆಚ್ಚಾಗುತ್ತವೆ. ಸಂಸ್ಕಾರಗಳ ನಾಶವಾದಾಗ ಸಂಸ್ಕೃತಿ ಲುಪ್ತವಾಗುತ್ತದೆ. ಸಂಸ್ಕಾರ ಪಾವನವಾಗಿದ್ದರೆ ಸಂಸ್ಕೃತಿಯ ಮಹತ್ವ ಎಲ್ಲರಿಗೂ ಸುಖ-ಶಾಂತಿಯನ್ನು ನೀಡುತ್ತದೆ.

ನಿಷ್ಠೆಯ ದೀಪ ಉರಿಯುವಾಗ, ಬಿರುಗಾಳಿಯು ಅದನ್ನೇನೂ ಮಾಡಲಾರದು. ನಮ್ಮ ಆಸಕ್ತಿ ಹಾಗೂ ಶ್ರದ್ಧೆ ಅಂತರಾಳದ ವರೆಗೆ ಇಳಿದಾಗ ಶಾಂತಿಯ ಪುಷ್ಪ ಸ್ವತಃ ಅರಳುತ್ತದೆ. ಆದ್ದರಿಂದ ಪ್ರಸಂಗ, ಭಗವಾನ ಆದಿನಾಥರ ಜನ್ಮದಿನವಾಗಿರಲಿ ಅಥವಾ ತೀರ್ಥಂಕರಪರಮಾತ್ಮರ ಮೋಕ್ಷಕ್ಕೆ ಹೋಗುವದಾಗಿರಲಿ ನಾವು ಅವರ ಜೀವನದ ಸ್ವಲ್ಪವಾದರೂ ಒಳ್ಳೆಯದನ್ನು ಸ್ವೀಕರಿಸಿ ನಮ್ಮ ಜೀವನವನ್ನು ಪಾವನಮಯವಾಗಿ ಮಾಡಿಕೊಳ್ಳಬೇಕು. ಮಹಾಪುರುಷರು ಯಾರೇ ಇರಲಿ, ಅವರ ಮಹಾನತೆಯನ್ನು ನಾವು ಸ್ವೀಕರಿಸದಿದ್ದರೆ ಒಂದು ದಿನ ನಾವು ಬಹಳಷ್ಟು ಪಶ್ಚಾತ್ತಾಪ ಪಡಬೇಕಾಗುತ್ತದೆ. ಮಹಾಪುರುಷರ ಸ್ಮರಣೆಯನ್ನು ನಾವು ಮಾಡಿದ್ದೇಯಾದರೆ ಅದು ನಮ್ಮನ್ನು ಮೇಲಿಂದ ಮೇಲೆ ಜಾಗೃತರಾಗಿರುವಂತೆ ಮಾಡುತ್ತದೆ. ನಾವು ತ್ಯಾಗಿ, ಸಂಯಮಿಗಳಾಗಿ ಅವರ ಸದ್ಗುಣಗಳನ್ನು ಅಳವಡಿಸಿಕೊಳ್ಳದಿದ್ದರೆ ಅದು ನಮ್ಮ ಬಹಳ ದೊಡ್ಡ ದುರ್ಭಾಗ್ಯವಾಗುತ್ತದೆ.

ಈ ಜಗತ್ತಿನಲ್ಲಿ ವಿಷಯ ಸುಖಗಳಿವೆ, ಇವುಗಳನ್ನು
ತೀರ್ಥಂಕರರು ಯಾಕೆ ತ್ಯಜಿಸಿದರು ।
ಶಿವ ಸಾಧನೆಯನ್ನು ಯಾಕೆ ಮಾಡಿದರು
ಸಂಯಮದ ಬಗ್ಗೆ ಅನುರಾಗ ಭಾವ ತಾಳಿದರು.

# 17. ರೌದ್ರಧ್ಯಾನವು ಜೀವನದಲ್ಲಿ ಎಲ್ಲಕ್ಕಿಂತ ದೊಡ್ಡ ಬಾಧಕ

ಆತ್ಮನ ಮುಕ್ತಿ ಇಲ್ಲದೇ ಸಮ್ಯಕ್ ಧ್ಯಾನ ಸಾಧ್ಯವಿಲ್ಲ ಎನ್ನುವುದು ಪರಮ ಸತ್ಯವಾಗಿದೆ. ಆದರೆ ವರ್ತಮಾನದಲ್ಲಿ ಸಂಸಾರೀ ಪ್ರಾಣಿಯು ಧರ್ಮಧ್ಯಾನವನ್ನೇ ಮಾಡಲಾಗದಷ್ಟು ರೌದ್ರಧ್ಯಾನದ ಚರಮ ಸೀಮೆಯನ್ನು ತಲುಪಿದ್ದಾನೆ. ಸಮ್ಯಕ್ ಧ್ಯಾನ ಹಾಗೂ ಧರ್ಮಧ್ಯಾನಕ್ಕಿಂತ ಮೊದಲು ರೌದ್ರ-ಧ್ಯಾನದ ಉದ್ದೇಶವನ್ನು ತಿಳಿದು ಅದರಿಂದ ಮುಕ್ತ ಅಥವಾ ಅದನ್ನು ಕಡಿಮೆ ಮಾಡುವ ಪುರುಷಾರ್ಥ ಆಗದೇ ಧರ್ಮಧ್ಯಾನ ಸಾಧ್ಯವೇ ಇಲ್ಲ. ಧರ್ಮಧ್ಯಾನವು ನಾವು ಆರ್ತಧ್ಯಾನ ಹಾಗೂ ರೌದ್ರಧ್ಯಾನದಿಂದ ದೂರವಾಗದೆ ಪಾವನ ಪವಿತ್ರವಾಗಲಾರದು. ಇವುಗಳಲ್ಲಿಯೂ ಎಲ್ಲಕ್ಕಿಂತ ಹೆಚ್ಚಾಗಿ ರೌದ್ರಧ್ಯಾನವು ಅಪಾಯಕಾರಿಯಾಗಿದ್ದು ಆತ್ಮನನ್ನು ಘೋರ ಪತನದ ಕಡೆಗೆ ಹೋಗಲು ಮಾಧ್ಯಮವಾಗುತ್ತಲಿದೆ. ಸಂಸಾರಿ ವ್ಯಕ್ತಿಗಳ ಒಂದು ದಿನವೂ ಸಹ ಆತ ರೌದ್ರಧ್ಯಾನದಿಂದ ಮುಕ್ತನಾಗುವಂತಿಲ್ಲ. ಆದ್ದರಿಂದ ಅಲ್ಲಿ ಧರ್ಮಧ್ಯಾನ ಆಗದಿರುವುದರಿಂದ ಅಶಾಂತಿ, ಆತಂಕ, ಒತ್ತಡಗಳಿಂದ ಮುಕ್ತರಾಗದೇ ಭೌತಿಕ ಪದಾರ್ಥಗಳ ಸಂಗ್ರಹದಲ್ಲಿಯೇ ತೊಡಗುತ್ತಿದ್ದಾರೆ. ಆದರೆ ಅಜ್ಞಾನಿಗಳು ಓರ್ವ ಪತಂಗದ ಜೀವನ ದೀಪದ ಜ್ವಾಲೆಯಲ್ಲಿ ಹಾಗೂ ಜೇಡ ತನ್ನ ಸ್ವಂತ ಬಲೆಯಲ್ಲಿ ಸಿಲುಕಿ ಸಾಯುವಂತಹ ಸ್ಥಿತಿ ತಮ್ಮದೆಂದು ತಿಳಿಯುವುದಿಲ್ಲ. ಜ್ಞಾನಿ ಹಾಗೂ ತತ್ತ್ವದೃಷ್ಟಿಯು ಭೇದವಿಜ್ಞಾನವನ್ನು ತಿಳಿಯಬಲ್ಲ ಮಹಾಪುರುಷರು- ಧರ್ಮಾಚರಣೆ ಮೊದಲು ಅದರ ಸ್ವರೂಪವನ್ನು ತಿಳಿದಾಗ ಅದರ ವಾಸ್ತವಿಕ ಲಾಭ ಆತ್ಮನಿಗೆ ದೊರೆಯುತ್ತದೆ. ಹಿಂಸೆ ಮುಂತಾದ ಪಾಪರೂಪದ ರೌದ್ರ-ಧ್ಯಾನ ಜೀವನದಲ್ಲಿ ಎಲ್ಲಕ್ಕಿಂತ ದೊಡ್ಡ ಬಾಧಕ ತತ್ತ್ವ ಮತ್ತು ಇದರಿಂದ ಬಿಡುಗಡೆ ಹೊಂದದೆ ಧರ್ಮಧ್ಯಾನದಿಂದ ಏನೂ ಪ್ರಯೋಜನವಿಲ್ಲವೆಂದು ಗಮನದಲ್ಲಿಡಬೇಕು.

ವಾಹನ ನಡೆಸುವಾಗ ಚಾಲಕನು ಎಲ್ಲ ರೀತಿಯ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಆಗಲೇ ಆತ್ಮಯಾತ್ರೆ ಸಫಲವಾಗುತ್ತದೆ. ಹಾಗೆಯೇ ನಾವು ಧರ್ಮಕರ್ಮಗಳಲ್ಲಿಯೂ ಸಹ ಪೂರ್ಣ ಎಚ್ಚರಿಕೆ ವಹಿಸಬೇಕು. ಆಗಲೇ ಅದರ ಲಾಭ ದೊರೆಯುತ್ತದೆ. ಇಂದು ಟಿ.ವಿ ಯುಗವಾಗಿದೆ ಆದರೆ ಯಾವುದರಲ್ಲಿ ಅಲ್ಲಿ ಹೆಚ್ಚಿನ ರುಚಿ ಇದೆ?ಹಿಂಸೆ ಹಾಗೂ ವಾಸನಾ ಸಂಬಂಧದ ಚಿತ್ರಗಳನ್ನು ನೋಡುವಲ್ಲಿ ಹೆಚ್ಚಿನ ಆಸಕ್ತಿ ಇದೆ. ಕ್ರಿಕೆಟ್ ಮ್ಯಾಚ್ ಬಂದಾಗ ಊಟ ಹಾಗೂ ನಿದ್ರೆಯ ಚಿಂತೆಯೂ ಇರುವುದಿಲ್ಲ ಹಾಗೂ ತಮ್ಮ ಟೀಮ್ ಗೆದ್ದಾಗ ಅಥವಾ ಬೌಂಡರಿ-ಸಿಕ್ಸರ್ ಬಾರಿಸಿದಾಗ ಸಂತೋಷದಲ್ಲಿ ತಲ್ಲೀನರಾಗುತ್ತಾರೆ. ಅದೇ ಸೋಲು ಗೆಲುವು ಹೊಡೆದಾಗ ಆತ್ಮಘಾತ ಮುಂತಾದ ರೌದ್ರಧ್ಯಾನಗಳಿಗೆ ಕಾರಣವಾಗಿವೆ. ಇಂದು ಮಂದಿರಗಳ ಚುನಾವಣೆಯಲ್ಲಿಯೂ ಸಹ ರೌದ್ರಧ್ಯಾನ ಹೆಚ್ಚಾಗುತ್ತಲಿವೆ. ಸೋಲು- ಗೆಲವುಗಳಲ್ಲಿ ಸುಖ-ದುಃಖಗಳ ಅನುಭವ ಆಗುತ್ತಿರುವಾಗ ಅವೇ ರಾಗ-ದ್ವೇಷದ

ಕಾರಣಗಳಾಗಿವೆ. ಹಾಲು ಇರಲಿ, ಮಸಾಲಾ ವಸ್ತುಗಳಿರಲಿ, ತುಪ್ಪ ಎಣ್ಣೆಗಳಿರಲಿ ಅಥವಾ ಏನೇ ಪದಾರ್ಥ ವಿರಲಿ ಅವುಗಳಲ್ಲಿ ಕಲಬೆರಕೆ ಮಾಡಿ ಹೆಚ್ಚು ಸಂಪಾದಿಸುವುದರಲ್ಲಿ ಖುಷಿ ಪಡುತ್ತಾನೆ. ತೆರಿಗೆಗಳ್ಳತನ ಮಾಡಿ ತಮ್ಮನ್ನು ಹೆಚ್ಚು ತಿಳಿದವರೆಂದು ಭಾವಿಸುತ್ತಿದ್ದಾರೆ. ಸುಳ್ಳುಹೇಳುವಲ್ಲಿ ತಮ್ಮನ್ನು ಶ್ರೇಷ್ಠರೆಂದು ಹೇಳಿಕೊಳ್ಳಲು ತಮ್ಮ ಯೋಗ್ಯತೆಯನ್ನು ತಿಳಿಯಲಾಗುತ್ತಿದೆ, ನೆರೆಯವರ ಪತನ ಹಾಗೂ ಸಹೋದರನ ದುರ್ಗತಿ ಕಂಡು ಪ್ರಸನ್ನತೆಯ ಅನುಭವ ಹೊಂದುವುದು, ಇತರರನ್ನು ಕೀಳಾಗಿ ಕಾಣುವುದು ಅಥವಾ ಅವರನ್ನು ಪತನ ಗೊಳಿಸುವಲ್ಲಿ ಗರ್ವ ಪಡುವುದು. ಇವೆಲ್ಲವುಗಳನ್ನು ದೂರದರ್ಶನದಲ್ಲಿ ನೋಡುವುದು ಅಥವಾ ಇವುಗಳನ್ನು ಹತ್ತಿರದಿಂದ ಕಾಣುವುದು ಇವೆಲ್ಲವೂ ರೌದ್ರಧ್ಯಾನದ ರೂಪಗಳಾಗಿವೆ. ಅನೇಕ ಸಾಂಸಾರಿಕ ಕಾರಣಗಳಿಂದ ಹೆಚ್ಚುತ್ತಿರುವ ರಾಗ-ದ್ವೇಷ, ಸೇಡು ಹಾಗೂ ವೈರತ್ವ ಭಾವ, ಸ್ವಾರ್ಥ ಹಾಗೂ ಕಪಟತನಗಳಲ್ಲಿ ಹೆಚ್ಚಳ, ಜೀವ-ಆತ್ಮಗಳಿಗೆ ದುಃಖ ಹಾಗೂ ಕಷ್ಟ ನೀಡುವಲ್ಲಿ ಉಂಟಾಗುವ ಆನಂದ, ಇವೆಲ್ಲವೂ ರೌದ್ರಧ್ಯಾನವನ್ನು ಹೆಚ್ಚಿಸುತ್ತಲಿವೆ, ಇವುಗಳಿಂದ ದೂರವಾಗದ ಹೊರತು ಧರ್ಮಧ್ಯಾನ ಸಾಧ್ಯವಾಗುವುದಿಲ್ಲ. ಈ ಸ್ಥಿತಿಗಳು ಇರುವವರೆಗೆ ಶ್ರಾವಕನೂ ಆಗಲಾರ ಶ್ರಾವಕನಾಗುವ ಮುನ್ನ ಆರ್ತಧ್ಯಾನ ಹಾಗೂ ರೌದ್ರಧ್ಯಾನಗಳಿಂದ ಬಿಡುಗಡೆ ಹೊಂದಬೇಕಾಗುತ್ತದೆ, ಅಣು-ವತ್ರಗಳನ್ನು ಸ್ವೀಕರಿಸಿರುವವನೇ ಶ್ರಾವಕನಾಗಬಲ್ಲನು.

ಪರಿಗ್ರಹಗಳೊಂದಿಗೆ ಸಂಬಂಧ ಹೊಂದಿರುವವರು ಧರ್ಮಧ್ಯಾನದಿಂದ ದೂರವಾಗುತ್ತಾರೆ. ವಾಸ್ತವಿಕ ರೂಪದಲ್ಲಿ ಹೇಳುವುದಾದರೆ ಸಂಸಾರದಲ್ಲಿದ್ದು ಕೊಂಡು ಸಂಸಾರಿ ಜೀವವು ವಸ್ತುಗಳಿಂದ ವಿರಕ್ತಭಾವವನ್ನು ಹೊಂದಿದಾಗಲೇ ಧರ್ಮಧ್ಯಾನವನ್ನು ಹೊಂದಬಹುದು, ಸಂಸಾರೀ ಪದಾರ್ಥಗಳನ್ನೇ (ಧನ-ಸಂಪತ್ತು, ಸುಖ-ಸೌಲಭ್ಯಗಳು, ವಿಲಾಸಮಯ ಜೀವನ, ಮಾನ-ಗೌರವಗಳನ್ನು) ಹೆಚ್ಚಿಸಿಕೊಳ್ಳುವಲ್ಲಿ ಆಕಾಂಕ್ಷಿತನಾದರೆ ಹಾಗೂ ಅವುಗಳಲ್ಲಿಯೇ ಲಿಪ್ತನಾದರೆ ಅವರು ಪಾಪದ ಭಾರದಿಂದ ಅಷ್ಟೇ ಅಧೋಗತಿ ಹೊಂದುತ್ತಾರೆ. ಇವುಗಳಿಂದ ಬಿಡುಗಡೆ ಹೊಂದುವವರು ಅಥವಾ ಅವುಗಳಿಂದ ದೂರವಾದರೆ, ನಿಯಮ-ಸಂಯಮದ ಪಾಲನೆ ಮಾಡಿದರೆ ಅವರು ಅಷ್ಟೇ ಎತ್ತರಕ್ಕೇರುತ್ತಾರೆ. ಈ ಕಾರಣದಿಂದಲೇ ವೀತರಾಗಿ ಭಗವಂತರು ಈ ಜಗತ್ತಿನಲ್ಲಿ ಎಲ್ಲಕ್ಕಿಂತ ಶ್ರೇಷ್ಠಸ್ಥಾನ ಪಡೆದಿದ್ದಾರೆ. ಯಾಕೆಂದರೆ ಅವರು ಸರ್ವಸ್ವವನ್ನು ತ್ಯಾಗ ಮಾಡಿದ್ದಾರೆ. ಅವರು ಚರಿತಾರ್ಥ ಮಾಡಿ ತೋರಿಸಿಕೊಟ್ಟರು, ಆದ್ದರಿಂದ ಯಾವ-ಯಾವ ಕಾರಣಗಳಿಂದ ರೌದ್ರ-ಧ್ಯಾನ ಆಗುತ್ತಿದೆ, ಆ ಕಾರಣಗಳನ್ನು ವಿವೇಕದೊಂದಿಗೆ ಪುರುಷಾರ್ಥ ಮಾಡಿ ಆ ಕಾರಣಗಳನ್ನು ದೂರ ಮಾಡಬೇಕು. ವಿವೇಕದೊಂದಿಗೆ ಮಾಡುವ ಯಾವುದೇ ಕಾರ್ಯ ಅಥವಾ ಸಾಧನೆ ಅಥವಾ ಭಕ್ತಿ ಅಥವಾ ಧ್ಯಾನ ನಿಶ್ಚಿತವಾಗಿಯೂ ಉತ್ತಮ ಪರಿಣಾಮಗಳನ್ನು ಬೀರಿ ಉತ್ತಮ ಸಂಗತಿಗಳೇ ಎದುರಿಗೆ ಬರುತ್ತದೆ. ನಮ್ಮ ಆತ್ಮನ ಕಲ್ಯಾಣವು ಧರ್ಮ ಧ್ಯಾನದಿಂದಲೇ ಉಂಟಾಗುತ್ತಿದೆ ಎಂಬ ಮಾತನ್ನು ಸದಾಕಾಲ ನೆನಪಿನಲ್ಲಿಡಬೇಕು. ಧರ್ಮಧ್ಯಾನಕ್ಕಿಂತ ಮುಂಚೆ ಇಷ್ಟ-ವಿಯೋಗ, ಅನಿಷ್ಟ-

ಸಂಯೋಗ, ಪೀಡೆ–ಚಿಂತೆ ಹಾಗೂ ನಿದಾನ ರೂಪದಲ್ಲಿರುವ ಆರ್ತಧ್ಯಾನ ಹಾಗೂ ಹಿಂಸಾನಂದ, ಮೃಷಾನಂದ, ಚೌರ್ಯಾನಂದ ಮತ್ತು ಪರಿಗ್ರಹಾನಂದ ರೂಪಗಳಲ್ಲಿರುವ ರೌದ್ರ ಧ್ಯಾನ, ಇವು ಜೀವನದ, ಬಹು ದೊಡ್ಡ ಶತ್ರುಗಳಾಗಿ, ಅವುಗಳಿಂದ ಬಿಡುಗಡೆ ಹೊಂದಬೇಕು. ಆಗಲೇ ಶರೀರ ಪುದ್ಗಲವಾಗಿ ಹಾಗೂ ಆತ್ಮನು ಅಜರ–ಅಮರ ಅವಿನಾಶಿಯಾಗಿದ್ದಾನೆ –ಈ ಭೇದವಿಜ್ಞಾನ ಅಂತರಂಗದಲ್ಲಿ ಅನುಭವಕ್ಕೆ ಬರುತ್ತದೆ. ಸ್ವಯಂ ಅಂತರಂಗದಲ್ಲಿ ಈ ರೀತಿಯ ಜ್ಞಾನದ ದೀಪ ಜ್ವಲಿಸ ತೊಡಗಿದಾಗಲೇ ಧರ್ಮಧ್ಯಾನ ನನ್ನ ಜೀವನದಲ್ಲಿ ಕಲ್ಯಾಣದ ಮಾರ್ಗವನ್ನು ಪ್ರಶಸ್ತಗೊಳಿಸುತ್ತಿದೆ ಎಂದು ತಿಳಿಯಬೇಕು. ಧರ್ಮಧ್ಯಾನದ ನಂತರವೇ ಶುಕ್ಲಧ್ಯಾನವಾಗಬಲ್ಲದು. ಹಾಗೂ ಸಮ್ಯಕ್ ಧ್ಯಾನದಿಂದ ಮೋಕ್ಷ ಪಡೆಯುವ ಸಾಧ್ಯತೆ ಇದೆ. ಜಗತ್ತಿನಲ್ಲಿ ಧ್ಯಾನವನ್ನು ಎಲ್ಲಕ್ಕಿಂತ ದೊಡ್ಡ ತಪವೆಂದು ಹೇಳಲಾಗಿದೆ. ಇದರಿಂದಲೇ ಶಿವತ್ವದ ಪ್ರಾಪ್ತಿಯಾಗಬಲ್ಲದು.

ಶರೀರದ ಮೇಲೆ ಇದೆ ಶುಭ್ರತೆ
ಮನವು ಆಗುತ್ತಲಿದೆ ಕಲಷತೆ
ಜಮುನಾ ತಾನೇ ಏನು ಮಾಡಬಲ್ಲದು?
ಗಂಗಾ ತಾನೇ ಏನು ಮಾಡಬಲ್ಲದು?

# 18. ಈ ಶರೀರವೂ ಬಾಡಿಗೆ ಮನೆಯಾಗಿದೆ

ನಮ್ಮದೆಂದು ಭಾವಿಸುತ್ತಿರುವುದು ನಮ್ಮದಲ್ಲ, ನಮ್ಮದನ್ನು ನಮ್ಮದೆಂದು ಸ್ವೀಕರಿಸದಿರುವುದು ಜೀವನದ ಅತಿ ದೊಡ್ಡ ವಿಡಂಬನೆಯಾಗಿದೆ. ಹೇಳುವುದಾದರೆ ಮನುಷ್ಯನು ಮನೆ, ಅಂಗಡಿ, ಫ್ಯಾಕ್ಟರಿಗಳನ್ನು ತನ್ನದೆಂದು ಭಾವಿಸುತ್ತಾನೆ. ಇವಳು ನನ್ನ ಪತ್ನಿ, ಇವನು ನನ್ನ ಮಗ, ಇವನು ಮೊಮ್ಮಗ, ಇವಳು ಮೊಮ್ಮಗಳು, ಈ ಒಡವೆ ನನ್ನದು, ಈ ವಾಹನ ನನ್ನದು ಆದರೆ ಇವೆಲ್ಲವೂ ನನ್ನ ಜೊತೆಗೆ ಬರುತ್ತವೆಯೇ? ಎಂದು ಯಾವಾಗಲಾದರೂ ಯೋಚಿಸಿದ್ದೀರಾ? ಜಗತ್ತಿನ ಎಲ್ಲ ವಸ್ತುಗಳು, ಸಂಬಂಧಗಳು, ಇಲ್ಲಿಯೇ ಬಿಡುಗಡೆ ಹೊಂದುತ್ತವೆಂದು ಎಲ್ಲರಿಗೂ ತಿಳಿದಿದೆ. ಆದರೂ ಸಹ ಮನುಷ್ಯನು ಅವೆಲ್ಲವುಗಳಲ್ಲಿಯೇ ಜೀವನದುದ್ದಕ್ಕೂ ಸಿಲುಕಿರುತ್ತಾನೆ. ತನ್ನ ಸುಖ–ಸೌಲಭ್ಯಗಳು, ವಿಲಾಸಮಯ ವಸ್ತುಗಳ ಬಗ್ಗೆ ಗರ್ವದ ಅನುಭವ ಹೊಂದುತ್ತಿರುತ್ತಾನೆ. ತನ್ನ ದೊಡ್ಡಸ್ಥಿಕೆ ತೋರುವಲ್ಲಿ ಎದುರಿಗಿರುವವರು ಹುಲ್ಲಿಗೆ ಸಮಾನ ಅಥವಾ ತುಚ್ಛರೆಂದು ಭಾವಿಸುತ್ತಾ ಮದೋನ್ಮತ್ತನಾಗಿರುತ್ತಾನೆ. ನಾಯಕನಾಗಿದ್ದರಂತೂ ಅಭಿಮಾನದಲ್ಲಿ ಮುಳುಗಿ, ಯಾವುದಾದರೂ ದೊಡ್ಡ ಪದವಿ ಸಿಕ್ಕಿದ್ದರೆ ಆತನ ಅಹಂಕಾರಕ್ಕೆ ಮಿತಿ ಇರದೇ ಜಗತ್ತಿನ ಸುಖ–ವೈಭವ ಅತ್ಯಂತ ಪ್ರಿಯವೆನಿಸತೊಡಗಿ ಅವುಗಳಲ್ಲಿಯೇ ಜೀವನವೆಲ್ಲಾ ಆಸಕ್ತಿ ಹೊಂದುತ್ತಾನೆ. ಆತನಿಗೆ ಸಾವು ಬಂದು ಸೆಳೆದೊಯ್ದಾಗಲೇ ಅವೆಲ್ಲವೂ ದೂರವಾಗುತ್ತವೆ. ಆದರೆ ವಸ್ತುಗಳಲ್ಲಿಯೇ ಸಮಸ್ತ ಜೀವನ ಕಳೆದಿರುತ್ತದೆ ಹಾಗೂ ವಾಸ್ತವಿಕವಾಗಿರುವ ಆತ್ಮನನ್ನು ಆತ ತನ್ನದೆಂದು ಭಾವಿಸುವುದೇ ಇಲ್ಲ. ಈ ಶರೀರವೇ ನನ್ನದಿಲ್ಲದಿರುವಾಗ, ಇದು ಸಹ ಬಾಡಿಗೆಯ ಮನೆಯಾಗಿರುವಾಗ ಸಾಂಸಾರಿಕ ವಸ್ತುಗಳ ಸಂಗ್ರಹವನ್ನು ಹೆಚ್ಚಿಸುವುದರಲ್ಲಿಯೇ ಜೀವನ ಯಾಕೆ ವ್ಯರ್ಥವಾಗುತ್ತಲಿದೆ? ಈಗಲಾದರೂ ಅಂತರಂಗದ ಕಣ್ಣುಗಳನ್ನು ತೆರೆಯುವ ಸಮಯ ಬಂದಿದೆ. ಅದರಿಂದ ನಿಜವಾಗಿಯೂ ನಮ್ಮದಾಗಿರುವುದನ್ನು ಅದರ ಸಾರವನ್ನಾದರೂ ರಕ್ಷಿಸಿಕೊಳ್ಳೋಣ.

ಸಂಸಾರದಲ್ಲಿ ಕಾಣುತ್ತಿರುವುದೆಲ್ಲಾ ಪುದ್ಗಲವಾಗಿದೆ. ನಮ್ಮ ಶರೀರವನ್ನೇ ಪುದ್ಗಲವೆಂದು ತಿಳಿದಿರುವಾಗ ಅದರ ಮೇಲಿನ ಮೋಹ ಹೊರಟು ಹೋಗುತ್ತದೆ. ಬಾಡಿಗೆ ಮನೆಯಲ್ಲಿರುವ ವ್ಯಕ್ತಿ ಬಾಡಿಗೆ ಕೊಡಬೇಕಾಗುತ್ತದೆ ಹಾಗೂ ಆತನಿಗೆ ಹೆಚ್ಚಿನ ಚಿಂತೆ ಇರುವುದಿಲ್ಲ. ಹಾಗೆಯೇ ಶರೀರಕ್ಕೆ ಪ್ರತಿದಿನ ಆಹಾರ ಪಾನೀಯ ರೂಪದ ಬಾಡಿಗೆ ಕೊಡಬೇಕಾಗಿದೆ ಹಾಗೂ ವಿವಿಧ ರೀತಿಯ ಚಿಂತೆಗಳಲ್ಲಿ ಸಿಲುಕುತ್ತಿದ್ದೇವೆ. ಇದೇ ನಮ್ಮ ಮೂರ್ಖತನವಾಗಿದೆ. ಈ ಪುದ್ಗಲ ಶರೀರವು ಸಹ ಒಂದು ದಿನ ಮೋಸ ಮಾಡುತ್ತದೆ. ಕಣ್ಣಿಗೆ ಕಾಣುವುದು ನಮ್ಮದಲ್ಲ, ಕಣ್ಣಿಗೆ ಕಾಣವ ಆ ಚೇತನ ಆತ್ಮನೇ ನನ್ನದಾಗಿದೆ. ಅದೇ ಜೊತೆಯಲ್ಲಿ ಬರುತ್ತದೆ. ಆತ್ಮನು ಎಂದಿಗೂ ಕಣ್ಣಿನಿಂದ ಯಾರಿಗೂ ಕಾಣಿಸುವುದೂ ಇಲ್ಲ. ಅದು ನಿಜದಲ್ಲಿ ಅನುಭವಕ್ಕೆ ಬರುತ್ತದೆ ಹಾಗೂ ಅದಕ್ಕಾಗಿ ಧರ್ಮ ಒಂದೇ ಆಸರೆಯಾಗಿದೆ. ಧರ್ಮಧ್ಯಾನದ ಮಹತ್ವ ತಿಳಿಯದವರೆಗೆ

ಸಂಸಾರವೇ ಒಳ್ಳೆಯದೆನಿಸುತ್ತದೆ. ಈ ಕಾರಣದಿಂದಾಗಿಯೇ ಎಲ್ಲಿ ನೋಡಿದಲ್ಲಿ ಪರಿಗ್ರಹವನ್ನು ಹೆಚ್ಚಿಸಿಕೊಳ್ಳುವ ಬಿರುಗಾಳಿ ಬೀಸುತ್ತಿದೆ. 70–80 ವರ್ಷಗಳ ಮುದುಕರು ಸಹ ತಮ್ಮ ಅಂತರಂಗದ ಜ್ಞಾನ ಚಕ್ಷುವನ್ನು ಮುಚ್ಚಿಕೊಂಡಿದ್ದಾರೆ. ಅವರು ಹೊರಗಿನ ವಸ್ತುಗಳನ್ನೇ ನೋಡಿ ಸಂತೋಷ ಪಡುತ್ತಿದ್ದಾರೆ ವಿನಹ ತಮ್ಮನ್ನು ನೋಡಲಾರದವರಾಗಿದ್ದಾರೆ. ಇದೇ ಸಂಸಾರದ ವಿಚಿತ್ರತೆಯಾಗಿದೆ. ನನ್ನದಾಗಿರುವುದನ್ನು ಒಪ್ಪಿಕೊಳ್ಳುತ್ತಿಲ್ಲ, ತನ್ನದಲ್ಲದ್ದನ್ನು ಒಪ್ಪಿಕೊಳ್ಳಲೇ ಬಾರದು ಆದರೆ ಅವೆಲ್ಲವುಗಳ ಬಗ್ಗೆ ಗರ್ವ ಅಭಿಮಾನ ಘಮಂಡಿ ಇವುಗಳನ್ನು ಪ್ರದರ್ಶಿಸುವಷ್ಟು ಅವು ಜೋರಾಗಿವೆ.

ಮನುಷ್ಯನ ಜೀವನದಲ್ಲಿ ಅಶಾಂತಿಗೆ ಏನು ಕಾರಣವಿದೆ ಎನ್ನುವುದನ್ನು ಅರಿಯದವರೆಗೆ ಮನುಷ್ಯನು ದುಃಖಿಯಾಗಿ ಆತಂಕಕ್ಕೆ ಒಳಗಾಗಿರುತ್ತಾನೆ. ಆತನು ಸಾಂಸಾರಿಕ ಸುಖದಲ್ಲಿ ತನ್ನ ಸುಖವನ್ನು ಹುಡುಕುತ್ತಾನೆ. ಅದು ಆತನಿಗೆ ಸಿಗದಿದ್ದಾಗ ಆತಂಕ ಇನ್ನೂ ಹೆಚ್ಚಾಗುತ್ತದೆ. ಸಾಂಸಾರಿಕ ಸುಖ–ಸಾಮಗ್ರಿಗಳು ಆತ್ಮನಿಗೆ ಎಂದಿಗೂ ಸುಖವನ್ನು ನೀಡಿಲ್ಲ. ಆತ್ಮನ ನಿಜವಾದ ಸುಖ ಶುಭ–ಧ್ಯಾನದಲ್ಲಿದೆ ಹಾಗೂ ಶುಭಧ್ಯಾನಕ್ಕಿಂತ ಮೊದಲು ಆತನು ಆತ್ಮಧ್ಯಾನದಲ್ಲಿ ಅವರೋಧಕವಾಗಿರುವ ಬಾಧಕ ತತ್ವಗಳಿಂದ ದೂರವಿರಬೇಕಾಗುತ್ತದೆ. ಸಾಂಸಾರಿಕ ವಿಷಯಗಳನ್ನು ತ್ಯಾಗ ಮಾಡದಿದ್ದರೆ ಕನಿಷ್ಠಪಕ್ಷ ಅವುಗಳನ್ನು ನಿಮಿತವಾಗುವಂತೆ ಮಾಡಬೇಕು. ಆಗಲೇ ಶರೀರದ ಗುಲಾಮತನ ಹಾಗೂ ಅದನ್ನು ಅಲಂಕರಿಸುವ, ರಕ್ಷಿಸುವ ಪ್ರವೃತ್ತಿ ಕಡಿಮೆಯಾಗುತ್ತದೆ. ಯಾವ ಯಾವ ಸಾಂಸಾರಿಕ ವಸ್ತುಗಳನ್ನು ನೀವು ನಿಮ್ಮವೆಂದು ಭಾವಿಸುತ್ತಿದ್ದೀರೋ ಅವುಗಳನ್ನು ಕಡಿಮೆ ಗೊಳಿಸುತ್ತಾ ಮುಂದೆ ಸಾಗಿ ಒಂದು ದಿನ ನಿಮ್ಮಿಂದ "ಪರ" ಬಿಟ್ಟು ಹೋದಾಗ ನಿಮ್ಮ ಚೇತನ ಆತ್ಮ "ಸ್ವ"ದ ಅನುಭವ ಆಗುತ್ತದೆ. ಆತ್ಮನ ಸಮೀಪ ತಲುಪುವ ಮಾರ್ಗದಲ್ಲಿರುವ ಬಾಧೆಗಳು ತಾವೇ ಹಿಂದೆ ಸರಿಯಬೇಕಾಗುತ್ತದೆ. ಆಗ ಮುಂದಿನ ಮಾರ್ಗ ಪ್ರಶಸ್ತವಾಗುತ್ತದೆ. ಇಚ್ಛೆಗಳ ಬಲೆ ಎಷ್ಟೆಷ್ಟು ಹೆಚ್ಚಾಗುತ್ತ ಸಾಗುತ್ತದೆಯೋ ಅಷ್ಟಷ್ಟು ಪರಿಗ್ರಹ ಹೆಚ್ಚಾಗುತ್ತಿರುತ್ತದೆ ಎಂಬುದು ಗಮನದಲ್ಲಿರಬೇಕು. ಬೆಂಕಿಗೆ ಇಂಧನವನ್ನು ಕೊಡುತ್ತಾ ಇರುವವರೆಗೆ ಬೆಂಕಿಯ ಹಸಿವು ಹೆಚ್ಚುತ್ತಲೇ ಇರುವಂತೆ ಮನಸ್ಸಿನ ಬೆಂಕಿಯು, ಸಂಸಾರ ರೂಪದ ಇಂಧನ ಇರುವವರೆಗೆ ಹೆಚ್ಚುತ್ತಲೇ ಇರುತ್ತದೆ. ಮನಸ್ಸಿನ ಬೆಂಕಿಗೆ ಸಂಸಾರದ ವಸ್ತುಗಳನ್ನು ನೀಡುವುದನ್ನು ನಿಲ್ಲಿಸುವವರೆಗೆ ಅದು ತಣ್ಣಗಾಗುವುದಿಲ್ಲ. ಆ ವಸ್ತುಗಳು ಇರುವವರೆಗೆ ಹಾಗೂ ಸಂಗ್ರಹದಲ್ಲಿರುವುದನ್ನು ಸಹ ಕಡಿಮೆ ಮಾಡುತ್ತಾ ಅವುಗಳಿಂದ ಮುಕ್ತರಾಗುವ ಪುರುಷಾರ್ಥ ಮಾಡಿದಾಗಲೇ ಮನಸ್ಸಿನ ಬೆಂಕಿಯು ತಣ್ಣಗಾಗುತ್ತದೆ. ಈ ಮನುಷ್ಯ ಜನ್ಮದಲ್ಲಿಯೇ ಇದೆಲ್ಲವನ್ನು ಮಾಡಬಲ್ಲ ಸಾಮರ್ಥ್ಯವಿದೆ. ಮಾನವ ಶರೀರವನ್ನು ಪಡೆದೂ ಸಹ ಅದನ್ನು ಆತ್ಮೋತ್ಥಾನದಲ್ಲಿ ತೊಡಗಿಸದಿದ್ದರೆ ಮುಂದೆ ಇಂತಹ ಅವಕಾಶ ಮತ್ತೆ ದೊರೆಯುವುದೇ ಎನ್ನುವುದನ್ನು ಹೇಳಲಾಗದು. ಆದ್ದರಿಂದ ಜಾಗೃತರಾಗಿರಿ ಹಾಗೂ ನಿಮ್ಮ ಮೂಲಧನ ಧರ್ಮದ ರಕ್ಷಣೆ ಹಾಗೂ ಆತ್ಮನಲ್ಲಿ ವ್ರತ, ನಿಯಮ, ಸಂಯಮಗಳಿಂದ ಗುಣಸಂಪತ್ತಿನ ರೂಪದ ಗಳಿಕೆ ಮಾಡುವಲ್ಲಿ

ತೊಡಗಿಸಿಕೊಳ್ಳಿ, ಅದರಿಂದ ಭವ-ಭವಗಳಲ್ಲಿ ಭ್ರಮಣೆ ಮಾಡುತ್ತಿರುವ ಆತ್ಮನು ಸಂಸಾರ ಚಕ್ರದಿಂದ ಮುಕ್ತನಾಗುವಂತಾಗಲಿ.

ನಿಮ್ಮ ಸುಖ ನಿಮ್ಮಲ್ಲಿಯೇ ಇದೆ
ಪರವಸ್ತುವಿನಲ್ಲಿ ವ್ಯರ್ಥವಾಗಿ ಪ್ರಯತ್ನಿಸದಿರಿ
ಜಗತ್ತಿನ ಸುಖವು ಮೃಗತೃಷ್ಣಾದಂತಿದೆ
ಜಗತ್ತಿನ ಪುರುಷಾರ್ಥ ಮಿಥ್ಯಾ ಆಗಿದೆ

# 19. ಪುರುಷಾರ್ಥವಿಲ್ಲದೇ ಯಾವ ಸಫಲತೆಯೂ ಇಲ್ಲ

ಜೀವನದಲ್ಲಿ ಯಾವುದೇ ಕಾರ್ಯವಿರಲಿ, ಅದು ಪುರುಷಾರ್ಥವಿಲ್ಲದೇ ಸಫಲವಾಗುವುದಿಲ್ಲ. ಕೇವಲ ನಿಯತ್ತಿನಿಂದ ಇದ್ದರೂ ಕಾರ್ಯವಾಗುವುದಿಲ್ಲ. ಮಗು ಬಾವಿಗೆ ಬಿದ್ದಿದ್ದರೆ, ಅದರ ಹಣೆಬರಹ ಹಾಗೇ ಇದ್ದರೆ ಆ ಮಗುವನ್ನು ಬದುಕಿಸುವ ಯಾವ ಅವಶ್ಯಕತೆ ಇಲ್ಲ ಎಂದು ಯಾರಾದರೂ ಹೇಳಿದರೆ ಆಗ ಆ ವ್ಯಕ್ತಿಯ ಬಗ್ಗೆ ಏನು ಹೇಳುತ್ತೀರಿ? ಅವರನ್ನು ಜ್ಞಾನಿ ಎನ್ನುವಿರೋ ಅಜ್ಞಾನಿ ಎನ್ನುವಿರೋ? ಬಾವಿಯಲ್ಲಿ ಬಿದ್ದಿರುವ ಮಗುವನ್ನು ಹೊರ ತೆಗೆಯಲು ಮಾಡುವ ಎಲ್ಲ ಪುರುಷಾರ್ಥ ಮಾಡುವವರನ್ನು ಜ್ಞಾನಿ ಎಂದು ತಿಳಿಯ ಬಹುದು. ಪುರುಷಾರ್ಥ ಮಾಡದೇ ಅಂಗಡಿಯಿಂದ ಲಾಭವಾಗಬಲ್ಲದೇ? ಕೆಲಸದ ಮೇಲೆ ಹೋಗದಿದ್ದರೆ ಸಂಬಳ ಸಿಗಬಹುದೆ? ರೊಟ್ಟಿಯನ್ನು ಬೇಯಿಸದಿದ್ದರೆ ಊಟ ಮಾಡಲು ಸಾಧ್ಯವೇ? ಅರ್ಥಾತ್ ಜಗತ್ತಿನ ಎಲ್ಲ ಒಳ್ಳೆಯ, ಕೆಟ್ಟ ಕಾರ್ಯಗಳಲ್ಲಿ ಪುರುಷಾರ್ಥ ಮಾಡಲೇ ಬೇಕಾಗುತ್ತದೆ; ಆಗಲೇ ಅವು ಪೂರ್ಣವಾಗಬಲ್ಲವು. ಹೀಗೆಯೇ ಧರ್ಮಧ್ಯಾನದಲ್ಲಿಯೂ ಪುರುಷಾರ್ಥ ಬಹಳ ಅವಶ್ಯವಿದೆ. ಪುರುಷಾರ್ಥವಿಲ್ಲದೇ ಯಾವ ಸಫಲತೆಯೂ ಇಲ್ಲ. ಕೇವಲ ಹಣೆ ಬರಹದಲ್ಲಿ ಏನು ಬರೆದಿದೆಯೋ ಅದೇ ಆಗುವುದಾದರೆ. ಧರ್ಮ ಕರ್ಮ ಯಾಕೆ ಮಾಡಬೇಕು ಎಂದು ಹೇಳಿದರೆ, ಅದು ನಮ್ಮ ಅಜ್ಞಾನದ ಪರಿಚಯ ನೀಡುತ್ತದೆ. ಸಾಂಸಾರಿಕ ಕಾರ್ಯಗಳಲ್ಲಿ ಎಚ್ಚರಿಕೆಯಿಂದ ಇರುವಂತೆ ಧರ್ಮ ಧ್ಯಾನದಲ್ಲಿ ವಿವೇಕವನ್ನು ಮುಂದಿಟ್ಟುಕೊಂಡು ನಿಜವಾದ ಶ್ರದ್ಧೆ, ಆಸ್ಥೆ ಮತ್ತು ವಿಶ್ವಾಸದೊಂದಿಗೆ ಪುರುಷಾರ್ಥ ಮಾಡಿದರೆ ಗಡಿ ಪಾರಾಗುವುದು ನಿಶ್ಚಿತವಾಗಿದೆ. ಜಗತ್ತಿನಲ್ಲಿ ಮುಕ್ತರಾಗಿರುವ ಎಲ್ಲ ಮಹಾನ್ ಆತ್ಮಗಳು ಪುರುಷಾರ್ಥ ಮಾಡಿಯೇ ಎಲ್ಲವನ್ನು ಸಾಧಿಸಿದ್ದಾರೆ. ಆದ್ದರಿಂದ ಭವ-ಭವಗಳ ಹುಟ್ಟು ಸಾವುಗಳಿಂದ ಬಿಡುಗಡೆ ಹೊಂದಲು, ನಮ್ಮ ಆತ್ಮಕಲ್ಯಾಣಕ್ಕಾಗಿ ನಿಜವಾದ ಪುರುಷಾರ್ಥವನ್ನು ಅವಶ್ಯವಾಗಿ ಮಾಡಬೇಕು.

ಧರ್ಮಧ್ಯಾನದ ಯಾವುದೇ ಕ್ಷಣ ಹಾಗೂ ಪ್ರಸಂಗವಿರಲಿ, ಆಗ ಮೊದಲು ನಮ್ಮ ಮನಸ್ಸನ್ನು ಶುದ್ಧ ಹಾಗೂ ಪವಿತ್ರ ಮಾಡಿಕೊಳ್ಳಿರಿ. ರಾಗ-ದ್ವೇಷ ಹಾಗೂ ಐದೂ ಪಾಪಗಳನ್ನು ತ್ಯಾಗ ಮಾಡಿ ಸಾಮಾಯಿಕ ಮಾಡಿದರೆ ಪಾವನವಾಗುತ್ತದೆ. ನಮ್ಮ ಮನಸ್ಸಿನಲ್ಲಿ ಅಶುಭ ಧ್ಯಾನವಿರದಿದ್ದಾಗ ಹಾಗೂ ಐದೂ ಪಾಪಗಳ ತ್ಯಾಗದ ಸಂಕಲ್ಪವಾದಾಗ ಆ ಕ್ಷಣವು ನಿಜವಾದ ಸಾಧನೆಯ ಲಾಭವನ್ನು ನೀಡುತ್ತದೆ. ಸಾಧನೆಯಾಗಿರಲಿ, ಭಕ್ತಿಯಾಗಿರಲಿ, ಅಭಿಷೇಕವಿರಲಿ, ಧ್ಯಾನವಿರಲಿ ಅವುಗಳಲ್ಲಿರುವ ಭಾದಕ ತತ್ತ್ವಗಳಿಂದ ದೂರವಾಗಿ ಶುದ್ಧ ಮನಸ್ಸಿನಿಂದ ಧರ್ಮಧ್ಯಾನ ಮಾಡಿದಾಗ. ಅದೇ ಪುಣ್ಯಫಲದ ಕಾರಣವಾಗುತ್ತದೆ. ಆಗಲೇ ಆರ್ತ-ರೌದ್ರ ಧ್ಯಾನಗಳು ದೂರವಾಗುತ್ತವೆ. ಜೀವನದಲ್ಲಿ ಇಂತಹ ಅಭ್ಯಾಸ ಹಾಗೂ ಪುರುಷಾರ್ಥ ನಿಯಮಿತವಾಗಿದ್ದರೆ ಒಂದು ದಿನ ನಮ್ಮ ಆತ್ಮನು ಸಂಸಾರದಿಂದ ಮೇಲೆ

ಏಳಬಲ್ಲನು. ಸಾಂಸಾರಿಕ ಕಾರ್ಯಗಳಲ್ಲಿ ವ್ಯಕ್ತಿಯು ಪೂರ್ಣ ಪರಿಶ್ರಮವಷ್ಟೇ ಅಲ್ಲ ಎಲ್ಲ ರೀತಿಯಲ್ಲಿಯೂ ಜಾಗೃತ ಹಾಗೂ ಚಾಲಾಕಿತನ ಮಾಡಿಯೂ ಮತ್ತು ಧರ್ಮಧ್ಯಾನ ಮಾಡುವಲ್ಲಿ ಹಣೆ ಬರಹದಲ್ಲಿ ಇದ್ದಂತೆಯೇ ಆಗುತ್ತದೆ ಎಂದು ಹಿಂದೆ ಸರಿಯುತ್ತಿರುವುದು ವಿಡಂಬನೆಯಾಗಿದೆ. ಧರ್ಮದಲ್ಲಿ ಇಂತಹ ತಪ್ಪು ಚಿಂತನೆ ಮಿಥ್ಯಾತ್ವ ವಿಚಾರಧಾರೆ ಮತ್ತು ಅಜ್ಞಾನದಿಂದ ಕೂಡಿದ ಮಾನಸಿಕತೆಯನ್ನು ಬದಲಾಯಿಸ ಬೇಕಾಗುತ್ತದೆ, ಆಗಲೇ ಧರ್ಮ ಧ್ಯಾನಕ್ಕಾಗಿ ಸರಿಯಾದ ಪುರುಷಾರ್ಥ ಮಾಡಲು ಸಾಧ್ಯಾವಾಗುತ್ತದೆ.

ಸಂಸಾರೀ ಪ್ರಾಣಿಗಳಿಗೆ ಸಂಸಾರೀ ವಸ್ತುಗಳ ಬಗ್ಗೆ ರಾಗಭಾವವಿರುವಂತೆ ರಾಗವು ನಮ್ಮ ಧರ್ಮ–ಧ್ಯಾನದೊಂದಿಗೆ ಆಗಿದ್ದೇಯಾದರೆ ಜೀವನದ ಉನ್ನತಿ ನಿಶ್ಚಿತವಾಗಿರುತ್ತದೆ. ವಿಷಯ–ವಾಸನೆಗಳೊಂದಿಗೆ ರಾಗ–ಭಾವ ಉಂಟಾದರೆ ಅದು ಪತನಕ್ಕೆ ಕಾರಣವಾಗುತ್ತದೆ ಹಾಗೂ ಭಗವಂತ, ಗುರು–ಶಾಸ್ತ್ರ, ಜಿನವಾಣಿಗಳ ಬಗ್ಗೆ ಪ್ರಶಸ್ತವಾದ ರಾಗಭಾವ ಉಂಟಾದರೆ ಅದು ಪುಣ್ಯದ ಪ್ರಾಪ್ತಿಗೆ ಕಾರಣವಾಗುತ್ತದೆ, ಪ್ರಶಸ್ತ ಭಾವವು ಕೆಟ್ಟದ್ದಲ್ಲ. ಯಾಕೆಂದರೆ ಆತ್ಮನು ಮುಕ್ತನಾಗುವವರೆಗೆ ಸಂಯಮ–ನಿಯಮ ಹಾಗೂ ನಿರ್ಗ್ರಂಥ ಅವಸ್ಥೆಗಳಿರುವುದಿಲ್ಲ. ಆದ್ದರಿಂದ ಅಲ್ಲಿಯವರೆಗೆ ಸಂಸಾರೀ ಪ್ರಾಣಿಗಳು ಪ್ರಶಸ್ತ ರಾಗಗಳ ಆಲಂಬನದಿಂದ ಸಾಕಷ್ಟು ಪುಣ್ಯಾರ್ಜನೆ ಮಾಡಬಹುದು, ಪಾಪ ಮಾಡಲು ಸಾಕಷ್ಟು ಕಾರಣಗಳಿರುವಂತೆ ಪುಣ್ಯಗಳಿಸಲು ಸಹ ಬಹಳಷ್ಟು ಸಾಧನಗಳಿವೆ. ನಮ್ಮ ಮನೋವೃತ್ತಿಗಳು ಇರುವ ಹಾಗೆಯೇ ನಮ್ಮ ಗತಿ ರೂಪಿತವಾಗುತ್ತದೆ. ಸಂಸಾರದಲ್ಲಿಯೇ ಮುಳುಗಿರುವವರು ದುರ್ಗತಿ ಹೊಂದುತ್ತಾರೆ. ಸಂಸಾರದಿಂದ ದೂರವಾಗುತ್ತಾ ಸಾಗುವವರು ಸದ್ಗತಿಯಷ್ಟೇ ಅಲ್ಲ ಮುಕ್ತಿಯನ್ನು ಸಹ ಪಡೆಯುತ್ತಾರೆ, ಆದ್ದರಿಂದ ಕೇವಲ ನಿಯತ್ತನ್ನಷ್ಟೇ ಅಲ್ಲದೇ ಅನಿಯತ್ತತೆಯನ್ನು ಸಹ ತಿಳಿದಿರಬೇಕು. ನಿಯತ್ತಿನಿಂದಿರುವಾಗ ಪುರುಷಾರ್ಥ ಬೇಕಾಗಿಲ್ಲ, ಅನಿಯತ್ತತೆಯಲ್ಲಿಯೇ ಪುರುಷಾರ್ಥ ಮಾಡಬೇಕಾಗುತ್ತದೆ. ಪುರುಷಾರ್ಥವಿಲ್ಲದೆ ಕಲ್ಯಾಣವಾಗುವುದಿಲ್ಲ. ನಾವು ನಮ್ಮ ಮನಸ್ಸನ್ನು ಶುದ್ಧ ಮಾಡುವ ರೀತಿಯನ್ನು ತಿಳಿದಾಗಲೇ ನಿಜವಾದ ಪುರುಷಾರ್ಥ ಮಾಡಲು ಸಾಧ್ಯವಾಗುತ್ತದೆ. ಮನಸ್ಸನ್ನು ಪವಿತ್ರಗೊಳಿಸುವ ಮಾಧ್ಯಮ ಧರ್ಮವೇ ಆಗಿದ್ದು, ಧರ್ಮಧ್ಯಾನವು ಆತ್ಮನ ಉತ್ಥಾನದಲ್ಲಿ ಸಹಾಯಕವಾಗುತ್ತದೆ. ಗುರುವಿನ ಶಿಷ್ಯನಾಗಲು ಆಗದಿದ್ದರೆ ಭಕ್ತನಾದರೂ ಆಗಬೇಕು. ಭಕ್ತರಾದವರೇ ಗುರುವಿನ ಬೆದರಿಕೆಯಲ್ಲಿಯೂ ತಮ್ಮ ಉಪಕಾರವಾಯಿತೆಂದು ಭಾವಿಸುತ್ತಾರೆ. ಗುರುವು ತನ್ನವರೆಂದು ಭಾವಿಸಿದವರಿಗೇನೇ ಬೆದರಿಸುತ್ತಾರೆ. ನಿಜವಾದ ಭಕ್ತರು ಗುರು ತಮ್ಮ ಉಪಕಾರಿಗಳೆಂದು ಯೋಚಿಸುತ್ತಾರೆ. ಆದ್ದರಿಂದ ನಮ್ಮನ್ನು ತಮ್ಮವರೆಂದು ತಿಳಿದು ಬೆದರಿಸುತ್ತಾರೆ. ತಪ್ಪನ್ನು ತಿದ್ದಿಕೊಳ್ಳುವ ಮಾರ್ಗ ತೋರಿಸುತ್ತಾರೆ, ಆದ್ದರಿಂದ ಧರ್ಮಧ್ಯಾನದ ಬಗ್ಗೆ ಕರ್ತವ್ಯ ಹೀನ ಹಾಗೂ ಪ್ರಮಾದಿ ಆಗದೇ ಸಮರ್ಪಣಾ ಭಾವದಿಂದ ಪುರುಷಾರ್ಥ ಮಾಡಿದರೆ ಜೀವನದ ವಾಸ್ತವಿಕ ಹಿತವಿದೆ.

# 20. "ಧರ್ಮದ ರಕ್ಷಣೆ ಧರ್ಮದಿಂದಲೇ ಆಗಬಲ್ಲದು"

ಧರ್ಮದ ಸಂಸ್ಕಾರಗಳಲ್ಲಿ ಯಾಕೆ ಪತನವಾಗುತ್ತಲಿದೆ ಎಂದು ಯಾವಾಗಲಾದರೂ ಚಿಂತನೆ ಮಾಡಿದ್ದೀರಾ? ಅದಕ್ಕೆ ಕಾರಣವೆಂದರೆ ಜನರು ಧರ್ಮದ ಸಂಸ್ಕಾರಗಳಿಂದ ದೂರವಾಗುತ್ತಿದ್ದಾರೆ, ಆ ಕಾರಣದಿಂದಾಗಿ ಪಾಪ ಕಾರ್ಯಗಳು ಹೆಚ್ಚಾಗುತ್ತಲಿವೆ. ಮಿಥ್ಯಾತ್ವ ಹೆಚ್ಚಾಗಲು ನಾವು ನಮ್ಮ ಶಾಶ್ವತ ಧರ್ಮದ ಮೂಲ ಅವಧಾರಣೆಗಳನ್ನು ಮರೆಯುತ್ತಿದ್ದೇವೆ ಹಾಗೂ ನಮ್ಮ-ನಮ್ಮ ಸೌಲಭ್ಯ ಹಾಗೂ ಅನಿಸಿಕೆಗಳ ಅನುಕೂಲ ಧರ್ಮವನ್ನು ಔಪಚಾರಿಕವಾಗಿ ಸ್ವೀಕರಿಸಿರುವುದು ಕಾರಣವಾಗಿದೆ. ಇದರಿಂದಾಗಿ ಹೆಜ್ಜೆ ಹೆಜ್ಜೆಗೂ ಶಿಥಿಲಾಚಾರ ಹೆಚ್ಚುತ್ತಲಿದೆ, ಶಿಥಿಲಾಚಾರ ಹಾಗೂ ಮಿಥ್ಯಾತ್ವದ ಹೇಳಿಕೆಗಳೇ ಪಾಪ ಪ್ರವೃತ್ತಿಗಳು ಹೆಚ್ಚಾಗುವುದು ಸ್ವಾಭಾವಿಕ ಪ್ರವೃತ್ತಿಯಾಗಿದೆ. ಧರ್ಮದ ರಕ್ಷಣೆ ಧರ್ಮದಿಂದಲೇ ಆಗುತ್ತದೆ ಎಂಬ ಸಂಗತಿಯನ್ನು ನಾವು ತಿಳಿಯುವವರೆಗೆ ಪಾಪದ ಪ್ರವೃತ್ತಿಗಳ ಮೇಲೆ ಅಂಕುಶ ಹೊಂದಲು ಸಾಧ್ಯವಿಲ್ಲ. ಪಾಪ ಹೆಚ್ಚಾಗುತ್ತಲೇ ಇದ್ದರೆ ಧರ್ಮ ಹೇಗೆ ಉಳಿಯಬಲ್ಲದು? ಮೂಲತಃ ಧರ್ಮವು ಮನುಷ್ಯನಿಗೆ ಬದುಕುವುದನ್ನು ಕಲಿಸುತ್ತದೆ. ನಮ್ರತೆ ಮತ್ತು ಸಮರ್ಪಣೆಯಾಗುವ ಪ್ರೇರಣೆಯನ್ನು ನೀಡುತ್ತದೆ. ಸತ್ಯ ಅಹಿಂಸೆ ಮತ್ತು ಸದಾಚಾರದ ಭಾವನೆಗಳು ಜಾಗೃತವಾಗುವುದಷ್ಟೇ ಅಲ್ಲ ಅವುಗಳ ಬಗ್ಗೆ ಇಚ್ಛಾಶಕ್ತಿಯನ್ನು ದೃಢಪಡಿಸುತ್ತದೆ. ಭಕ್ತಿಯಿಂದ ಭಗವಂತನಾಗುವ ಹಾಗೂ ಸಂಯಮದ ಮಾರ್ಗದಲ್ಲಿ ಸಾಗುತ್ತಾ ಮೋಕ್ಷದ ಮಾರ್ಗವನ್ನು ತೋರಿಸುತ್ತದೆ. ಪ್ರತಿಯೊಂದು ಪ್ರಾಣಿಯ ಬಗ್ಗೆ ದಯೆ, ಕರುಣೆ, ಅನುಕಂಪ ಭಾವನೆಗಳಿಂದ ಜೀವನವನ್ನು ಸುಗಮ ಗೊಳಿಸುತ್ತದೆ. ಆದರೆ ಹೀಗೆ ಆಗದಿರುವುದರಿಂದಲೇ ಪಾಪ ಹೆಚ್ಚಾಗುತ್ತಲಿದೆ. ಈಗ ಪಾಪದ ಕಾರ್ಯಗಳು ಹೆಚ್ಚಾಗುತ್ತಲಿವೆ. ಆದ್ದರಿಂದಲೇ ಪಾಪ ಹುಟ್ಟುತ್ತದೆ, ಬೆಳೆಯುತ್ತದೆ ಆದ್ದರಿಂದ ನಿಮ್ಮ ಪುಣ್ಯವನ್ನು ಹೆಚ್ಚಿಸಿ ಕೊಳ್ಳಬೇಕೆಂದರೆ ಧರ್ಮದೊಂದಿಗೆ ಬೆರೆಯಿರಿ. ನಾವು ಧರ್ಮದ ರಕ್ಷಣೆ ಮಾಡಿದಾಗ ಧರ್ಮ ಸುರಕ್ಷಿತವಾಗಿ ವಿಕಸನ ಹೊಂದುತ್ತದೆ, ಧರ್ಮವೇ ಈ ಜಗತ್ತಿನಲ್ಲಿ ಎಲ್ಲಕ್ಕಿಂತ ಅಮೂಲ್ಯವಾಗಿದೆ ಹಾಗೂ ಆ ರತ್ನತ್ರಯ ಧರ್ಮವನ್ನು ನಮ್ಮ ಆಚರಣೆ ಹಾಗೂ ವ್ಯವಹಾರಗಳಿಂದ ಅಳವಡಿಸಿಕೊಂಡು ಸರಿಯಾಗಿ ಪ್ರಭಾವನೆ ಮಾಡಿದರೆ, ಅದರಿಂದ ಕಲ್ಯಾಣವಾಗಬಲ್ಲದು.

ನಾವು 24 ಗಂಟೆಗಳಲ್ಲಿ ಹೆಚ್ಚು ಪುಣ್ಯ ಅಥವಾ ಪಾಪವನ್ನು ಮಾಡುತ್ತೇವೆಯೇ? ಇದನ್ನು ಯೋಚಿಸಿದಾಗ ಬಹಳ ಕಡಿಮೆ ಪುಣ್ಯವನ್ನು ಹೆಚ್ಚು ಪಾಪವನ್ನು ಮಾಡುತ್ತೇವೆಂದು ತಿಳಿದು ಬರುತ್ತದೆ. ಪಾಪ ಹೆಚ್ಚಾಗುತ್ತಿರುವಾಗ ನಾಲ್ಕೂ ಕಡೆ ಅಶಾಂತಿ, ಒತ್ತಡ ಮತ್ತು ಹಿಂಸೆ ಹೆಚ್ಚಾಗುತ್ತಿರುತ್ತದೆ ಮನೆ-ಮನೆಗಳಲ್ಲಿ ಮಹಾಭಾರತವಾಗಲು ಕಾರಣ ಪಾಪ ಪ್ರವೃತ್ತಿಗಳಲ್ಲಿ ತೊಡಗಿರುವುದೇ ಆಗಿದೆ. ಸಮಾಜವಿರಲಿ ಅಥವಾ ರಾಷ್ಟ್ರವಿರಲಿ ಅವುಗಳಲ್ಲಿ ಪರಸ್ಪರ ಹಾನಿ, ದ್ವೇಷ, ಅಸೂಯೆ,

ಮಾಯಾಚಾರಗಳೇ ಕಂಡು ಬರುತ್ತಿದ್ದರೆ ಆಗ ಪಾಪದ ಚಟುವಟಿಕೆಗಳೇ ಹೆಚ್ಚಾಗುತ್ತಲಿವೆ ಎಂದೇ ಅರ್ಥ. ಪಾಪದ ರೂಪಗಳು ಬಹಳ ಇವೆ. ಅವು ಬೇರೆ ಬೇರೆ ರೀತಿಗಳಿಂದ ಮನುಷ್ಯನನ್ನು ಪಾಪ ಮಾಡುವುದರಲ್ಲಿಯೂ ಸುಖದ ಅನುಭೂತಿಯನ್ನು ಹೊಂದುವಂತೆ ಸೈತಾನ, ಚಾಲಾಕಿ, ಧೂರ್ತ, ಸ್ವಾರ್ಥಿ, ಅನ್ಯಾಯ, ನಿರ್ಮಮತ್ವಿ, ಕ್ರೂರಿ ಹಾಗೂ ಅಜ್ಞಾನಿಗಳನ್ನಾಗಿ ಮಾಡುತ್ತವೆ. ಅವು ಪಾಪವನ್ನು ಪಾಪವೆಂದೇ ಭಾವಿಸದೇ ಇರುವುದರಿಂದ ಪಾಪ ಹೆಚ್ಚಾಗುತ್ತಲಿದೆ, ಆದ್ದರಿಂದ ಸ್ವತಃ ಪಾಪದಿಂದ ರಕ್ಷಿಸಿಕೊಂಡರೆ ಪುಣ್ಯ ಹೆಚ್ಚಾಗಬಹುದು, ಪುಣ್ಯದ ಉದಯವಾದಾಗ ಸಾಧುಗಳ ಸಂಗ ದೊರೆಯ ಬಲ್ಲದು. ನಮ್ಮ ಪುಣ್ಯ ಕರ್ಮವೇ ಸಾಧುವನ್ನು ಸೆಳೆಯುತ್ತದೆ. ಸಾಧುವಿನ ಸಾನಿಧ್ಯ ದೊರಕಿದ ನಂತರವೂ, ನಮ್ಮ ಪಾಪ ಪ್ರವೃತ್ತಿಗಳು ಕಡಿಮೆಯಾಗದಿದ್ದರೆ ಇದಕ್ಕಿಂತ ದೊಡ್ಡ ದೌರ್ಭಾಗ್ಯ ಇನ್ನೊಂದಿರಲಾರದು.

ಇಂದಿನ ಯುವ ಪೀಳಿಗೆ ಟಿ.ವಿ ಸಿನೆಮಾಗಳ ಕಡೆಗೆ ಹೆಚ್ಚು ಆಕರ್ಷಿತರಾಗುತ್ತಿದ್ದಾರೆ. ಈಗಂತೂ ಮೊಬೈಲ್‌ನಲ್ಲಿಯೂ ಪಿಕ್ಚರ್ ಹಾಗೂ ಸಿನೆಮಾ ಹಾಡುಗಳು ಬರತೊಡಗಿವೆ. ಕಂಪ್ಯೂಟರ್ ಹಾಗೂ ಸಿ.ಡಿ ಪ್ಲೇಯರ್‌ಗಳ ಕಾಲ ಹೆಚ್ಚಾಗುತ್ತಲಿದೆ. ಅರ್ಥಾತ್ ವಿವಿಧ ರೀತಿಯ ಆಧುನಿಕ ಸಾಧನಗಳು ಯುವ ಪೀಳಿಗೆಗೆ ತಪ್ಪು ಶಿಕ್ಷಣ ನೀಡುತ್ತಲಿದೆ. ವಿಷಯ-ವಾಸನೆಯ ಬೆಂಕಿಯನ್ನು ಹೆಚ್ಚಿಸುವ ಕಾರ್ಯವಾಗುತ್ತಲಿದೆ, ಹೀಗಿರುವಾಗ ರಕ್ತಸಂಬಂಧ ಹೇಗೆ ಉಳಿದೀತು. ಇಂತಹ ಮಾನಸಿಕ ವಿಕೃತಿಯುಳ್ಳ ಪೀಳಿಗೆಯಿಂದ ಹೇಗೆ ಧರ್ಮ ರಕ್ಷಣೆಯಾಗಬಲ್ಲದು? ಧರ್ಮದ ಸಂಸ್ಕಾರ ಇಲ್ಲದಿರುವಾಗ, ತಾಯಿ ತಂದೆಗಳ ಕಾಳಜಿಯನ್ನು ಅವರ ಸಂತಾನ ಮಾಡಲಾರದು. ಧರ್ಮದ ಪ್ರಭಾವನೆ ಇದ್ದಾಗಲೇ ಸಹೋದರ-ಸಹೋದರಿಯರ ಸಂಬಂಧ ಪಾವನವಾಗಿರಬಲ್ಲದು. ಆದ್ದರಿಂದ ಧರ್ಮವನ್ನು ವೃದ್ಧಿಸಿರಿ ಇದರಲ್ಲಿಯೇ ಎಲ್ಲರ ಕಲ್ಯಾಣ ಅಡಗಿದೆ. ಪಾಪವನ್ನು ತಗ್ಗಿಸುತ್ತಾ ಸಾಗಿರಿ, ಆಗ ಧರ್ಮ ತನ್ನಷ್ಟಕ್ಕೆ ತಾನೇ ಹೆಚ್ಚಾಗುತ್ತಾ ವೃದ್ಧಿಸುತ್ತಾ ಸಾಗುತ್ತದೆ. ಧರ್ಮದಿಂದಲೇ ಶಾಂತಿ ಸಿಗಬಲ್ಲದು ಹಾಗೂ ಧರ್ಮದಿಂದಲೇ ಸಮಾಜ ಹಾಗೂ ರಾಷ್ಟ್ರವೂ ಸುಭಿಕ್ಷವಾಗಿರಬಲ್ಲದು. ಇಂದು ಹೇಗೆ ರೇಡಿಯೋದ ಧ್ವನಿಕಂಡು ಬರುವುದಿಲ್ಲವೊ ಹಾಗೆಯೇ ಕರ್ಮವು ಕಂಡು ಬರುವುದಿಲ್ಲ. ಯಾರ ಕರ್ಮ ಹೇಗಿರುತ್ತದೆಯೋ ಅದರ ಫಲ ಅವರಿಗೆ ದೊರೆಯುತ್ತದೆ. ಪ್ರತಿ ಕ್ಷಣವು ಒಳ್ಳೆಯ-ಕೆಟ್ಟ ಕರ್ಮಗಳು ಬಂಧವಾಗುತ್ತವೆ. ಸ್ವಪ್ನದಲ್ಲಿ ಅಥವಾ ಮಲಗಿರುವಾಗ ಸಹ ಕರ್ಮ ಬಂಧವಾಗುತ್ತದೆ. ಆದ್ದರಿಂದ ನಿಮ್ಮ ಪ್ರತಿಯೊಂದು ಕ್ಷಣವನ್ನು ದುರ್ಲಭವೆಂದು ಭಾವಿಸುತ್ತಾ ಅದನ್ನು ಪಾವನ ಪವಿತ್ರಗೊಳಿಸಿರಿ. ಅದರಿಂದ ಪಾಪ ಕಡಿಮೆಯಾಗಲಿ ಹಾಗೂ ಪುಣ್ಯ ವೃದ್ಧಿಸಲಿ. ಇದೇ ಜೀವನದ ಸಾರವಾಗಿದೆ.

# 21. ಸಪ್ತ ವ್ಯಸನಗಳಿಂದ ದೂರವಿರುವವರೇ ನಿಜವಾದ ಭಕ್ತರು

ಇತ್ತೀಚಿನ ದಿನಗಳಲ್ಲಿ ಭಗವಂತನ ಸನ್ನಿಧಿಯಲ್ಲಿ ಬಹಳಷ್ಟು ಭಕ್ತರು ದೌಡಾಯಿಸಿದಾಗ ಅಲ್ಲಲ್ಲಿ ಲಕ್ಷಾಂತರ ಭಕ್ತರ ಸಮೂಹ ಏಕತ್ರಿತವಾಗಿರುವಂತೆ ತೋರುತ್ತದೆ. ಉದ್ದುದ್ದದ ಸರದಿ ಸಾಲುಗಳು ಏರ್ಪಟ್ಟು ಅನೇಕ ಗಂಟೆಗಳ ನಂತರ ಭಕ್ತರಿಗೆ ತಮ್ಮ ಆರಾಧ್ಯರ ದರ್ಶನ ಅಥವಾ ವಂದನೆ ಮಾಡುವ ಅವಕಾಶ ದೊರೆಯುತ್ತದೆ. ನಿಜವಾದ ಭಕ್ತರು ಯಾರು ಎಂದು ಯಾವಾಗಲಾದರೂ ಯೋಚಿಸಿದ್ದೀರಾ? ಮಂದಿರ ಅಥವಾ ತೀರ್ಥಕ್ಷೇತ್ರಗಳಲ್ಲಿ ಹೋಗಿ ಭಕ್ತಿ ಮಾಡುವವರೇ ಭಕ್ತರಾಗಿರುವುದಿಲ್ಲ, ಬದಲಾಗಿ ಸಪ್ತ ವ್ಯಸನಗಳಿಂದ ದೂರ ಇರುವವರು ನಿಜವಾದ ಭಕ್ತರಾಗಿದ್ದಾರೆ. ಹಿಂಸೆಯ ಕಾರ್ಯಗಳಿಂದ ಸ್ವಯಂ ದೂರವಿರುವವರು ಹಾಗೂ ಅನ್ಯರಿಗೂ, ಅಹಿಂಸೆಯ ಪಾಠವನ್ನು ಓದಿಸುವವರು, ಅಂತರಂಗದಲ್ಲಿ ದಯೆ ಮತ್ತು ಕರುಣಾಭಾವ ಹೊಂದಿರುವವರು ನಿಜವಾದ ಭಕ್ತರಾಗಿದ್ದಾರೆ. ಇವಿಲ್ಲದಿರುವವರು ನಿಜವಾದ ಭಕ್ತರಾಗಲಾರರು. ದಯೆಯು ಧರ್ಮದ ಮೂಲವಾಗಿದೆ ಹಾಗೂ ಇದರಿಂದ ದೂರನಾಗಿರುವ ವ್ಯಕ್ತಿ ಎಂದಿಗೂ ಭಗವಂತನ ಭಕ್ತನಾಗಲಾರ, ನಿಜವಾದ ಭಕ್ತನೇ ಭಗವಂತನನ್ನು ತಿಳಿಯಬಲ್ಲ ಹಾಗೂ ಪುರುಷಾರ್ಥ ಮಾಡಿದರೆ ಆತನು ಸ್ವತಃ ಒಂದು ದಿನ ಭಗವಂತನಾಗಿ ಬಿಡುತ್ತಾನೆ.

ಇನ್ನೊಬ್ಬರು ನೋಡಲಿ ಎನ್ನುವ ಕಾರಣದಿಂದ ಕೇವಲ ಹೆಸರಿಗಾಗಿ ಭಕ್ತರಾಗಬಾರದು. ಬದಲಾಗಿ ಸದಾಚಾರದೊಂದಿಗೆ ಧರ್ಮದ ಆಚರಣೆ ಮಾಡುತ್ತಾ ನಿಜವಾದ ಭಕ್ತರಾಗಬೇಕು. ಧರ್ಮದ ಉದ್ದೇಶವೇ ಪಾಪಕಾರ್ಯಗಳಿಂದ ಸ್ವತಃ ದೂರವಿರುವುದು ಹಾಗೂ ಒಳ್ಳೆಯ ವಿಷಯಗಳನ್ನು ಸ್ವೀಕರಿಸುವುದಾಗಿದೆ, ವ್ಯಕ್ತಿಗಳಲ್ಲಿ ಸಾಂಸಾರಿಕ ವ್ಯಸನಗಳಿದ್ದರೆ ಹಿಂಸೆಯ ಕಾರ್ಯಗಳನ್ನು ಮಾಡುತ್ತಾರೆ, ತಮ್ಮ ಸಿದ್ಧಾಂತಗಳ ಬಗ್ಗೆ ಯೋಚಿಸುವುದಿಲ್ಲ, ಅವರು ಎಂದಿಗೂ ಧರ್ಮೀಯ ರಾಗಲಾರರು. ಹೀಗೆಯೇ 'ಜೈನ' ಎಂದರೆ ತಮ್ಮ ಇಂದ್ರಿಯಗಳನ್ನು ಗೆದ್ದವರು ಹಾಗೂ ಹಿಂಸೆಯ ಕಾರ್ಯಗಳಿಂದ ದೂರವಾದವರು. ಜಿನೇಂದ್ರಭಕ್ತಿ ಮಾಡುವುದರಿಂದ ಇಂತಹ ಶ್ರಾವಕ (ಭಕ್ತ)ರಿಗೆ ಅಕ್ಷಯ ಪುಣ್ಯ ದೊರೆಯುತ್ತದೆ. ಚರ್ಮದ ಚಪ್ಪಲ್ಲಗಳನ್ನು ಧರಿಸುವವರು, ರಾತ್ರಿ ಭೋಜನ ಮಾಡುವವರು, ಮಾದಕ ವಸ್ತುಗಳನ್ನು, ಮಾಂಸಾಹಾರವನ್ನು ಸೇವಿಸುವವರು, ಭ್ರೂಣ ಹತ್ಯೆಯ ಪಾಪ ಮಾಡಿಸುವವರು ಧರ್ಮಾತ್ಮರಾಗಲಾರರು. ಫ್ಯಾಶನ ಹಾಗೂ ವ್ಯಸನಗಳಿಂದ ಕೂಡಿರುವವರು ಭಗವಂತನ ಭಕ್ತಿಯಲ್ಲಿ ಲೀನರಾಗಲಾರರು. ಧರ್ಮವು ದೇವಾಲಯ ಅಥವಾ ತೀರ್ಥಕ್ಷೇತ್ರಗಳ ವರೆಗೆ ಮಾತ್ರ ಇಲ್ಲ ಬದಲಾಗಿ ಅದು ತನ್ನ ಮನೆ, ಪರಿವಾರ, ಅಂಗಡಿ, ಫ್ಯಾಕ್ಟರಿ, ಆಫೀಸ್ ಮತ್ತು ಪೇಟೆಗಳಲ್ಲಿಯೂ ಜೊತೆಯಾಗಿರಬೇಕು, ಆಗಲೇ ನಿಜವಾದ ಭಕ್ತರಾಗಬಲ್ಲೆವು.

ಜೀವನದಲ್ಲಿ ನಿಯಮ ಮತ್ತು ಸಂಕಲ್ಪ ಇರದಿದ್ದರೆ ಸ್ವಚ್ಛಂದತೆ ಹೆಚ್ಚಾಗುತ್ತಾ ಸಾಗುತ್ತದೆ. ಇತ್ತೀಚೆಗೆ ಸಪ್ತ ವ್ಯಸನಗಳಿಂದ ಕೂಡಿದವರು ಸಹ ತಮ್ಮನ್ನು 'ಭಕ್ತ'ರೆಂದು ಭಾವಿಸಿದ್ದಾರೆ ಹಾಗೂ ಅನೇಕ ಮಹನೀಯರು, ಅಧರ್ಮ ಜನರು ಸಮಾಜದ ವೇದಿಕೆಗಳಲ್ಲಿ ಸನ್ಮಾನಿತರಾಗುತ್ತಿರುವುದು ವಿಡಂಬನೆಯಾಗಿದೆ. ಧಿಕ್ಕಾರಕ್ಕೊಳಗಾಗ ಬೇಕಾದ ಜನರು ತಮ್ಮ ಧನ–ಸಂಪತ್ತಿನ ಬಲದಿಂದ ಮುಖ್ಯ ಅತಿಥಿಗಳೂ ಆಗಿರುತ್ತಾರೆ. ಸಮಾಜ ಹಾಗೂ ರಾಷ್ಟ್ರದಲ್ಲಿ ಈ ಕಾರಣದಿಂದಾಗಿ ಪತನವಾಗುತ್ತಿದೆ. ವಿವೇಕ ಶೂನ್ಯ ಹಾಗೂ ಆಚರಣ ಭ್ರಷ್ಟರಾಗಿರುವವರ ಜೀವನದಲ್ಲಿ ನಿರ್ಮಲತೆ ಹಾಗೂ ಪವಿತ್ರತೆ ಹೇಗೆ ತಾನೇ ಬಂದೀತು. ಶಾಖಾಹಾರದ ಪ್ರಚಾರ ಮಾಡುವವರೇ, ಚರ್ಮದ ಪಾದರಕ್ಷೆಗಳನ್ನು ಧರಿಸಿದರೆ, ತಮ್ಮನ್ನು ಜೈನರೆಂದು ಭಾವಿಸುವವರೇ ಅಭಕ್ಷ್ಯ ವಸ್ತುಗಳ ವ್ಯಸನಿಗಳಾದರೆ ಧರ್ಮದ ಶಾಶ್ವತ ಮೌಲ್ಯಗಳು ಹೇಗೆ ತಾನೇ ಪಾವನ ಹಾಗೂ ಪವಿತ್ರವಾಗಿರ ಬಲ್ಲವು? ಆದ್ದರಿಂದ ಭಗವಂತನ ನಿಜವಾದ ಭಕ್ತರಾಗ ಬಯಸುವಿರಾದರೆ. ಮಹಾವೀರರ ಸಿದ್ಧಾಂತಗಳಿಗೆ ಧಕ್ಕೆಯಾಗುವ ಯಾವುದೇ ಕಾರ್ಯಗಳನ್ನು ಮಾಡಬಾರದು. ನಮ್ಮ ಧರ್ಮದ ಸಿದ್ಧಾಂತಗಳಿಂದಲೇ ಧರ್ಮದ ರಕ್ಷಣೆಯಾಗುತ್ತದೆ. ಧರ್ಮ ಯಾವುದೇ ಇರಲಿ ಆತ್ಮನು ಒಂದು ದಿನ ಸಿದ್ಧ, ಬುದ್ಧ ಮತ್ತು ಮುಕ್ತನಾಗುತ್ತಾನೆ. ಧರ್ಮದ ಮರ್ಮವನ್ನು ತಿಳಿಯದ ವರೆಗೆ ಧರ್ಮವು ನಮ್ಮ ಜೀವನದಲ್ಲಿ ಇಳಿಯಲಾರದು. ಆದ್ದರಿಂದ ಧರ್ಮದ ಸಂಸ್ಕಾರಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಜೀವನ ಧ್ಯನವಾಗ ಬಲ್ಲದು.

ಸಪ್ತ ವ್ಯಸನಗಳು ನಿತ್ಯ ಪಾಪಗಳಾಗಿದ್ದು ದುರ್ಗತಿಗೆ ಕಾರಣ
ಪೂಜನ ಶ್ರುತಗಳು ವ್ಯಸನಗಳಾಗಿ ಶಿವ ಸುಖಕೆ ಕಾರಣ.

# 22. ಭಾವನೆಗಳ ಶುದ್ಧಿಯಲ್ಲಿ ಪರಿಣಾಮಗಳ ನಿರ್ಮಲತೆ

ನಮ್ಮ ಭವ ಹೇಗೆ ಸುಧಾರಿಸ ಬಲ್ಲದು? ಪಾಪ ಕರ್ಮವನ್ನು ಹೇಗೆ ಕಡಿಮೆ ಮಾಡಬಹುದು? ಈ ದಿಕ್ಕಿನಲ್ಲಿ ನಾವು ಚಿಂತನೆ ಮಾಡಿದ್ದೇವೆಯೆ? ನಮ್ಮ ಭಾವನೆಗಳು ಶುದ್ಧ ಹಾಗೂ ಶುಭವಾದಾಗಲೇ ನಮ್ಮ ಭವ ಸುಧಾರಿಸುತ್ತದೆ. ಯಾರ ಭಾವನೆ ಎಷ್ಟು ನಿರ್ಮಲ, ಪವಿತ್ರ ಹಾಗೂ ಪಾವನವಾಗಿರುತ್ತದೆಯೋ ಅಷ್ಟೇ ಅವರು ಸಂಸಾರ ಚಕ್ರದಿಂದ ದೂರವಾಗುತ್ತಾ ಆತ್ಮಿಕ ಉಪಲಬ್ಧಿಯಲ್ಲಿ ಶ್ರೇಷ್ಠತೆಯನ್ನು ಪಡೆಯುತ್ತಾರೆ. ತಪ್ಪು ಭಾವನೆಗಳಿಂದಲೇ ಮನುಷ್ಯನು ಗತಿಗಳನ್ನು ಹೊಂದುತ್ತಾನೆ; ಸರಿಯಾದ ಭಾವನೆಗಳಿಂದಲೇ ಆತನು ಮೋಕ್ಷದ ಮಾರ್ಗದವರೆಗೆ ತಲುಪುತ್ತಾನೆ. ಜಗತ್ತಿನಲ್ಲಿ ಆಗಿ ಹೋದ ಮಹಾಪುರುಷರೆಲ್ಲರೂ ತಮ್ಮ ನಿರ್ಮಲ ಭಾವನೆಯಿಂದಲೇ ಧರ್ಮೋತ್ಕೃಷ್ಠ ಸಾಧನೆಯ ಮಾರ್ಗದಲ್ಲಿ ಸಾಗಿ ಮೋಕ್ಷವನ್ನು ಪಡೆದಿದ್ದಾರೆ. ಆದ್ದರಿಂದಲೇ ವ್ಯಕ್ತಿಯ ಜೀವನದಲ್ಲಿ ಸದ್ಭಾವನೆ ಹೊಂದಿರುವುದು ಬಹಳ ಅವಶ್ಯಕವಾಗಿದೆ. ನಮ್ಮ ಭಾವನೆಗಳಲ್ಲಿ ಹೆಚ್ಚೆಚ್ಚು ಸಮಯದವರೆಗೆ ಪವಿತ್ರತೆ ಇದ್ದರೆ ಅದೇ ನಿಜವಾದ ಸದ್ಭಾವನೆಯ ರಾಶಿ ಎಂದು ತಿಳಿಯಬೇಕು. ಸದ್ಭಾವನೆಯಿಂದಲೇ ನಾವು ಪಾಪಗಳಿಂದ ಕೂಡಿದ ಭಾವನೆಗಳಿಂದ ಮುಕ್ತರಾಗ ಬಹುದು. ಭಾವನೆಗಳು ಒಳ್ಳೆಯವುಗಳಾಗಿರಬಹುದು ಇಲ್ಲವೇ ಕೆಟ್ಟವುಗಳಾಗಿರಬಹುದು. ಅವುಗಳಲ್ಲಿ ಒಂದರದೇ ಪ್ರಭಾವವಿರುತ್ತದೆ ಎಂಬುದನ್ನು ಸದಾಕಾಲ ಗಮನದಲ್ಲಿಡಬೇಕು. ನಾವು ಒಳ್ಳೆಯ ಭಾವನೆಗಳಿಂದ ಕೂಡಿದ್ದರೆ ಆಗ ಅದು ಪುಣ್ಯಕ್ಕೆ ಕಾರಣವಾಗುತ್ತದೆ ಹಾಗೂ ಪಾಪಗಳ ನಾಶದಲ್ಲಿ ಸಹಾಯಕವಾಗುತ್ತದೆ ಹಾಗೂ ಕೆಟ್ಟ ಭಾವನೆಗಳಿಂದ ಕೂಡಿದ್ದರೆ ಅದು ಪಾಪವನ್ನು ಹೆಚ್ಚಿಸುತ್ತದೆ ಹಾಗೂ ವಿನಾಶದ ಹಾದಿ ಇನ್ನೂ ಹೆಚ್ಚಾಗುತ್ತದೆ. ಆದ್ದರಿಂದ ಭಾವನೆಗಳನ್ನು ಪ್ರತಿ ಸಮಯ ಚೆನ್ನಾಗಿಟ್ಟುಕೊಳ್ಳುವ ಪುರುಷಾರ್ಥ ಮಾಡಬೇಕು. ಇದೇ ಎಲ್ಲಕ್ಕಿಂತ ದೊಡ್ಡ ಸಾಧನೆ ಹಾಗೂ ಶಾಶ್ವತ ಧರ್ಮದ ಒರೆಗಲ್ಲಾಗಿದೆ. ಇದು ಸುಖಮಯ ಜೀವನದ ಆಧಾರಶಿಲೆಯಾಗಿದೆ.

ಭಗವಂತನ ದರಬಾರಿನಲ್ಲಿ ನಮ್ಮ ದೂಷಿತ ಭಾವನೆಗಳು ನಿರ್ಮಲವಾಗಲೆಂದು ಶ್ರದ್ಧಾಳುಗಳು ಬರುತ್ತಾರೆ. ಮಂದಿರಗಳು–ಭಾವನೆಗಳನ್ನು ಶುದ್ಧಗೊಳಿಸುವ 'ಪವರ್ ಹೌಸ್'ಗಳಾಗಿವೆ. ಇಲ್ಲಿಂದ ಭಕ್ತರು ತಮ್ಮ ಬಲ, ಶಕ್ತಿಗಳನ್ನು ಪಾಪಗಳಿಂದ ದೂರ ಮಾಡಿ ಆತ್ಮಕಲ್ಯಾಣದ ಕಡೆಗೆ ಕೊಂಡೊಯ್ಯುತ್ತಾರೆ. ಮಂದಿರವಿರಲಿ ಅಥವಾ ಸಾಧುವಿನ ಸಂಗತಿ ಇರಲಿ ಈ ಕಾರಣದಿಂದಾಗಿ ಅವರು ಆತ್ಮ–ಶಾಂತಿ ನೀಡುವ ಮಾಧ್ಯಮಗಳಾಗುತ್ತಾರೆ. ಸತ್ಸಂಗದಿಂದ ಜ್ಞಾನದ ವೃದ್ಧಿಯಾಗುತ್ತದೆ ಹಾಗೂ ಪರಮಾತ್ಮನ ದರ್ಶನದಿಂದ ಶ್ರದ್ಧೆ–ಭಕ್ತಿಯ ತಂತಿ ಆತ್ಮನೊಂದಿಗೆ ಸೇರಿದಾಗ ಒಳಗಿನ ಪ್ರಕಾಶ ನಿಜವಾದ ಸುಖ ಹಾಗೂ ಆತ್ಮೀಯ ಆನಂದದ ದುರ್ಲಭ ಅನುಭೂತಿಯನ್ನು ಮಾಡಿಸುತ್ತದೆ. ಭಾವನೆಯು ಫಿಲ್ಟರ್ ಆದಾಗ ಭಕ್ತ ಮತ್ತೆ ಒಂದು ಹೊಸ ಅನುಭೂತಿಯನ್ನು ಪಡೆಯುತ್ತಾನೆ. ನಮಗೆ

ಮಂದಿರ ಹಾಗೂ ಸತ್ಸಂಗದಲ್ಲಿ ನಮ್ಮ ಭಾವನೆ ಶುದ್ಧಿಯಾದಾಗ, ಆ ಭಾವನೆಗಳೇ ಸಾಂಸಾರಿಕ ಜಗತ್ತು ಅರ್ಥಾತ್ ನಮ್ಮ ಗೃಹಸ್ಥ ಜೀವನದಲ್ಲಿಯೂ ಸಹ ಅಡೆತಡೆ ಇಲ್ಲದಂತೆ ಇರಲು ಪ್ರಯತ್ನ ಮಾಡಬೇಕಾಗ ಬಹುದು. ಆಗಲೇ ಅಶುಭತೆಯಿಂದ ಶುಭದ ಕಡೆಗೆ ಹೆಚ್ಚಿನ ಹೆಜ್ಜೆ ಹಾಕಬಲ್ಲದು. ಶುಭ ಭಾವನೆಗಳಲ್ಲಿ ಹೆಚ್ಚಳವಾದಂತೆ, ಅಷ್ಟಷ್ಟೇ ನಾವು ಧರ್ಮದ ನಿಜವಾದ ರಾಶಿಯನ್ನು ಗಳಿಸುತ್ತಿದ್ದೇವೆಂದು ತಿಳಿಯಬೇಕು. ಧರ್ಮದ ರಾಶಿ ಹೆಚ್ಚಾಗದಿದ್ದರೆ ಇದೇ ಜೀವನ ಒಂದು ದಿನ ಕಷ್ಟ ಹಾಗೂ ದುಃಖಗಳಿಗೆ ಕಾರಣವಾಗುತ್ತದೆ. ಯಾಕೆಂದರೆ ಅಶುಭ ಭಾವನೆಗಳಿದ್ದರೆ ಅವು ಪಾಪ ಸಂಚಯದ ಮಾಧ್ಯಮವಾಗುತ್ತವೆ.

ಭಾವನೆಗಳು 12 ಪ್ರಕಾರವಾಗಿವೆ. ನಾವು ವ್ಯರ್ಥವಾಗಿ ಯಾರ ಕೆಡಕನ್ನು ಯೋಚಿಸುವುದಿಲ್ಲ ಎನ್ನುವ ವಿವೇಕದಿಂದ ಸುನಿಶ್ಚಿತ ಮಾಡಿಕೊಂಡರೆ ಕೆಡಕನ್ನು ಮಾಡುವ ಸಂಭವವೇ ಆಗುವುದಿಲ್ಲ. ಮನುಷ್ಯ ಪ್ರತಿದಿನ ತನ್ನ ದೂಷಿತ ಭಾವನೆಗಳಿಂದಲೂ ಹೊಸ–ಹೊಸ ಅಶುಭ ಕರ್ಮಗಳನ್ನು ಸಂಚಯ ಮಾಡಿಕೊಳ್ಳುತ್ತಿರುವುದು ವಾಸ್ತವಿಕ ಸಂಗತಿಯಾಗಿದೆ. ಆ ಕರ್ಮಗಳು ಉದಯಕ್ಕೆ ಬಂದಾಗ ಆತ ಅಳುತ್ತಾನೆ. ನಗು–ನಗುತ್ತಾ ಇತರರ ಅಪಹಾಸ್ಯ ಮಾಡುತ್ತಾ ರಾಗ–ದ್ವೇಷಗಳನ್ನು ತುಂಬಿಕೊಂಡು ತನ್ನ ದೋಷಿತ ಭಾವನೆಗಳಿಂದ ಅಶುಭ ಕರ್ಮಗಳ ಗೋದಾಮು ವೃದ್ಧಿಯಾಗುತ್ತಿರುವಾಗ ಜೀವನದಲ್ಲಿ ಆತ್ಮ–ಸುಖ ಎಂದಿಗೂ ದೊರೆಯಲು ಸಾಧ್ಯವಿಲ್ಲ. ಸುಖದ ಪರಿಭಾಷೆಯು ನಮ್ಮ ನಿರ್ಮಲ ಭಾವನೆಗಳಲ್ಲಿ ಅಡಗಿದೆ ಹಾಗೂ ನಿರ್ಮಲ ಭಾವನೆಗಳಿಂದಲೇ ಕರ್ಮಬಂಧನ ಸಡಿಲವಾಗ ತೊಡಗುತ್ತದೆ. ಕರ್ಮಗಳ ಉತ್ಪಾದನೆಯು ತಮ್ಮ ಭಾವನೆಗಳ ಅನುಕೂಲವೇ ಆಗುತ್ತದೆ. 'ಭಾವನೆಗಳು ಇದ್ದ ಹಾಗೇ ಪರಿಣಾಮ' ಎನ್ನುವ ಸಿದ್ಧಾಂತವನ್ನು ಧರ್ಮಾಚಾರ್ಯರು ತಮ್ಮದೇ ಆದ ರೀತಿಯಲ್ಲಿ ವರ್ಣಿಸಿದ್ದಾರೆ. ರಾಗದಿಂದ ಕೂಡಿರುವ ಜೀವವೇ ಕರ್ಮಗಳ ಬಂಧ ಮಾಡಿಕೊಳ್ಳುತ್ತದೆ. ರಾಗದಿಂದ ಮುಕ್ತರಾಗಿರುವವರು ಕರ್ಮಗಳ ಕ್ಷಯ ಮಾಡುತ್ತಾ ಮಾಡುತ್ತಾ ಒಂದು ದಿನ ಮೋಕ್ಷ ಪುರುಷಾರ್ಥ ಮಾಡಿ ಮೋಕ್ಷದ ವರೆಗೆ ತಲುಪಬಹುದು. ಆದ್ದರಿಂದ ನಮ್ಮ ಭಾವನೆಗಳನ್ನು ಶ್ರೇಷ್ಠ ಹಾಗೂ ಶುಭ ಮಾಡುವ ಪುರುಷಾರ್ಥ ಮಾಡುತ್ತಾ ಬಂದರೆ ಜೀವನದ ಉತ್ಥಾನವಾಗ ಬಲ್ಲದು. ಆಗ ಆತ್ಮನಲ್ಲಿ ಪರಮಾತ್ಮನನ್ನು ಕಾಣಬಹುದು ವ್ರತ, ನಿಯಮ, ಸಂಕಲ್ಪ ಹಾಗೂ ತ್ಯಾಗದಲ್ಲಿ ವೃದ್ಧಿಯಾದಂತೆ ಭಾವನೆಗಳನ್ನು ನಿರ್ಮಲ ಮಾಡುವಲ್ಲಿ ಸದ್ಭಾವನೆಯ ತೊರೆಯು ಹರಿಯತೊಡಗುತ್ತದೆ.

ಸಾಧನೆಯು ಅಭಿಶಾಪವನ್ನು ವರದಾನವನ್ನಾಗಿ ಮಾಡುತ್ತದೆ.
ಭಾವನೆಯು ಶಿಲೆಯನ್ನು ಭಗವಂತನನ್ನಾಗಿ ಮಾಡುತ್ತದೆ.
ವಿವೇಕದ ಹಂತದಿಂದ ಕೆಳಗಿಳಿದಾಗ,
ವಾಸನಾವು ಮನುಷ್ಯನನ್ನು ಸೈತಾನನನ್ನಾಗಿ ಮಾಡುತ್ತದೆ.

ಎಂದೂ ಹೇಳಿದ್ದಾರೆ.

# 23. ಚಾತುರ್ಮಾಸ–ಧರ್ಮದ ಗಳಿಕೆಯ ಕಾಲ

ಚಾತುರ್ಮಾಸವು ಧನದ ಗಳಿಕೆಯ ಕಾಲವಾಗಿರದೇ ಧರ್ಮದ ಗಳಿಕೆಯ ಕಾಲವಾಗಿದೆ, ಧರ್ಮದ ಮಳೆಗರೆಯುವ ಸಮಯವಾಗಿದೆ. ಧರ್ಮ ರೂಪದ ಮಳೆಯಲ್ಲಿ ಮಿಂದು ಜೀವನೋಪಯೋಗಿ ಉಪದೇಶಗಳ ಆತ್ಮ ಸಾಕ್ಷಾತ್ಕಾರ ಮಾಡಿಕೊಳ್ಳಿರಿ. ಮಾನವ ಜನ್ಮ ದುರ್ಲಭವಾಗಿದೆ, ಇದರ ಸುದುಪಯೋಗ ಮಾಡಿಕೊಳ್ಳಿರಿ. ಒಂದು ಬಾರಿ ಗಳಿಸಿರುವ ಪುಣ್ಯ ಅನೇಕ ಜನ್ಮಗಳವರೆಗೆ ಕೆಲಸಕ್ಕೆ ಬರುತ್ತದೆ. ಚಾತುರ್ಮಾಸದ ಅವಧಿಯಲ್ಲಿ ಮುನಿ ಜನರು ಹೇಳುವ ಮಾತಾಗಿದ್ದು– ಸಾಧು–ಸಂತರು ಚಾತುರ್ಮಾಸವನ್ನು ತಮ್ಮ ಧರ್ಮಲಾಭಕ್ಕಾಗಿ ಮಾಡುತ್ತಾರೆ. ಈ ಸಮಯದಲ್ಲಿಯೇ ಸಾಮಾನ್ಯ ಭಕ್ತರು ಇದರಲ್ಲಿ ಸಹಯೋಗಿಗಳಾಗಿ ದೊರೆಯುವ ಪುಣ್ಯದಲ್ಲಿ ತಮ್ಮ ಸಹಭಾಗಿತ್ವವನ್ನು ಸಹ ಸುನಿಶ್ಚಿತ ಪಡಿಸಿಕೊಳ್ಳುತ್ತಾರೆ. ಒಂದು ಬಾರಿಯ ತಪಸ್ಸು ಅನೇಕ ಜನ್ಮಗಳನ್ನು ಧನ್ಯಗೊಳಿಸುತ್ತದೆ. ಭಾರತ ಭೂಮಿಯು ತಪಸ್ವಿಗಳ ತೀರ್ಥಂಕರರುಗಳ, ಮಹಾಪುರುಷರುಗಳ ತಪೋಭೂಮಿಯಾಗಿದೆ. ಇಲ್ಲಿ ಒಬ್ಬರಿಗಿಂತ ಮಿಗಿಲಾಗಿ ಇನ್ನೊಬ್ಬ ಮಹಾಜ್ಞಾನಿ. ಧ್ಯಾನಿ ಹಾಗೂ ತಪಸ್ವಿಗಳು ಜನ್ಮ ತಾಳುತ್ತಾ ಬಂದಿದ್ದಾರೆ. ಈ ಕಾರಣದಿಂದಾಗಿ ದೇಶವಷ್ಟೇ ಅಲ್ಲ ವಿದೇಶಗಳಲ್ಲಿಯೂ ಇದರ ಮಹತ್ವವಿದೆ. ವಿದೇಶಗಳಿಂದ ಜನರು ಇಲ್ಲಿಗೆ ಶಾಂತಿಯನ್ನು ಅರಸುತ್ತಾ ಬರುತ್ತಾರೆ. ಪರಮಾತ್ಮ ಪದವನ್ನು ಪಡೆಯ ಬೇಕಾದರೆ ಪರಿಗ್ರಹಗಳ ಭಾರದಿಂದ ಮುಕ್ತರಾಗುವುದು ಅವಶ್ಯವಾಗಿದೆ. ತ್ಯಾಗ ಭಾವನೆಯೇ ಆತ್ಮ ಸಾಕ್ಷಾತ್ಕಾರಕ್ಕಿರುವ ಆಹ್ವಾನವಾಗಿದ್ದು ತ್ಯಾಗವೇ ಶಾಂತಿಯ ಕೇಂದ್ರಬಿಂದುವಾಗಿದೆ.

# 24. ಚಾತುರ್ಮಾಸ : ಧನವಲ್ಲ ಧರ್ಮಗಳಿಸುವ ಕಾಲ

ಚಾತುರ್ಮಾಸದ ಸಮಯವು ಧರ್ಮಗಳಿಸುವ ಇರುವ ಕಾಲವಾಗಿದೆ. ಒಂದು ಜನ್ಮದಲ್ಲಿ ಮಾಡಿದ ತಪಶ್ಚರಣೆ ಜನ್ಮ–ಜನ್ಮಾಂತರಗಳ ವರಗೆ ಸುಖ ಹಾಗೂ ಶಾಂತಿಯನ್ನು ಕೊಡುತ್ತದೆ. ಪರಿಗ್ರಹವು ಒಂದು ಭಾರವಾಗಿದ್ದು ಇದರಿಂದ ಮೇಲಕ್ಕೇಳಲು ಹಾಗೂ ಪರಮಾತ್ಮ ಪದವಿವರೆಗೆ ತಲುಪಲು ಸಾಧ್ಯವಿಲ್ಲ. ಇದಕ್ಕಾಗಿ ಪರಿಗ್ರಹದ ಭಾರದಿಂದ ಮುಕ್ತರಾಗುವುದು ಅನಿವಾರ್ಯವಾಗಿದೆ.

'ವರ್ಷಾಯೋಗ' ಯಾಕೆ? ವರ್ಷಾ ಋತುವಿನಲ್ಲಿ ಪ್ರಾಕೃತಿಕ ವಾತಾವರಣದಲ್ಲಿ ಅನೇಕ ಸೂಕ್ಷ್ಮ ಜೀವಗಳು ಹಾಗೂ ಕ್ರಿಮಿ–ಕೀಟಗಳು ಉತ್ಪನ್ನವಾಗುತ್ತವೆ. ಓಡಾಡುವುದರಿಂದ ಅವುಗಳ ಹಿಂಸೆಯಾಗುತ್ತದೆ. ಅಲ್ಲದೇ ವರ್ಷಾಕಾಲದಲ್ಲಿ ಶರೀರದಲ್ಲಿ ವ್ರತ, ಉಪವಾಸಗಳನ್ನು ಸಹಿಸುವ ಸಹನ ಶೀಲತೆ ಚೆನ್ನಾಗಿರುತ್ತದೆ ಹಾಗೂ ಜನರಿಗೆ ಧರ್ಮೋಪದೇಶವನ್ನು ಕೇಳುವ ಉತ್ತಮ ಸಮಯ

ದೊರೆಯುತ್ತದೆ. ಈ ಕಾರಣದಿಂದಾಗಿಯೇ ಜೀವಗಳ ಪ್ರಾಣರಕ್ಷಣೆ, ಅಹಿಂಸಾಧರ್ಮದ ಪಾಲನೆ, ವ್ರತಾನುಷ್ಠಾನ ಹಾಗೂ ಸ್ವಾಧ್ಯಾಯ ಮಾಡಲು ಜೈನ ಮುನಿ ಸಂಘಗಳು ವರ್ಷಾ ಋತುವಿನಲ್ಲಿ ನಿಶ್ಚಿತ ಸ್ಥಾನದಲ್ಲಿದ್ದು ಧರ್ಮದ ಸಾಧನೆ ಮಾಡುತ್ತವೆ.

# 25. ತ್ಯಾಗವು ಮನುಷ್ಯನನ್ನು ಭಗವಂತನನ್ನಾಗಿ ಮಾಡುತ್ತದೆ

ದಿಗಂಬರ ಜೈನ ಧರ್ಮಾವಲಂಬಿಗಳು ಭಕ್ತಿಯ ಪರೀಕ್ಷೆಯಲ್ಲಿ ಸಫಲರಾಗುತ್ತಾರೆ. ದಿಗಂಬರ ಮುನಿಗಳು ವರ್ಷಾಋತು ಕೊನೆಗೊಳ್ಳುವ ವರೆಗೆ ತಾವು ನಿಯಮ ಮಾಡಿಕೊಂಡ ಸ್ಥಾನದಿಂದ ದೂರ ಹೋಗುವುದಿಲ್ಲ. ಆ ಸಮಯದಲ್ಲಿ ಅವರು ದಿಗಂಬರ ಸಾಧುಗಳು ಪಾಲನೆ ಮಾಡುವ ವರ್ಷಾಯೋಗದ ಪರಿಚಯ ಮಾಡಿಕೊಡುತ್ತಾರೆ. ವರ್ಷಾಯೋಗದಲ್ಲಿ ಮುನಿಗಳು ಅತಿ ಹೆಚ್ಚು ವ್ರತ–ನಿಯಮಗಳನ್ನು ಪಾಲನೆ ಮಾಡುತ್ತಾರೆ. ವಸ್ತುವಿನ ತ್ಯಾಗದಲ್ಲಿ ಬಹಳಷ್ಟು ಶಕ್ತಿ ಇದ್ದು, ಬ್ಯಾಂಕಿನಲ್ಲಿ ಜಮಾ ಮಾಡಿದ ಸ್ಥಿರ ಠೇವಣಿಯು ಹೆಚ್ಚು ಲಾಭವನ್ನು ಕೊಡುತ್ತದೆ. ಅದೇ ಮನೆಯಲ್ಲಿರುವ ದುಡ್ಡು ವೆಚ್ಚ ಮಾಡದಿದ್ದರೂ, ಬಡ್ಡಿ ಗಳಿಸಲು ಸಾಧ್ಯವಿಲ್ಲ. ಹೀಗೆ ಯಾರಾದರೂ ಯಾವುದೇ ವಸ್ತುವನ್ನು ಉಪಯೋಗ (ಭೋಗ) ಮಾಡದಿದ್ದರೂ ಸಹ ಪಾಪ ಬಂಧವಂತೂ ಆಗುತ್ತಲೇ ಇರುತ್ತದೆ. ಆದರೆ ಒಂದು ಹಂತದ ವರೆಗೆ ತ್ಯಾಗ ಮಾಡಿದಾಗ, ಈ ತ್ಯಾಗವು–ನಿಯಮವು ಕರ್ಮ ನಿರ್ಜರೆ, ಪುಣ್ಯ ಬಂಧದೊಂದಿಗೆ ಸ್ವರ್ಗ–ಮೋಕ್ಷದ ವರೆಗೆ ಸಾಗಲು ಕಾರಣವಾಗುತ್ತದೆ. ಅನ್ಯರು ದುಃಖ, ಸಂಕಟಗಳಲ್ಲಿದ್ದಾಗ ನಾವು ಸಹ ಸ್ವಲ್ಪವಾದರೂ ತ್ಯಾಗ ಮಾಡಬೇಕು. ಯಾಕೆಂದರೆ ತ್ಯಾಗಧರ್ಮದ ಪ್ರಭಾವದಿಂದಲೇ ಅಹಿಂಸೆಯ ಸಾಮ್ರಾಜ್ಯವನ್ನು ಸ್ಥಾಪಿಸಬಹುದಾಗಿದೆ. ತ್ಯಾಗವು ಅತ್ಯಂತ ಮಹಿಮೆಯುಳ್ಳದ್ದಾಗಿದ್ದು, ತ್ಯಾಗವು ಮನುಷ್ಯನನ್ನು ಎಲ್ಲ ಪಾಪಗಳಿಂದ ಬಿಡುಗಡೆ ಮಾಡಿಸಿ ಭಗವಂತನನ್ನಾಗಿ ಮಾಡುತ್ತದೆ.

# 26. ಮೋಕ್ಷ ಸಪ್ತಮಿಯ ದಿನ ಅತ್ಯಂತ ಪಾವನವಾದದ್ದು

ಮೋಕ್ಷ ಸಪ್ತಮಿ ದಿನವು ಅತ್ಯಂತ ಪಾವನವಾಗಿದೆ, ಯಾಕೆಂದರೆ. ಈ ದಿನದಲ್ಲಿಯೇ ಜೈನ ಧರ್ಮದ 23ನೇ ತೀರ್ಥಂಕರ ಭಗವಾನ ಪಾರ್ಶ್ವನಾಥರು ಮೋಕ್ಷವನ್ನು ಪಡೆದರು. ಸಮ್ಮೇದ ಶಿಖರದ ಪರ್ವತದಲ್ಲಿರುವ ಸುವರ್ಣಭದ್ರ

ಕೂಟದಿಂದ ಅವರಿಗೆ ಈ ದಿನದಂದು ಮೋಕ್ಷವಾಗಿದ್ದಿತು. ಅವರ ಜನ್ಮವು ಇಂದಿಗೆ ಸುಮಾರು ಮೂರು ಸಾವಿರ ವರ್ಷಗಳಷ್ಟು ಹಿಂದೆ ಬನಾರಸ(ಕಾಶಿ)ನ ರಾಜಾ ಅಶ್ವಸೇನ ಹಾಗೂ ಮಾತಾ ವಾಮಾದೇವಿ ದಂಪತಿಗಳಲ್ಲಿ ವೈಶಾಖ ಕೃಷ್ಣ ದ್ವಿತಿಯ ದಿನದಂದು ಆಗಿದ್ದಿತು. ತೀರ್ಥಂಕರ ಪದವಿಯು ಒಂದು ವಿಶೇಷ ಪದವಿಯಾಗಿರುತ್ತದೆ. ಪ್ರಭು ಪಾರ್ಶ್ವನಾಥರು ಕೇವಲಜ್ಞಾನವನ್ನು ಪಡೆಯುವ ಪೂರ್ವದಲ್ಲಿ ದೇವಕೃತ ಉಪಸರ್ಗ, ಮನುಷ್ಯಕೃತ ಉಪಸರ್ಗ, ತಿರ್ಯಂಚಕೃತ ಉಪಸರ್ಗ, ಹಾಗೂ ಪ್ರಕೃತಿಕೃತ ಉಪಸರ್ಗಗಳನ್ನು ಸಹಿಸಿದ್ದರು. ಈ ಎಲ್ಲ ಉಪಸರ್ಗಗಳನ್ನು ಪ್ರಭು ಪಾರ್ಶ್ವನಾಥರು ಸಮತಾ ಭಾವನೆಯಿಂದ ಸಹಿಸಿ ಕೇವಲಜ್ಞಾನವನ್ನು ಪಡೆದು, ಮೋಕ್ಷ ಸಪ್ತಮಿಯ ದಿನದಂದು ಮುಕ್ತಿಯನ್ನು ಹೊಂದಿದ್ದರು. ಆ ದಿನವನ್ನು 'ಮುಕುಟ ಸಪ್ತಮಿ' ಎಂದೂ ಕರೆಯುತ್ತಾರೆ.

## 27. ಸುಖವಾಗಿರಬೇಕೆಂದರೆ ಹಿಂಸೆಯನ್ನು ತ್ಯಜಿಸಿರಿ

ಗೃಹಸ್ಥ ಜೀವನದಲ್ಲಿ ನಮ್ಮಿಂದ ನಿರಂತರ ಪಾಪಕ್ರಿಯೆಗಳು ಜರುಗುತ್ತವೆ. ಇದರಿಂದಾಗಿ ಪಾಪದ ಭಾರ ಹೆಚ್ಚಾಗುತ್ತಾ ಸಾಗಿದೆ. ಆತ್ಮನು ಪತನದೆಡೆಗೆ ಸಾಗುತ್ತಿದ್ದಾನೆ. ದೇಶದಲ್ಲಿ ನಿರಂತರ ಹಿಂಸೆಯ ವಾತಾವರಣ ನಿರ್ಮಾಣವಾಗುತ್ತಾ ಸಾಗಿದೆ. ನಾಲ್ಕೂ ದಿಕ್ಕುಗಳಲ್ಲಿ ಕಸಾಯಿಖಾನೆಗಳು ಮತ್ತು ಪಶುಬಲಿಗಳಿಂದ ಹಿಂಸೆ ಆಗುತ್ತಲಿದೆ. ನೀವು ಯಾವುದೇ ಪ್ರಾಣಿಯನ್ನು ಹೊಡೆದರೆ ಅದರ ಮುಖದಿಂದ ಆಕ್ರಂದನದ ಧ್ವನಿ ಬರುತ್ತದೆ. ಅದೇ ಆಕ್ರಂದನ ಪ್ರಾಕೃತಿಕ ಪ್ರಕೋಪದ ರೂಪದಲ್ಲಿ ಬರುತ್ತದೆ. ನಾವು ಸುಖವಾಗಿರ ಬೇಕೆಂದರೆ ಜೀವನದಲ್ಲಿ ಒಂದು ಸೂತ್ರವನ್ನಾದರೂ ಅಳವಡಿಸಿಕೊಳ್ಳಬೇಕು. ಹಿಂಸೆಯಿಂದ ಕೂಡಿದ ಸೌಂದರ್ಯ ಪ್ರಸಾಧನಗಳನ್ನು ತ್ಯಜಿಸಿರಿ, ಕೆಂಪು ಗುರುತಿರುವ ವಿದೇಶಿ ಅಥವಾ ಸ್ವದೇಶಿ ಔಷದಿಗಳನ್ನು ಹಾಗೂ ತಿನಿಸುಗಳನ್ನು ತ್ಯಜಿಸಿ ಹಿಂಸೆಯನ್ನು ತ್ಯಾಗ ಮಾಡಿರಿ.

## 28. ಸಂಸಾರದಿಂದ ಪಾರು ಮಾಡುವುದೇ ತೀರ್ಥ

ಸಂಸಾರೀ ಜೀವಗಳನ್ನು ಸಂಸಾರದಿಂದ ಪಾರು ಮಾಡುವುದೇ ತೀರ್ಥವಾಗಿದೆ. ಸಂಸಾರದಿಂದ ಬಿಡುಗಡೆ ಮಾಡುವ ಜಿನವಾಣಿ ಇದೆ ಹಾಗೂ ಆ ಜಿನವಾಣಿಯ ಉದಯ ಮಹಾನ್ ಆತ್ಮಗಳಿಗೆ ಕೇವಲಜ್ಞಾನದಿಂದಾಗುತ್ತದೆ. ಅವರನ್ನು ತೀರ್ಥಂಕರರೆಂದು ಕರೆಯಲಾಗುತ್ತದೆ. ಲೋಕ ಕಲ್ಯಾಣದ ಉತ್ಕೃಷ್ಟ ಭಾವನೆ ಹೊಂದಿರುವವರು, ದರ್ಶನವಿಶುದ್ಧಿ ಮುಂತಾದ ಹದಿನಾರು ಕಾರಣ ಭಾವನೆಗಳನ್ನು

ಭಾವಿಸುವವರು. ಈ ಆತ್ಮಗಳೇ ತೀರ್ಥಂಕರರಾಗಿ ಜಗತ್ತಿನ ಕಲ್ಯಾಣ ಮಾಡಿ ಮೋಕ್ಷಕ್ಕೆ ಪಾತ್ರರಾಗುತ್ತಾರೆ. ತೀರ್ಥಕ್ಷೇತ್ರದಲ್ಲಿ ಬರೆದ ಸಾಲುಗಳು ಹೀಗಿವೆ.

> ತೀರ್ಥಂಕರರಿಂದ ಪ್ರಕಟವಾಗುವ ವಚನಾಮೃತವೇ ತೀರ್ಥ ।
> ಭವಸಾಗರದಿಂದ ಆತ್ಮನನ್ನು ಪಾರು ಮಾಡುವುದೇ ತೀರ್ಥ ।

# 29. ಗುರಿ ಸಾಧಿಸುವಲ್ಲಿ ಬಾಧಕವಾಗಿರುವ ಕಾರಣಗಳನ್ನು ತಿಳಿಯುವುದು ಆವಶ್ಯಕ

ಗುರಿ ಸಾಧಿಸುವಲ್ಲಿ ಬಾಧಕ ಕಾರಣಗಳನ್ನು ತಿಳಿಯುವುದು ಆವಶ್ಯಕವಾಗಿದೆ. ಇವುಗಳನ್ನು ತಿಳಿಯದೇ ಗುರಿಯನ್ನು ಸಾಧಿಸಲು ಸಾಧ್ಯವಿಲ್ಲ. ಇವುಗಳನ್ನು ತಿಳಿಯುವುದರೊಂದಿಗೆ ಅವುಗಳ ಬಗ್ಗೆ ಅನಾಸಕ್ತಿಯನ್ನೂ ಹೊಂದಬೇಕು. ಆಗಲೇ ನಾವು ಗುರಿ ಮುಟ್ಟಲು ಸಾಧಕ ಕಾರಣಗಳನ್ನು ಸ್ವೀಕರಿಸಲು ಸಾಧ್ಯವಾಗುತ್ತದೆ. ಧ್ಯಾನ ಸಿದ್ಧಿಯಲ್ಲಿ ಮೂರು ಬಾಧಕ ತತ್ತ್ವಗಳಿವೆ. ಮೊದಲನೆಯದು ರಾಗ, ಎರಡನೆಯದು ದ್ವೇಷ ಹಾಗೂ ಮೂರನೆಯದು ಮೋಹ. ಜಗತ್ತಿನಲ್ಲಿ ಕಾಣುವುದೆಲ್ಲವೂ ಪುದ್ಗಲ ಪದಾರ್ಥಗಳಾಗಿವೆ. ಈ ಪದಾರ್ಥಗಳು ಜಡವಾಗಿವೆ, ಚೇತನ ಆತ್ಮನು ಮಾತ್ರ ನನ್ನದಾಗಿದೆ ಆದರೆ ಅದು ಕಾಣಿಸುವುದಿಲ್ಲ ಕಾಣುತ್ತಿರುವುದು ನನ್ನದಲ್ಲ ಆದ್ದರಿಂದ ನಾವು ಒಳ್ಳೆಯ–ಕೆಟ್ಟ ಪದಾರ್ಥಗಳೊಂದಿಗೆ ರಾಗ–ದ್ವೇಷ ಹಾಗೂ ಮೋಹ ಮಾಡಬಾರದು. ಧ್ಯಾನದಲ್ಲಿ ಮನಸ್ಸು ತೊಡಗದಿದ್ದರೆ ಯೋಗಿ ಜನರು ಪ್ರಭುವಿನ ಭಕ್ತಿ ಮಾಡುತ್ತಾರೆ. ಆದ್ದರಿಂದ ಧ್ಯಾನಕ್ಕೆ ನಮ್ಮ ಮನಸ್ಸಿನ ಏಕಾಗ್ರತೆ ಪರಮ ಆವಶ್ಯಕವಾಗಿದೆ.

# 30. ಸಾಂಸಾರಿಕ, ಸುಖವು ಕರ್ಮಗಳ ಅಧೀನವಾಗಿದೆ

ಸಾಂಸಾರದ ಸುಖಗಳು ಕರ್ಮದ ಅಧೀನವಾಗಿವೆ. ಉತ್ತಮ ಕರ್ಮಗಳು ಪ್ರಾಪ್ತವಾದಾಗ ಸುಖದ ಎಲ್ಲ ಸಾಧನಗಳು, ಅನುಕೂಲ ಪರಿವಾರ, ಅನುಕೂಲ ಮಿತ್ರರು ದೊರೆಯುತ್ತಾರೆ. ಪಾಪ ಕರ್ಮಗಳ ಫಲದಿಂದ ಜೀವನದಲ್ಲಿ ದುಃಖ ದರಿದ್ರತೆ ಹಾಗೂ ಅಶಾಂತಿ ದೊರೆಯುತ್ತದೆ. ನಿಜವಾದ ಸುಖವು ಶಾಶ್ವತವಾಗಿರುತ್ತದೆ. ಸಾಂಸಾರಿಕ ಸುಖವು ಪ್ರಾರಂಭದಲ್ಲಿ ಸುಖವನ್ನು ನೀಡುತ್ತದೆ, ಆದರೆ ಕೊನೆಯಲ್ಲಿ ದುಃಖವನ್ನೇ ನೀಡುತ್ತಾ ಸಾಗುತ್ತದೆ. ಶಾಶ್ವತ ಸುಖವು ನಮ್ಮ ಆತ್ಮನನ್ನು ಕರ್ಮಗಳಿಂದ

ಮುಕ್ತಗೊಳಿಸಿದಾಗ ಸಿಗುತ್ತದೆ. ಶಾಶ್ವತ ಸುಖ ಅರ್ಥಾತ್ ಆತ್ಮಿಕ ಸುಖವು ಕರ್ಮ ನಿರಪೇಕ್ಷವಾಗಿರುತ್ತದೆ. ಸಾಂಸಾರಿಕ ಸುಖವು ಕರ್ಮ ಸಾಪೇಕ್ಷವಾಗಿರುತ್ತದೆ. ಇದಕ್ಕಾಗಿ ಧ್ಯಾನ ಆವಶ್ಯಕವಾಗಿದೆ. ಧ್ಯಾನವಿಲ್ಲದೇ ಇಂದಿನವರೆಗೆ ಯಾರೂ ಸಹ ಆತ್ಮನನ್ನು ಕರ್ಮದ ಬಂಧನದಿಂದ ಮುಕ್ತಗೊಳಿಸಿಲ್ಲ.

# 31. ಧ್ಯಾನದಲ್ಲಿ ಬಾಧಕ ತತ್ತ್ವಗಳನ್ನು ತಿಳಿಯುವುದು ಅವಶ್ಯಕವಾಗಿದೆ

ಧ್ಯಾನಕ್ಕಾಗಿ ಬಾಧಕ ತತ್ತ್ವಗಳನ್ನು ತಿಳಿಯುವುದು ಅವಶ್ಯಕವಾಗಿದೆ. ಧ್ಯಾನದ ಸಿದ್ಧಿಯಲ್ಲಿ ರಾಗ-ದ್ವೇಷ ಮತ್ತು ಮೋಹಗಳು ಬಾಧಕ ತತ್ತ್ವಗಳಾಗಿವೆ. ಧ್ಯಾನ ಮಾಡುವವರಿಗೆ ಇವುಗಳನ್ನು ಕೂಡಲೇ ಪರಿತ್ಯಾಗ ಮಾಡಬೇಕು. ಸಂಸಾರ ಹಾಗೂ ಚೇತನ ಆತ್ಮಗಳಲ್ಲಿ, ಚೇತನ ಆತ್ಮನದು ಶಾಶ್ವತ ಸತ್ಯವಿದೆ. ಸಂಸಾರದಿಂದ ಮನಸ್ಸನ್ನು ದೂರ ಮಾಡಿ ಆತ್ಮನ ಧ್ಯಾನ ಮಾಡಬೇಕು. ಧ್ಯಾನದಲ್ಲಿ ಮನಸ್ಸು ತೊಡಗದಿದ್ದರೆ ಯೋಗಿ ಜನರು ಪ್ರಭುವಿನ ಪ್ರಾರ್ಥನೆ ಮಾಡುತ್ತಾ ಪ್ರಭುವೇ ನನ್ನ ಮನಸ್ಸನ್ನು ಪವಿತ್ರಗೊಳಿಸು ಎಂದು ಮನಸ್ಸಿಗೆ ಮನವರಿಕೆ ಮಾಡಿಕೊಡುತ್ತಾರೆ. ಆಗಲೂ ಆಗದಿದ್ದರೆ ಶರೀರವನ್ನು ತಪದಲ್ಲಿ ತೊಡಗಿಸಿ ಮನಸ್ಸಿಗೆ ದಂಡನೆ ಮಾಡುತ್ತಾರೆ. ಸೂರ್ಯನ ಕಿರಣಗಳು ಕಾಗದದ ಮೇಲೆ ಬಿದ್ದಾಗ ಅದು ಸುಡುವುದಿಲ್ಲ ಆದರೆ ಕಿರಣಗಳನ್ನು ಲೆನ್ಸ ಮೂಲಕ ಒಂದು ಬಿಂದುವಿನಲ್ಲಿ ಕೇಂದ್ರೀಕರಿಸಿ ಕಾಗದದ ಮೇಲೆ ಬಿಟ್ಟಾಗ ಕಾಗದ ಸುಡ ತೊಡಗುತ್ತದೆ. ನಮ್ಮ ಜೀವನವು ನೀರಿನ ಹನಿಯಂತೆ ಯಾವಾಗ ಕೊನೆಗೊಳ್ಳುತ್ತದೆಂದು ಹೇಳಲು ಆಗದು. ಜೀವನದಲ್ಲಿ ಆಗಾಗ ಬಿಸಿಲು ಆಗಾಗ ನೆರಳು ಆಗುತ್ತಿರುತ್ತದೆ. ಆದ್ದರಿಂದ ಜೀವನದಲ್ಲಿ ಕಲ್ಪನೆಗಳ ಗಾಳಿಯನ್ನು ತುಂಬದೇ ಪಾಪವೃತ್ತಿಯಿಂದ ರಕ್ಷಿಸಿಕೊಳ್ಳಬೇಕು.

# 32. ಏಕಾಗ್ರತೆಗಾಗಿ ಸಾತ್ವಿಕ ಆಹಾರದ ಅವಶ್ಯಕತೆ

ಆಹಾರವು ನಮ್ಮ ಧ್ಯಾನದ ಮೇಲೆ ಪ್ರಭಾವ ಬೀರುತ್ತದೆ. ಆಹಾರವು ಸಾತ್ವಿಕ, ರಾಜಸಿಕ ಹಾಗೂ ತಾಮಸಿಕವೆಂದು ಮೂರು ಪ್ರಕಾರವಾಗಿದೆ. ಸ್ವಾದಿಷ್ಟವಾದ ಪಕ್ವಾನ್ನ ಹಾಗೂ ವ್ಯಂಜನಗಳು ರಾಜಸಿಕ ಆಹಾರವಾಗಿದೆ. ಈ ಪ್ರಕಾರದ ಆಹಾರದಿಂದ ನಮ್ಮ ಮನಸ್ಸು ಏಕಾಗ್ರತೆಯನ್ನು ಸಾಧಿಸಲಾರದು. ಮನಸ್ಸಿನ ಏಕಾಗ್ರತೆಗಾಗಿ ಆಹಾರವು ಸಾತ್ವಿಕವಾಗಿರಬೇಕು. ಮಾಂಸ, ಮದಿರೆ, ಅತಿ ಹೆಚ್ಚಿನ ಖಾರ-ಮಸಾಲೆ ತಾಮಸಿ ಆಹಾರವಾಗಿದೆ. ಯಾಕೆಂದರೆ ಇವು ಬಹು ತ್ರಸ ಜೀವದ ಘಾತಕ ಆಹಾರವಾಗಿವೆ.

ಇದೇ ಪ್ರಕಾರ ಸ್ಥಾವರ ಘಾತಕ ಕಂದಮೂಲಗಳು ಸಹ ತಾಮಸಿಕವಾಗಿರುತ್ತವೆ. ಹೀಗೆ ಇರುವ ಆಹಾರದ ಸೇವನೆ ಮಾಡುವವರು ಎಂದಿಗೂ ಧ್ಯಾನದಲ್ಲಿ ಸಫಲತೆಯನ್ನು ಹೊಂದುವುದಿಲ್ಲ. ಸಂತರು ಕೇವಲ ಒಂದು ಬಾರಿ ಆಹಾರ ಸ್ವೀಕರಿಸುತ್ತಾರೆ. ಗೃಹಸ್ಥರು ಎರಡು ಬಾರಿ ಮಾಡಬಹುದು ಹಲವಾರು ಬಾರಿ ಆಹಾರ ಮಾಡುವುದರಿಂದ ಇಂದ್ರಿಯಗಳು ನಿಯಂತ್ರಣದಲ್ಲಿ ಇರುವುದಿಲ್ಲ, ಜೊತೆಗೆ ಆರೋಗ್ಯದ ಮೇಲೆಯೂ ದುಷ್ಪರಿಣಾಮ ಬೀರುತ್ತದೆ.

# 33. ನಿಜವಾದ ಧ್ಯಾನ ಸಾಧುವಿಗೆ ಮಾತ್ರ ಆಗಬಲ್ಲದು

ಜ್ಞಾನವನ್ನು ಪಡೆಯುವುದರಿಂದ ಮಾತ್ರ ಜೀವನವು ಶೋಭೆಯನ್ನು ಪಡೆಯುವುದಿಲ್ಲ. ಜ್ಞಾನದೊಂದಿಗೆ ಜೀವನದಲ್ಲಿ ಚಾರಿತ್ರವೂ ಇರಬೇಕು. ಜ್ಞಾನವು ಬೀಜದಂತಿದ್ದು ಅದರಲ್ಲಿ ಚಾರಿತ್ರದ ಪುಷ್ಪ ಹಾಗೂ ಫಲವೂ ಇರಬೇಕು. ನಿಜವಾದ ಜ್ಞಾನಿಯು ನಿಯಮದಿಂದ ತ್ಯಾಗಿಯೂ ಆಗುತ್ತಾನೆ. ಗೃಹ–ಗೃಹಸ್ಥರು ಶೂನ್ಯದ ಧ್ಯಾನವನ್ನು ಮಾಡಲಾರರು. ಅವರು ಎಷ್ಟೇ ಸಾಧನೆಯನ್ನು ಮಾಡಿದರೂ ಅವರ ಧ್ಯಾನ ಶೂನ್ಯದವರೆಗೆ ತಲುಪಲಾರದು. ನಮ್ಮ ಮೊಬೈಲ್ ನೆಟ್‌ವರ್ಕನೊಂದಿಗೆ ಸಂಪರ್ಕ ಹೊಂದಿ, ಸ್ವಿಚ್ ಆನ್ ಆಗಿರುವವರೆಗೆ ರಿಂಗ್ ಮತ್ತು ವೈಬ್ರೇಷನ್ ಆಗುತ್ತಿರುತ್ತದೆ. ನಾವು ನಮ್ಮ ಮನಸ್ಸನ್ನು ಪೂರ್ಣವಾಗಿ ಸ್ಥಿರಗೊಳಿಸಲು ಮನೆ–ಪರಿವಾರ, ಪದವಿ–ಹಣದೊಂದಿಗೆ ನಮ್ಮ ಸಂಪರ್ಕವನ್ನು ಸಮಾಪ್ತಗೊಳಿಸಬೇಕು, ಇಂತಹ ಧ್ಯಾನ ನಿಜವಾದ ಸಾಧುವಿಗೆ ಮಾತ್ರ ಆಗಬಹುದೇ ವಿನಹ ಗೃಹಸ್ಥರಿಗೆ ಅಲ್ಲ. ತಮ್ಮ ಜೀವನದಲ್ಲಿ ಅತಿ ಹೆಚ್ಚು ಪರಿಗ್ರಹಗಳನ್ನು ಸಂಗ್ರಹಿಸುವ ಭಾವ ಹೊಂದಿರುವವರು, ಸತ್ತು ನರಕ ಸೇರಬೇಕಾಗುತ್ತದೆ. ಧ್ಯಾನವು ಮೋಕ್ಷದ ಸಾಧನವಾಗಿದೆ. ಧ್ಯಾನಕ್ಕಾಗಿ ನಿರ್ಗ್ರಂಥನಾಗುವುದು ಅತ್ಯಂತ ಅವಶ್ಯಕವಾಗಿದೆ ಹಾಗೂ ನಿರ್ಗ್ರಂಥರಾಗಲು ಸಂಸಾರದಿಂದ ವಿರಕ್ತನಾಗುವುದು ಅವಶ್ಯವಾಗಿದೆ.

# 34. ಆಹಾರವನ್ನು ಯಾವಾಗಲೂ ಹಸಿವೆಗಿಂತ ಕಡಿಮೆ ಸ್ವೀಕರಿಸಬೇಕು

ಧ್ಯಾನದ ಬಗ್ಗೆ ಅನೇಕ ಸಂಗತಿಗಳನ್ನು ತಿಳಿದ ನಂತರ, ಧ್ಯಾನದ ಸಿದ್ಧಿ ಹಾಗೂ ಮನದ ಸ್ಥಿರತೆಗಾಗಿ ಶ್ವಾಸೋಚ್ಛ್ವಾಸ ನಿರಾಕುಲತೆಯಿಂದ ಆಗಬೇಕು ಎನ್ನುವುದನ್ನೂ ತಿಳಿದಿರಬೇಕು. ನೀರು ಹಾಗೂ ಗಾಳಿಗಳಿಗೆ ಸ್ಥಾನವನ್ನು ಬಿಡದೇ ಆಹಾರವನ್ನು ಹೊಟ್ಟೆ ತುಂಬಾ ಸೇವಿಸುವುದರಿಂದ ಶ್ವಾಸೋಚ್ಛ್ವಾಸವು ಸರಿಯಾಗಿ ಆಗಲಾರದು

ಮತ್ತು ಅಜೀರ್ಣ ಅವಸ್ಥೆಯಲ್ಲಿ ಅನೇಕ ವಿಷತತ್ತ್ವಗಳು ಉತ್ಪನ್ನವಾಗುತ್ತವೆ. ಇದರಿಂದಾಗಿ ರೋಗ ಪೀಡಿತ ವ್ಯಕ್ತಿಗೆ ಧ್ಯಾನಯೋಗದಲ್ಲಿ ಬಾಧೆಯುಂಟಾಗುತ್ತದೆ ಆದ್ದರಿಂದ ಆಹಾರವನ್ನು ಯಾವಾಗಲೂ ಹಸಿವೆಗಿಂತ ಕಡಿಮೆ ಸ್ವೀಕರಿಸಬೇಕು. ಇನ್ನು ಧ್ಯಾನ ಮಾಡಲು ಸರಿಯಾದ ದಿಕ್ಕನ್ನು ಆರಿಸಬೇಕು. ಪೂರ್ವ ಹಾಗೂ ಉತ್ತರ ದಿಕ್ಕುಗಳು ಧ್ಯಾನ ಮಾಡಲು ಉತ್ತಮವಾಗಿವೆ.

## 35. ಮನವನ್ನು ನಿಯಂತ್ರಿಸುವವರೇ ಎಲ್ಲವನ್ನೂ ಪಡೆಯುತ್ತಾರೆ

ಧ್ಯಾನದ ವಿಷಯವಾಗಿ ಹೇಳುವುದೇನೆಂದರೆ– 'ಧ್ಯಾನವೆಂದರೆ' ಕೇವಲ ಕೈಮೇಲೆ ಕೈಯಿಟ್ಟು ಆಸೀನನಾಗಿ ಬಿಡುವುದರಿಂದ ಧ್ಯಾನವಾಗುವುದಿಲ್ಲ. ಧ್ಯಾನವನ್ನು ಓಡಾಡುತ್ತಾ–ತಿರುಗಾಡುತ್ತಾ, ಕೂಡುತ್ತಾ–ಏಳುತ್ತಾ ಸಹ ಮಾಡಬಹುದು. ಯಾಕೆಂದರೆ ಧ್ಯಾನದ ಅರ್ಥ ಸದ್ ಭಾವನೆ ಹಾಗೂ ಸತ್ ವಿಚಾರವಾಗಿದೆ. ಶುಭ ಭಾವನೆಗಳಲ್ಲಿ ಹಾಗೂ ವಿಚಾರಗಳಲ್ಲಿ ಧರ್ಮಧ್ಯಾನವಾಗುತ್ತದೆ ಹಾಗೂ ಅಶುಭ ಭಾವಗಳಲ್ಲಿ ಹಾಗೂ ಅಶುಭ ವಿಚಾರಗಳಿಂದ ಅಶುಭ ಧ್ಯಾನವಾಗುತ್ತದೆ. ಕೆಟ್ಟ ಭಾವನೆಗಳು ಹಾಗೂ ಅಶುಭ ವಿಚಾರಗಳಿಂದ ರಕ್ಷಿಸಿಕೊಳ್ಳಲು ನಾವು ಒಂದು ನಿಶ್ಚಿತ ಸಮಯದಲ್ಲಿ ನಿಶ್ಚಿತ ಸ್ಥಾನದಲ್ಲಿ ವಿಶೇಷ ಆಸನದಲ್ಲಿ ಕುಳಿತು ಧ್ಯಾನದಲ್ಲಿ ತೊಡಗುತ್ತೇವೆ. ಆದರೆ ಕೇವಲ ಆಸೀನನಾಗುವುದರಿಂದ ಧ್ಯಾನವಾಗುವುದಿಲ್ಲ. ಧ್ಯಾನಕ್ಕಾಗಿ ಮನಸ್ಸಿನ ಮೇಲೆ ವಿಜಯ ಸಾಧಿಸುವುದು ಆವಶ್ಯಕವಾಗಿದೆ. ಯಾಕೆಂದರೆ ಮನಸ್ಸಿನ ಮೇಲೆ ನಿಯಂತ್ರಣ ಹೊಂದಿರುವವರು ಅವರೇ ಎಲ್ಲವನ್ನೂ ಪಡೆದಿದ್ದಾರೆ. ನಮ್ಮ ಅಪ್ರಶಸ್ತ (ಕೆಟ್ಟ) ಭಾವನೆಗಳಿಂದ ಸಂಸಾರ ಭ್ರಮಣೆ ಸಾಗುತ್ತಿರುತ್ತದೆ. ಧ್ಯಾನದಲ್ಲಿ ಮನಸ್ಸಿನ ಸ್ಥಿರತೆಗಾಗಿ ಏಕತ್ವ ಭಾವನೆ ಆವಶ್ಯಕವಾಗಿದೆ. ಈ ಭಾವನೆಯಲ್ಲಿ ಚಿಂತನೆ ಮಾಡಬೇಕು. ನನ್ನ ಆತ್ಮನ ಹೊರ್ತಾಗಿ ಸಂಸಾರದಲ್ಲಿ ಅಣು ಮಾತ್ರವು ಸಹ ನನ್ನದಲ್ಲ ಎನ್ನುವ ಭಾವನೆ ಇರಬೇಕು. ಎಲ್ಲ ಜೀವಗಳ ಬಗ್ಗೆ ಸಮಾನ ದೃಷ್ಟಿ ಹೊಂದಿರಬೇಕು; ಶತ್ರು–ಮಿತ್ರ ತನ್ನ–ಪರರ ಎಲ್ಲವನ್ನು ಬಿಟ್ಟು ರಾಗ–ದ್ವೇಷವನ್ನು ಬಿಡಬೇಕು. ವೈರ–ಭಾವ ಹೊಂದಿರುವವರು ಧ್ಯಾನ ಮಾಡಲಾರರು. ಅವರು ಕೇವಲ ಧ್ಯಾನದ ನಾಟಕವಾಡಬಲ್ಲರು. ಇಷ್ಟ ವಸ್ತುಗಳು ವಿಯೋಗವಾದಾಗ ಅವುಗಳ ಚಿಂತನೆ ಮಾಡುವುದು ಹಾಗೂ ಅನಿಷ್ಟ ವಸ್ತುಗಳ ಸಂಯೋಗವಾದಾಗ ಅಳುವುದು ವಿಲಾಪಿಸುವುದು ಹಾಗೂ ದುಃಖ ಪಡುವುದರಿಂದ ಆಗುವ ಧ್ಯಾನವು ಆರ್ತ್ರಧ್ಯಾನವಾಗಿದೆ. ಆರ್ತ್ರಧ್ಯಾನ ಮಾಡುವವರು ಜನ್ಮ–ಜನ್ಮಾಂತರಗಳ ವರೆಗೆ ಸಂಸಾರದಲ್ಲಿ ಅಲೆದಾಡುತ್ತಿರುತ್ತಾರೆ. ಸಂಸಾರದ ಬಂಧನಗಳಿಂದ ಬಿಡುಗಡೆ ಹೊಂದಲು ಧರ್ಮಧ್ಯಾನದ ಕಡೆಗೆ ಸಾಗಬೇಕಾಗುತ್ತದೆ. ನಿಜವಾದ ಧ್ಯಾನಿಯು (ಯೋಗಿ) ಸಾಂಸಾರಿಕ ಸುಖಗಳನ್ನು ಪಡೆಯಲು ಧ್ಯಾನ ಮಾಡುವುದಿಲ್ಲ. ಅವನು

ಸಂಸಾರದ ಬಂಧನಗಳಿಂದ ಮುಕ್ತನಾಗಲು ಧ್ಯಾನ ಮಾಡುತ್ತಾನೆ. ಇಂದ್ರಿಯಗಳ ವಿಷಯ ಭೋಗಗಳನ್ನು ಪರಿತ್ಯಾಗ ಮಾಡಿ ಸಂಯಮದ ಜೀವನವನ್ನು ಸ್ವೀಕರಿಸುವವರು ಹಾಗೂ ಜಗತ್ತಿನ ಚಿಕ್ಕದೊಡ್ಡ ಜೀವಗಳ ಬಗ್ಗೆ ದಯಾಭಾವ ಹೊಂದಿರುವವರಿಗೇನೆ ಧರ್ಮಧ್ಯಾನ ಪ್ರಾಪ್ತವಾಗಬಲ್ಲದು.

# 36. ಸ್ವೀಕರಿಸುವ ಆಹಾರ ಹೇಗೋ ಹಾಗೆಯೇ ಮನಸ್ಸು

ಆಹಾರ ಹಾಗೂ ನೀರು ಧ್ಯಾನ ಪ್ರಕ್ರಿಯೆಯ ಮೇಲೆ ಪ್ರಭಾವ ಬೀರುತ್ತವೆ. ಆದ್ದರಿಂದ ಧ್ಯಾನಿಯು ಆಹಾರ ಹಾಗೂ ಪಾನೀಯಗಳ ಶುದ್ಧತೆಗಳ ಕಡೆ ಗಮನವಿಡಬೇಕು. ಆಹಾರದಲ್ಲಿ ಉಪಯೋಗಿಸುವ ಧಾನ್ಯಗಳು ಬಹಳ ಹಳತಾಗಿರಬಾರದು, ಕ್ರಿಮಿ–ಹುಳುಗಳಿಂದ ಕೂಡಿರಬಾರದು. ಜೀವ ಜಂತುಗಳ ಮಿಶ್ರಣವಾಗಿರಬಾರದು ಹಾಗೂ ತಾಮಸಿಕ ಹಾಗೂ ಕಂದಮೂಲಗಳಾಗಿರಬಾರದು. ತಯಾರಿಸಿದ ಆಹಾರವು ತಂಗಳಾಗಿರಬಾರದು, ಸೂರ್ಯನ ಬೆಳಕಿಲ್ಲದ ಸ್ಥಾನದಲ್ಲಿ ತಯಾರಿಸಿರಬಾರದು ಹಾಗೂ ಮಾಂಸಾಹಾರಿಗಳಿಂದ ತಯಾರಿಸಿದ, ಅಭಕ್ಷ ಆಹಾರಗಳಿಲ್ಲದ, ಸೋಸಿದ ನೀರಿನಿಂದ ಸಿದ್ಧಪಡಿಸದ ಆಹಾರಗಳನ್ನು ಬಿಟ್ಟು ಶುದ್ಧ ಹಾಗೂ ಆಗ ತಾನೇ ತಯಾರಿಸಿದ ಆಹಾರದ ಕಡೆಗೆ ಗಮನವಿರಬೇಕು. ಭಾರಿ ರಾಜಸಿಕ ಆಹಾರದ ಕಡೆಗೆ ಒಲವಿರದೇ ಸಾತ್ವಿಕ ಆಹಾರ–ಶಾಕಾಹಾರದಿಂದ ಧ್ಯಾನ ಸರಳತೆಯಿಂದಾಗುತ್ತದೆ. ಇದರಿಂದ ಭಾವನೆಗಳಲ್ಲಿ ನಿರ್ಮಲತೆ ಇರುತ್ತದೆ. ಶುದ್ಧ–ಸಾತ್ವಿಕ ಆಹಾರದಿಂದ ಬ್ರಹ್ಮಚರ್ಯ ಪಾಲನೆಯು ಆಗಿ ಉತ್ಕೃಷ್ಟ ಧ್ಯಾನ ಮಾಡಲು ಸಾಧ್ಯವಾಗುತ್ತದೆ. ಆಹಾರ–ಜಲಕ್ಕೆ ಸಂಬಂಧಿಸಿದಂತೆ,

ಅನ್ನ ಸೇವಿಸಿದ ಹಾಗೇ ಆಗುವುದು ಮನವು,
ನೀರು ಕುಡಿದ ಹಾಗೇ ಆಗುವುದು ವಾಣಿ.

ಎಂದೂ ಹೇಳಿದ್ದಾರೆ.

# 37. ಸಂತರ ಸಾನಿಧ್ಯ ಸೌಭಾಗ್ಯದಿಂದ ದೊರೆಯುತ್ತದೆ

ಯಾವ ಸ್ಥಳದ ಜನರ ಮಹಾನ್ ಪುಣ್ಯಕರ್ಮದ ಉದಯವಾಗುತ್ತದೆಯೋ, ಸಂತರು ಅದೇ ಸ್ಥಳದಲ್ಲಿ ವರ್ಷಾಯೋಗ ಮಾಡುತ್ತಾರೆ. ಸಾನಿಧ್ಯದಿಂದ ನಮ್ಮ ಜೀವನವನ್ನು ಪವಿತ್ರ ಹಾಗೂ ಸಂಸ್ಕಾರಿತ ಗೊಳಿಸಿಕೊಳ್ಳಬೇಕು. ಶುದ್ಧ

ಆಹಾರದೊಂದಿಗೆ ಧ್ಯಾನ ಮಾಡುವುದರಿಂದ ಮನದ ಜೊತೆ–ಜೊತೆಯಾಗಿ ನಮ್ಮ ಶರೀರವೂ ಆರೋಗ್ಯವಾಗಿರುತ್ತದೆ. ಆದ್ದರಿಂದಲೇ ಭಾರತೀಯ ಧ್ಯಾನ ಪದ್ಧತಿಯನ್ನು ಜಗತ್ತಿನ ಎಲ್ಲ ಜನರು ಸ್ವೀಕರಿಸುತ್ತಿದ್ದಾರೆ. ಧ್ಯಾನದ ನಿರಂತರ ಅಭ್ಯಾಸದಿಂದ ಪ್ರತಿದಿನ ಹೊಸ–ಹೊಸ ವಿಚಾರಗಳು ಉತ್ಪನ್ನವಾಗುತ್ತವೆ ಹಾಗೂ ಮನಸ್ಸಿನ ಶುದ್ಧತೆ ನಿರಂತರ ಹೆಚ್ಚಾಗುತ್ತಾ ಸಾಗುತ್ತದೆ. ಧರ್ಮವು ನಿಸ್ವಾರ್ಥ ಭಾವದಿಂದಲೇ ಸಾಗಬಲ್ಲದು. ಧರ್ಮವು ಧನದಿಂದ ಹಾಗೂ ಧನದಿಂದ ನಿಯುಕ್ತರಾದ ಸೇವಕರಿಂದ ಮಾತ್ರ ನಡೆಯುವುದಿಲ್ಲ. ಧರ್ಮವನ್ನು ಮುನ್ನೆಡಸಲು ಪ್ರತಿಯೊಬ್ಬ ಶ್ರದ್ಧಾಳುವಿಗೆ ತಮ್ಮ ಮನದಲ್ಲಿ ಸಾಧು–ಸಂತರ ಹಾಗೂ ಭಗವಂತರ ಬಗ್ಗೆ ನಿಜವಾದ ನಿಃಸ್ವಾರ್ಥ ಸೇವೆಯೊಂದಿಗೆ ಶ್ರದ್ಧೆಯನ್ನು ಜಾಗೃತಗೊಳಿಸಬೇಕು.

## 38. ಬಾಲ್ಯದಲ್ಲಿಯೇ ಧರ್ಮಸಂಸ್ಕಾರ ನೀಡಿರಿ

ಧರ್ಮಸಂಸ್ಕಾರವನ್ನು ಬಾಲ್ಯದಲ್ಲಿಯೇ ನೀಡುವುದರಿಂದ ಮಗುವಿಗೆ ಸಂಸ್ಕಾರ ದೊರೆತು ಆತ್ಮನ ಮೇಲೆ ಸದ್ಗುಣಗಳ ಪರಂಪರೆ ಉಂಟಾಗುತ್ತದೆ. ಆತ್ಮನ ಮೇಲೆ ಗುಣಗಳ ಅಲಂಕಾರವೇ ಸಂಸ್ಕಾರವಾಗಿದೆ. ಸಂಸ್ಕಾರ ನೀಡುವುದೆಂದರೆ ಆತ್ಮನನ್ನು ಗುಣಗಳಿಂದ ಅಲಂಕರಿಸುವುದಾಗಿದೆ. ಮಕ್ಕಳಿಗೆ ಸಂಸ್ಕಾರ ನೀಡುವಲ್ಲಿ ಎಲ್ಲಕ್ಕಿಂತ ದೊಡ್ಡ ಯೋಗದಾನ ತಾಯಿಯದಾಗಿದೆ. ಸ್ತ್ರೀಯರು ಪರಿವಾರದೊಂದಿಗೆ ಸಮಾಜ ಹಾಗೂ ರಾಷ್ಟ್ರಕ್ಕೆ ಮಹಾನ್ ಆಗುವಂತೆ ಮಾಡಬಲ್ಲವರಾಗಿದ್ದಾರೆ. ಆದ್ದರಿಂದ ಸ್ತ್ರೀಯರನ್ನು ತಿರಸ್ಕಾರದ ದೃಷ್ಟಿಯಿಂದ ನೋಡಬಾರದು. ಚಿಕ್ಕ ಮಕ್ಕಳ ಮೇಲೆ ಮಹಾಮಂತ್ರದ ವಿಶೇಷ ಪ್ರಭಾವ ಬೀರುತ್ತದೆ. ಮಕ್ಕಳು ಮಂತ್ರಗಳನ್ನು ತಿಳಿಯಲಾರರು ಎಂದು ತಿಳಿಯಬಾರದು. ತಿರ್ಥಂಕರ ಪಾರ್ಶ್ವನಾಥರು ನಾಗ–ನಾಗಿಣಿಯರಿಗೆ ಣಮೋಕಾರ ಮಂತ್ರವನ್ನು ಕೇಳಿಸಿದ್ದರಿಂದ ಅವರು ನಾಗ–ನಾಗಿಣಿಯರಾದರು. ಜೀವಂಧರಕುಮಾರನಿಂದ ಮರಣೋನ್ಮುಖ ನಾಯಿಯೂ, ಈ ಮಂತ್ರ ಕೇಳಿದ್ದರಿಂದ ಆ ನಾಯಿಯೂ ಸುದರ್ಶನ ಯಕ್ಷನಾಯಿತು. ಹೀಗೆಯೇ ರಾಮನು ಇಂತಹ ಮಂತ್ರವನ್ನು ಜಟಾಯು ಪಕ್ಷಿಗೆ ಕೇಳಿಸಿದ್ದರಿಂದ ಆ ಪಕ್ಷಿಯು ಸ್ವರ್ಗವನ್ನು ತಲುಪಿತು. ಹಾಗೂ ಶಿಲೆಯು ಆಚಾರ್ಯರಿಂದ ಸೂರ್ಯ ಮಂತ್ರದಿಂದ ಭಗವಂತ ನಾಗಬಲ್ಲದೆಂದರೆ ನಿಮ್ಮ ಮಗುವು ಜೀವಿತ ಮನುಷ್ಯನಾಗಿರುವುದರಿಂದ ಮಂತ್ರದ ಪ್ರಭಾವ ಯಾಕೆ ಆಗಲಾರದು? ಆದ್ದರಿಂದ ಮಕ್ಕಳಿಗೆ ಣಮೋಕಾರ ಮಂತ್ರವನ್ನು ಅವಶ್ಯವಾಗಿ ಕೇಳಿಸಬೇಕು.

# 39. ಆತ್ಮನ ಸ್ವಭಾವಕ್ಕೆ ಧರ್ಮವೆನ್ನುತ್ತಾರೆ

ಧರ್ಮವೆಂದರೆ ಏನು? ಆತ್ಮನ ಸ್ವಭಾವಕ್ಕೆ ಧರ್ಮವೆನ್ನುತ್ತಾರೆ. ಅಗ್ನಿಯ ಸ್ವಭಾವ ಉಷ್ಣ, ನೀರು ಅಥವಾ ಹಾಲಿನ ಸ್ವಭಾವ ಶೀತಲ ಇರುವಂತೆ ಜಗತ್ತಿನ ಸಮಸ್ತ ಆತ್ಮಗಳ ಸ್ವಭಾವವು ಶಾಂತಿ, ನಿರಾಕುಲತೆ ಆಗಿದೆ. ಬೆಂಕಿಯ ಸಂಯೋಗದಿಂದ ಹಾಲು ಬಿಸಿಯಾಗಿ ಉಕ್ಕಿ ಹರಿದರೂ ಹಾಗೂ ಬೆಂಕಿಯನ್ನು ದೂರ ಮಾಡುತ್ತಲೇ ಆ ಹಾಲು ಸ್ವಯಂ ಸ್ವಭಾವಕ್ಕೆ ಹಿಂದಿರುಗುವಂತೆ ಸಂಸಾರೀ ಆತ್ಮನಿಗೆ ಪರವಸ್ತುವಿನಲ್ಲಿ ರಾಗ–ದ್ವೇಷ ಹಾಗೂ ಮೋಹ ಉಂಟಾಗಿ ಅದರ ಕಷಾಯ ರೂಪದ ವಿಭಾವ ಪರಿಣತಿಯಾಗುತ್ತದೆ. ಆದರೆ ಆತ್ಮನು ಪರಪದಾರ್ಥಗಳ ಮೇಲಿನ ರಾಗ–ದ್ವೇಷ ಹಾಗೂ ಮೋಹಗಳನ್ನು ತ್ಯಾಗ ಮಾಡಿದಾಗ ಸ್ವಯಂ ತನ್ನ ಶಾಂತಿ–ನಿರಾಕುಲ ಸ್ವಭಾವವನ್ನು ಪಡೆಯುತ್ತಾನೆ. ಯಾಕೆಂದರೆ ಸ್ವಭಾವವು ತ್ರಿಕಾಲದಲ್ಲಿಯೂ ಏಕರೂಪವಾಗಿರುತ್ತದೆ. ಆದರೆ ವಿಭಾವವು ತಾತ್ಕಾಲಿಕವಾಗಿರುತ್ತದೆ. ಸ್ವಭಾವವು ಎಲ್ಲಿಯೂ ಹೋಗುವುದಿಲ್ಲ, ಕೇವಲ ಮರೆಯಾಗಿರುತ್ತದೆ, ಅದನ್ನು ಎಲ್ಲಿಂದಾದರೂ ತರಲಾಗದು. ಆದರೆ ವಿಭಾವದ ಕಾರಣದಿಂದ ದೂರವಾದರೂ ಅದು ಮರೆಯಾಗಿದ್ದು ಸ್ವಭಾವ ಸ್ವಯಂ ಪ್ರಕಟವಾಗುತ್ತದೆ ಯಾಕೆಂದರೆ ಅದು ಆತ್ಮನ ಧರ್ಮವಾಗಿದೆ.

# 40. ಪರೋಪಕಾರ ಬುದ್ಧಿಯನ್ನು ಪ್ರಕೃತಿಯಿಂದ ಕಲಿಯಿರಿ

ಮಾನವನಿಗೆ ಶಿಕ್ಷಣ ನೀಡುವಲ್ಲಿ ಪ್ರಕೃತಿ ಸಹ ಒಂದು ಸಹಾಯಕ ಸಾಧನವಾಗಿದೆ. ಜ್ಞಾನಿ ಹಾಗೂ ತಪಸ್ವಿಗಳಷ್ಟೇ ಅಲ್ಲ ಪ್ರಕೃತಿಯು ಸಹ ನಮಗೆ ಮುಕ್ತಿ ಹಾಗೂ ಪರೋಪಕಾರದ ಮಾರ್ಗದಲ್ಲಿ ಸಾಗಲು ಪಾಠವನ್ನು ಕಲಿಸುತ್ತದೆ. ಮರವು ಯಾವ ಅಪೇಕ್ಷೆಯನ್ನು ಇಡದೇ ನಮಗೆ ಫಲವನ್ನು ನೀಡುತ್ತದೆ. ನದಿಗಳು ಹರಿದು ನಮಗೆ ಸಿಹಿ ನೀರನ್ನು ನೀಡುತ್ತವೆ. ಹಸುವು ಸ್ವತಃ ಹುಲ್ಲು ತಿಂದು ನಮಗೆ ಹಾಲು ಕೊಡುತ್ತದೆ. ಹಾಗೆಯೇ ತಾಯಿ ತನ್ನ ಪುತ್ರನನ್ನು ಪರೋಪಕಾರಕ್ಕಾಗಿ ಜನ್ಮ ನೀಡುತ್ತಾಳೆ. ಮರದ ಕಡೆಗೆ ಯಾರಾದರೂ ಕಲ್ಲು ಎಸೆದರೆ ಅದು ಹಿಂದಿರುಗಿ ಫಲವನ್ನು ನೀಡುತ್ತದೆ. ಅಪಕಾರದ ಬದಲಾಗಿ ಉಪಕಾರವನ್ನೇ ಮಾಡುತ್ತದೆ. ಆದರೆ ಇಂದು ಮಾನವ ಎಲೆ–ಫಲಗಳಿಗಾಗಿ ಗಿಡವನ್ನೇ ನಾಶ ಮಾಡುವ ಸೈತಾನನಾಗಿದ್ದಾನೆ, ನದಿಗಳಲ್ಲಿ ಕಸಾಯಿಖಾನೆಗಳ ರಕ್ತ ಹರಿಯುತ್ತಲಿದೆ ಹಾಗೂ ವೃದ್ಧ ಹಸುಗಳು ಹಾಗೂ ಪಶುಗಳನ್ನು ಕಟುಕರ ಮನೆಗೆ ಕಳಿಸಲಾಗುತ್ತಿದೆ. ಅದರಿಂದ ಪಾಪ ಹೆಚ್ಚಾಗಿ ಸ್ವಯಂ ರೋಗಗಳು ಹಾಗೂ ಪ್ರಕೃತಿಯ ಪ್ರಕೋಪಗಳಿಂದ ಆಪತ್ತಿಯ ಬೇಟೆಗೆ ಬಲಿಯಾಗುತ್ತಿದ್ದೇವೆ. ಆದ್ದರಿಂದ ನಾವು ಪ್ರಕೃತಿಯ ಪರೋಪಕಾರದ ಶಿಕ್ಷಣವನ್ನು ಪಡೆಯಬೇಕಾಗಿದೆ.

# 41. ದಾನವು ಕೈಗಳ ಆಭರಣವಾಗಿದೆ

ಮನುಷ್ಯನ ಸೌಂದರ್ಯ ಶರೀರದಿಂದಲ್ಲ, ಚಾರಿತ್ರ್ಯದಿಂದ ವೃದ್ಧಿಸುತ್ತದೆ. ವರ್ತಮಾನದಲ್ಲಿ ಜನರು ಚಾರಿತ್ರ್ಯ ನಿರ್ಮಾಣದ ಬದಲಾಗಿ ಶರೀರ, ಧನ ಹಾಗೂ ವೈಭವದೆಡೆಗೆ ಹೆಚ್ಚಿನ ಗಮನ ನೀಡುತ್ತಿದ್ದಾರೆ. ಕೈಗಳ ಆಭರಣ ದಾನವಾದರೆ ಕಂಠದ ಆಭರಣ ಸತ್ಯವಾಗಿದೆ. ಇದೇ ರೀತಿ ಕಿವಿಗಳ ಆಭರಣ ಶಾಸ್ತ್ರವಾಗಿದೆ. ನಮ್ಮ ವೀತರಾಗ ಭಗವಂತರು ಇಷ್ಟು ಉನ್ನತಾಸನದಲ್ಲಿ ಯಾಕೆ ಇದ್ದಾರೆ. ಹೊರಗಿನ ಸಂಪತ್ತು ಅಲಂಕಾರಗಳಿಂದ ಪೂಜೆಯಾಗುವುದಾದರೆ ಅವರ ಬಳಿ ಏನೂ ಇಲ್ಲ, ಎಲ್ಲಿ ವೈಭವವನ್ನು ಬಿಟ್ಟು ಅವರು ತಪಸ್ಸಿನ ಮೂಲಕ ಪಡೆದಿರುವ ರತ್ನತ್ರಯ ರೂಪದ ಗುಣಗಳ ಅಥವಾ ಅನಂತ ಜ್ಞಾನ, ದರ್ಶನಗಳ ವೈಭವ ಪಡೆದಿದ್ದಾರೆ. ಅವುಗಳಿಂದಲೇ ದೇವತೆಗಳು ಮನುಷ್ಯರು ಅವರನ್ನು ಇಷ್ಟು ಎತ್ತರಕ್ಕೆ ಏರಿಸಿದ್ದಾರೆ. ಗುಣರೂಪದ ಇಂತಹ ಆಭರಣ ಇರುವವರಿಗೆ ಬೇರೆ ಆಭರಣಗಳಿಂದ ಏನು ಪ್ರಯೋಜನ?

# 42. ತೀರ್ಥಂಕರ ಪದವಿಯು ಸರ್ವೋತ್ಕೃಷ್ಟ

ತೀರ್ಥಂಕರ ಪದವಿಯು ಜಗತ್ತಿನ ಸರ್ವೋತ್ಕೃಷ್ಟ ಪದವಿಯಾಗಿದೆ. ಇದನ್ನು ಪಡೆಯಲು ಹದಿನಾರು ಭಾವನೆಗಳನ್ನು ಭಾವಿಸಬೇಕು. ಈ ಭಾವನೆಗಳಲ್ಲಿ ದರ್ಶನ–ವಿಶುದ್ಧಿ ಭಾವನೆಯು ಅನಿವಾರ್ಯ ಭಾವನೆಯಾಗಿದೆ. ದರ್ಶನವಿಶುದ್ಧಿ ಮುಂತಾದ ಭಾವನೆಗಳಲ್ಲಿ ಪ್ರವಚನ ವಾತ್ಸಲ್ಯ ಭಾವನೆಯಲ್ಲಿ ಲೋಕಕಲ್ಯಾಣ ಭಾವನೆಯಲ್ಲಿ ಸಾತಿಶಯ ಪುಣ್ಯದ ಸಂಚಯವಾಗುತ್ತದೆ. ತೀರ್ಥಂಕರ ಪದವಿಯು ಪುಣ್ಯದ ಫಲಸ್ವರೂಪವಾಗಿರುತ್ತದೆ. ದಿಗಂಬರ ಮುನಿಯ ಮುದ್ರೆಯನ್ನು ನೋಡುವುದರಿಂದಲೇ ತ್ಯಾಗ ಮತ್ತು ಸಂಯಮದ ಸಂದೇಶ ದೊರೆಯುತ್ತದೆ. ಜನರು ಧರ್ಮದಿಂದ ಭಯ, ಭಕ್ತಿ ಹಾಗೂ ಮೋಹದ ಕಾರಣಗಳಿಂದ ಸಂಪರ್ಕ ಹೊಂದುತ್ತಾರೆ. ಭಯ ಹಾಗೂ ಮೋಹದ ಕಾರಣಗಳಿಂದ ಧರ್ಮದ ಜೊತೆ ಸೇರುವವರಿಗೆ ಧರ್ಮದ ಮರ್ಮ ತಿಳಿಯಲಾರರು. ಧರ್ಮದ ಮರ್ಮವನ್ನು ತಿಳಿಯಲು ಶ್ರದ್ಧೆ–ಭಕ್ತಿಗಳಿಂದ ಧರ್ಮದ ಜೊತೆಗೂಡಬೇಕು.

# 43. ತ್ಯಾಗವಿಲ್ಲದೇ ಎಲ್ಲಿದೆ ಆತ್ಮವೈಭವ?

ಸಾಂಸಾರಿಕ ವೈಭವದ ತ್ಯಾಗವಿಲ್ಲದೇ ಆತ್ಮವೈಭವ ದೊರೆಯಲಾರದು. ನಾವು ಆತ್ಮವೈಭವವನ್ನು ಪಡೆಯಲು ಪ್ರಯತ್ನಿಸಿದಾಗಲೇ ಕಲ್ಯಾಣವಾಗುತ್ತದೆ. ಜಿನಧರ್ಮದ ತೀರ್ಥಂಕರ ಜೀವನ ದರ್ಶನವನ್ನು ನೋಡಿದರೆ ತೀರ್ಥಂಕರರು ಧನ, ವೈಭವದ ತ್ಯಾಗ ಮಾಡಿ ದಿಗಂಬರ ಅವಸ್ಥೆಯನ್ನು ಧಾರಣೆ ಮಾಡಿ ನಿರ್ವಾಣ ಮಹಾಪದವಿಯನ್ನು ಪಡೆದ ಸಂಗತಿಯು ತಿಳಿದು ಬರುತ್ತದೆ. ತೀರ್ಥಂಕರರ ಮೂಲಕ ಪ್ರತಿಪಾದನೆಯಾದ ಈ ಧರ್ಮದಲ್ಲಿ ಅಮೂಲ್ಯವಾದ ಸಾಂಸ್ಕೃತಿಕ ಸಾಮ್ರಾಜ್ಯವಿದೆ. ಜೈನಧರ್ಮದಲ್ಲಿ ದರ್ಶನವಷ್ಟೇ ಅಲ್ಲ, ವಿಜ್ಞಾನ ಹಾಗೂ ಭೂಗೋಲ ಮುಂತಾದ ವಿಷಯಗಳ ಗೂಢ ರಹಸ್ಯವು ಅಡಗಿದೆ. ವಿಜ್ಞಾನ ಮತ್ತು ಅಂತರಿಕ್ಷ ವಿಜ್ಞಾನಗಳಲ್ಲಿ ಆಗುವ ಸಂಶೋಧನೆಗಳ ಮೂಲ ರಹಸ್ಯ ಹಾಗೂ ಪ್ರೇರಣೆ ಜೈನಾಗಮ ಗ್ರಂಥಗಳ ಮೇಲೆ ಆಧಾರಿತವಾಗಿದೆ. ಆದ್ದರಿಂದ ನಾವೆಲ್ಲರೂ ಸಂಕಲ್ಪಪೂರ್ವಕವಾಗಿ ದೇವ, ಶಾಸ್ತ್ರ ಹಾಗೂ ಗುರು– ಇವುಗಳು ತೀರ್ಥಗಳ ರಕ್ಷಣೆಗಾಗಿ ಸತತವಾಗಿ ಸಂಕಲ್ಪ ಮಾಡಬೇಕಾಗಿದೆ.

# 44. ಬೇರೆಯವರ ಗುಣಗಳನ್ನು ಗಮನಿಸಬೇಕು

ಜಗತ್ತಿನಲ್ಲಿ ಪ್ರತಿಯೊಬ್ಬ ವ್ಯಕ್ತಿ ಮತ್ತು ವಸ್ತುವಿನಲ್ಲಿ ಯಾವುದಾದರು ಗುಣವು ಇದ್ದೇ ಇರುತ್ತದೆ. ಆದ್ದರಿಂದ ನಾವು ಯಾವಾಗಲೂ ಅನ್ಯರ ಗುಣಗಳ ಮೇಲೆ ದೃಷ್ಟಿ ಹೊಂದಿರಬೇಕು. ನಾವು ಗುಣ ಗ್ರಾಹಕರಾಗಿ ಇತರರ ದೋಷಗಳ ಮೇಲೆ ಗಮನ ಹರಿಸಬಾರದು. ಗುಣ ಗ್ರಹಣದ ದೃಷ್ಟಿಯಿಂದಲೇ ನಾವು ನಮ್ಮ ವಿಕಾಸವನ್ನು ಸಾಧಿಸಬಹುದು. ಚಂದ್ರನ ಪ್ರಕಾಶ ಹಾಗೂ ಆತ್ಮ ಸೌಂದರ್ಯವನ್ನು ನೋಡಬೇಕೇ ವಿನಹ ಆತ್ಮನ ಮೇಲೆ ಇರುವ ಕಲೆಗಳನ್ನಲ್ಲ. ಮನುಷ್ಯನು ಸಹ ಗುಣ ಮತ್ತು ದೋಷಗಳ ಸಮೂಹವಾಗಿದ್ದಾನೆ. ನಾವು ಹೊಂದಿರುವ ದೃಷ್ಟಿಗಳಿಗೆ ಅನುಗುಣವಾಗಿ ನಾವು ನಮ್ಮ ಫಲಗಳನ್ನು ಪಡೆಯುತ್ತೇವೆ. ಪರರ ನಿಂದೆ ಮತ್ತು ಸ್ವಯಂ ಪ್ರಶಂಸೆ ಮಾಡಿಕೊಳ್ಳುವುದರಿಂದ ನೀಚ ಗೋತ್ರದ ಬಂಧವಾಗುತ್ತದೆ ಹಾಗೂ ನಮ್ಮ ದೋಷಗಳ ಆಲೋಚನೆ ಮತ್ತು ಅನ್ಯರ ಗುಣಗಳ ಪ್ರಶಂಸೆಯಿಂದ ಉಚ್ಚ ಗೋತ್ರದ ಬಂಧವಾಗುತ್ತದೆಂದು ಶಾಸ್ತ್ರಗಳಲ್ಲಿ ಹೇಳಿದೆ. ಆದ್ದರಿಂದ ಪಾಪಿಯನ್ನು ನಿಂದಿಸದೇ ಪಾಪಗಳನ್ನು ನಿಂದಿಸಬೇಕು. ಯಾಕೆಂದರೆ ಪಾಪಿಯು ಎಂದಿಗಾದರೂ ತನ್ನ ಜೀವನವನ್ನು ಸುಧಾರಿಸಿಕೊಂಡು ಚಾರಿತ್ರವಂತನಾಗಬಹುದು ಆದರೆ ಆತನಿಗೆ ಮಾಡಲ್ಪಟ್ಟ ಅವಹೇಳನ ಮತ್ತು ನಿಂದೆಯ ಪಾಪ ನಮ್ಮ ಬೆನ್ನನ್ನು ಬಿಡಲಾರದು.

# 45. ಧ್ಯಾನದಿಂದ ಶರೀರ ಮತ್ತು ಮನಸ್ಸು ಆರೋಗ್ಯಕರವಾಗಿರುತ್ತವೆ

ಧ್ಯಾನದಿಂದ ತನು ಮತ್ತು ಮನ ಎರಡೂ ಆರೋಗ್ಯಕರವಾಗಿರುತ್ತವೆ. ಈ ಕಾರಣದಿಂದಾಗಿ ಅನಾದಿ ಕಾಲದಿಂದ ಜನರು ಧ್ಯಾನವನ್ನು ಸಹರ್ಷದಿಂದ ಸ್ವೀಕರಿಸುತ್ತಾ ಬಂದಿದ್ದಾರೆ. ಧ್ಯಾನದ ನಿರಂತರ ಅಭ್ಯಾಸ ಮಾಡುವುದರಿಂದ ಹೊಸ–ಹೊಸ ಧಾರ್ಮಿಕ ವಿಚಾರಗಳು ಮತ್ತು ಚಿಂತನೆಗಳು ಉತ್ಪನ್ನವಾಗುತ್ತಿರುತ್ತವೆ. ಒಂದು ಹೊಸ ಹಾಗೂ ಸ್ಫೂರ್ತಿ ಉತ್ಪನ್ನವಾಗುತ್ತದೆ. ಮನದ ಶುದ್ಧಿ ಹಾಗೂ ನಿರ್ಮಲತೆಯು ಹೆಚ್ಚಾಗುತ್ತಿರುತ್ತದೆ. ಧರ್ಮವು ನಿಸ್ವಾರ್ಥ ಭಾವದಿಂದಲೇ ಸಾಗಬಲ್ಲದು. ಜೀವನ ಕೊನೆಗೊಳ್ಳುವ ಮೊದಲು ಪಾಪದ ವಿಮೋಚನೆಯನ್ನು ಮಾಡಿಕೊಳ್ಳಬೇಕು, ಯಾಕೆಂದರೆ ವಿಷಯ ಭೋಗಗಳು ಭೋಗಿಸುತ್ತಾ ಹಾಗೂ ಮೋಹ–ಮಾಯೆಗಳೊಂದಿಗೆ ಆಗುವ ಸಾವು ಸತ್ತ ನಂತರವು ಸಹ ಸದ್ಗತಿಯನ್ನು ಹೊಂದಲಾರದು. ಬಹಳ ಆರಂಭ (ಹಿಂಸೆ) ಮತ್ತು ಪರಿಗ್ರಹ ನರಕಾಯುವಿನ ಬಂಧಕ್ಕೆ ಕಾರಣವಾಗುವುದೆಂದು ಶಾಸ್ತ್ರಗಳಲ್ಲಿ ಹೇಳಿದ್ದಾರೆ. ಜನರಾಡುವ ಮಾತಿನಲ್ಲಿಯೂ "ರಾಜೇಶ್ವರಿಯು ನರಕೇಶ್ವರಿಯೂ" ಹೌದು ಅರ್ಥಾತ್ ಪರಿಗ್ರಹಗಳೊಂದಿಗೆ ಸಾಯುವವರ ಅಧೋಗತಿಯಾಗುತ್ತದೆ.

# 46. ಸಾಂಸಾರಿಕ ಸುಖವನ್ನಲ್ಲ; ನಿಜವಾದ ಸುಖವನ್ನು ಪಡೆಯಿರಿ

ಆತ್ಮನನ್ನು ಕರ್ಮಗಳಿಂದ ಮುಕ್ತಗೊಳಿಸಿ ನಾವು ನಿಜವಾದ ಸುಖವನ್ನು ಪಡೆಯಬಹುದು. ಇದಕ್ಕಾಗಿ ಧ್ಯಾನವು ಅವಶ್ಯವಾಗಿದೆ. ಮಹಾಪುರುಷರು, ತಪಸ್ವಿಗಳು ಹಾಗೂ ಜ್ಞಾನಿಗಳು ಧ್ಯಾನ ಮಾಡಿಯೇ ಕರ್ಮಬಂಧನದಿಂದ ಸ್ವಯಂ ಮುಕ್ತಗೊಳಿಸಿದ್ದಾರೆ. ನಿಜವಾದ ಸುಖವು ಪ್ರತಿ ಸಮಯದಲ್ಲಿ ಸುಖವನ್ನು ನೀಡುತ್ತದೆ. ಆದರೆ ಸಾಂಸಾರಿಕ ಸುಖವು ಪ್ರಾರಂಭದಲ್ಲೇನೋ ಆನಂದ ನೀಡುತ್ತದೆ. ಆದರೆ ಕೊನೆಯಲ್ಲಿ ದುಃಖವನ್ನುಂಟು ಮಾಡುತ್ತದೆ. ಕರ್ಮದ ಫಲವನ್ನು ವ್ಯಕ್ತಿಯು ಅನುಭವಿಸಲೇಬೇಕಾಗುತ್ತದೆ. ಆದ್ದರಿಂದ ಪಾಪ ಕರ್ಮಗಳಿಂದ ದೂರವಿರಲು ಪ್ರಯತ್ನಿಸಬೇಕು. ನಾವು ಒಳ್ಳೆಯ ಕರ್ಮ ಮಾಡಿದರೆ ಒಳ್ಳೆಯದು ಯಾಕೆಂದರೆ ಪಾಪ ಕರ್ಮಗಳಿಂದ ದುಃಖ, ದರಿದ್ರತೆ ಮತ್ತು ಅಶಾಂತಿಯನ್ನು ಅನುಭವಿಸಬೇಕಾಗುತ್ತದೆ.

# 47. ಧ್ಯಾನದ ಅರ್ಥ–ಭಾವನೆ ಮತ್ತು ವಿಚಾರಗಳ ಏಕಾಗ್ರತೆಯಾಗಿದೆ

ಕೇವಲ ಕೈಮೇಲೆ ಕೈಯಿಟ್ಟು, ಆಸನ ಹಾಕಿ ಕುಳಿತರೆ ಧ್ಯಾನವಾಗುವುದಿಲ್ಲ. ಯಾವಾಗ ಬೇಕಾದರೂ ಅರ್ಥಾತ್ ನಡೆದಾಡುತ್ತಾ ಓಡಾಡುತ್ತ, ಕುಳಿತಾಗ–ನಿಂತಾಗಲೂ ಸಹ ಧ್ಯಾನವನ್ನು ಮಾಡಬಹುದು. ಯಾಕೆಂದರೆ ಧ್ಯಾನದ ಅರ್ಥ ಭಾವನೆ ಮತ್ತು ವಿಚಾರಗಳ ಏಕಾಗ್ರತೆಯಾಗಿದೆ. ಶುಭ ಭಾವನೆಗಳು ಮತ್ತು ಶುಭ ವಿಚಾರಗಳಿಂದ ಅಶುಭ ಧ್ಯಾನವಾಗುತ್ತದೆ. ಕೇವಲ ಆಸನ ಹಾಕುವುದರಿಂದ ಧ್ಯಾನವಾಗಲಾರದು. ಇದಕ್ಕಾಗಿ ಮನಸ್ಸಿನ ಮೇಲೆ ವಿಜಯ ಸಾಧಿಸಬೇಕಾಗುತ್ತದೆ. ಕೆಟ್ಟ ಭಾವನೆಗಳು ಹಾಗೂ ಅಶುಭ ವಿಚಾರಗಳಿಂದ ರಕ್ಷಿಸಿಕೊಳ್ಳಲು ನಾವು ಒಂದು ನಿಶ್ಚಿತ ಸಮಯದಲ್ಲಿ ನಿಶ್ಚಿತ ಸ್ಥಾನದಲ್ಲಿ ವಿಶೇಷ ಆಸನದಲ್ಲಿ ಕುಳಿತು ಧ್ಯಾನದಲ್ಲಿ ತೊಡಗುತ್ತೇವೆ. ಆದರೆ ಮನಸ್ಸನ್ನು ತತ್ತ್ವ ಚಿಂತನೆಯಲ್ಲಿ ತೊಡಗಿಸುವುದು ಆವಶ್ಯಕವಾಗಿದೆ. ಯಾಕೆಂದರೆ ಮನಸ್ಸನ್ನು ನಿಯಂತ್ರಿಸಿರುವವರೇ ಎಲ್ಲವನ್ನು ಪಡೆದಿದ್ದಾರೆ. ಮನಸ್ಸಿನ ಸ್ಥಿರತೆಗಾಗಿ ಏಕತ್ವ ಭಾವನೆಯು ಆವಶ್ಯಕವಾಗಿದೆ. ಇದರಲ್ಲಿ ನನ್ನದು ಎಂದರೆ ನನ್ನ ಆತ್ಮನ ಹೊರ್ತಾಗಿ ಜಗತ್ತಿನಲ್ಲಿ ಒಂದು ಅಣುವು ಸಹ ನನ್ನದಲ್ಲ ಎಂದು ಚಿಂತಿಸಬೇಕು. ವೈರ ಭಾವವನ್ನು ಹೊಂದಿರುವವರು ಧ್ಯಾನ ಮಾಡಲಾರರು. ಅವರು ಕೇವಲ ಧ್ಯಾನದ ಆಡಂಬರ ಮಾಡುತ್ತಾರೆ, ಯಾಕೆಂದರೆ ಮನದ ನಿರ್ಮಲತೆಯೇ ಧ್ಯಾನವಾಗಿದೆ.

# 48. ಚಾರಿತ್ರವೇ ಮಾನವ ಜೀವನದ ಸೌಂದರ್ಯವಾಗಿದೆ

ಜೀವನದ ವಾಸ್ತವಿಕ ಸೌಂದರ್ಯ ಶರೀರದ ಅಲಂಕಾರ ಹಾಗೂ ಧನ–ವೈಭವಗಳಿಂದಾಗದೇ ಚಾರಿತ್ರದಿಂದಾಗುತ್ತದೆ. ವೇಷ–ಭೂಷಣ, ರೂಪ–ಶೃಂಗಾರಗಳು ಶರೀರದ ಶೋಭೆಯನ್ನು ಹೆಚ್ಚಿಸಬಹುದು ಆದರೆ ಸದಾಚಾರ–ಮಯ ಜೀವನವು ಆತ್ಮನ ಅಲಂಕಾರವಾಗಿ ಆತ್ಮನ ಶೋಭೆಯನ್ನು ಹೆಚ್ಚಿಸುತ್ತದೆ. ಅಷ್ಟಾವಕ್ರ ಋಷಿಯು ಮಂತ್ರಿಗಳನ್ನು ನೋಡುತ್ತಾ–ಇವರೆಲ್ಲರೂ ಚಮ್ಮಾರರಾಗಿದ್ದಾರೆ ಎಂದಾಗ ಗಲಭೆಯುಂಟಾಗಿ –ಹೀಗೆ ಹೇಗೆ ಹೇಳುವಿರಿ? ಎಂದು ಎಲ್ಲ ಮಂತ್ರಿಗಳು ಎದ್ದು ನಿಂತರು. ಆದರೆ ರಾಜನು ತಿಳುವಳಿಕೆಯುಳ್ಳವನಾಗಿದ್ದ ಆತನು– ಕೇಳಿರಿ, ಇದು ರಹಸ್ಯದಿಂದ ಕೂಡಿದ ಸಂಗತಿಯಾಗಿದೆ. ಅದನ್ನು ಋಷಿಗಳೇ ಹೇಳುತ್ತಾರೆ ಎಂದಾಗ ಋಷಿಗಳು – ಶರೀರವನ್ನು ನೋಡಿ ನಗುವವರು. ಚರ್ಮದಲ್ಲಿರುವ ಕುರೂಪವನ್ನು ಕಂಡು ವ್ಯಕ್ತಿಯನ್ನು ಗುರುತಿಸುತ್ತಾರೆ. ಅವರು ಚಮ್ಮಾರರಾಗಿರುತ್ತಾರೆ ಹಾಗೂ ಆತ್ಮನ

ಜ್ಞಾನವನ್ನು ಗುರುತಿಸುವವರನ್ನು ಜ್ಞಾನಿಗಳೆಂದು ಕರೆಯುತ್ತಾರೆ – ಎಂದು ಹೇಳಿದರು.

ಕೇಳದಿರಿ ಸಾಧುವಿನ ಜಾತಿಯನು, ಕೇಳಿ ಅವರ ಜ್ಞಾನವನು,
ಬೆಲೆ ಕಟ್ಟುವುದಾದರೆ ಕಟ್ಟಿ ತಲವಾರದ, ಇರಲಿ ಮ್ಯಾನ ಹೇಗಾದರೂ

# 49. ಅಹಿಂಸೆಯ ಸ್ಥಾನ ಸರ್ವೋತ್ಕೃಷ್ಟ

ಎಲ್ಲ ಧರ್ಮ ಹಾಗೂ ಸಂಪ್ರದಾಯಗಳಲ್ಲಿ ಅಹಿಂಸೆಯ ಸ್ಥಾನ ಸರ್ವೋತ್ಕೃಷ್ಟವಾಗಿದೆ. ದಯೆಯೇ ಧರ್ಮದ ಮೂಲವಾಗಿದೆ. ಇದೇ ಅಹಿಂಸಾ ಧರ್ಮದ ಪಾಲನೆಗಾಗಿ ಜೈನ ಧರ್ಮದಲ್ಲಿ ರಾತ್ರಿ ಭೋಜನ ಮಾಡುವುದಿಲ್ಲ, ನೀರನ್ನು ಸೋಸಿ ಕುಡಿಯಲು ಹೇಳಿದ್ದಾರೆ. ಯಾಕೆಂದರೆ ಜೈನಧರ್ಮವು ಅಹಿಂಸಾಮಯಿ ಧರ್ಮವಾಗಿದೆ. ಇದರಲ್ಲಿ ಎಲ್ಲ ಜೀವಗಳ ಬಗ್ಗೆ ದಯಾಭಾವ ಹೊಂದುವ ಮಾತುಗಳನ್ನು ಹೇಳಿದ್ದಾರೆ. ಜೈನರು ರಾತ್ರಿ ಭೋಜನ ಮಾಡುವುದಿಲ್ಲ. ಇದು ಧಾರ್ಮಿಕದೊಂದಿಗೆ ವೈಜ್ಞಾನಿಕ ದೃಷ್ಟಿಯಿಂದಲೂ ನಿಷೇಧವಿದೆ, ಯಾಕೆಂದರೆ ದಿನದ ಬದಲಾಗಿ ರಾತ್ರಿಯಲ್ಲಿ ಜೀವದ ಉತ್ಪಾದನೆ ಹೆಚ್ಚಾಗಿರುತ್ತದೆ. ರಾತ್ರಿಯಲ್ಲಿ ಆಹಾರವನ್ನು ಸಿದ್ಧಪಡಿಸುವಾಗ ಆಹಾರ ಪದಾರ್ಥಗಳ ಜೊತೆಗೆ ಸೂಕ್ಷ್ಮ ಜೀವಗಳು ಸೇರಿ ಬಿಡುತ್ತವೆ ಹಾಗೂ ಅವುಗಳ ವಿಷ ವ್ಯಕ್ತಿಗಳನ್ನು ರೋಗಿಯನ್ನಾಗಿ ಮಾಡುತ್ತವೆ. ಇದರಂತೆಯೇ ನೀರನ್ನು ಸೋಸಿ ಕುಡಿಯುವುದರಿಂದ ಆಗುವ ಲಾಭಗಳು ಸಹ ಅಪಾರವಾಗಿವೆ. ನೀರನ್ನು ಅನಾವಶ್ಯಕವಾಗಿ ವ್ಯರ್ಥ ಮಾಡುವುದು ಅಹಿಂಸಾ ಧರ್ಮಕ್ಕೆ ವಿರೋಧವಾಗಿದೆ. ಹಿಂದಿನ ಕಾಲದಲ್ಲಿ ನದಿ, ಬಾವಿಗಳಿಂದ ನೀರನ್ನು ತರಬೇಕಾಗುತ್ತಿದ್ದಿತು ಹಾಗೂ ಹಗ್ಗ, ಬಕೀಟು ಮುಂತಾದವುಗಳಿಂದ ಪರಿಶ್ರಮ ಪೂರ್ವಕವಾಗಿ ಬೆವರು ಹರಿಸುತ್ತಾ ನೀರನ್ನು ಎಳೆಯಬೇಕಾಗುತ್ತಿದ್ದಿತು. ಆದರೆ "ಇಂದು ಸ್ವಿಚ್ ಒತ್ತಿದರೂ ನೀರು ಬಂದಿತು" ಎನ್ನುವ ಸ್ಥಿತಿಯಲ್ಲಿ ವ್ಯಕ್ತಿ ಕಸ ಹೊಡೆಯುವ ಸ್ಥಾನದಲ್ಲಿ ನೀರು ಹೊರುತ್ತಿದ್ದಾನೆ. ಗಾಡಿಯನ್ನು ಒರೆಸುವ ಸ್ಥಾನದ್ದು ಅದಕ್ಕೆ ಸ್ನಾನವಾಡಿಸುತ್ತಿದ್ದಾನೆ. ಆದ್ದರಿಂದಲೇ ನೀರಿನ ಮಟ್ಟ ಕುಸಿಯುತ್ತಾ ಸಾಗಿದೆ ಹಾಗೂ ನೀರನ್ನು ತಡೆಯುವ ರೀತಿ ತಿಳಿಯದೇ ಇದ್ದರೆ ಸಮಸ್ಯೆಗೆ ಪರಿಹಾರ ಎಲ್ಲಿ ಸಿಕ್ಕೀತು? ನಲ್ಲಿಯನ್ನು ಬಿಟ್ಟಿರುವುದು ಸಹ ನೀರಿನೊಡನೆ ಮಾಡುವ ತಮಾಶೆಯಾಗಿದೆ.

# 50. ಸಮ್ಯಗ್‌ದರ್ಶನದಂತಹ ಮಂತ್ರ ಯಾವುದೂ ಇಲ್ಲ

ಜೀವನವನ್ನು ವ್ಯವಸ್ಥಿತಗೊಳಿಸಲು ಮನ, ವಚನ ಹಾಗೂ ಕಾಯಗಳ ಕ್ರಿಯೆಗಳನ್ನು ಸಂಯಮಿತಗೊಳಿಸುವುದು ಅವಶ್ಯಕವಿದೆ. ಹಿಂಸಕ ವ್ಯಸನಿ, ರಾಗ–ದ್ವೇಷಗಳಲ್ಲಿ ಅನುರಕ್ತ, ಸಂಸಾರವನ್ನು ಹೆಚ್ಚಿಸುವ ಕಾರ್ಯಗಳಲ್ಲಿ ಲೀನರಾಗಿರುವ ಸರಾಗಿ ದೇವಿ–ದೇವತಾ ಮತ್ತು ಪಾಖಂಡೀ ಗುರುಗಳ ಆರಾಧನೆ ಉಪಾಸನೆ ರೂಪ ಈ ವಿಶ್ವದಲ್ಲಿ ಮಿಥ್ಯಾತ್ವಕ್ಕೆ ಸಮಾನವಾದ ಯಾವ ಶತ್ರುವಿಲ್ಲ ಹಾಗೂ ವೀತರಾಗತೆಯ ಪೋಷಕ ಸಮ್ಯಗ್‌ದರ್ಶನಕ್ಕೆ ಸಮಾನರಾದಂತಹ ಮಿತ್ರರು ಇಲ್ಲ. ಆದ್ದರಿಂದ ನಮ್ಮ ವಚನ, ಕಾಯ ಮತ್ತು ಮನಸ್ಸನ್ನು ಸಮ್ಯಗ್‌ದರ್ಶನ ರೂಪದ ಧರ್ಮದ ರಕ್ಷಣೆಯಲ್ಲಿ ಸಮರ್ಪಣೆ ಮಾಡಿರಿ, ಇಲ್ಲವಾದಲ್ಲಿ ಮಿಥ್ಯಾದರ್ಶನವು ಆಧ್ಯಾತ್ಮಿಕ ಸಂಪತ್ತನ್ನು ನಷ್ಟ ಮಾಡುತ್ತದೆ. ವಚನವನ್ನು ನಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳದಿದ್ದರೆ ಗೌರವಾದರಗಳು ಸಮಾಪ್ತವಾಗುತ್ತವೆ ಹಾಗೂ ಕಾಯ (ಶರೀರ)ವನ್ನು ಅನಾವಶ್ಯಕ ಕಾರ್ಯಗಳಿಂದ ರಕ್ಷಿಸಿಕೊಳ್ಳದಿದ್ದರೆ ಗಂಭೀರತೆಯು ನಷ್ಟವಾಗುತ್ತದೆ. ಹಾಗೆಯೇ ಮನಸ್ಸನ್ನು ಮಿಥ್ಯಾಕಾರ್ಯಗಳಿಂದ ವ್ಯಸನಗಳಿಂದ ಹಾಗೂ ವಿಷಯ ಕಷಾಯಗಳಿಂದ ದೂರವಿಡದಿದ್ದರೆ ಶಾರೀರಿಕ ಶಕ್ತಿಯೂ ಸಹ ಕೊನೆಗೊಳ್ಳುತ್ತದೆ.

# 51. ವಿಶ್ವಾಸದ ಮೇಲೆಯೇ ಸಮಸ್ತ ವಿಶ್ವ ನಿಂತಿದೆ

ನಮಗೆ ನಮ್ಮ ಅದೃಶ್ಯ ಆತ್ಮನ ಅಮರತ್ವದಲ್ಲಿ ವಿಶ್ವಾಸವಿರಬೇಕು. ವಿಶ್ವಾಸದ ಮೇಲೆಯೇ ಸಮಸ್ತ ವಿಶ್ವ ನಿಂತಿದೆ. ನಮಗೆ ಕಾಣುವ ಶರೀರವು ಪುದ್ಗಲವಾಗಿದೆ. ಆದ್ದರಿಂದ ನಾವು ಇದರ ಮೇಲೆ ರಾಗ ಮಾಡಬಾರದು, ಅದೃಶ್ಯ ಆತ್ಮ ತತ್ತ್ವದ ಉತ್ಥಾನಕ್ಕಾಗಿ ಧ್ಯಾನ ಮಾಡಬೇಕು. ಅದರಿಂದ ಆತ್ಮನಲ್ಲಿರುವ ಗುಣಗಳು ಪ್ರಕಟವಾಗುವಂತಿರಬೇಕು. ಈ ಮಾತನ್ನು ಕೇವಲಿ ಭಗವಂತರಾದ ತೀರ್ಥಂಕರರು ಹೇಳಿದ್ದಾರೆ. ಅವರು ಯಾವಾಗ ಆದರು? ಯಾರು ನೋಡಿದ್ದಾರೆ? ಎಂಬ ಸಂದೇಹವನ್ನು ಮಾಡಬಾರದು. ಯಾವುದನ್ನು ನೋಡಲು ಆಗಿರುವುದಿಲ್ಲವೋ ಅದನ್ನು ಅನುಮಾನ ಜ್ಞಾನದಿಂದ ತಿಳಿಯಲಾಗುತ್ತದೆ. ನಮ್ಮ ಮುತ್ತಾತನನ್ನು ನೋಡಿರದಿದ್ದರೆ ಅವರಲ್ಲದೆ ತಾತಾ ಮತ್ತು ತಂದೆ ಇರುತ್ತಿರಲಿಲ್ಲ ಆದ್ದರಿಂದ ಅವರಿದ್ದರೆಂದು ವಿಶ್ವಾಸ ಹೊಂದಬೇಕು. ಶಬ್ದವು ನೋಡಲು ಕಾಣುವುದಿಲ್ಲ ಆದರೂ ಕಿವಿಯಿಂದ ತಿಳಿಯಲಾಗುತ್ತದೆ, ಟೇಪಿನಲ್ಲಿ ಹಿಡಿದು ಇಡಲಾಗುತ್ತದೆ. ಹಾಗೆಯೇ ಕರ್ಮವು ಕಾಣುವುದಿಲ್ಲ ಆದರೂ ಆತ್ಮನಲ್ಲಿ ಅವು ಬಂಧವಾಗಿರುತ್ತದೆ. ಇವೆಲ್ಲವು ಶ್ರದ್ಧೆಯ ವಿಶ್ವಾಸದ ಸಂಗತಿಗಳಾಗಿವೆ. ಪೂರ್ವ ಸಂಚಿತ ಪುಣ್ಯಕರ್ಮಗಳ ಫಲ ದೊರೆತಾಗ ಹರ್ಷವನ್ನು ಹೊಂದದೆ ಪಾಪಕರ್ಮಗಳ ಫಲಗಳಲ್ಲಿ ದುಃಖ

ಭೋಗಿಸಿದಾಗ ವಿಷಾದ ಪಡಬಾರದು. ಮಾಡಿದ ಧರ್ಮದ ಫಲ ಎಂದಿಗಾದರೂ ಅವಶ್ಯವಾಗಿ ದೊರೆಯುತ್ತದೆ. ಪ್ರತಿಯೊಂದು ಜೀವನಿಗೆ ತನ್ನ ಪಾಪ–ಪುಣ್ಯ ಕರ್ಮಗಳ ಫಲ ಸ್ವಯಂ ಭೋಗಿಸಬೇಕಾಗುತ್ತದೆ.

## 52.ಶಾಲೆಯ ಶಿಕ್ಷಣದೊಂದಿಗೆ ಧರ್ಮದ ಶಿಕ್ಷಣವೂ ಅವಶ್ಯ

ಆತ್ಮನ ಗುಣಗಳ ಅಲಂಕಾರವೇ ಸಂಸ್ಕಾರವಾಗಿದೆ. ಸಂಸ್ಕಾರ ನೀಡುವುದರ ಅರ್ಥ– ಆತ್ಮನನ್ನು ಗುಣಗಳಿಂದ ಅಲಂಕೃತಗೊಳಿಸುವುದಾಗಿದೆ. ಧರ್ಮ ಸಂಸ್ಕಾರವನ್ನು ಬಾಲ್ಯದಲ್ಲಿಯೇ ನೀಡಲಾಗುತ್ತದೆ ವಿನಹ ವೃದ್ಧಾಪ್ಯದಲ್ಲಿ ಅಲ್ಲ. ಬಾಲ್ಯವು ದ್ರಾಕ್ಷಿಯ ಬಳ್ಳಿಯಂತೆ ಕೋಮಲವಾಗಿರುತ್ತದೆ. ಬಳ್ಳಿಗೆ ಸೂಕ್ತ ಆಶ್ರಯ ನೀಡಿ ಬೆಳಿಸಿದಂತೆ ಬಾಲ್ಯಕ್ಕೆ ಧರ್ಮಸಂಸ್ಕಾರ ನೀಡಿ ಸರಿಯಾದ ದಿಕ್ಕನ್ನು ತೋರಿಸಬೇಕು. ಚಿಕ್ಕವರಿಗೆ ಸಂಸ್ಕಾರ ನೀಡುವುದರ ತಾಯಿಯ ಯೋಗದಾನ ಎಲ್ಲಕ್ಕಿಂತ ದೊಡ್ಡದು. ಆಚಾರ್ಯರುಗಳು ಸ್ತ್ರೀಯರ ಮಹಾನ್, ಗುಣಗಳ ಉಲ್ಲೇಖವನ್ನು ಮಾಡುತ್ತಾ,

ನಾರಿ–ನಾರಿ ಎಂದು ಹೇಳದೇ, ನಾರಿಯು ನರನ ಮೂಲಳು
ಆ ನಾರಿಯಿಂದಲೇ ಜನಿಸಿದರು ತೀರ್ಥಂಕರ ಭಗವಾನರು

ಎಂದು ಹೇಳಿದ್ದಾರೆ.

ಮಂತ್ರೋಚ್ಚಾರವು ಮಾನವ ಜೀವನವನ್ನು ಅಷ್ಟೇ ಅಲ್ಲ, ಶಿಲೆಯಲ್ಲಿಯೂ ಸಹ ಸಾರ್ಥಕ ಪ್ರಭಾವ ಬೀರಬಲ್ಲದು. ಮಂತ್ರಗಳ ಶಕ್ತಿಯಿಂದ ಶಿಲೆಯಲ್ಲಿ ಮಾಡಿದ ಮೂರ್ತಿಯಲ್ಲಿ ಪರಮಾತ್ಮನ ಸ್ಥಾಪನೆಯಾಗುವಂತೆ ದಿಗಂಬರ ಸಂತರಿಂದ ಮಕ್ಕಳಲ್ಲಿಯೂ ಸಹ ಹೊಸದಾಗಿ ರೂಪಗೊಂಡ ಮೂರ್ತಿಯಲ್ಲಿ ಪರಮಾತ್ಮನ ಸ್ಥಾಪನೆ ಮಾಡಬಲ್ಲ ಮಂತ್ರದ ಸ್ಥಾಪನೆಯಾಗಿ ಬಿಡುತ್ತದೆ. ಆದ್ದರಿಂದ ಶಾಲೆಯ ಶಿಕ್ಷಣದೊಂದಿಗೆ ಧರ್ಮದ ಶಿಕ್ಷಣವು ಅವಶ್ಯವಾಗಿದೆ.

## 53. ಇತರರ ಸುಖ–ಶಾಂತಿಗಾಗಿ ಪ್ರಯತ್ನಶೀಲರಾಗಿರಿ

ಮನುಷ್ಯರು ಸದಾಕಾಲ ಇತರರ ಸುಖ–ಶಾಂತಿಗಾಗಿ ಪ್ರಯತ್ನಶೀಲ ರಾಗಿರಬೇಕು. ಅದರಿಂದ ಎಲ್ಲ ಜೀವಗಳು ಬೆರೆತು–ಒಟ್ಟುಗೂಡಿ ಈ ಜಗತ್ತಿನಲ್ಲಿ ಶಾಂತಿಪೂರ್ವಕವಾಗಿ ಇರಬಲ್ಲರು. ಇಂದಿನ ಯುಗದಲ್ಲಿ ಮನುಷ್ಯರಿಗೆ ಆತ್ಮಿಕ ಶಾಂತಿ ದೊರೆಯುವುದೇ ದುರ್ಲಭವಾಗಿದೆ. ಇದರ ಹೊರ್ತಾಗಿ ಅವರು ಸದಾಕಾಲ

ವ್ಯಾಕುಲರಾಗಿರುತ್ತಾರೆ. ಇಂದು ಮನುಷ್ಯರು ತಮ್ಮ ಮುಂದಿರುವವರು ಸುಖಿಗಳಾಗಿರುವುದನ್ನು ಕಂಡು ದುಃಖಿಗಳಾಗುತ್ತಾರೆ.

ಜಗತ್ತಿನಲ್ಲಿ ಇತರರ ಉನ್ನತಿ ಹಾಗೂ ಒಳ್ಳೆಯದನ್ನು ಸಹಿಸಿಕೊಳ್ಳುವುದು ಸಾಧ್ಯವಾಗದಿರುವುದು ಮಾತ್ಸರ್ಯಭಾವವಾಗಿದೆ. ಅವರ ಮನೆ ಇಷ್ಟ್ಯಾಕೆ ದೊಡ್ಡದಿದೆ? ಹೀಗೆಯೇ ಇತರರ ಅಂಗಡಿ, ಗಾಡಿ ಇತ್ಯಾದಿಗಳನ್ನು ಕಂಡು ಅಸಹನೀಯ ಪ್ರಕೃತಿಗಳು ವ್ಯಕ್ತಿಯನ್ನು ಅನಾವಶ್ಯಕವಾಗಿ ಚಿಂತೆಯಲ್ಲಿರುವಂತೆ ಮಾಡುತ್ತವೆ. ಆಗ ಅವರು ಅನಾವಶ್ಯಕ ಚಿಂತೆಯು ಬೆಂಕಿಯಂತೆ ಮಾನವನ ಜೀವನವನ್ನೇ ಸುಡಲು ಪ್ರಾರಂಭಿಸುತ್ತದೆ. ಓರ್ವ ರಾಜನು ತನ್ನ ನೌಕರನಿಗೆ ನಾನು ನಿನಗೆ ಒಂದು ಕುರಿಯನ್ನು ನೀಡುತ್ತೇನೆ ಅದಕ್ಕೆ ತಿನ್ನಲು–ಕುಡಿಯಲು ಏನೂ ಕಡಿಮೆ ಮಾಡಬಾರದು, ಆದರೆ ಅದರ ತೂಕದಲ್ಲಿ ಏನೂ ಹೆಚ್ಚಳವಾಗದಂತೆ ನೋಡಿಕೊಳ್ಳಬೇಕೆಂದು ಎಚ್ಚರಿಸಿದನು. ನೌಕರನು ಹಾಗೆಯೇ ಮಾಡಿದನು. ಬೆಳಿಗ್ಗೆಯಿಂದ ಸಂಜೆಯವರೆಗೆ ಚೆನ್ನಾಗಿ ತಿನ್ನಿಸುತ್ತಿದ್ದ. ಸಂಜೆಯಾದೊಡನೆ ಅದನ್ನು ಪಂಜರದಲ್ಲಿಟ್ಟು ಸಿಂಹವನ್ನು ತೋರಿಸುತ್ತಿದ್ದನು. ಆ ಕುರಿಯು ಸಿಂಹದ ಘರ್ಜನೆಯನ್ನು ಕೇಳಿದೊಡನೆ ಚಿಂತೆಯಿಂದ ಬಳಲಿ ಹಿಂದಿನಂತೆಯೇ ಇರುತ್ತಿದ್ದಿತು. ಇದರ ತಾತ್ಪರ್ಯವೆಂದರೆ ಭೋಗವನ್ನು ಭೋಗಿಸಿಯೂ ಅನಾವಶ್ಯಕ ಚಿಂತೆಯಲ್ಲಿ ಸಿಲುಕಿಬಿಡುತ್ತೇವೆ. ಬದಲಾಗಿ ಸಂತೋಷದಿಂದ ಇದ್ದರೆ ಸ್ವತಃ ಸುಖಿಗಳಾಗಿ ಬಿಡುತ್ತೇವೆ.

# 54. ಧರ್ಮಾತ್ಮರು ಸಾಧುಗಳ ಆಚರಣೆಗಳನ್ನು ನಿರೋಧಿಸುವುದಿಲ್ಲ

ಅಹಿಂಸಾಧರ್ಮದ ರಕ್ಷಣೆಗಾಗಿ ಹಾಗೂ ಹಿಂಸಾಕಾರ್ಯಗಳಿಂದ ವಿಮುಖರಾಗಲು ಜೈನ ಮುನಿಗಳು ನೀರಿನಲ್ಲಿ ಸ್ನಾನ ಮಾಡುವುದಿಲ್ಲ. ಯಾಕೆಂದರೆ ಸ್ನಾನ ಮಾಡುವುದರಿಂದ ಸೂಕ್ಷ್ಮ ಜೀವಿಗಳ ಹಿಂಸೆಯಾಗಿ ಬಿಡುತ್ತದೆ, ನಿಜವಾದ ಧರ್ಮಾತ್ಮರು ಸಾಧುಗಳ ಈ ಆಚರಣೆಗಳನ್ನು ವಿರೋಧಿಸುವುದಿಲ್ಲ, ಬದಲಾಗಿ ಅವರ ಆಚರಣೆಗಳ ಬಗ್ಗೆ ಅನುರಾಗ ಭಾವನೆ ಹೊಂದುತ್ತಾರೆ. ಯಾಕೆಂದರೆ ಅವರ ಆತ್ಮವು ಧರ್ಮದಿಂದ ಪರಿಶುದ್ಧವಾಗಿರುತ್ತದೆ. ಆದರೆ ಸಾಂಸಾರಿಕ ಪಂಚ ಪಾಪಗಳಿಂದ ಗೃಹಸ್ಥರ ಆತ್ಮವು ಮಲಿನವಾಗುತ್ತಿದ್ದು ಆ ಗೃಹಸ್ಥರಿಗೆ ಪ್ರತಿದಿನ ವಸ್ತ್ರಗಳನ್ನು ಸ್ವಚ್ಛಗೊಳಿಸಿಕೊಳ್ಳುವುದರ ಜೊತೆ–ಜೊತೆಯಾಗಿ ಶರೀರವನ್ನು ಸಹ ಸ್ನಾನ ಮುಂತಾದವುಗಳಿಂದ ಸ್ವಚ್ಛವಾಗಿಡಬೇಕಾಗುತ್ತದೆ. ಯಾಕೆಂದರೆ ಇದರ ಹೊರ್ತಾಗಿ ಪ್ರಭುವಿನ ಅಭಿಷೇಕ, ಪೂಜೆ ಹಾಗೂ ಗುರು ಮತ್ತು ವ್ರತಿಗಳಿಗಾಗಿ ಆಹಾರ ಇತ್ಯಾದಿಗಳನ್ನು ನೀಡಲು ಯೋಗ್ಯರಾಗುವುದಿಲ್ಲ. ಆದ್ದರಿಂದ ಭಾವ

ಶುದ್ಧಿಗಾಗಿ ಜೈನಧರ್ಮದಲ್ಲಿ ಮಡಿ ಮತ್ತು ಶುದ್ಧ ವಸ್ತ್ರಗಳ ದೊಡ್ಡ ಅವಶ್ಯಕತೆಯೂ ಇದೆ.

## 55. ದಿಗಂಬರ ಅವಸ್ಥೆಯೇ ಪೂರ್ಣ ಸುಖಕಾರಿಯಾಗಿದೆ

ಪರಮಾತ್ಮನ ಪೂಜೆ ಮಾಡಿ ರಾಗದ ಬಯಕೆಯನ್ನು ಮಾಡಬಾರದು. ಭಗವಾನ್ ಜಿನೇಂದ್ರರು ಧನ-ವೈಭವ, ಪರಿಗ್ರಹಗಳ ತ್ಯಾಗ ಮಾಡಿ ದಿಗಂಬರ ಅವಸ್ಥೆಯನ್ನು ಹೊಂದಿದ್ದಾರೆ. ಕವಿಗಳು – 'ಫಾಂಸ ತನಕ ಸೀ ತನ ಮೇ ಶಾಲೇ, ಚಾಹ ಲಗೋಟೀ ಕೀ ದುಃಖ ಭಾವೇ' ಎಂದಿದ್ದಾರೆ. ಆದ್ದರಿಂದ ಹತ್ತೂ ದಿಕ್ಕುಗಳೇ ಅಂಬರ-ವಸ್ತ್ರರೂಪದ ನಿಶ್ಚಿಂತ ದಿಗಂಬರ ಅವಸ್ಥೆಯೇ ಪೂರ್ಣ ಸುಖಕಾರಿಯಾಗಿದೆ ಹಾಗೂ ಧನ ಮತ್ತು ಪರಿಗ್ರಹಗಳು ಇವು ದುಃಖಕ್ಕೆ ಕಾರಣಗಳಾಗಿವೆ. ಈ ಅವಸ್ಥೆ ಧಾರಣೆ ಮಾಡಿ ನಂತರವೇ 24 ತೀರ್ಥಂಕರರು ಹಾಗೂ ಅನಂತ ಋಷಿ-ಮುನಿಗಳು ಪರಮ ಜ್ಞಾನ ಪಡೆದು ಕೊನೆಗೆ ನಿರ್ವಾಣ ಮಹಾಪದವನ್ನು ಹೊಂದಿದರು.

## 56. ಯಾರನ್ನಾದರೂ ಭಗವಂತನನ್ನಾಗಿ ಮಾಡಲಾಗದು

ಯಾರನ್ನಾದರೂ ಭಗವಂತನನ್ನಾಗಿ ಮಾಡಲಾಗದು. ದೇವ, ಶಾಸ್ತ್ರ ಮತ್ತು ಗುರುಗಳು ಕೇವಲ ಪರಮಾತ್ಮನಾಗುವ ಮಾರ್ಗವನ್ನು ತೋರಬಲ್ಲರು, ಯಾರನ್ನೂ ಪರಮಾತ್ಮನನ್ನಾಗಿ ಮಾಡಲಾಗದು. ಕರ್ಮ ಹಾಗೂ ವಿಕಾರಗಳು ನಮ್ಮ 'ಭಗವಂತ' ಸ್ವರೂಪವನ್ನು ಮರೆಮಾಡಿವೆ. ಪರಮಾತ್ಮನಾಗಲು ಧ್ಯಾನ ಹಾಗೂ ತಪದ ಮೂಲಕ ಕರ್ಮದ ಆವರಣವನ್ನು ಸರಿಸುವುದರಿಂದ ಆತ್ಮನ ಪರಮಾತ್ಮ ಸ್ವಭಾವ ಪ್ರಕಟವಾಗುತ್ತದೆ. ಯಾವುದೇ ಶಿಲ್ಪಿಯು ಮಿದುಳಿನಲ್ಲಿ ಇರುವ ಭಗವಂತನ ಮೂರ್ತಿಯನ್ನು ಧ್ಯಾನಿಸುತ್ತಾ ಆ ಶಿಲೆಯಿಂದ ಅನಾವಶ್ಯಕವಾದ ಶಿಲೆಯನ್ನು ಬೇರೆ ಮಾಡುತ್ತಾ ಸಾಗುತ್ತಾನೆ, ಆಗ ಆ ಮೂರ್ತಿ ಪ್ರಕಟವಾಗುತ್ತದೆ. ಹೀಗೆಯೇ ಸಾಧಕ ಸಾಧು ತನ್ನ ಆತ್ಮನಿಂದ ಪರಮಾತ್ಮನನ್ನು ಸಾಕಾರ ಮಾಡಲು ಅನಾವಶ್ಯಕ ರೂಪದ ಆತ್ಮನಿಗೆ ಅಂಟಿದ ಕರ್ಮಗಳನ್ನು ತಪಸ್ಸಿನಿಂದ ಬೇರೆ ಮಾಡುತ್ತಾ ಸಾಗುತ್ತಾನೆ ಹಾಗೂ ಒಂದು ದಿನ ಸಂಪೂರ್ಣ ಕರ್ಮಗಳು ನಿರ್ಜರೆಯಾದ ನಂತರ ಆ ಶುದ್ಧಾತ್ಮನಿಂದ ಪರಮಾತ್ಮನು ಪ್ರಕಟನಾಗುತ್ತಾನೆ. ಶರೀರ ಸಹಿತ ಇರುವವನು ಸಕಲ ಪರಮಾತ್ಮನಾಗಿದ್ದರೆ ಶರೀರ ರಹಿತನು ವಿಕಲ ಪರಮಾತ್ಮನಾಗಿರುತ್ತಾನೆ. ಇಂತಹ ಪರಮಾತ್ಮನಾಗುವ ಶಕ್ತಿಯನ್ನು ಹೊಂದಿರುವವನು ನಮ್ಮ ಸುತ್ತ-ಮುತ್ತಲಿನ ಜನರಿಗೆ

ವಾತ್ಸಲ್ಯ ನೀಡಿ ಅವರನ್ನು ಧರ್ಮ ಮಾರ್ಗದಲ್ಲಿ ಸಾಗಲು ಉತ್ಸಾಹಿತರನ್ನಾಗಿ ಮಾಡುತ್ತಿರಬೇಕು. ತಮ್ಮ ಆಚರಣೆಗಳಲ್ಲಿ ದೋಷವಿರುವವರನ್ನು ನಿಂದೆ ಮಾಡದೆ ಅವರನ್ನು ಏಕಾಂತದಲ್ಲಿ ತಿಳಿಸಿ, ಸ್ನೇಹ ನೀಡಿ ಧರ್ಮದಲ್ಲಿ ಸ್ಥಾಪಿತಗೊಳಿಸಬೇಕು. ಧರ್ಮೀಯರೊಂದಿಗೆ ಪ್ರೇಮ ಭಾವ ಹೊಂದಿರುವುದೇ ಧರ್ಮದೊಂದಿಗೆ ಪ್ರೇಮ ಮಾಡುವುದಾಗಿದೆ. ಗುಣವಂತರೊಡನೆ ಅಸೂಯೆ ಮಾಡದೇ ಪ್ರಮೋದ ಭಾವ ಹೊಂದುವವರೇ ನಿಜವಾದ ಗುಣವಂತರಾಗಿದ್ದಾರೆ.

# 57. ಛಲ, ಕಪಟ ಹಾಗೂ ಮಾಯಾಚಾರಗಳ ಧ್ಯಾನದಿಂದ ದುರ್ಗತಿ

ಧರ್ಮದ ಆತ್ಮ ಸಾಕ್ಷರತೆಗಾಗಿ ಮನಸ್ಸಿನ ಕಪಟವನ್ನು ದೂರಮಾಡಿ ನಮ್ಮ ವಿಚಾರ, ವಾಣಿ ಹಾಗೂ ಕ್ರಿಯೆಗಳಲ್ಲಿ ಏಕರೂಪತೆಯನ್ನು ತರಬೇಕಾಗುತ್ತದೆ. ಮಾತು ಮತ್ತು ಕ್ರಿಯೆಯಲ್ಲಿ ಅಂತರವಿದ್ದರೆ ಅಂತಹ ವ್ಯಕ್ತಿಗಳು ಎಂದಿಗೂ ಧಾರ್ಮಿಕರಾಗುವುದಿಲ್ಲ. ಅವರು ಡೋಂಗಿಗಳಾಗಿ ಅನ್ಯರೊಡನೆ ಹಠ ಮಾಡುತ್ತಾರೆ. ಮಾಯಾಚಾರದಿಂದ ಎಂದಿಗೂ ಸಹ ಯಾರು ಸಹ ಗೆಲ್ಲಲಾರರು. ಯಾಕೆಂದರೆ ಮಾಯಾಚಾರವು ಪಾಪವಾಗಿದೆ. ಕೊಕ್ಕರೆಯು ಮೀನುಗಳನ್ನು ಹಿಡಿಯಲು ಒಂದು ಕಾಲಿನ ಮೇಲೆ ನಿಂತು ಧ್ಯಾನ ಮಾಡುವ ಮಾಯಾಚಾರ ಮಾಡುತ್ತದೆ. ಇಂತಹ ಭಾವವನ್ನು ಹೊಂದಿರುವವರು ಪರಮಾತ್ಮ ಪದವಿಯನ್ನು ಹೊಂದಲಾರರು. ಮಾತಿನಲ್ಲಿ 'ರಾಮ' 'ರಾಮ' ಎನ್ನುತ್ತಾ ಮಗ್ಗುಲಲ್ಲಿ ಖಡ್ಗ ಹೊಂದಿರುವ ರಾವಣನ ಧ್ಯಾನವು ಮಾಯಾಚಾರದಿಂದಾಗಿ ಆತನನ್ನು ನರಕಗತಿಯ ಕಡೆಗೆ ಒಯ್ದಿತು. ಆದರೆ ಸಂಸಾರದಿಂದ ವಿರಕ್ತಿ ಹೊಂದಿ ವೀತರಾಗಿಯಾಗಿ ಶುದ್ಧಾತ್ಮನನ್ನು ಧ್ಯಾನ ಮಾಡಿದ ರಾಮ ಪರಮಾತ್ಮ ಪದವಿಯನ್ನು ಹೊಂದಿದನು. ಆದ್ದರಿಂದ ಬಾಹ್ಯಕ್ರಿಯೆ ಮಾತ್ರ ಹೊಂದಿರುವ ಧ್ಯಾನ ಯಾವ ಪ್ರಯೋಜನವನ್ನು ನೀಡಲಾರದು. ಆತ್ಮ ಕಲ್ಯಾಣಕ್ಕಾಗಿ ನಾವು ನಮ್ಮ ಅಭಿಪ್ರಾಯ ರೂಪದಿಂದ ಮನಃಪೂರ್ವಕವಾಗಿ ಶುದ್ಧ ಭಾವನೆ ಹೊಂದಿರುವುದು ಅವಶ್ಯಕವಾಗಿದೆ. ಆಗಲೇ ನಿಜವಾದ ಧ್ಯಾನ ಆಗಬಲ್ಲದು.

# 58. ಧರ್ಮವಿದ್ದಲ್ಲಿಯೇ ಸಂಪತ್ತು

ಧರ್ಮವಿಲ್ಲದೇ ಸಂಪತ್ತು ಸುಖ ಹಾಗೂ ಶಾಂತಿಗಳ ಕಲ್ಪನೆ ಅರ್ಥಹೀನವಾಗಿದೆ. ಧರ್ಮವಿದ್ದಲ್ಲಿ ಸಂಪತ್ತಿನ ವಾಸವಿರುತ್ತದೆ. ದಯೆಯೇ ಧರ್ಮ ಮೂಲವಾಗಿದೆ. ಎಲ್ಲ ಜೀವಗಳ ಮೇಲೆ ದಯೆ ಮಾಡಬೇಕು. ಅಹಿಂಸೆಯೇ

ಪರಮಧರ್ಮವಾಗಿದೆ. ಈ ಮಾತನ್ನು ಸದಾಕಾಲ ಜ್ಞಾಪಕದಲ್ಲಿಡಬೇಕು. ಇದರಿಂದಲೇ ಸಂಯಮದ ಸಾಧನೆಯಾಗುತ್ತದೆ. ಧರ್ಮಾತ್ಮರು ವಿಶ್ವದ ಯಾವುದೇ ಭಾಗಕ್ಕೆ ಹೋಗಲಿ ಸಂಪತ್ತು ಅವರ ಹಿಂದೆ ಹಿಂದೆಯೇ ಓಡಿ ಬರುತ್ತದೆ. ರಾಮನು ಕಾಡಿಗೆ ಹೋದರೂ ಅಲ್ಲಿಯೇ ಆತನಿಗೆ ಸಂಪತ್ತು ದೊರಕಿತು. ರಾವಣನೊಂದಿಗೆ ಜಯ ಸಂಪಾದಿಸಿದಾಗ ರಾವಣನ ಪತ್ನಿ ಮಂಡೋದರಿ ಮತ್ತು ಸಹೋದರ ವಿಭೀಷಣರು ರಾಮನಿಗೆ ಪೂರ್ಣ ಲಂಕೆಯ ವೈಭವವನ್ನು ನೀಡಲು ಬಯಸಿದರು. ಆದರೆ ರಾಮನು–ನನ್ನ ರಾಜ್ಯ ಅಯೋಧ್ಯಾ, ಬೇರೆ ಯಾವುದೇ ರಾಜ್ಯದ ಲೋಭವು ನನಗೆ ಸ್ವಪ್ನದಲ್ಲಿಯೂ ಇಲ್ಲ. ಯಾಕೆಂದರೆ ಧರ್ಮವಿದ್ದಲ್ಲಿ ಸಂಪತ್ತು ತಾನೇ ಓಡಿ ಬರುತ್ತದೆ ಹಾಗೂ ಅನ್ಯಾಯದಿಂದ ಗಳಿಸಿದ ಧನ ದುಃಖ ಮತ್ತು ದುರ್ಗತಿಗೆ ಕಾರಣವಾಗುತ್ತದೆ – ಎಂದು ಹೇಳಿದನು.

## 59. ಧರ್ಮದಿಂದ ಎಲ್ಲ ಸುಖಗಳ ಪ್ರಾಪ್ತಿ

ಧರ್ಮದಿಂದಲೇ ಎಲ್ಲ ಸುಖಗಳು ಪ್ರಾಪ್ತವಾಗುತ್ತವೆ. ಧರ್ಮದ ಪಾಲನೆ ಮಾಡುವವರನ್ನು ಧರ್ಮವು ರಕ್ಷಿಸುತ್ತದೆ. ಧನ–ಸಂಪತ್ತು ಸಹ ಅಲ್ಲಿಯೇ ನಿಲ್ಲುತ್ತದೆ. ಪರಸ್ಪರರು ಒಬ್ಬರಿಗೊಬ್ಬರಿಗೆ ಉಪಕಾರ ಮಾಡುವುದು ಧರ್ಮವಾಗಿದೆ. ದಯೆಯನ್ನೇ ಧರ್ಮವೆಂದು ಹೇಳಿರುವಾಗ, ಅಹಿಂಸೆ ಅಥವಾ ದಯೆ ಇರದಿದ್ದರೆ ಅಲ್ಲಿ ಧರ್ಮವಿಲ್ಲವೆಂದೇ ಅರ್ಥ ಅಹಿಂಸೆ ಇಲ್ಲದೇ ಧರ್ಮದ ವ್ಯಾಖ್ಯಾನ ಮಾಡುವುದು ಕಾಗದದ ಹೂವಿನಿಂದ ಧರ್ಮದ ನಕಲಾಗಿದೆ. ಅಹಿಂಸೆಯೇ ಪರಮಧರ್ಮವಾಗಿದೆ. ಸ್ವರ್ಗದ ಸುಖವೆನ್ನಿ ಅಥವಾ ತೀರ್ಥಂಕರ ರಾಜಾ ಚಕ್ರವರ್ತಿ ಹಾಗೂ ಭೋಗಭೂಮಿ ಈ ಎಲ್ಲ ಸುಖಗಳು ಪುಣ್ಯವಿಲ್ಲದೇ ಸಿಗಲಾರವು ಹಾಗೂ ಪುಣ್ಯವು ಸಹ ಧರ್ಮಪಾಲನೆ ಬರುವುದಿಲ್ಲ. ಆದ್ದರಿಂದ ಧರ್ಮ, ಅರ್ಥ, ಕಾಮ ಹಾಗೂ ಮೋಕ್ಷ ಪುರುಷಾರ್ಥಗಳಲ್ಲಿ ಪ್ರಥಮ ಸ್ಥಾನ ಧರ್ಮಕ್ಕಿದೆ. ಆದ್ದರಿಂದ ಧರ್ಮ ಪಾಲನೆ ಮಾಡಿರಿ, ವೀತರಾಗ ಪೂಜೆ ಮತ್ತು ಸತ್ಪಾತ್ರ ದಾನ ರೂಪದ ಪುಣ್ಯದಿಂದ ಎಲ್ಲ ತರಹದ ಸುಖಗಳು ತಾನಾಗಿಯೇ ಸಫಲವಾಗಿ ದೊರೆಯುತ್ತವೆ.

## 60. ಕೆಟ್ಟ ಸಂಗತಿಗಳನ್ನು ತ್ಯಜಿಸಿರಿ

ಕೆಟ್ಟ ಸಂಗತಿಗಳು ದುಃಖಕ್ಕೆ ಕಾರಣವಾಗಿರುವುದರಿಂದ ಅವುಗಳನ್ನು ತ್ಯಜಿಸಿರಿ. ಸಾಂಸಾರಿಕ ಜನರಿಗೆ ಆಹಾರ, ಔಷಧಿಗಳನ್ನು ದಾನ ಮಾಡುವುದು ಗೃಹಸ್ಥರ ತ್ಯಾಗವಾಗಿದೆ. ಇದು ಆತ್ಮನಿಗೆ ಸೋಪಿನಂತೆ ಇದೆ. ಈ ತ್ಯಾಗದಿಂದ ಆತ್ಮನನ್ನು

ಮಹಾನ್ ಆಗುವಂತೆ ಮಾಡಬೇಕು. ಅಜ್ಞಾನದಿಂದಾಗಿ ಮನೆ ಸಂಪತ್ತು ಮುಂತಾದವುಗಳನ್ನು ನಾವು ನಮ್ಮದಾಗಿರುವುದು ಅದು ನಾಳೆ ಮತ್ತೆ ಯಾರದೋ ಆಗಿರುತ್ತವೆ. ಹಿಂದೆ ಅವು ಬೇರೆಯವರದಾಗಿದ್ದವು. ನಾಡಿದ್ದು ಮತ್ತೆ ಯಾರದೋ ಆಗುತ್ತವೆ. ಆದ್ದರಿಂದ ನೀವು ಇವುಗಳನ್ನು ತ್ಯಜಿಸಿರಿ. ಆತ್ಮನ ವಾಸ್ತವಿಕ ಸಂಪತ್ತೆಂದರೆ ಜ್ಞಾನ, ದರ್ಶನ ಮುಂತಾದವುಗಳಾಗಿವೆ. ಇವುಗಳನ್ನು ತ್ಯಾಗ ಮಾಡಲು ಸಾಧ್ಯವಿಲ್ಲ ಯಾಕೆಂದರೆ ಅವು ಅರ್ಥಾತ್ ಆತ್ಮಗುಣಗಳು ತ್ರೈಕಾಲಿಕವಾಗಿವೆ.

## 61. ಕಾಮ ಮತ್ತು ಭೋಗಗಳು ಮುಕ್ತಿಗೆ ಬಾಧಕಗಳು

ಜೀವನಿಗೆ ಮುಕ್ತಿ ಪಥದಲ್ಲಿ ಸಾಗಲು ಕಾಮ ಮತ್ತು ಭೋಗಗಳು ಬಾಧಕಗಳಾಗಿವೆ. ಇವುಗಳನ್ನು ತ್ಯಾಗ ಮಾಡಿಯೇ ನಾವು ನಮ್ಮ ಕಲ್ಯಾಣ ಮಾಡಿಕೊಳ್ಳಬಹುದು. ಕಾಮ ಮತ್ತು ಭೋಗಗಳಿಂದ ದೊರೆಯುವ ಒಂದು ಕ್ಷಣದ ಸುಖ ದೀರ್ಘ ಸಮಯದ ದುಃಖಕ್ಕೆ ಕಾರಣವಾಗಿದೆ. ಸೀಮಿತ ಸುಖಕ್ಕಾಗಿ ನಮ್ಮ ಜೀವನವನ್ನು ವ್ಯರ್ಥವಾಗಿ ಕಳೆಯಬಾರದು. ಕಾಮ–ಭೋಗಗಳ ತ್ಯಾಗ ಮಾಡಿ ಆತ್ಮ ಉತ್ಥಾನದ ಮಾರ್ಗದಲ್ಲಿ ಸಾಗಬೇಕು. ಇದರಿಂದ ಜೀವನ ಸಾರ್ಥಕವಾಗುತ್ತದೆ. ವಿಷಯಗಳಲ್ಲಿ ಸುಖವನ್ನು ಹುಡುಕುವವರು ಎಂದಿಗೂ ಆತ್ಮನ ಅನಂತಸುಖದ ರಸಪಾನವನ್ನು ಮಾಡಲಾರರು ಎಂಬ ಮಾತನ್ನು ನೆನಪಿನಲ್ಲಿಡಬೇಕು. ವರ್ತಮಾನದಲ್ಲಿ ಜನರು ಈ ಮಾತನ್ನು ತಿಳಿಯಲಾರದವರಾಗಿದ್ದಾರೆ. ಈ ಕಾರಣದಿಂದಾಗಿ ಜಗತ್ತಿನಲ್ಲಿ ಅಶಾಂತಿ ಮತ್ತು ಅರಾಜಕತೆಯ ವಾತಾವರಣವಿದೆ. ಹೊರಗಿನ ಜಗತ್ತಿನೊಂದಿಗೆ ಮುಖ ತಿರುಗಿಸಿ ಆತ್ಮಸುಖದ ಅನುಭವ ಪಡೆಯುವುದೇ ಬ್ರಹ್ಮಚರ್ಯವಾಗಿದೆ. ಉತ್ತಮ ಬ್ರಹ್ಮಚರ್ಯ ಧರ್ಮಕ್ಕಾಗಿ ಕಾಮ–ವಾಸನೆಗಳಿಂದ ಮುಕ್ತರಾಗುವುದು ಅವಶ್ಯವಾಗಿವೆ.

## 62. ದೇಶದಲ್ಲಿ ಹಿಂಸೆಯ ವಾತಾವರಣ ರೂಪಗೊಳ್ಳುತ್ತಲಿದೆ

ಇಂದು ದೇಶದಲ್ಲಿ ನಿರಂತರ ಹಿಂಸೆಯ ವಾತಾವರಣ ನಿರ್ಮಾಣವಾಗುತ್ತಲಿದೆ. ನಾಲ್ಕೂ ದಿಕ್ಕಿನಲ್ಲಿ ಹಿಂಸೆಯೇ ಹಿಂಸೆಯಾಗುತ್ತಲಿದೆ. ಯಾವುದೇ ಪ್ರಾಣಿಗೆ ಹೊಡೆದಾಗ ಅದರ ಮುಖದಿಂದ ಆಕ್ರಂದನ ಹೊರಡುತ್ತದೆ. ಅದೇ ಆಕ್ರಂದನ ಅನೇಕ ಪ್ರಕಾರದ ಪ್ರಾಕೃತಿಕ ಪ್ರಕೋಪವನ್ನು ಹೊರಡಲು ಕಾರಣವಾಗುತ್ತದೆ. ದೇಶದಲ್ಲಿ ನಿರಂತರ ಕಟುಕರ ಮನೆಗಳು, ಕಸಾಯಿಖಾನೆಗಳು ಪ್ರಾರಂಭವಾಗುತ್ತಲಿವೆ,

ಅವುಗಳಲ್ಲಿ ಸಾವಿರಾರು ಪ್ರಾಣಿಗಳನ್ನು ನಿರಂತರವಾಗಿ ವಧೆ ಮಾಡಲಾಗುತ್ತಿದೆ. ಆ ಪ್ರಾಣಿಗಳ ಕರುಣಾಕ್ರಂಧನ ವೇದನೆಯ ರೂಪದಲ್ಲಿ ವಾಯುಮಂಡಲದಲ್ಲಿ ಪ್ರವೇಶಿಸಿದಾಗ ಪೃಥ್ವಿಯೊಳಗೆ ಕಂಪನಗಳನ್ನು ಹುಟ್ಟಿಸುತ್ತದೆ ಅದರಿಂದಾಗಿ ಭೂಕಂಪ ಮುಂತಾದ ಪ್ರಾಕೃತಿಕ ಉಪಸರ್ಗಗಳು ಉಂಟಾಗುತ್ತವೆ. ದಿನ ನಿತ್ಯದ ಜೀವನದಲ್ಲಿ ನಿರಂತರವಾಗಿ ಪಾಪಕ್ರಿಯೆಗಳು ಜರುಗುತ್ತವೆ. ಅದರಿಂದಾಗಿ ನಿರಂತರ ಪಾಪದ ಭಾರ ಹೆಚ್ಚಾಗುತ್ತಲಿದೆ ಹಾಗೂ ಆತ್ಮನು ಪತನದೆಡೆಗೆ ಮುನ್ನುಗ್ಗುತ್ತಲಿದೆ. ನಾವು ಸುಖಿಗಳಾಗಿರಬೇಕೆಂದರೆ "ಪರಸ್ಪರೋಪಗ್ರಹೋ ಜೀವಾನಾಮ್" ಪರಸ್ಪರರಲ್ಲಿ ಉಪಕಾರ ಮಾಡುವುದೇ ಜೀವಗಳ ಧರ್ಮವಾಗಿದೆ. ಈ ಸೂತ್ರವನ್ನು ಸ್ವೀಕರಿಸಬೇಕು. ಇದು ಅಹಿಂಸಾಧರ್ಮದ ನೆಲೆಗಟ್ಟಾಗಿದೆ. ಇದು ಸಮಸ್ತ ಧರ್ಮಗ್ರಂಥಗಳ ಸಾರವಾಗಿದೆ.

# 63. ಸದ್ಗುರುವಿನ ಆಶೀರ್ವಾದದಿಂದ ಜೀವನವು ಸುಧಾರಿಸುತ್ತದೆ

ಭಕ್ತನು ಸಹ ಭಗವಂತನಾಗುವುದು ಜೈನಧರ್ಮದ ವಿಶೇಷತೆಯಾಗಿದೆ. ಸದ್ಗುರುವಿನ ಮಹಿಮೆ ಇದಾಗಿದ್ದು ಆತನ ಬಗ್ಗೆ ನಿಜವಾದ ಆಸ್ಥೆ ಹಾಗೂ ಶ್ರದ್ಧೆ ಇದ್ದರೆ, ಆತನ ಆಶೀರ್ವಾದದಿಂದ ಜೀವನವು ಸುಧಾರಿಸುತ್ತದೆ. ತನ್ನ ಗುಣಗಳ ಪ್ರಶಂಸೆ ಹಾಗೂ ಇತರ ನಿಂದೆಯನ್ನು ಮಾಡಬಾರದು. ಧಾರ್ಮಿಕ ವ್ಯಕ್ತಿಯು ಪರರ ನಿಂದೆಯನ್ನು ಮಾಡುವುದಿಲ್ಲ. ಆತನು ಧರ್ಮಪ್ರಭಾವನೆ ಹಾಗೂ ಜನಕಲ್ಯಾಣದ ಕಾರ್ಯಗಳಲ್ಲಿ ಆಸಕ್ತಿ ಹೊಂದಿರುತ್ತಾನೆ. ಧರ್ಮದ ಕಾರ್ಯ ಮಾಡುವುದರಿಂದ ಶ್ರೇಷ್ಠ ಫಲವು ದೊರೆಯುತ್ತದೆ.

# 64. ಧ್ಯಾನಕ್ಕಾಗಿ ಮನಸ್ಸಿನ ಮೇಲೆ ವಿಜಯ ಸಾಧಿಸಬೇಕು

ಧ್ಯಾನವೆಂದರೆ ಒಂದೇ ಭಾವನೆ ಹಾಗೂ ವಿಚಾರದ ಮೇಲೆ ಸ್ಥಿರವಾಗಿರುವುದು. ಶುಭ ಭಾವನೆ ಮತ್ತು ವಿಚಾರಗಳಿಂದ ಧರ್ಮಧ್ಯಾನವಾಗುತ್ತದೆ. ಅಶುಭ ಭಾವಗಳು ಹಾಗೂ ದುಷ್ಟ ವಿಚಾರಗಳಿಂದ ಅಶುಭ ಧ್ಯಾನವಾಗುತ್ತದೆ. ಕೆಟ್ಟ ಭಾವನೆಗಳಿಂದ ರಕ್ಷಿಸಿಕೊಳ್ಳಲು ಒಂದು ನಿಶ್ಚಿತ ಸಮಯ ಹಾಗೂ ಉಚಿತ ಸ್ಥಾನದಲ್ಲಿ ಕುಳಿತು ಧ್ಯಾನ ಮಾಡಬೇಕು. ಆಸನದಲ್ಲಿ ಕುಳಿತುಕೊಳ್ಳುವುದರಿಂದ ಧ್ಯಾನವಾಗುವುದಿಲ್ಲ. ಇದಕ್ಕಾಗಿ ಮನಸ್ಸಿನ ಮೇಲೆ ವಿಜಯ ಪಡೆಯುವುದು ಅವಶ್ಯಕವಾಗಿದೆ. ನಿಜವಾದ ಯೋಗಿಯು ಲೌಕಿಕ ಲಾಭಕ್ಕಾಗಿ ಧ್ಯಾನ ಮಾಡುವುದಿಲ್ಲ. ಬದಲಾಗಿ ಆತನು ಸಂಸಾರದ ಬಂಧನಗಳಿಂದ ಮುಕ್ತನಾಗಲು ಧ್ಯಾನ ಮಾಡುತ್ತಾನೆ.

# 65. ಜೈನದರ್ಶನವು ತನ್ನಲ್ಲಿಯೇ ಪೂರ್ಣವಿಜ್ಞಾನವಾಗಿದೆ

ಜೈನದರ್ಶನವು ತನ್ನಷ್ಟಕ್ಕೆ ತಾನೇ ಒಂದು ಪೂರ್ಣವಿಜ್ಞಾನವಾಗಿದೆ. ಜೈನ ದರ್ಶನದ ಆಧಾರದಿಂದಲೇ ಕೆಲವು ವಿಜ್ಞಾನಗಳು ಒಂದು ಸೂರ್ಯನ ಸ್ಥಾನದಲ್ಲಿ ಎರಡು ಅಥವಾ ಅನೇಕ ಸೂರ್ಯ ಹಾಗೂ ಭೂಮಿಗಳ ಇರುವಿಕೆಯನ್ನು ಸ್ವೀಕರಿಸಲು ಸಿದ್ಧರಾಗಿದ್ದಾರೆ. ಅನ್ಯ ಗ್ರಹಗಳಲ್ಲಿಯೂ ಜೀವನದ ಅಸ್ತಿತ್ವವನ್ನು ಸ್ವೀಕರಿಸುತ್ತಿದ್ದಾರೆ. ಹಾರುವ ತಟ್ಟೆಗಳನ್ನು ತಲುಪದಿರುವುದರಿಂದ ಬುದ್ಧಿ ಜೀವಿಗಳು ಶಕ್ತಿಮಾನ ಆತ್ಮಗಳ(ವಿದ್ಯಾಧರರ) ಕಲ್ಪನೆ ಮಾಡುತ್ತಿದ್ದಾರೆ. ಉತ್ತರ ದಿಕ್ಕಿನಲ್ಲಿ ಬಹಳ ದೂರ, ಗೋಲಾಕಾರದ, ಕಠೋರ ಹಾಗೂ ಬಹು ಎತ್ತರದ ವಸ್ತುವನ್ನು ಉಪಗ್ರಹ ಮುಂತಾದವುಗಳನ್ನು ನೋಡಿ ಸುಮೇರು ಪರ್ವತದ ಅಸ್ತಿತ್ವವನ್ನು ಸಿದ್ಧ ಮಾಡುತ್ತಿದ್ದಾರೆ ಹಾಗೂ ಪರಮಾಣುವಿನ ಸಿದ್ಧಿಯಾಗಲಿ ಅಥವಾ ವನಸ್ಪತಿ ಮುಂತಾದವುಗಳಲ್ಲಿ ಜೀವಗಳ ಸಂಶೋಧನೆ, ಇವೆಲ್ಲವುಗಳ ಸಿದ್ಧಿಗಾಗಿ ಜೈನಶಾಸ್ತ್ರಗಳಲ್ಲಿ ವರ್ಣಿತ ವಿಜ್ಞಾನವಿಲ್ಲದೇ ವರ್ತಮಾನ ವಿಜ್ಞಾನದ ಕಾರ್ಯ ನಡೆಯಲಾರದು. ಈ ಕಾರಣದಿಂದಾಗಿ ಜರ್ಮನಿ ಮುಂತಾದ ದೇಶಗಳಲ್ಲಿ ನಮ್ಮ ದೇಶದ ಪ್ರಾಕೃತ, ಸಂಸ್ಕೃತ ಭಾಷೆಗಳ ಅಭ್ಯಾಸ ಮಾಡಿ ನಮ್ಮ ದೇಶದಿಂದ ಕೊಂಡೊಯ್ದಿರುವ ಅನೇಕ ಶಾಸ್ತ್ರಗಳ ಅಧ್ಯಯನ ಮಾಡಲಾಗುತ್ತಿದೆ.

# 66. ಲೋಭವು ಎಲ್ಲ ಪಾಪಗಳ ಬೇರು

ಲೋಭವು ಎಲ್ಲ ಪಾಪಗಳ ಮೂಲವಾಗಿದೆ. ಲೋಭದ ಕಾರಣದಿಂದಾಗಿಯೇ ವ್ಯಕ್ತಿ ಹಿಂಸೆ, ಸುಳ್ಳು, ಕಳ್ಳತನ, ವ್ಯಭಿಚಾರ, ಪರಿಗ್ರಹ ಮುಂತಾದ ಪಾಪಗಳನ್ನು ಮಾಡುತ್ತಾನೆ. ಪುಣ್ಯದಿಂದ ಪಡೆದ ಧನ ಸಂಪತ್ತನ್ನು ಧರ್ಮಕ್ಷೇತ್ರದ ಕಾರ್ಯಗಳಿಗಾಗಿ ಹಾಗೂ ಸುಪಾತ್ರಗಳಲ್ಲಿ ದಾನ ಮಾಡಬೇಕು. ದಾನ-ಧರ್ಮವನ್ನು ಮಾಡಲು ಪಾಪ ಹಾಗೂ ಅನೀತಿಯಿಂದ ಧನವನ್ನು ಸಂಪಾದಿಸಬಾರದು. ಯಾಕೆಂದರೆ ಕೊಳೆಯನ್ನು ಮೆತ್ತಿಕೊಂಡು ಸ್ನಾನ ಮಾಡುವುದರಿಂದ ಆಗುವ ಲಾಭವಾದರೂ ಏನು? ನ್ಯಾಯ-ನೀತಿಗಳಿಂದ ಗಳಿಸಿದ ಹಣದಲ್ಲಿ ಸ್ವಲ್ಪವಾದರೂ ದಾನ ಮಾಡಿದಾಗ ಅದರಿಂದ ಮಹಾನ್ ಲಾಭವು ದೊರೆಯುತ್ತದೆ. ಪ್ರತಿಯೊಬ್ಬರೂ ಪಾಪಗಳ ಫಲವನ್ನು ಅವಶ್ಯವಾಗಿ ಭೋಗಿಸಲೇ ಬೇಕಾಗುತ್ತದೆ. ಆದ್ದರಿಂದ ಪಾಪಗಳಿಂದ ರೂಪಿಸಿಕೊಂಡು ಪುಣ್ಯ ಕರ್ಮಗಳಲ್ಲಿ ತೊಡಗಬೇಕು.

## 67. ಜೀವ ಹತ್ಯೆಯು ಎಲ್ಲಕ್ಕಿಂತ ದೊಡ್ಡ ಪಾಪ

ಅಹಿಂಸೆಯೇ ಪರಮ ಧರ್ಮ, ದಯೆಯೇ ಧರ್ಮದ ಮೂಲ. ಜೀವ ಹತ್ಯೆ ಎಲ್ಲಕ್ಕಿಂತ ದೊಡ್ಡ ಪಾಪ. ಈ ಮಾತುಗಳನ್ನು ಆತ್ಮ ಸಾಕ್ಷಾತ್ ಮಾಡಿಕೊಂಡರೆ ನಾವು ನಮ್ಮ ಮತ್ತು ಅನ್ಯರ ಜೀವನವನ್ನು ಸುಧಾರಿಸಿಕೊಳ್ಳಬಹುದು. ಯಾವ ಮಾತುಗಳು ನಮಗೆ ಸ್ವತಃ ಸರಿ ಎನಿಸಿಕೊಳ್ಳುವುದಿಲ್ಲವೋ ಅವುಗಳನ್ನು ನಾವು ಅನ್ಯರಿಗೆ ಹೇಳಲೂ ಬಾರದು, ಮಾಡಲೂ ಬಾರದು. ವಿದ್ಯೆಯು ವಿನಯದ ಹಾಗೂ ದಯೆಯು ಧರ್ಮದ ಮೂಲ ಎನ್ನುವ ಮಾತುಗಳನ್ನು ಯಾವಾಗಲೂ ಸ್ಮರಣೆ ಮಾಡಿಕೊಂಡು ಕಾರ್ಯ ಮಾಡಬೇಕು. ಭಗವಂತನಿಂದ ದೂರ ಇರುವವರು, ಭವಸಾಗರದಲ್ಲಿ ಮುಳುಗಿ ಹೋಗುತ್ತಾರೆ. ಆದ್ದರಿಂದ ಸದಾಕಾಲ ಭಗವಂತನ ಸ್ಮರಣೆ ಮಾಡುತ್ತಿರಬೇಕು.

## 68. ಅಹಿಂಸೆ ಮತ್ತು ಶಾಕಾಹಾರ ಮುಕ್ತಿಗೆ ಕಾರಣ

ದಯೆಯು ಕರುಣಾಧರ್ಮದ ಮೂಲವಾಗಿದೆ. ಈ ಭಾವನೆಯನ್ನು ಆತ್ಮ ಸಾಕ್ಷಾತ್ ಮಾಡಿಕೊಂಡೇ ವ್ಯಕ್ತಿಯು ತನ್ನ ಜೀವನವನ್ನು ಸುಧಾರಿಸಿಕೊಳ್ಳಬಹುದು. ಸತ್ಯ ಹಾಗೂ ಅಹಿಂಸೆಯ ಮಾರ್ಗದಲ್ಲಿ ಸಾಗಿಯೇ ನಮ್ಮ ಜೀವನವನ್ನು ಶ್ರೇಷ್ಠಮಯ ಮಾಡಿಕೊಳ್ಳಬಹುದು. ನಮ್ಮ ಮನೋಬಲ ಹಾಗೂ ಆರೋಗ್ಯವನ್ನು ರೂಪಿಸಿಕೊಳ್ಳಲು ತಂಬಾಕು ಸೇವನೆ, ಧೂಮ್ರಪಾನ ಹಾಗೂ ಮದ್ಯಪಾನಗಳಂತಹ ವ್ಯಸನಗಳಿಂದ ದೂರವಿರಬೇಕು. ಕೆಟ್ಟ ವ್ಯಸನಗಳು ನಮ್ಮ ಹೆಸರನ್ನು ಕೆಡಿಸದೇ ಇರಲಾರವು. ಯಾರಾದರೂ ಮದ್ಯದ ಅಂಗಡಿಯ ಮುಂದೆ ನಿಂತುಕೊಂಡು ಒಂದು ಬಟ್ಟಲು ಹಾಲು ಕುಡಿದರೂ ಎದುರಿಗಿರುವವರು ಆತ ಮದ್ಯಪಾನವನ್ನೇ ಮಾಡುತ್ತಿದ್ದಾನೆ ಎಂದೇ ಭಾವಿಸುವರು. ಆದ್ದರಿಂದ ಕೆಟ್ಟ ವಾತಾವರಣದಿಂದಲೂ ಸಹ ನಾವು ರಕ್ಷಿಸಿಕೊಳ್ಳಬೇಕಾಗಿದೆ. ನಮ್ಮ ಜೀವನ ಅಹಿಂಸೆ ಹಾಗೂ ಶಾಕಾಹಾರದಿಂದ ಕೂಡಿದ್ದರೆ ಅದು ಮುಕ್ತಿಗೆ ಕಾರಣವಾಗುತ್ತದೆ.

## 69. ವಿನಯಗುಣವಿರಲಿ–ಶಕ್ತಿಯ ಸದುಪಯೋಗವಾಗಲಿ

ಅಹಿಂಸೆಯು ಪರಮ ಧರ್ಮವಾಗಿದ್ದು ಶಾಕಾಹಾರದಿಂದ ಜೀವನ ಸಾಗುತ್ತಿದ್ದರೆ ಹಿಂಸೆ ಯಾಕೆ ಬೇಕು? ಜೀವ ಹತ್ಯೆ ಮಹಾಪಾಪವಾಗಿದೆ. ಜೀವನದಲ್ಲಿ ವಿನಯ ಸಂಪನ್ನತೆ ಇರಬೇಕು. ವಿದ್ಯಾರ್ಥಿಗಳು ತಮ್ಮ ಗುರುಗಳನ್ನು ಸನ್ಮಾನಿಸಬೇಕು.

ಮಕ್ಕಳು ಮೊದಲು ತಮ್ಮ ತಂದೆ ತಾಯಿಗಳನ್ನು ನಂತರ ಶಿಕ್ಷಕರ ಯೋಗಕ್ಷೇಮ ನೋಡಿಕೊಳ್ಳುವತ್ತ ಗಮನ ಹರಿಸಬೇಕು. ಶಿಕ್ಷಕರು ಸಹ ಕೇವಲ ದುಡ್ಡಿಗಾಗಿ ಮಾತ್ರ ಜ್ಞಾನ ನೀಡದೇ, ಅದು ತಮ್ಮ ಕರ್ತವ್ಯವೆಂದು ತಿಳಿದು ಮಕ್ಕಳನ್ನು ಸುಸಂಸ್ಕೃತರನ್ನಾಗಿ ಮಾಡಬೇಕು. ಮನೆ ಪಾಠ ಮಾಡುವ ಲೋಭದಲ್ಲಿ ಶಾಲೆಯ ಶಿಕ್ಷಣದಲ್ಲಿ ಕೊರತೆಯನ್ನುಂಟು ಮಾಡುವುದು ತಮ್ಮ ಶಕ್ತಿಯ ಸದುಪಯೋಗವಲ್ಲ, ಬದಲಾಗಿ ತಮ್ಮ ಕರ್ತವ್ಯದ ಬಗ್ಗೆ ಇರುವ ಅನಾದರವಾಗಿದೆ. ಹಾಗೂ ದೊಡ್ಡ ಮೋಸವೆಂದು ತಿಳಿಯಬೇಕು. ನಮ್ಮ ಶಕ್ತಿಯನ್ನು ತಮ್ಮ ಸೂಕ್ತ ಕರ್ತವ್ಯದಲ್ಲಿಯೇ ತೊಡಗಿಸಬೇಕು. ಇದರಲ್ಲಿಯೇ ತನ್ನ ಹಾಗೂ ಪರರ ಹಿತವಡಗಿದೆ. ಯಾಕೆಂದರೆ ಕರ್ತವ್ಯವೇ ಧರ್ಮವಾಗಿದೆ. ಜೈನಧರ್ಮವು ಜಾತಿಯಾಗಿರದೇ ಧರ್ಮವಾಗಿದೆ. ಇದನ್ನು ಪಾಲನೆ ಮಾಡುವವರೇ ಜೈನರು.

# 70. ಣಮೋಕಾರ ಮಂತ್ರವು ಮಹಾನ್ ಆಗಿದೆ

ಣಮೋಕಾರ ಮಂತ್ರವು ಮಹಾನ್ ಆಗಿದ್ದು, 'ಧವಲ' ಮುಂತಾದ ಮಹಾನ್ ಸಿದ್ಧಾಂತ ಗ್ರಂಥಗಳಲ್ಲಿ ಹೆಚ್ಚಿನ ಶ್ರದ್ಧೆಯಿಂದ ಮಂಗಲಾಚರಣದ ರೂಪದಲ್ಲಿ ಇಟ್ಟಿದ್ದಾರೆ. ವೀರಸೇನ ಆಚಾರ್ಯರು ಈ ಮಂತ್ರವನ್ನು ಆದ್ಯ ಮಂಗಲರೂಪವೆಂದು ಹೇಳಿ ಇದು ಅಪೂರ್ವ ಮಹಿಮೆಯಿಂದ ಕೂಡಿದೆ ಎಂದು ತಿಳಿಸಿದ್ದಾರೆ. ಈ ಮಂತ್ರವು ಅಸಂಖ್ಯಾತ ಪಟ್ಟು ಕರ್ಮ ನಿರ್ಜರೆಗೆ ಕಾರಣವಾಗಿರುವುದರಿಂದ ಅದನ್ನು ಪ್ರತಿಯೊಂದು ಅವಸ್ಥೆಯಲ್ಲಿಯೂ ಚಿಂತನೆ ಮಾಡುವ ಪ್ರೇರಣೆ ನೀಡಿದ್ದಾರೆ– ಹೀಗೆ ಈ ಮಹಾನ್ ಅನಾದಿ ಅನಿಧನರೂಪದ ಣಮೋಕಾರ ಮಂತ್ರದ ರಹಸ್ಯವನ್ನು ಎಲ್ಲ ಭವ್ಯಾತ್ಮರು ತಿಳಿಯುವುದು ಅತ್ಯಂತ ಅವಶ್ಯಕವಾಗಿದೆ. ಆದ್ದರಿಂದ ಸಂಪೂರ್ಣ ದುಃಖಗಳಿಂದ ಮುಕ್ತಿ ಪಡೆಯಲು ಪ್ರಥಮ ಮಂಗಲಸ್ವರೂಪ ಣಮೋಕಾರ ಮಂತ್ರವನ್ನು ಅತಿ ದೊಡ್ಡ ಮಹಾತ್ಮ್ಯಸ್ವರೂಪವೆಂದು ಹೇಳಲಾಗಿದೆ.

# 71. ತೀರ್ಥಂಕರರ ದಿಗ್ದರ್ಶನ ಆವಶ್ಯಕವಾಗಿದೆ

ಅಸಂಖ್ಯ ಭವ್ಯಾತ್ಮರ ಕಲ್ಯಾಣ ಸ್ವರೂಪದ ತೀರ್ಥಂಕರ ಪ್ರಭುಗಳ ಜೀವನ ದರ್ಶನದ ಅರಿವಿಲ್ಲದೇ ಅಥವಾ ಅವರ ಭಾವನೆಗಳನ್ನು ಭಾವಿಸದೇ ನಮಗೆ ಆ ಸಮವಸರಣದಂತಹ ಉತ್ತಮ ಕಲ್ಯಾಣಕಾರಿ ವಿಭೂತಿ ಹಾಗೂ ಪಂಚಕಲ್ಯಾಣಕಗಳ ಮಹಿಮೆಯ ದರ್ಶನ ಹೇಗೆ ಆಗಬಲ್ಲದು? ಆದ್ದರಿಂದ ತೀರ್ಥಂಕರರ ದಿಗ್ದರ್ಶನ ಆವಶ್ಯಕವಾಗಿದೆ. ತೀರ್ಥಂಕರ ಪ್ರಕೃತಿ ನಾಮ ಕರ್ಮದ ಪ್ರಭಾವದಿಂದ ಕಲ್ಯಾಣಕಗಳು

ಆಗುತ್ತಿದ್ದು ಕೇವಲಿ ಭಗವಂತರ ಸಮವಸರಣದ ರಚನೆಯಾಗಿ ಧರ್ಮ ತೀರ್ಥದ ಪ್ರವರ್ತಕರಿಗೆ ತೀರ್ಥಂಕರ ಎನ್ನುತ್ತಾರೆ.

## 72. ಯಾರನ್ನು ಜೈನ ಶ್ರಾವಕರೆಂದು ತಿಳಿಯುವುದು?

'ಜೈನನು ಜನ್ಮ ಮಾತ್ರದಿಂದ ಆಗದೇ ಕರ್ಮದಿಂದಾಗುತ್ತಾನೆ ಹಾಗೂ ನಿಜವಾದ ಜೈನನಾಗಲು ಇರುವ ಚಿನ್ಹೆ ಎಂದರೆ ಅಷ್ಟಮೂಲಗುಣ ಇತ್ಯಾದಿ ರೂಪದ ಜೈನ ಶ್ರಾವಕರ ಕರ್ತವ್ಯದ ಪಾಲನೆ ಪರಮಾವಶ್ಯಕವಿದೆ. 'ಶ್ರಾ' ಅರ್ಥಾತ್ ಶ್ರದ್ಧಾವಂತ, (ಸಮ್ಯಗ್‌ದೃಷ್ಟಿ) 'ವ' ಅರ್ಥಾತ್ ವಿವೇಕವಾನ್ (ಸಮ್ಯಕ್ ಜ್ಞಾನಿ) 'ಕ' ಅರ್ಥಾತ್ ಕ್ರಿಯಾವಾನ್ (ಸಮ್ಯಕ್ ಚಾರಿತ್ರ) ಅರ್ಥಾತ್ ಸಮ್ಯಕ್‌ದರ್ಶನ, ಸಮ್ಯಕ್‌ಜ್ಞಾನ ಮತ್ತು ಸಮ್ಯಕ್‌ಚಾರಿತ್ರಗಳಾಗಿರುವರನ್ನು 'ಶ್ರಾವಕ'ನೆಂದು ಹೇಳಲಾಗುತ್ತದೆ.

## 73. ನಿತ್ಯವೂ ದೇವದರ್ಶನ ಮಾಡಿರಿ

ಯಾರ ಆದರ್ಶ ಜೀವನವನ್ನು ನೋಡಿದಾಗ ನಮ್ಮ ಜೀವನವು ಸಹ ಆದರ್ಶಮಯವಾಗುವುದೋ ಅಂತಹ ಆದರ್ಶರೂಪ ಪ್ರಭುವಿನ ಮಂದಿರಕ್ಕೆ ನಾವು ಹೇಗೆ ಹೋಗಬೇಕು ಹಾಗೂ ಅಲ್ಲಿ ಏನೇನು ಮಾಡಬೇಕು? ಇವುಗಳ ವಿಧಿ ಹಾಗೂ ಮಹತ್ವವನ್ನು ತಿಳಿಯದೆ ನಾವು ಪ್ರಭುವಿನ ನಿಜವಾದ ಭಕ್ತರಾಗಲಾರೆವು. ನಾವು ನಮಸ್ಕಾರ ಮುದ್ರೆಯಲ್ಲಿ ನಿಂತು ವೀತರಾಗ ಭಗವಂತನ ಗುಣಗಳ ಚಿಂತನೆ ಮಾಡುತ್ತಾ ಆ ಪ್ರಭುವನ್ನು ನೋಡಿದಾಗ ಹಾಗೂ ಆತನ ಸ್ಮರಣೆ ಮಾಡಿದಾಗ ಅದನ್ನು ದೇವದರ್ಶನವೆನ್ನುತ್ತಾರೆ. ದೇವದರ್ಶನವನ್ನು ಮಾಡುವುದರಿಂದ ಪಾಪಕರ್ಮಗಳ ನಿರ್ಜರೆಯಾಗುತ್ತದೆ. ದೇವತೆಗಳ ಸ್ವರ್ಗಕ್ಕಾಗಿ ಮೆಟ್ಟಿಲುಗಳಿಂತಿದ್ದು ಮೋಕ್ಷದ ಉತ್ತಮ ಸಾಧನೆಯು ದೇವದರ್ಶನದಿಂದ ಆಗುತ್ತದೆ.

## 74. ಜೈನನನ್ನು ಗುರುತಿಸಿರಿ

ಇಂದಿನ ಹೊಸ ಪೀಳಿಗೆಗೆ ಕೆಟ್ಟ ವ್ಯಸನಗಳಲ್ಲಿ ಆಸಕ್ತರಾಗಲು ಪಶ್ಚಿಮ ದೇಶಗಳಿಂದ ಬಂದಿರುವ ಅನೇಕ ಸಾಧನೆಗಳು ದೊರೆಯುತ್ತಲಿವೆ ಹಾಗೂ ಇಂದಿನ ಬಹುಪಾಲು ಜನರು ಇಂತಹ ಸಾಧನಗಳಿಂದ ಹಾಗೂ ಕೆಟ್ಟ ಸಂಗತಿಗಳಿಂದ ತಮ್ಮ ಜೈನತ್ವದ ಲಕ್ಷಣಗಳಿಂದ ದೂರವಾಗುತ್ತಾ ಸಾಗುತ್ತಿದ್ದಾರೆ. ಈ ಕಾರಣ ಇಂದು ವ್ಯಸನ

ಮುಕ್ತಿ ಶಾಕಾಹಾರದ ಪ್ರಚಾರ ಆವಶ್ಯಕವಾಗಿದೆ "ಇಂದ್ರಿಯಾಣಿ ಜಯತೀತಿ ಜಿನಃ" ಇಂದ್ರಿಯಗಳನ್ನು ಗೆದ್ದವನು ಜಿನನೆಂದು ಕರೆಯಲ್ಪಡುತ್ತಾನೆ ಹಾಗೂ ಇಂತಹ ಜಿನರು ಅರ್ಥಾತ್ ಜಿನೇಂದ್ರ ಭಗವಂತರ ಮೂಲಕ ತಿಳಿಸಲ್ಪಟ್ಟ ಮಾರ್ಗಾನುಸಾರ ನಡೆಯುವವರನ್ನು ಜೈನರೆಂದು ಹೇಳುತ್ತಾರೆ. ಜೈನನು ಕರ್ಮದಿಂದಾಗುತ್ತಾನೆಯೇ ವಿನಃ ಕೇವಲ ಜನ್ಮ ಪಡೆಯುವುದರಿಂದ ಅಲ್ಲ.

# 75. ಪೂಜೆಯ ಮಹಾತ್ಮ್ಯದಿಂದ ಜೀವನ ಸಫಲ

ಇಂದು ಪೂಜೆಯ ಮಹಾತ್ಮ್ಯ ಹಾಗೂ ಅದರ ವಿಧಿಯ ಅನಭಿಜ್ಞತೆಯಲ್ಲಿ ಏಕಾಂತಪಕ್ಷ ಅಥವಾ ನಿಶ್ಚಯವಾದಿ ಜನರು ಭಕ್ತನಲ್ಲ ಭಗವಂತನಾಗುತ್ತೀ ಎನ್ನುವ ಮಿಥ್ಯಾಪ್ರಚಾರ ಮಾಡುತ್ತಿದ್ದಾರೆ. ಇನ್ನೊಂಡೆಗೆ ಅಂಥ ಶ್ರದ್ಧೆಯ ದೇವಮೂಢತೆಯಿಂದ ಕೂಡಿದ ಜನರು ವೀತರಾಗ ಪ್ರಭುವಿನ ಭಕ್ತಿಯನ್ನು ಬಿಟ್ಟು ಮಿಥ್ಯಾತ್ವವನ್ನು ಪೋಷಿಸುವ ಸರಾಗಿ ದೇವಿ–ದೇವತೆಗಳ ಭಕ್ತಿ ಪೂಜೆಗಳಲ್ಲಿ ಲೀನರಾಗುತ್ತಿದ್ದಾರೆ. ಪೂಜ್ಯರ ಉತ್ತಮ ಗುಣಗಳ ಸ್ತುತಿಗೆ ಪೂಜೆ ಎನ್ನುತ್ತಾರೆ, ವೀತರಾಗಿ ನಿಜವಾದ ದೇವರು, ನಿಜವಾದ ಗುರು ಮತ್ತು ನಿಜವಾದ ಶಾಸ್ತ್ರಗಳನ್ನು ಪೂಜ್ಯವೆಂದು ಹೇಳುತ್ತಾರೆ. ನಿಜವಾದ ದೇವರು, ನಿಜವಾದ ಗುರು ಹಾಗೂ ನಿಜವಾದ ಶಾಸ್ತ್ರಗಳ ಮೇಲೆ ಅಚಲ ಶ್ರದ್ಧೆ ಹೊಂದಿರುವವರು ಪೂಜಕರಾಗುತ್ತಾರೆ. ಪೂಜೆ ಮಾಡುವ ಅತಿ ಶ್ರೇಷ್ಠ ಸಮಯ ಬೆಳಗಿನ ಸಮಯ, ಯಾಕೆಂದರೆ ಪ್ರಾತಃಕಾಲ(ಸೂರ್ಯೋದಯ)ದ ವಾತಾವರಣ ಮನೋಹರ ಸುಸೌಮ್ಯವಾಗಿರುತ್ತದೆ. ಆದ್ದರಿಂದ ಅಂತಹ ಸುಂದರ ವಾತಾವರಣದಲ್ಲಿ ಪ್ರಾಣಿಮಾತ್ರರ ಪರಿಣಾಮ ಧರ್ಮದ ಯೋಗ್ಯ, ಹೆಚ್ಚು ಸುಶಾಂತ, ಪ್ರಮಾದ ರಹಿತವಾಗಿ ನಿರ್ಮಲವಾಗಿರುತ್ತದೆ. ದರ್ಶನ ಹಾಗೂ ಪೂಜೆ ಒಂದು ಮಂಗಲ ಕ್ರಿಯೆಯಾಗಿದೆ ಹಾಗೂ ಇಂತಹ ಕ್ರಿಯೆ ಮಂಗಲಕಾರಿ ವಿಘ್ನನಾಶಕವಾಗಿರುವುದರಿಂದ ಶ್ರಾವಕರಿಗೆ ತಮ್ಮ ದೈನಿಕ ಕಾರ್ಯಗಳಿಗಿಂತ ಮೊದಲು ಇವುಗಳನ್ನು ಪ್ರಾರಂಭಿಸಬೇಕು. ಇದು ಹೆಚ್ಚು ಶ್ರೇಷ್ಠವಾಗಿದೆ. ಪದ್ಮನಂದಿ ಪಂಚವಿಂಶತಿ ಶಾಸ್ತ್ರದಲ್ಲಿ – ಭಕ್ತಿಯಿಂದ ಜಿನೇಂದ್ರ ಭಗವಂತನ ದರ್ಶನ ಮಾಡದಿರುವವರ, ಪೂಜೆ ಮಾಡದಿರುವವರ ಹಾಗೂ ಸ್ತುತಿ ಮಾಡದಿರುವವರ ಜೀವನ ನಿಷ್ಫಲವಾಗಿದೆ ಹಾಗೂ ಅವರು ಗೃಹಸ್ಥಾಶ್ರಮದಲ್ಲಿರುವುದಕ್ಕೆ ಧಿಕ್ಕಾರವೆಂದು ಹೇಳಿದ್ದಾರೆ. ಶ್ರಾವಕರು ಪ್ರಾತಃಕಾಲದಲ್ಲಿ ಎದ್ದು ಭಕ್ತಿಯಿಂದ ಜಿನೇಂದ್ರ ದೇವ ಹಾಗೂ ನಿರ್ಗ್ರಂಥ ಗುರುವಿನ ದರ್ಶನ ಹಾಗೂ ಅವರ ವಂದನೆ ಮಾಡಿ ಧರ್ಮ ಶ್ರವಣ ಮಾಡಬೇಕು. ಆ ನಂತರವೇ ಅನ್ಯ ಕಾರ್ಯಗಳನ್ನು ಮಾಡಬೇಕು.

# 76. ಜೈನಧರ್ಮ ಏನಿದೆ?

ಜೈನಧರ್ಮವನ್ನು ದಾನ, ಪೂಜೆ, ಶೀಲ, ಉಪವಾಸ ಇತ್ಯಾದಿ ಉತ್ತಮ ಲಕ್ಷಣವುಳ್ಳ ಧರ್ಮವೆಂದು ಹೇಳಲಾಗಿದೆ. ಇವುಗಳ ಮಹಾತ್ಮ್ಯೆಯನ್ನು ತಿಳಿಯುವುದರಿಂದಲೇ ಭವ್ಯರ ಅಂತಸ್ಸಿನಲ್ಲಿ ಇಂತಹ ಮಹಾನ್ ಸದ್ಧರ್ಮವನ್ನು ವಿಧಿಪೂರ್ವಕವಾಗಿ ವಿಶುದ್ಧಿಯಿಂದ ಪಾಲನೆ, ಧಾರಣೆ ಮಾಡುವ ಭಾವನೆ ಉತ್ಪನ್ನವಾಗುತ್ತದೆ. ಧರ್ಮ ಶಬ್ದದ ಧಾರ್ಮಿಕ ಅರ್ಥ ಅಥವಾ ನಿರುಕ್ತಿ ಅರ್ಥ – 'ಧರತೀತಿ ಧರ್ಮಃ' ಅರ್ಥಾತ್ ಸಂಸಾರದ ದುಃಖಗಳಿಂದ ಮೇಲೆತ್ತಿ ಅಥವಾ ಹೊರತಂದು ಸ್ವರ್ಗ, ಮೋಕ್ಷ ಸುಖದಲ್ಲಿ ಇಡುವುದು ಅಥವಾ – ತಲುಪಿಸುವುದನ್ನು ಧರ್ಮವೆಂದು ಹೇಳುತ್ತಾರೆ. ಇದನ್ನು ಶ್ರದ್ಧೆಯಿಂದ ಸ್ವೀಕಾರ ಮಾಡಿದಾಗ ಜೈನರೆಂದು ಕರೆಯಲ್ಪಡಬಹುದು ಆದರೆ ಧರ್ಮವನ್ನು ಆಚರಣೆಗೆ ತಂದಾಗಲೇ ಜೈನಿ ಎಂದು ಹೇಳಬಹುದು.

# 77. ರತ್ನತ್ರಯಗಳ ಸ್ವರೂಪ ತಿಳಿಯಿರಿ

ಸಮ್ಯಗ್‌ದರ್ಶನ, ಸಮ್ಯಗ್‌ಜ್ಞಾನ ಮತ್ತು ಸಮ್ಯಕ್‌ಚಾರಿತ್ರಗಳ ಸಮುಚ್ಚಯವನ್ನು ಧರ್ಮ ಶಾಸ್ತ್ರಗಳಲ್ಲಿ ರತ್ನತ್ರಯ ಧರ್ಮವೆಂದು ಕರೆದಿದ್ದಾರೆ. ಇವುಗಳ ಏಕತೆಯನ್ನು ಮೋಕ್ಷಮಾರ್ಗವೆನ್ನಲಾಗಿದೆ. ಮೋಕ್ಷರೂಪದ ಅಂತಸ್ತನ್ನು ಪಡೆಯಲು ಇರುವ ಅತ್ಯವಶ್ಯಕ ಸಂಗತಿಯಾಗಿದೆ. ಯಾಕೆಂದರೆ ಮಾರ್ಗದಲ್ಲಿ ಸಾಗದೇ ಗುರಿ ತಲುಪಲು ಸಾಧ್ಯವಿಲ್ಲ. ಆದ್ದರಿಂದ ಮೋಕ್ಷದ ಗುರಿಯನ್ನು ತಲುಪಲು ಇಂತಹ ಸಮ್ಯಗ್‌ದರ್ಶನ ಮುಂತಾದ ರೂಪ ರತ್ನತ್ರಯ ಅಥವಾ ತ್ಯಾಗ ಸಂಯಮ ರೂಪ ಮೋಕ್ಷಮಾರ್ಗದಲ್ಲಿ ಸಾಗುವುದು ಬಹಳ ಅವಶ್ಯಕವಾಗಿದೆ.

# 78. ಮೋಕ್ಷ ಮಹಲ್‌ನ ಮೊದಲ ಮೆಟ್ಟಿಲು 'ಸಮ್ಯಗ್‌ದರ್ಶನ'

ಶಾಸ್ತ್ರಗ್ರಂಥಗಳಲ್ಲಿ ಸಮ್ಯಗ್‌ದರ್ಶನವನ್ನು ಮೋಕ್ಷಮಹಲ್‌ನ ಪ್ರಥಮ ಮೆಟ್ಟಿಲು ಎಂದು ವರ್ಣಿಸಲಾಗಿದೆ. ಯಾಕೆಂದರೆ ಆ ಸಮ್ಯಗ್‌ದರ್ಶನವಿಲ್ಲದೇ ಹನ್ನೊಂದು ಅಂಗಗಳ ಜ್ಞಾನ ಮತ್ತು ಸಮ್ಯಕ್‌ಚಾರಿತ್ರವನ್ನು ಸಹ ಸಮ್ಯಕ್ (ಸಮೀಚೀನ)ವೆಂದು ಹೇಳಲಾಗದು. ಅವುಗಳನ್ನು ಮಿಥ್ಯಾ ಎಂದೇ ಹೇಳಲಾಗುತ್ತದೆ ಹಾಗೂ ಆ

ಸಮ್ಯಗ್‌ದರ್ಶನದ ಅಭಾವದಲ್ಲಿ ತೀರ್ಥಂಕರ ಭಗವಂತರ ಸಮವಸರಣದ ದರ್ಶನ ಸುಲಭವಾಗಿ ಆಗುವುದಿಲ್ಲ. ಈ ಸಮ್ಯಗ್‌ದರ್ಶನದ ಸದ್‌ಭಾವವಾದಾಗಲೇ ಮನುಷ್ಯರಿಗೆ ವೈಮಾನಿಕ ದೇವತೆಗಳ ಆಯುವಿನೊಂದಿಗೆ ಅನ್ಯ ಆಯುಗಳ ಬಂಧ ಅವಶ್ಯರೂಪದಲ್ಲಿ ಆಗುವುದಿಲ್ಲ. ನರಕ ತಿರ್ಯಂಚ ಮುಂತಾದ ದುರ್ಗತಿಗಳಲ್ಲಿ ಅಲೆದಾಡುವುದನ್ನು ತಪ್ಪಿಸಲು ಮಹಾನ್ ಸಮ್ಯಗ್‌ದರ್ಶನವನ್ನು ಆಗಮಾನುಸಾರ ತಿಳಿಯುತ್ತಾ ಭವ್ಯರು ಪಡೆಯಬೇಕು. ಆಚಾರ್ಯ ಕುಂದಕುಂದಾಚಾರ್ಯರ ಪ್ರಕಾರ ಹಿಂಸಾರಹಿತ ಧರ್ಮ, ಹದಿನೆಂಟು ದೋಷಗಳಿಲ್ಲದ ದೇವರು, ನಿರ್ಗ್ರಂಥ ಶ್ರಮಣರು ಹಾಗೂ ಪ್ರವಚನದೊಂದಿಗೆ ಶ್ರದ್ಧೆ ಹೊಂದುವುದರಿಂದ ವ್ಯವಹಾರ ಸಮ್ಯಗ್ ದರ್ಶನವಾಗುತ್ತದೆ.

## 79. ಸಮ್ಯಗ್‌ಜ್ಞಾನವು ಮಹಿಮಾ ಸ್ವರೂಪಿಯಾಗಿದೆ

ತೀರ್ಥಂಕರರ ವಾಣಿಯಿಂದ ದೊರೆತಿರುವ ನಾಲ್ಕು ಅನುಯೋಗರೂಪದ ಸಮ್ಯಗ್‌ಜ್ಞಾನವು ಎಲ್ಲ ಮೋಕ್ಷಮಾರ್ಗಿಗಳಿಗೆ ಪರಮ ಔಷಧಿ ಹಾಗೇ ಇದೆ. ಸಮ್ಯಗ್‌ಜ್ಞಾನದ ಮಾಧ್ಯಮದಿಂದ ಜೀವಗಳ ಹೇಯ ಮತ್ತು ಉಪಾದೇಯ ಜ್ಞಾನಗಳ ಜೊತೆಗೆ ಸಮ್ಯಕ್‌ಚಾರಿತ್ರದಲ್ಲಿ ವೃದ್ಧಿ ಹಾಗೂ ಅದರಲ್ಲಿ ವಿಶೇಷ ಶುದ್ಧತೆ ಬರುತ್ತದೆ. ಮನಸ್ಸಿನ ಚಂಚಲತೆಯನ್ನು ದೂರ ಮಾಡಲು ಹಾಗೂ ಮೋಕ್ಷಮಾರ್ಗದಲ್ಲಿ ವಿಶೇಷ ರುಚಿ ಅಥವಾ ವಿಶುದ್ಧಿಯನ್ನು ಹೆಚ್ಚಿಸಲು ಸಮ್ಯಗ್‌ಜ್ಞಾನ ರೂಪದ ಶಾಸ್ತ್ರಗಳ ಅಧ್ಯಯನವು ಪರಮ ಅವಶ್ಯವಾಗಿದೆ. ವಸ್ತುವಿನ ಸ್ವರೂಪವನ್ನು ನ್ಯೂನ್ಯತೆ ಇಲ್ಲದೆ ಅಧಿಕವೂ ಇಲ್ಲದೇ, ವಿಪರೀತವೂ ಇಲ್ಲದೆ ಮತ್ತು ಸಂದೇಹ ರಹಿತವು ಹಾಗೂ ಹೇಗಿದೆ ಹಾಗೆಯೇ ತಿಳಿಯುವ ಜ್ಞಾನವನ್ನು ಗಣಧರರು ಅಥವಾ ಶ್ರುತಕೇವಲಿಗಳು ಸಮ್ಯಗ್‌ಜ್ಞಾನವೆಂದಿದ್ದಾರೆ.

## 80. ಮೋಕ್ಷಮಾರ್ಗದಲ್ಲಿ ಶ್ರೇಷ್ಠಸ್ಥಾನ ಸಮ್ಯಕ್‌ಚಾರಿತ್ರಕ್ಕಿದೆ

ಚಾರಿತ್ರವಿಲ್ಲದೇ ಮೋಕ್ಷಮಾರ್ಗವು ಪೂರ್ಣವಾಗುವುದಿಲ್ಲ. ದರ್ಶನ ಮತ್ತು ಜ್ಞಾನದ ಸಾರ್ಥಕತೆ ಚಾರಿತ್ರದ ಪಾಲನೆಯಿಂದಾಗುತ್ತದೆ. ಔಷಧಿಯ ಮೇಲಿನ ಶ್ರದ್ಧೆ ಹಾಗೂ ಜ್ಞಾನದಿಂದ ರೋಗ ದೂರವಾಗುವುದಿಲ್ಲ. ಔಷಧಿಯನ್ನು ಸೇವನೆ ಮಾಡುವುದು ಅನಿವಾರ್ಯವಾಗಿರುತ್ತದೆ. ಹಾಗೆಯೇ ಮುಕ್ತಿಯ ಶ್ರದ್ಧೆ ಮತ್ತು ಜ್ಞಾನದಿಂದ ಆ ಮುಕ್ತಿಯನ್ನು ಪಡೆಯಲಾಗದು, ಪಾಪದ ಕ್ರಿಯೆಗಳನ್ನು ನಿವೃತ್ತಿ ಪೂರ್ವಕ ವ್ರತಾಚರಣೆ ರೂಪದ ಪ್ರವೃತ್ತಿಯಿಂದಲೇ ಸಮೀಚೀನ ವ್ಯವಹಾರ ಚಾರಿತ್ರದ ಪಾಲನೆ ಮಾಡುತ್ತಾ, ಒಂದು ದಿನ ಸ್ವರೂಪಾಚರಣ ರೂಪ ಮುನಿಗಳ

ನಿಶ್ಚಯ ಚಾರಿತ್ರದಿಂದ ಮುಕ್ತಿ ಪ್ರಾಪ್ತವಾಗುವ ಸಾಧ್ಯತೆ ಇದೆ. ಆದ್ದರಿಂದ ಮೋಕ್ಷಮಾರ್ಗದ ಕ್ಷೇತ್ರದಲ್ಲಿ ಕರ್ಮಗಳ ಸಂವರ ಹಾಗೂ ನಿರ್ಜರೆಗಾಗಿ ವ್ರತಾಚರಣೆಯ ಪ್ರಧಾನತೆಯನ್ನು ಹೇಳುತ್ತಾ ಸಮ್ಯಕ್‌ಚಾರಿತ್ರವನ್ನು ಶಾಸ್ತ್ರಗಳಲ್ಲಿ ಅಪೂರ್ವ ಮಹಿಮೆಯ ಸ್ವರೂಪವನ್ನು ಹೇಳಲಾಗಿದೆ.

## 81. ಸಪ್ತ ತತ್ತ್ವಗಳು ಎರಡೇ ತತ್ತ್ವಗಳಲ್ಲಿವೆ

ಸಮ್ಯಕ್ತ್ವದ ಉತ್ಪತ್ತಿಯ ನಿಮಿತ್ತಗಳಲ್ಲಿ ಮಾಡುವ ಶಾಸ್ತ್ರಗಳ ವಿವರಣೆಯು ಸಪ್ತ ತತ್ತ್ವಗಳ ಸ್ವರೂಪವನ್ನು ತಿಳಿಸುತ್ತದೆ. ಅವುಗಳನ್ನು ತಿಳಿಯದೇ ನಾವು ಶಾಸ್ತ್ರ ಅಥವಾ ಜೈನಧರ್ಮದ ಮೂಲ ಸಿದ್ಧಾಂತಗಳನ್ನು ತಿಳಿಯಲಾರೆವು. ಜೀವ ಮತ್ತು ಅಜೀವಗಳು ಮೂಲತತ್ತ್ವಗಳಾಗಿವೆ. ಇವುಗಳ ಸಂಯೋಗ ಅಥವಾ ವಿಯೋಗವಾಗುವುದರಿಂದ ಅನ್ಯ ತತ್ತ್ವಗಳ ನಿರ್ಮಾಣವಾಗುತ್ತದೆ. ಜೀವದಲ್ಲಿ ಅಜೀವದ ಆಗಮನ ಆಸ್ರವ ತತ್ತ್ವವಾಗಿದೆ. ಜೀವದಲ್ಲಿ ಅಜೀವ ತತ್ತ್ವದ ಬಂಧನವು ಬಂಧ ತತ್ತ್ವವಾಗಿದೆ. ಧಾರ್ಮಿಕ ಕ್ರಿಯೆ ಮಾಡುತ್ತಿರುವಾಗ ಜೀವದಲ್ಲಿ ಅಜೀವ ಬರದಿರುವುದು ಸಂವರ ತತ್ತ್ವವಾಗಿದೆ. ಇದು ಕೆಳಗಿನ ಅವಸ್ಥೆಯ ಸಂವರವೆಂದು ತಿಳಿಯಬೇಕು. ಶ್ರೇಷ್ಠ ಧ್ಯಾನದ ಸಮಯದಲ್ಲಿ ಮುನಿಗಳು ಪಾಪ, ಪುಣ್ಯ ಇವೆರಡರ ಸಂವರ ಮಾಡಿ ಬಿಡುತ್ತಾರೆ. ಜೀವದಿಂದ ಅಜೀವವು ಸ್ವಲ್ಪ-ಸ್ವಲ್ಪವಾಗಿ ಹೊರ ಹೋಗುವುದು ನಿರ್ಜರಾ ತತ್ತ್ವವಾಗಿದೆ ಹಾಗೂ ಬಹಳ ದೊಡ್ಡ ತಪಸ್ಸಿನ ರೂಪದ ಧ್ಯಾನದಿಂದ ಜೀವದಿಂದ ಅಜೀವಪೂರ್ಣ ರೂಪದಿಂದ ಹೊರಟು ಹೋಗುವುದು ಮೋಕ್ಷ ತತ್ತ್ವವಾಗಿದೆ. ಆದರೆ ಜೀವ, ಅಜೀವ ಈ ಎರಡರ ಹೊರ್ತಾಗಿ ಅನ್ಯ ತತ್ತ್ವಗಳನ್ನು ತಿಳಿಯದ ವಿನಹ ಜೀವಾಜೀವಗಳ ಪೂರ್ಣ ಪರಿಚಯವಾಗುವುದಿಲ್ಲ. ಈ ಕಾರಣದಿಂದಾಗಿ ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರೆ ಮತ್ತು ಮೋಕ್ಷ ಈ ಏಳು ತತ್ತ್ವಗಳನ್ನು ವರ್ಣಿಸಲಾಗುತ್ತಿದೆ.

## 82. ತ್ರಿಲೋಕ ವರ್ಣನೆಯಿಂದ ಸಂವೇಗ (ಭಾವನೆ) ಉಂಟಾಗುತ್ತದೆ

'ಸಂವೇಗ' ಅರ್ಥಾತ್ ಸಂಸಾರದ ಪ್ರಾಪ್ತಿಯಾಗಿರುವ ಕಾರಣಗಳಿಂದ ಭಯವಾಗದೇ ನಾವು ಮೋಕ್ಷಮಾರ್ಗದಲ್ಲಿ ಸಾಗಲು ಆಗುವುದಿಲ್ಲ. ಸಂವೇಗದ ಪ್ರಾಪ್ತಿಗಾಗಿ ಜಗತ್ತಿನ ಸ್ವರೂಪ ಚಿಂತನೆಯನ್ನು ಮಾಡಬೇಕು. ಚತುರ್ಗತಿ ರೂಪದ ಸಂಸಾರವು ತ್ರಿಲೋಕವನ್ನು ಆಶ್ರಯಿಸಿದೆ. ಆದ್ದರಿಂದ ತ್ರಿಲೋಕದ ಜ್ಞಾನವನ್ನು ಹೊಂದದೆ ನಾವು ಈ ಜಗತ್ತಿನಲ್ಲಿರುವ ಸಂಪೂರ್ಣ ನರಕ-ಸ್ವರ್ಗ

ಮುಂತಾದವುಗಳನ್ನು ಹಾಗೂ ಅಸಂಖ್ಯಾತ ದ್ವೀಪ ಸಮುದ್ರಗಳ ಸ್ಥಿತಿ ಹಾಗೂ ಅವುಗಳಲ್ಲಿ ಇರುವ ಜೀವಗಳನ್ನು ತಿಳಿಯಲಾರೆವು. ತ್ರಿಲೋಕ (ಜಗತ್ತಿನ)ದ ಸ್ವಭಾವದಿಂದ ಪರಿಚಿತರಾಗುವುದರಿಂದ ನಮಗೆ ಅವುಗಳಲ್ಲಿರುವ ಜೀವಗಳ ಜ್ಞಾನವಾಗುತ್ತದೆ ಹಾಗೂ ಅವುಗಳ ಸುಖ ದುಃಖದ ಕಾರಣಗಳನ್ನು ತಿಳಿದು ಸಂವೇಗ ಭಾವನೆಯನ್ನು ಹೊಂದಿ ನಾವು ಸಾಂಸಾರಿಕ ದುಃಖಗಳಿಂದ ಮುಕ್ತಿ ಹೊಂದಲು ಧರ್ಮ ಹಾಗೂ ಮೋಕ್ಷ ಪುರುಷಾರ್ಥದಲ್ಲಿ ತೊಡಗುತ್ತೇವೆ.

# 83. ಭಕ್ತಿಯಿಂದ ಅಪೂರ್ವ ಲಾಭ

ರತ್ನತ್ರಯ ರೂಪದ ಗುಣಗಳ ಧಾರಕರು ಗುಣಿಗಳ ಸೇವೆ ಭಕ್ತಿ ಮಾಡದೇ, ಭವ್ಯರಿಗೆ ಸದ್ಗುಣಗಳ ಪ್ರಾಪ್ತಿಯಾಗುವುದು ಬಹಳ ದುರ್ಲಭವೆಂದು ಭಾವಿಸಲಾಗಿದೆ. ಆದ್ದರಿಂದ ಭಗವಾನ್ ಮಹಾವೀರರ ಮಾರ್ಗದಲ್ಲಿ ವೈಯಾವೃತ್ತಿ ಮಾಡುವುದರಿಂದ ಧರ್ಮೀಯರ ವೃದ್ಧಿಯೊಂದಿಗೆ ಧರ್ಮಿಗಳ ಮಾಧ್ಯಮದಿಂದ ಧರ್ಮದ ಪರಂಪರೆ ಸಾಗುತ್ತದೆ ಯಾಕೆಂದರೆ– 'ನ ಧರ್ಮೋ ಧಾರ್ಮಿಕೈರ್ವಿನಾ'ಧರ್ಮಿಗಳಿಲ್ಲದೆ ಧರ್ಮ ಇರುವುದಿಲ್ಲ – ಎಂದು ಶಾಸ್ತ್ರಗಳಲ್ಲಿ ಹೇಳಲಾಗಿದೆ. ಮುನಿ, ಆರ್ಯಿಕೆ, ಶ್ರಾವಕ ಹಾಗೂ ಶ್ರಾವಿಕೆ ಈ ಧರ್ಮಿ ಆತ್ಮಗಳ ಸೇವೆ ಮತ್ತು ಮುನಿಗಳ ನವಧಾ ಭಕ್ತಿ ಮಾಡುವುದರಿಂದ ಭವ್ಯರಿಗೆ ಅವರಂತೆ ಗುಣಗಳ ಪ್ರಾಪ್ತಿ ಹಾಗೂ ಕರ್ಮಗಳ ನಿರ್ಜರೆ ಹಾಗೂ ಪುಣ್ಯದ ಸಂಪಾದನೆ ಹಾಗೂ ಪರಂಪರೆಯಿಂದ ಅವಶ್ಯವಾಗಿ ಮೋಕ್ಷ ದೊರೆಯುತ್ತದೆ.

# 84. ಸಲ್ಲೇಖನದಿಂದ ಮರಣವನ್ನು ಗೆಲ್ಲಬೇಕು

ಭಗವಾನ ಮಹಾವೀರರ ಮಾರ್ಗವು ಸಮಾಧಿಯಿಂದ ಮರಣ ಹೊಂದುವ ಕಲೆಯನ್ನು ಕಲಿಸುತ್ತದೆ. ಒಂದು ಸಾರಿಯಾದರೂ ಆ ಉತ್ತಮ ಮರಣ ಹೊಂದುವ ಕಲೆಯನ್ನು ಅರ್ಥಾತ್ ಸಲ್ಲೇಖನಾ–ಸಮಾಧಿಮರಣದ ಜ್ಞಾನ ಹೊಂದಿ, ವಿಧಿವತ್ ಸಮಾಧಿಮರಣ ಹೊಂದಿದರೆ "ಉಕ್ಕಟ್ಟೇಣ ದೊ ತಿಣ್ಣಿ, ಭವ ಗಹಣಾಣಿ, ಜಹಣ್ಣೇಣ ಸತ್ತಟ್ಟ ಭವ ಗಹಣಾನಿ"ಉತ್ಕೃಷ್ಟದಿಂದ ಎರಡು–ಮೂರು ಭವಗಳಲ್ಲಿ ಜಘನ್ಯದಿಂದ ಏಳು–ಎಂಟು ಭವಗಳಲ್ಲಿ ನಿಯಮದಿಂದ ಮೋಕ್ಷದ ಭಾಜಕರಾಗುತ್ತಾರೆ. ಸಲ್ಲೇಖನವು ಪ್ರತೀಕಾರ ರಹಿತ ಉಪಸರ್ಗ, ದುಷ್ಕಾಲ, ವೃದ್ಧಾಪ್ಯ ಮತ್ತು ರೋಗದ ಉಪಸ್ಥಿತಿಯಾದಾಗ ಧಾರಣೆ ಮಾಡಲಾಗುತ್ತದೆ.

# 85. ಪರ್ವಗಳಲ್ಲಿ ವ್ರತಗಳ ಮಹಾತ್ಮೆ ಹೇಗೆ?

ಜಗತ್ತಿನಲ್ಲಿ ಮಹಾವ್ರತಿ ಆಗುವ ಮುನ್ನ ಮಾಡಲಾಗುವ ಎಲ್ಲ ವ್ರತ ಹಾಗೂ ಅನುಷ್ಠಾನಗಳಲ್ಲಿ ಮುನಿಪದದ ಸಾಧನೆಯ ಧ್ಯೇಯ ಗರ್ಭಿತವಾಗಿರುತ್ತದೆ. ಯಾಕೆಂದರೆ ಮೋಕ್ಷವು ಮುನಿಯಾಗದೇ ದೊರೆಯುವುದಿಲ್ಲ ಹಾಗೂ ಮುನಿಯಾಗಲು ಏಕಭುಕ್ತಿ (ಒಪ್ಪತ್ತು)ಯ ಸಾಧನೆ ಹಾಗೂ ಇಂದ್ರಿಯ ವಿಷಯಗಳಿಂದ ವಿರಾಮ ತೆಗೆದುಕೊಳ್ಳುವ ಸಾಧನೆಯು ಕೆಳಗಿನ ಅವಸ್ಥೆಗಳಲ್ಲಿ ಈ ಪರ್ವ ವ್ರತಗಳ ಪಾಲನೆಯ ಸಮಯ ಸ್ವತಃ ಆಗುತ್ತಿರುತ್ತದೆ. ಈ ಕಾರಣದಿಂದಾಗಿ ಮುಂದೆ ಮುನಿಯಾದಾಗ ತಪಸ್ಸಿನಲ್ಲಿ ಯಾವ ಆಕುಲತೆ-ವ್ಯಾಕುಲತೆ ಪರಿಣಾಮಗಳು ಆಗುವುದಿಲ್ಲ. ಸಮತಾಭಾವದೊಂದಿಗೆ ಅಂತರಾಯ ಉಪವಾಸ ಮುಂತಾದವುಗಳನ್ನು ಸಹಿಸುವ ಸಹನಶೀಲತೆ ಬರುತ್ತದೆ. ಹೀಗೆಯೇ ವರ್ತಮಾನದಲ್ಲಿ ಸಾಧು, ವೇಶಧಾರಣೆ ಮಾಡಲಾಗದವರು ತಮ್ಮ ಆರಂಭ-ಸಾರಂಭಗಳಲ್ಲಿ ಗಳಿಸಿದ ಪಾಪಗಳನ್ನು ಕಳೆಯಲು ಈ ಪರ್ವ ವ್ರತಗಳು ಬಹಳಷ್ಟು ಕಾರ್ಯಕಾರಿಯಾಗುತ್ತವೆ. ಇವುಗಳ ಪಾಲನೆಯ ಸಮಯದಲ್ಲಿ ಭವ್ಯಾತ್ಮ ಜನರು ಅಸಂಖ್ಯಾತ ಪಟ್ಟು ಕರ್ಮಗಳ ನಿರ್ಜರೆ ಹಾಗೂ ಅತಿಶಯ ಪುಣ್ಯದ ಸಂಪಾದನೆ ಮಾಡುತ್ತಾ ಕರ್ಮಗಳ ಕ್ಷಯೋಪಶಮನವಾಗುವುದರಿಂದ ಮುಂದೆ ಸಂಯಮ ಧಾರಣೆ ಮಾಡಲು ಸಮರ್ಥರಾಗುತ್ತಾರೆ. ಆದ್ದರಿಂದ ನಿಯಮ ವ್ರತ ಮುಂತಾದ ರೂಪಗಳಿಂದ ವ್ರತಗಳ ಪಾಲನೆ ಮಾಡಬೇಕು.

# 86. ಅಷ್ಟ ಕರ್ಮಗಳ ಮರ್ಮವನ್ನು ತಿಳಿಯಿರಿ

ಕರ್ಮಸಿದ್ಧಾಂತದಿಂದ ಅನಭಿಜ್ಞ ಆತ್ಮನು ಚಮತ್ಕಾರದಲ್ಲಿ ನಮಸ್ಕಾರ ಮತ್ತು ವೀತರಾಗದಲ್ಲಿಯೂ ಸಹ ಕರ್ತಾ ಮತ್ತು ಭೋಕ್ತಾಗಳ ಭಾವನೆಗಳಲ್ಲಿ ಸಿಲುಕಿರುತ್ತಾನೆ. ತರಹ-ತರಹದ ಸಾಂಸಾರಿಕ ಬೇಡಿಕೆಗಳು, ಪ್ರಾರ್ಥನೆಗಳು ಹಾಗೂ ಲೋಕ ಸ್ವಾರ್ಥದ ಉಪಾಸನೆಗಳಲ್ಲಿ ತನ್ನ ಬಹುಮೂಲ್ಯ ಜೀವನವನ್ನು ಕಳೆಯುತ್ತಾನೆ. ಆದರೆ ಈ ಆತ್ಮನು ಕರ್ಮ ಸಿದ್ಧಾಂತದ ಸ್ವರೂಪವನ್ನು ತಿಳಿದಾಗ ಸಂಸಾರದಲ್ಲಿ ಅಲೆದಾಡಿಸುವ ಮಿಥ್ಯಾತ್ವರೂಪದ ದಾರಿ ತಪ್ಪಿಸುವ ಮಾರ್ಗವನ್ನು ಬಿಟ್ಟು ಸುಖಮಾರ್ಗವನ್ನು ಹಿಡಿಯುತ್ತಾನೆ ಹಾಗೂ ತನ್ನ ಧಾರ್ಮಿಕ ಅನುಷ್ಠಾನಗಳನ್ನು ಸಮ್ಯಕ್ತ್ವದಿಂದ ಕೂಡಿದ ಸಮೀಚೀನ ರೂಪದಿಂದ ಆಚರಣೆ ಮಾಡುತ್ತಾ ಅಶುಭ ಕರ್ಮಗಳ ನಿರ್ಜರೆ ಮಾಡುವ ಪುರುಷಾರ್ಥ ಮಾಡುತ್ತಾನೆ ಹಾಗೂ ಕರ್ಮಗಳ ಕ್ಷಯ, ಕ್ಷಯೋಪಶಮ, ಉಪಶಮ ಮುಂತಾದವುಗಳಿಂದ ಒಂದು ದಿನ ತನ್ನ ಸುನಿಶ್ಚಿತ ಮುಕ್ತಿಯ ಗುರಿಯನ್ನು ಸಾಕಾರ ಮಾಡಿಕೊಳ್ಳಲು ಸಿದ್ಧನಾಗುತ್ತಾನೆ. ಆದ್ದರಿಂದ ಕರ್ಮ ಸಿದ್ಧಾಂತದ ಅಚಲ ಶ್ರದ್ಧೆ ಮಾಡಿಸಲು ಕರ್ಮಗಳ ಭೇದ-ಪ್ರಭೇದ ಹಾಗೂ ಅವುಗಳ

ಲಕ್ಷಣ ಮುಂತಾದವುಗಳನ್ನು ತಿಳಿಯಲು ಅತ್ಯಂತ ಅವಶ್ಯಕವಾಗಿದೆ. ಪುದ್ಗಲ ಪರಮಾಣು, ರಾಗ-ದ್ವೇಷಗಳ ನಿಮಿತ್ತದಿಂದ ಆತ್ಮನ ಪ್ರದೇಶಗಳೊಂದಿಗೆ ಸೇರಿ ಆತ್ಮನ ಸ್ವಭಾವವನ್ನು ಮರೆ ಮಾಡುವ ಆ ಪುದ್ಗಲ ಪರಮಾಣುಗಳನ್ನು ಆಗಮ ಶಾಸ್ತ್ರಗಳಲ್ಲಿ ಕರ್ಮವೆಂದು ಹೇಳುತ್ತಾರೆ.

# 87. ಗುಣಸ್ಥಾನಗಳು ಪರಿಣಾಮಗಳ ಅಳತೆಯಾಗಿವೆ

ಗುಣಸ್ಥಾನಗಳು ನಮ್ಮ ಪರಿಣಾಮಗಳ ಅಳತೆಗೋಲುಗಳಾಗಿವೆ. ಗುಣಸ್ಥಾನಗಳಿಂದ ಕಷಾಯ ಮತ್ತು ಯೋಗಗಳ ಸ್ಥಿತಿಯನ್ನು ತಿಳಿಯಲಾಗುತ್ತದೆ. ಏಣಿಯ ಮೇಲೆ ಏರುವಲ್ಲಿ ಹಾಗೂ ಗುಣಸ್ಥಾನಗಳ ಮೇಲೆ ಮುಂದುವರೆಯುವಲ್ಲಿ ಸಾಕಷ್ಟು ಅಂತರವಿದೆ. ಏಣಿಯ ಮೇಲೆ ಮೆಟ್ಟಿಲುಗಳ ಆಧಾರದಿಂದ ನೇರವಾಗಿ ಮೇಲೆ-ಮೇಲೆ ಏರಿ ಹೋಗಲಾಗುತ್ತದೆ. ಆದರೆ ಗುಣಸ್ಥಾನಗಳಲ್ಲಿ ಎರಡನೆ ಮತ್ತು ಮೂರನೇ ಗುಣಸ್ಥಾನ ಮಿಥ್ಯಾತ್ವದ ಸಂಸರ್ಗ ಅಥವಾ ಸಮ್ಯಕ್ತ್ವದ ಬಿಡುಗಡೆಯಾಗುವುದರಿಂದ ಕೆಳಗಿನ ಗುಣಸ್ಥಾನಗಳ ಕಡೆಗೆ ಬರಬೇಕಾಗುತ್ತದೆ. ಯಾಕೆಂದರೆ ಯಾರೇ ಭವ್ಯಾತ್ಮರು ಮೊದಲನೇ ಮಿಥ್ಯಾತ್ವ ಗುಣಸ್ಥಾನದಿಂದ ಸಮ್ಯಗ್‌ದೃಷ್ಟಿಯಾಗ ಬಯಸಿದರೆ ಅವರಿಗೆ ಸಮ್ಯಕ್ತ್ವದ ಪ್ರಾಪ್ತಿಯಾದಾಗ ನೇರವಾಗಿ ನಾಲ್ಕನೆಯ ಗುಣಸ್ಥಾನ ಪಡೆಯುತ್ತಾರೆ. ಹೀಗೆಯೇ ಸಮ್ಯಗ್‌ದೃಷ್ಟಿ ಆತ್ಮ ಮುನಿಯಾಗುವಾಗ ನೇರವಾಗಿ ಸಪ್ತಮ ಗುಣಸ್ಥಾನವನ್ನು ಪಡೆಯುತ್ತಾರೆ ಮತ್ತು ಧ್ಯಾನದಿಂದ ಹೊರಬಂದು ಉಪಕರಣ ಮುಂತಾದವುಗಳ ನಿಮಿತ್ತದಿಂದ ಆರನೇ ಗುಣಸ್ಥಾನ ಹೊಂದುತ್ತಾರೆ ಹಾಗೂ ಸಮಿತಿ ಮತ್ತು ಷಟ್ ಆವಶ್ಯಕ ಕ್ರಿಯೆ ಮುಂತಾದವುಗಳ ಸಮಯದಲ್ಲಿ ಏಳನೇ ಗುಣಸ್ಥಾನ ಹೊಂದುತ್ತಾರೆ. ಹೀಗೆ ಆರನೇ ಹಾಗೂ ಏಳನೇ ಗುಣಸ್ಥಾನ ರೂಪದ ಜೋಕಾಲಿಯಲ್ಲಿ ಮುನಿ ಜನರು ಪ್ರತಿದಿನ ಅನೇಕ ಸಾರಿ ಜೋಕಾಲಿಯಾಡುತ್ತಾರೆ. ಹೀಗೆಯೇ ಉಪಶಮ ಶ್ರೇಣಿಯಲ್ಲಿ 8,9,10 ಹಾಗೂ 11ನೇ ಗುಣಸ್ಥಾನಗಳ ಮುನಿಗಳು ನಿಯಮದಿಂದ ಕೆಳಗೆ ಕಡಿಮೆ ಕಡಿಮೆ 7ನೇ ಅಥವಾ 6ನೇ ಗುಣಸ್ಥಾನಗಳವರೆಗೆ ಬರುತ್ತಾರೆ. ಹಾಗೂ ಈ ಮುನಿಗಳು ಇದೇ ಜೀವನದಲ್ಲಿ ಒಂದು ಸಾರಿ ಮತ್ತೆ ಉಪಶಮ ಶ್ರೇಣಿಯನ್ನು ಏರಬಲ್ಲರು. ಆದರೆ ಮುನಿಗಳು ಕ್ಷಪಕ ಶ್ರೇಣಿಯನ್ನು ಏರಿದಾಗ ಒಂದು ಅಂತರ್‌ಮುಹೂರ್ತ ದೊಳಗಾಗಿಯೇ ಘಾತಿಯ ಕರ್ಮಗಳನ್ನು ನಾಶ ಮಾಡಿ ಕೇವಲಿಯಾಗಿ 13ನೇ ಗುಣಸ್ಥಾನ ತಲುಪುತ್ತಾರೆ ಹಾಗೂ ಆಯು ಸಮಾಪ್ತವಾಗುವ ಮುನ್ನ ನಿರೋಧ ಮುಂತಾದವುಗಳ ಮೂಲಕ 14ನೇ ಗುಣಸ್ಥಾನ ಪಡೆದು ಅಂತರ್‌ಮುಹೂರ್ತ ದೊಳಗೇನೇ ಮೋಕ್ಷಗತಿಯನ್ನು ಪಡೆದುಕೊಳ್ಳುತ್ತಾರೆ. ಹೀಗೆ ಗುಣಸ್ಥಾನಗಳ ಲಕ್ಷಣಗಳನ್ನು ಹಾಗೂ ಅವುಗಳ ಆರೋಹಣ ಹಾಗೂ ಅವರೋಹಣ ಕ್ರಮ ಮತ್ತು ಅವುಗಳ ಮಹತ್ವವನ್ನು ಜೈನಾಗಮಗಳಿಂದ ಅವಶ್ಯವಾಗಿ ತಿಳಿಯಬೇಕು.

# 88. ಅಧ್ಯಾತ್ಮದಲ್ಲಿ ಸ್ವರೂಪಾಚರಣೆ

ಅಧ್ಯಾತ್ಮದ ಆಳವನ್ನು ತಲುಪದಿರುವ ಕಾರಣ ಇಂದಿನ ಕೆಲವು ದುರ್ಬಲ ಉಪಾದಾನವುಳ್ಳ ಜನರಿಗೆ ಉಪಯೋಗ ಹಾಗೂ ಸ್ವರೂಪಾಚಾರಣೆಯ ವಿಷಯದಲ್ಲಿ ಆಗಮದ ಪರಿಜ್ಞಾನ ಇರದೇ ಇರುವುದರಿಂದ ಭ್ರಾಂತಿಗಳ ಕಾನನದಲ್ಲಿ ಅಲೆದಾಡುವ ಪ್ರಸಂಗಗಳು ಬರುತ್ತಲಿವೆ. ಸ್ವರೂಪಾಚರಣೆಯೊಂದಿಗೆ ಚಾರಿತ್ರದ ಸಾಮಂಜಸ್ಯತೆ, ಶುದ್ಧಾತ್ಮಾನುಭೂತಿ, ನಿರ್ವಿಕಲ್ಪ ಸಮಾಧಿ ಸ್ವಾತ್ಮಾನುಭೂತಿ ಮುಂತಾದವುಗಳ ಯೋಗ್ಯತೆ ಇರುವುದು ಆವಶ್ಯಕವಾಗಿದೆ. ಆಗ ಶುಕ್ಲಧ್ಯಾನರೂಪದ ರಥದ ಕೀಲನ್ನು ಧಾರಣೆ ಮಾಡಬಹುದು. ಆಗ ಭವ್ಯರು ಆಧ್ಯಾತ್ಮದ ಎತ್ತರವನ್ನು ತ್ಯಾಗಿ ಪುರುಷಾರ್ಥಿ ನಿರ್ಗ್ರಂಥರಾಗಿ ಸ್ಪರ್ಶಿಸಬಲ್ಲರು ಇಲ್ಲವಾದಲ್ಲಿ ಇಲ್ಲ.

# 89. ಉಪಯೋಗವನ್ನು ಪಡೆಯುವ ಕ್ರಮ

ಅಶುದ್ಧೋಪಯೋಗವನ್ನು ಬುದ್ಧಿಪೂರ್ವಕವಾಗಿ ತ್ಯಜಿಸಿ ಶುಭೋಪಯೋಗದಲ್ಲಿ ಪ್ರವೃತ್ತಿಯನ್ನು ಮಾಡಲಾಗುತ್ತದೆ. ಅರ್ಥಾತ್ ಪಂಚ ಪಾಪ ಮುಂತಾದವುಗಳನ್ನು ಬಿಟ್ಟು ವ್ರತ ಮುಂತಾದ ರೂಪಗಳ ಆಚರಣೆ ಮಾಡಲಾಗುತ್ತದೆ. ಆದರೆ ಶುಭೋಪಯೋಗವನ್ನು ಬಿಡಲಾಗುವುದಿಲ್ಲ. ಬದಲಾಗಿ ಅಪ್ರಮತ್ತ ಅವಸ್ಥೆಯಲ್ಲಿ ವೀತರಾಗ ಚಾರಿತ್ರರೂಪ ಶುದ್ಧೋಪಯೋಗದಲ್ಲಿ ಈ ಆತ್ಮನು ಲೀನನಾದಾಗ ಶುಭೋಪಯೋಗ ಸ್ವತಃ ಬಿಟ್ಟುಹೋಗುತ್ತದೆ. ಶುದ್ಧೋಪಯೋಗವು ಅತಿ ಹೆಚ್ಚೆಂದರೆ ಅಂತರ್‌ಮುಹೂರ್ತ ಮಾತ್ರ ಇರಬಲ್ಲದು ಒಂದು ವೇಳೆ ಆತ್ಮನು ಕ್ಷಪಕಶ್ರೇಣಿಯಲ್ಲೇರಿದಾಗ ಮಾತ್ರ ಕೇವಲಜ್ಞಾನಿ ಆಗಬಲ್ಲನು ಇಲ್ಲವಾದಲ್ಲಿ ಪ್ರಮತ್ತ ದೆಶೆಯಲ್ಲಿ ಬಂದಾಗ ಶುಭೋಪಯೋಗದಲ್ಲಿಯೇ ಪ್ರವೃತ್ತಿ ಮಾಡಬೇಕಾಗುತ್ತದೆ.

# 90. ಅನೇಕಾಂತದೃಷ್ಟಿ – ಮಹತ್ವಪೂರ್ಣವಾಗಿದೆ

ಈ ಹುಂಡಾವಸರ್ಪಿಣಿ ಕಾಲದಲ್ಲಿ 363 ಮತಗಳು ಉದ್ಭವವಾಗುತ್ತಿದ್ದು ಅವುಗಳಲ್ಲಿ ಅನೇಕಾಂತವನ್ನು ತಿಳಿಯಬಲ್ಲ ಕೆಲವು ಭವ್ಯಾತ್ಮರೇ ಧರ್ಮಮಾರ್ಗದಲ್ಲಿ ಸುರಕ್ಷಿತರಾಗಿರುತ್ತಾರೆ. ಅವರು ಬಹಳ ಪುಣ್ಯಾತ್ಮರಾಗಿದ್ದು ಅನೇಕಾಂತ ಹಾಗೂ ಸ್ಯಾದ್ವಾದದ ಹೃದಯವನ್ನು ತಿಳಿಯಬಲ್ಲರು. ಪ್ರತಿಯೊಂದು ವಸ್ತುವು ಅನೇಕ ಧರ್ಮಾತ್ಮಕವಾಗಿದ್ದು ಅದರ ಯಾವುದೇ ಮಗ್ಗುಲನ್ನು ತಿರಸ್ಕರಿಸಲಾಗದು. ಅನೇಕಾಂತ ದೃಷ್ಟಿಯಲ್ಲಿ ಅಪೇಕ್ಷಾದೃಷ್ಟಿಯಿಂದ ಯಾವುದೇ ಧರ್ಮವನ್ನು ಮುಖ್ಯ

ಅಥವಾ ಗೌಣ ಮಾಡುವುದು ಅದರ ಪ್ರಾಮುಖ್ಯತೆಯ ಉದ್ದೇಶದ ಮೇಲಿರುತ್ತದೆ. ವಸ್ತುವಿನ ಪೂರ್ಣ ಸ್ವರೂಪವನ್ನು ತಿಳಿಯಲು ಸಪ್ತಭಂಗಿ ಮಾಧ್ಯಮವು ಸಹ ಬಹಳ ಕಾರ್ಯಕಾರೀಯಾಗಿರುತ್ತದೆ. ಹೀಗೆಯೇ ನಯ ಅವಸ್ಥೆಯಲ್ಲಿಯೂ ವ್ಯವಹಾರ–ನಿಶ್ಚಯಗಳದ್ದು ಸಹ ತಮ್ಮದೇ ಆದ ಒಂದು ಮಹತ್ವಪೂರ್ಣ ಸ್ಥಾನವಿದೆ. ದ್ರವ್ಯ ಮತ್ತು ಪರ್ಯಾಯ ದೃಷ್ಟಿಯೂ ಸಹ ದ್ರವ್ಯದ ಪೂರ್ಣ ಸ್ವರೂಪದ ಜ್ಞಾನವನ್ನು ಮಾಡಿಸುತ್ತದೆ ಹಾಗೂ ಪುಣ್ಯ ಜೊತೆಗೆ ಇರುವವರೆಗೆ ಅದು ಸಹ ಸಾಧನವಾಗಿದ್ದ ಸಾಧ್ಯದ ಕ್ಷೇತ್ರದಲ್ಲಿ ಯೋಚಿಸುವಷ್ಟು ಅನಿವಾರ್ಯವಾಗಿರುತ್ತದೆ. ಆದ್ದರಿಂದ ಆಗಮಗಳಲ್ಲಿ ಭವ್ಯರ ಕಲ್ಯಾಣಕ್ಕಾಗಿ ಅನೇಕಾಂತ ದೃಷ್ಟಿ ರೂಪದಿಂದ ಬಹುಮೂಲ್ಯ ಮಾತುಗಳನ್ನು ವರ್ಣಿಸಿದ್ದಾರೆ.

# 91. ಜೀವನದಲ್ಲಿ ನೈತಿಕತೆ ಮತ್ತು ಶಿಷ್ಟಾಚಾರ ಅವಶ್ಯವಾಗಿದೆ

ಶಿಷ್ಟ ಅರ್ಥಾತ್ ಒಳ್ಳೆಯ ಶ್ರೇಷ್ಠ ಜನರ ನ್ಯಾಯ–ನೀತಿಗಳ ನಡುವಳಿಕೆಯೇ ಅವರ ನೈತಿಕತೆ ಮತ್ತು ಶಿಷ್ಟಾಚಾರವೆನಿಸುತ್ತದೆ. ಅದಕ್ಕಾಗಿ ಎಲ್ಲಕ್ಕಿಂತ ಮೊದಲು ನಮ್ಮ ಪೂಜನೀಯ ಜಿನಾಲಯ, ಜಿನೇಂದ್ರದೇವ, ಆಗಮ (ಶಾಸ್ತ್ರ) ಹಾಗೂ ಸಮೀಚೀನ ಗುರುಗಳ ಬಗ್ಗೆ ಅಥವಾ ಸಮಕ್ಷ ವಿನೀತರಾಗಿ ಹೇಗೆ ನಡೆದುಕೊಳ್ಳಬೇಕು? ಹೇಗೆ ಏನೇನು ಹೇಳಬೇಕು? ಹಾಗೂ ಏನೇನು ಬಿಡಬೇಕು ಅರ್ಥಾತ್ ಧರ್ಮ ಕ್ಷೇತ್ರದಲ್ಲಿ ಯಾರಿಂದ ದೂರವಿರಬೇಕು? ಯಾರಿಂದ ಅವರ ಅರ್ಥಾತ್ ಧರ್ಮದ ಹಾನಿಯಾಗಬಾರದು. ಹೀಗೆಯೇ ಧರ್ಮ ಸಭೆಯಲ್ಲಿ ನಮ್ಮ ನಡತೆ ಹೇಗಿರಬೇಕು? ಅಲ್ಲಿಯ ವಾತಾವರಣವನ್ನು ನಾವು ಹೇಗೆ ವ್ಯವಸ್ಥಿತವಾಗಿ ಸುಂದರವಾಗಿ ಇಡಬೇಕು? ಹಾಗೂ ಸಾಮಾನ್ಯರೂಪದಿಂದ ಜಗತ್ತಿನಲ್ಲಿ ಅಥವಾ ಸಾಮಾಜಿಕ ನೆಲೆಯಲ್ಲಿ ನಮ್ಮ ವ್ಯವಹಾರ ಹೇಗಿರಬೇಕು? ಹಾಗೂ ಸಮಾಜದಲ್ಲಿ ಹರಡಿರುವ ಕುನೀತಿಗಳ ಉನ್ಮೂಲನೆಯನ್ನು ಹೇಗೆ ಮಾಡಬೇಕು ಅಥವಾ ಜ್ಞಾನಿಗಳ ಕರ್ತವ್ಯ ಅಥವಾ ಉಪದೇಶದಲ್ಲಿ ಶೋಧನೆಯನ್ನು ಮಾಡಬಹುದು. ನಮ್ಮ ಭಾಗ್ಯೋದಯದಿಂದಲೇ ನಮಗೆ ಜೈನಾಗಮ ಮತ್ತು ನಿರ್ಗ್ರಂಥ ಗುರುಗಳ ಸಾನಿಧ್ಯ ದೊರೆತಿದೆ ಎನ್ನುವ ಮಾತುಗಳನ್ನು ಗಮನದಲ್ಲಿಟ್ಟುಕೊಂಡು ನಾವು ಇಷ್ಟೊಂದು ಭಾಗ್ಯಶಾಲಿ ಗಳಾಗಿರುವಾಗ ನಮ್ಮ ಜೀವನದ ಪರಿಮಾರ್ಜನೆಗಾಗಿ ಗುರುಕುಲಗಳ ಪದ್ಧತಿಯಿಂದ ಅಥವಾ ನಿರ್ಗ್ರಂಥ ಗುರುಗಳ ಸತ್ಸಂಗದಲ್ಲಿ ನೈತಿಕತೆ ಮತ್ತು ಶಿಷ್ಟಾಚಾರದ ಪಾಲನೆ ಮಾಡಿ ನಮ್ಮ ಜೀವನವನ್ನು ಸುವ್ಯವಸ್ಥಿತ ರೀತಿಯಲ್ಲಿ ಹೇಗೆ ರೂಪಿಸಿಕೊಳ್ಳಬೇಕು ಎನ್ನುವುದನ್ನು ಚಿಂತಿಸಬೇಕು.

# 92. ಒಂದು ಜೀವದ ರಕ್ಷಣೆ – ಮೇರು ಪರ್ವತಷ್ಟು ಚಿನ್ನ ದಾನಕ್ಕೆ ಸಮಾನವಾಗಿದೆ

ಪುಣ್ಯವಂತನಾದ ಅಹಿಂಸಕನಿಗೆ ದೇವತೆಗಳು ಸಹ ನಮಿಸುತ್ತಾರೆ. ಜೀವನದ ನಿರ್ಮಾಣ ಸಂಗತಿಗೆ ಅನುಗುಣವಾಗಿರುತ್ತದೆ. ಎಲ್ಲಕ್ಕಿಂತ ದೊಡ್ಡ ಧರ್ಮವೆಂದರೆ ಜೀವ ರಕ್ಷಣೆಯಾಗಿದೆ. ಒಂದು ಜೀವದ ರಕ್ಷಣೆಯನ್ನು ಮಾಡಿದರೂ ಸಹ ನಮ್ಮ ರಕ್ಷಣೆ ಮೇಲಿಂದ ಮೇಲೆ ಆಗುತ್ತದೆ. ಒಂದು ಜೀವಕ್ಕೆ ಜೀವ ದಾನ ನೀಡುವುದು ಮೇರು ಪರ್ವತದಷ್ಟು ಚಿನ್ನವನ್ನು ದಾನ ಮಾಡಿದ್ದಕ್ಕೆ ಸಮಾನವಾಗಿದೆ ಎಂದು ಮಹಾಭಾರತದಲ್ಲಿಯೂ ಹೇಳಲಾಗಿದೆ.

ಇಂದು ಹಿಂಸೆ ಹೆಚ್ಚಾಗಿರುವುದರಿಂದ ಪುಣ್ಯದಲ್ಲಿ ಕೊರತೆ ಉಂಟಾಗಿದೆ. ಯಾಕೆಂದರೆ ಅಹಿಂಸೆಯಲ್ಲಿಯೇ ಧರ್ಮವೆಂದು ಹೇಳಿರುವಾಗ ಯಾವುದೇ ಜೀವಕ್ಕೆ ಹಿಂಸೆ ಮಾಡಿ ಅಥವಾ ಬಲಿಯಲ್ಲಿ ಧರ್ಮ ಹೇಗೆ ಆಗಬಲ್ಲದು? ಈಗ ಅಧ್ಯಾತ್ಮದ ಕಡೆಗೆ ಸಾಗುವಲ್ಲಿಯೇ ಧರ್ಮದಲ್ಲಿ ಬುದ್ಧಿಯುಂಟಾಗಿ ಪಾಪ ಕಡಿಮೆಯಾಗುತ್ತದೆ. ಇಂದು ಅಹಿಂಸೆ, ತಪ ಹಾಗೂ ಸಂಯಮಗಳಲ್ಲಿ ತೊಡಗಿರುವವರನ್ನು ಸ್ವರ್ಗದ ದೇವತೆಗಳು ರಕ್ಷಣೆ ಮಾಡಿ ನಮಿಸುತ್ತಾರೆ.

ನಾವು ಯಾರ ಸಂಘದಲ್ಲಿ ಇರುತ್ತೇವೆಯೋ ನಮ್ಮ ಭಾವವು ಸಹ ಹಾಗೆಯೇ ಇರುತ್ತದೆ. ಯಾಕೆಂದರೆ ಭಾವನೆಯು ಭವನಾಶಿನಿಯಾಗಿರುವಂತೆ ಭವಬಂಧಿನಿಯೂ ಆಗಿದೆ. ಪೋಲಿಸನನ್ನು ನೋಡಿದಾಗ ಕುಡುಕನ ನಶೆ ಇಳಿಯುವಂತೆ ಗುರುವಿನ ಬಳಿ ಬಂದು ವ್ಯಸನಗಳಿಂದ ಸಂಸ್ಕಾರಿಕ ವ್ಯಕ್ತಿಯ ಭಾವವು ಸಹ ಬದಲಾಗುತ್ತದೆ. ಹೀಗೆ ನಾವು ಸಹ ಸತ್ಸಂಗತಿಯಲ್ಲಿರಬೇಕು, ಪರೋಪಕಾರವನ್ನು ಸಹ ಅವಶ್ಯವಾಗಿ ಮಾಡಬೇಕು.

# 93. ನಿರ್ಮಲ ಭಾವನೆಗಳು ಭಕ್ತಿಯಲ್ಲಿ ಅತಿಶಯಕಾರಿಗಳಾಗುತ್ತವೆ

ತೀರ್ಥಸ್ಥಾನಗಳಿಗೆ ಹೋಗಲು ನಮ್ಮ ಭಾವನೆಗಳು ನಿರ್ಮಲವಾಗಿರಬೇಕು. ನಮ್ಮ ಈ ನಿರ್ಮಲ ಭಾವನೆಗಳು ಅತಿಶಯಕಾರಿಯಾಗಿಯೂ ಆಗಬಲ್ಲವು. ತೀರ್ಥಸ್ಥಾನಗಳಿಗೆ ಹೋಗುವ ನಾವು ನಮ್ಮ ಭಕ್ತಿ ಭಾವಗಳನ್ನು ನಿರ್ಮಲ ಮತ್ತು ಪವಿತ್ರವಾಗಿ ಹೊಂದಿರಬೇಕು. ಆದರೆ ಇಂದಿನ ದಿನಗಳಲ್ಲಿ ಕೆಲವರು ತೀರ್ಥ ಸ್ಥಾನಗಳನ್ನು ಪಿಕನಿಕ್ ಕೇಂದ್ರಗಳನ್ನಾಗಿ ಮಾಡಿ ಬಿಟ್ಟಿದ್ದಾರೆ. ತೀರ್ಥಯಾತ್ರೆಗಳನ್ನು

ಮನೋರಂಜಕದ ರೂಪದಲ್ಲಿ ಮಾಡುತ್ತಾರೆ. ತೀರ್ಥಸ್ಥಾನಗಳಿಗೆ ವಂದನೆ ಮಾಡಲು ಹೋದಾಗ ನಾವು ಪರಿಗ್ರಹ ಹಾಗೂ ಮೋಹ ತ್ಯಾಗದೊಂದಿಗೆ ಪೂಜೆ ಅನುಷ್ಠಾನಗಳಲ್ಲಿ ಮನಸ್ಸನ್ನು ತೊಡಗಿಸಿ ಜಪ ಭಜನೆ ಕೀರ್ತನೆ ಮುಂತಾದವುಗಳಲ್ಲಿ ತೊಡಗಿಸಿ ನಮ್ಮ ಸಮಯದ ಸದುಪಯೋಗ ಮಾಡಬೇಕು.

# 94. ಅಹಿಂಸೆಯಿಂದ ಪ್ರಕೃತಿಯ ಭೂಕಂಪ ಮುಂತಾದ ಪ್ರಕೋಪಗಳು ನಿಲ್ಲುತ್ತವೆ

ಜಗತ್ತಿನ ಪ್ರತಿಯೊಂದು ವಸ್ತುವು ತಮ್ಮ ತಮ್ಮ ಸ್ವಭಾವಕ್ಕೆ ಅನುಗುಣವಾಗಿಯೇ ಕಾರ್ಯ ಮಾಡುತ್ತದೆ. ಇಲ್ಲಿ ವಿಕೃತಿ ಬಂದಾಗ ಅಲ್ಲಿ ಸಂಸ್ಕೃತಿಯು ಹಾಳಾಗುತ್ತದೆ. ಇಂದು ಪ್ರಕೃತಿಯ ಪ್ರಕೋಪ ಸಾಕಷ್ಟು ನೋಡಲು ಹಾಗೂ ಕೇಳಲು ಬರುತ್ತಿದೆ. ಪ್ರಕೃತಿಯ ಸಂತುಲನ ಹಾಳಾಗುತ್ತಿದ್ದು ಅದರಿಂದಾಗಿ ಅತಿವೃಷ್ಟಿ, ಅನಾವೃಷ್ಟಿ ಹಾಗೂ ಭೂಕಂಪಗಳು ಸಹ ಉಂಟಾಗುತ್ತಲಿವೆ. ಇವೆಲ್ಲವುಗಳಿಗೆ ಕಾರಣ ಹೆಚ್ಚುತ್ತಿರುವ ಹಿಂಸೆ, ಹಿಂಸೆಯ ತಾಂಡವ ಕಡಿಮೆ ಆಗದೇ ಪ್ರಕೃತಿಯಲ್ಲಿ ಈ ಪ್ರಕಾರದ ವರ್ಗಣಾಗಳು ಬರುತ್ತಿರುತ್ತವೆ. ಭೂಕಂಪಗಳಿಂದ ಇಂದಿಗೂ ನಮಗೆ ಪ್ರಳಯದಿಂದಲೂ ಸಹಾ ನಾವು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎನ್ನುವ ಸಂಕೇತ ದೊರೆತಿದೆ.

ಪಶುಗಳ ಆಕ್ರಂದನದಿಂದ ಪ್ರಕೃತಿಯು ಕೋಪಗೊಂಡಿದೆ. ಪಶುಗಳಿಗೆ ಸರಿಯಾಗಿ ಮೇವು ದೊರೆಯುತ್ತಿಲ್ಲ. ಪರ್ಯಾವರಣದ ವಿನಾಶವಾಗುತ್ತಲಿದೆ. ಪಶುಗಳನ್ನು ಕಸಾಯಿಖಾನೆಗಳಿಗೆ ಕಳಿಸಲಾಗುತ್ತಿದೆ. ಅಲ್ಲಿ ಅವುಗಳ ಬಲಿ–ಹಿಂಸೆ ಆಗುತ್ತಲಿದೆ. ಪರ್ಯಾವರಣ ಪ್ರದೂಷಣದಿಂದ ಅನೇಕ ರೋಗಗಳು ಹರಡುತ್ತಲಿವೆ. ಮನುಷ್ಯರಲ್ಲಿ ಪ್ರತಿರೋಧಕ ಕ್ಷಮತೆ ಕುಸಿಯುತ್ತಲಿದೆ.

ಆದ್ದರಿಂದ ಹೆಚ್ಚುತ್ತಿರುವ ಹಿಂಸೆಯನ್ನು ತಡೆಯಬೇಕು. ನಮ್ಮ ದೇಶ ಋಷಿ–ಮುನಿಗಳ ದೇಶವಾಗಿರುವುದರಿಂದ ಎಲ್ಲರೂ ತಮ್ಮ ಭಾವನೆಗಳನ್ನು ನಿರ್ಮಲಗೊಳಿಸಬೇಕು.

# 95. ಮಂತ್ರಗಳಲ್ಲಿ ಭಾವನೆಗಳ ಮಹತ್ವ ದೊಡ್ಡದಾಗಿದೆ

ಜೀವನದಲ್ಲಿ ಮಂತ್ರಗಳ ಮಹತ್ವ ದೊಡ್ಡದಾಗಿದೆ. ಜೈನಧರ್ಮದಲ್ಲಿ ಣಮೋಕಾರ ಮಂತ್ರದ ಮಹತ್ವ ಹೆಚ್ಚಿದೆ. ಈ ಮಂತ್ರವು ಉತ್ಕೃಷ್ಟ ಫಲಗಳನ್ನು ನೀಡುವಂತಹದಾಗಿದೆ. ನಾವು ಧ್ಯಾನ ಪೂರ್ವಕವಾಗಿ ಈ ಮಂತ್ರದ ಜಪ ಮಾಡಿದಾಗ ನಮ್ಮ ಆಂತರಿಕ ಶಕ್ತಿಗಳು ಜಾಗೃತವಾಗುತ್ತವೆ. ಈ ಶಕ್ತಿಗಳು ಜೀವನದಲ್ಲಿ ಹೊಸ ಸ್ಫೂರ್ತಿಯನ್ನುಂಟು ಮಾಡುತ್ತವೆ. ಆತ್ಮನನ್ನು ಪವಿತ್ರಗೊಳಿಸುತ್ತವೆ. ಇದರಿಂದ ಆಗದೇ ಇರುವ ಉತ್ತಮ ಕಾರ್ಯಗಳು ಆಗುತ್ತವೆ ಹಾಗೂ ವಿಘ್ನಗಳು ದೂರವಾಗುತ್ತವೆ. ವಿಷವೂ ಸಹ ವಿಷ ರಹಿತವಾಗುತ್ತದೆ. ಜಪ ಮತ್ತು ಧ್ಯಾನ ಸರಿಯಾಗದಿದ್ದರೆ ಇದು ಕೇವಲ ಶರೀರಕ್ಕೆ ಮಾತ್ರ ಸೀಮಿತವಾಗಿರುತ್ತವೆ. ರಾವಣನು ಜಪ ಮಾಡಿದಂತೆ ಅಂದರೆ ಆತ್ಮ ಜಪದಲ್ಲಿ ರಾಮನನ್ನು ಕೊಲ್ಲುವ ಛಲವಿದ್ದಿತು. ಆದ್ದರಿಂದ ಆತನ ಸೋಲಾಯಿತು ಹಾಗೂ ಸೀತೆಯು ಭಾವಸಹಿತ ಜಪವನ್ನು ಮಾಡಿದ್ದರಿಂದ ಅಗ್ನಿಕುಂಡವು ಸಹ ಜಲಕುಂಡವಾಯಿತು ಹಾಗೂ ರಾಮನ ಜಯವಾಯಿತು. ಇದೇ ಪ್ರಕಾರ ಸೋಮಾ ಸತಿಯ ಣಮೋಕಾರ ಮಂತ್ರದ ಜಪದ ಪ್ರಭಾವದಿಂದ ನಾಗವು ಹಾರವಾಗಿ ಬದಲಾಗಿದ್ದಿತು ಹಾಗೂ ಸೇಠ ಸುದರ್ಶನನ ನೇಣವು ಸಿಂಹಾಸನದಲ್ಲಿ ಬದಲಾಗಿದ್ದಿತು. ಹೀಗೆ ಮಂತ್ರವನ್ನು ಪೂರ್ಣ ಮನೋಭಾವ ಹಾಗೂ ನಿಸ್ವಾರ್ಥ ಭಾವದಿಂದ ಮೆಲ್ಲ–ಮೆಲ್ಲನೆ ಹಾಗೂ ಶುದ್ಧ ರೂಪದಲ್ಲಿ ಅಕ್ಷರ, ವ್ಯಂಜನ ಹಾಗೂ ಮಾತ್ರೆಗಳ ಶುದ್ಧತೆಯನ್ನು ಗಮನದಲ್ಲಿಟ್ಟು ಓದಬೇಕು.

ನಾವು ಓದುವ ಪ್ರಭುವಿನ ಮಂತ್ರದ ಸ್ವರೂಪವು ನಮ್ಮ ಗಮನದಲ್ಲಿ ಬರಬೇಕು ತನು, ಮನ ಹಾಗೂ ಸ್ಥಾನದ ಶುದ್ಧಿಯಿಂದ ಅಧಿಕ ಪರಿಣಾಮ ದೊರೆಯುತ್ತದೆ ಹಾಗೂ ಸಿದ್ಧಿಗಳು ದೊರೆಯುತ್ತವೆ. ಅವುಗಳ ಮಾಧ್ಯಮದಿಂದ ನಾವು ವರ್ತಮಾನವನ್ನು ಮಂಗಲಮಯವನ್ನಾಗಿ ಮಾಡುತ್ತೇವೆ. ನಮಗೆ ದೂರದಲ್ಲಿರುವ ವಸ್ತುಗಳ ಜ್ಞಾನವೂ ಸಹ ಆಗಿ ಬಿಡುತ್ತದೆ.

ಮಂತ್ರಗಳ ಶಕ್ತಿಯು ನಮ್ಮನ್ನು ಸರಾಗತೆಯಿಂದ ವೀತರಾಗತೆಯ ಕಡೆಗೆ ಒಯ್ಯುತ್ತದೆ. ಸರಾಗತೆಯು ಸಂಸಾರದಲ್ಲಿ ಅಲೆದಾಡಿಸುತ್ತದೆ ಹಾಗೂ ವೀತರಾಗತೆಯು ಮೋಕ್ಷಮಾರ್ಗದೆಡೆಗೆ ಕರೆದೊಯ್ಯುತ್ತದೆ. ಆದ್ದರಿಂದ ಮಂತ್ರ ಜಾಪ್ಯದಲ್ಲಿ ಭಾವವನ್ನು ತೊಡಗಿಸುವುದು ಅವಶ್ಯವಾಗಿದೆ.

# 96. ಆತ್ಮನ ಗುಣಗಳೇ ಆತ್ಮನ ಅಲಂಕಾರವಾಗಿವೆ

ಆಹಾರ ದಾನ, ಔಷಧ ದಾನ, ಉಪಕರಣ ದಾನ ಹಾಗೂ ವಸತಿದಾನ ಎಂಬ ನಾಲ್ಕು ಪ್ರಕಾರದ ದಾನಗಳಿದ್ದು, ಓರ್ವ ರಾಣಿಯು ತನ್ನ ಪೂರ್ವಭವದಲ್ಲಿ ಓರ್ವ ಮುನಿರಾಜರಿಗೆ ಆರೋಗ್ಯ ಹದಗೆಟ್ಟಾಗ ಇನ್ನೊಬ್ಬರ ಮೂಲಕ ಆಹಾರ ಚೌಕದಲ್ಲಿ ಆಹಾರದ ಸಮಯದಲ್ಲಿ ಔಷಧಿ ನೀಡಿದ್ದರಿಂದ ಮುನಿಮಹಾರಾಜರ ಆರೋಗ್ಯ ಉತ್ತಮವಾಯಿತು. ಆ ಔಷಧ ದಾನದ ಕಾರಣ ತನ್ನ ವೃಷಭಸೇನಾ ಹೆಸರಿನ ಮರುಭವದಲ್ಲಿ ಅವಳು ಸ್ಪರ್ಶಿಸಿದ ನೀರಿನಿಂದ ಜನರ ಪ್ರತಿಯೊಂದು ವಿಧದ ರೋಗಗಳು ದೂರವಾಗ ತೊಡಗಿದವು. ಆದ್ದರಿಂದ ಸತ್ಪಾತ್ರ ವ್ಯಕ್ತಿಗಳಿಗೆ – ರೋಗ ಪೀಡಿತರಿಗೆ ಔಷಧಿ ದಾನವನ್ನು ಅವಶ್ಯವಾಗಿ ನೀಡಬೇಕು.

ದಿಗಂಬರ ಸಾಧುವು ಹಾಗೂ ಭಗವಂತನ ಗುಣಗಳನ್ನು ನೋಡಿದಾಗ ಅವರು ಅಲಂಕಾರ ರಹಿತರಾಗಿದ್ದರೂ ಎಲ್ಲರಿಗಿಂತ ಸುಂದರರಾಗಿ ಕಾಣುತ್ತಾರೆ. ಅವರ ಬಳಿ ಯಾವ ಪ್ರಕಾರದ ಪರಿಗ್ರಹಗಳಿಲ್ಲ ಹಾಗೂ ಯಾವುದೇ ಪ್ರಕಾರದ ಆಭರಣಗಳನ್ನು ಅವರು ಧರಿಸಿಲ್ಲ ಆದರೂ ಸಹ ಅವರಲ್ಲಿರುವ ಗುಣಗಳ ಕಾರಣ ಸುಂದರ ಹಾಗೂ ಅಲಂಕೃತರಂತೆ ಕಾಣುತ್ತಾರೆ. ಯಾಕೆಂದರೆ ಅವರ ಬಳಿ – ಆತ್ಮನಲ್ಲಿ ಗುಣರೂಪದ ಅಲಂಕಾರವಿದೆ.

ಹೀಗೆ ನಾವು ಸಹ ನಮ್ಮ ಆತ್ಮನನ್ನು ಗುಣರೂಪದ ಅಲಂಕಾರದಿಂದ ಅಲಂಕೃತಗೊಳಿಸಬೇಕು.

# 97. ಏಕಾಗ್ರತೆಗೆ ಧ್ಯಾನ ಅವಶ್ಯವಾಗಿದೆ

'ಮನಸ್ಸೇ ವರದಾನವಾಗಿದೆ ಮನಸ್ಸೇ ಅಭಿಶಾಪವಾಗಿದೆ.'ನಾವು ಒಳ್ಳೆಯ ಕಾರ್ಯ ಮಾಡಿದರೆ ಒಳ್ಳೆಯ ಕಾರ್ಯ ಹಾಗೂ ಭಾವ ವರದಾನವಾಗಿದೆ. ಇದಕ್ಕೆ ವಿರುದ್ಧವಾಗಿ ಕೆಟ್ಟ ಕಾರ್ಯ ಹಾಗೂ ಕೆಟ್ಟ ಭಾವ ಅಭಿಶಾಪವಾಗಿದೆ. ಮನಸ್ಸು ಚಂಚಲವಾಗಿದೆ. ಮನಸ್ಸನ್ನು ಮಂಗನಿಗೆ ಸಮಾನವೆಂದಿದ್ದಾರೆ. ಮಂಗವು ಚಂಚಲತೆಯಿಂದ ಹಾರಾಡುವಂತೆ ಮನಸ್ಸು ಸಹ ಹಾರಾಡುತ್ತದೆ. ಈ ಮನಸ್ಸಿನ ರೂಪದ ಮಂಗವನ್ನು ಸಮ್ಯಗ್‌ಜ್ಞಾನ ರೂಪದ ವೃಕ್ಷಕ್ಕೆ ಬಂಧಿಸಿದರೆ ಈ ಮನಸ್ಸು ಉತ್ತಮ ಸಮ್ಯಗ್‌ದೃಷ್ಟಿಯಾಗುತ್ತದೆ. ಬೇರೆಯದರ ಚಿಂತನೆಗಾಗಿಯೂ ಸಹ ಮನದ ಏಕಾಗ್ರತೆಯನ್ನು ಮಾಡಬೇಕಾಗುತ್ತದೆ. ಇದಕ್ಕಾಗಿ ಧ್ಯಾನ ಅವಶ್ಯವಾಗಿದೆ. ಆರ್ತ, ರೌದ್ರ ಧರ್ಮ ಹಾಗೂ ಶುಕ್ಲ ಈ ನಾಲ್ಕು ಪ್ರಕಾರದ ಧ್ಯಾನಗಳನ್ನು ಹೇಳಿದ್ದಾರೆ. ಇವುಗಳಲ್ಲಿ ಆರ್ತ ಹಾಗೂ ರೌದ್ರ ಧ್ಯಾನಗಳು ಸಂಸಾರಕ್ಕೆ ಕಾರಣವಾಗಿವೆ. ಇವುಗಳಿಂದ

ಕರ್ಮಗಳ ಆಸ್ರವ ಹೆಚ್ಚಾಗಿರುತ್ತದೆ ಹಾಗೂ ನಂತರದ ಧರ್ಮ ಹಾಗೂ ಶುಕ್ಲಧ್ಯಾನಗಳು ಮೋಕ್ಷಕ್ಕೆ ಕಾರಣವಾಗಿದ್ದು ಇವುಗಳಿಂದ ಕರ್ಮಗಳ ನಿರ್ಜರೆಯಾಗಿ ಮೋಕ್ಷ ದೊರೆಯುತ್ತದೆ. ಆದ್ದರಿಂದ ಆತ್ಮ ಚಿಂತನೆ ಮಾಡಿರಿ ಹಾಗೂ ಮನಸ್ಸನ್ನು ಏಕಾಗ್ರಗೊಳಿಸಿ ಇದರಿಂದ ಸಮ್ಯಕ್ ಧ್ಯಾನ ಮಾಡಬಹುದು ಹಾಗೂ ಪುಣ್ಯಾರ್ಜನೆಯು ಆಗುತ್ತದೆ.

# 98. ನಮ್ಮ ದೇಶವು ಅಹಿಂಸೆ ಮತ್ತು ಅಧ್ಯಾತ್ಮದ ಭೂಮಿಯಾಗಿದೆ

ಭಾರತ ದೇಶವು ಅಸಂಖ್ಯ ದೇವತೆಗಳ, ಸಾಧು ಸಂತರ ಹಾಗೂ ಋಷಿ ಮುನಿಗಳ ದೇಶವಾಗಿದೆ. ಇಲ್ಲಿ ನದಿ, ವೃಕ್ಷ, ಹಸು ಮುಂತಾದವುಗಳನ್ನು ರಕ್ಷಿಸಲಾಗುತ್ತದೆ. ಪ್ರಾಚೀನ ಕಾಲದಿಂದಲೇ ಮನುಷ್ಯರಿಗೆ ಇಲ್ಲಿ ಮಾನವತೆ ಹಾಗೂ ಶಾಂತಿಯ ಪಾಠಗಳನ್ನು ಓದಿಸಲಾಗುತ್ತದೆ. ಈ ದೇವ ಭೂಮಿಯಲ್ಲಿ ಅಹಿಂಸೆ, ಸತ್ಯ, ಧರ್ಮ, ಪರೋಪಕಾರ, ತಪ, ಜ್ಞಾನ, ವೈರಾಗ್ಯಗಳ ಅತಿ ಹೆಚ್ಚಿನ ಮಹತ್ವವಿದೆ ಆದ್ದರಿಂದ ಇಲ್ಲಿ ಗುರುಗಳ ಹಾಗೂ ಋಷಿ–ಮುನಿಗಳ ಮಹತ್ವ ಅತಿ ಹೆಚ್ಚಿನದಾಗಿದೆ. ಬಾಲ್ಯದಲ್ಲಿ ಸರಸ್ವತಿ (ಜ್ಞಾನ)ಯ ಅವಶ್ಯಕತೆ ಇರುತ್ತದೆ ಹಾಗೂ ಜ್ಞಾನದಿಂದಲೇ ಸಂಪತ್ತಿನ ವೃದ್ಧಿಯಾಗುತ್ತದೆ. ಇದರಿಂದಾಗಿ ಜನರು ಸುಖಿ ಹಾಗೂ ಆನಂದಿತರಾಗಿದ್ದಾರೆ.

ಧ್ಯಾನ, ತಪ, ಯೋಗ ಇವು ನಮ್ಮ ಮೂಲ ಸಂಪತ್ತಿಯಾಗಿವೆ. ಇವು ನಮ್ಮನ್ನು ನಮ್ಮದೇ ಆದ ಕರ್ಮಗಳ ಮಾಧ್ಯಮದಿಂದ ಪುಣ್ಯ ಸಂಚಯ ಮಾಡಿದ ನಂತರ ನಮಗೆ ಸಿಗುತ್ತಿದ್ದ ಪುಣ್ಯ ನಮ್ಮ ಕೆಲಸಕ್ಕೆ ಬರುತ್ತವೆ.

ಧರ್ಮ ಜೈನ ಅಥವಾ ಹಿಂದೂ ಇಲ್ಲವೆ ಶೀಖ ಅಥವಾ ಕ್ರೈಸ್ತ ।
ಮುಸ್ಲಿಂ ಬೌದ್ಧರಾಗಿರಲಿ ಎಲ್ಲರಲ್ಲೂ ನೋಡಿರಿ ಎಲ್ಲಿಯೂ ಹೇಳಿಲ್ಲ ಹಿಂಸೆಯನು ॥
ಎಲ್ಲ ಧರ್ಮಗಳು ದಯಾಮೂಲವಾಗಿವೆ ಅದರ ಮಾತನ್ನೇ ಹೇಳುತ್ತವೆ
ಯಾವ ಜೀವಿಗೂ ಹೊಡೆಯದಿರಿ, ಇದೇ ಪಾಠವ ಕಲಿಸುತಲಿವೆ ॥

# 99. ಆಧ್ಯಾತ್ಮಿಕ ಧ್ಯಾನದಿಂದ ಕರ್ಮಗಳ ನಿರ್ಜರೆಯಾಗುತ್ತದೆ

ಧರ್ಮಧ್ಯಾನದ ಮಹತ್ವ ಬಹಳ ದೊಡ್ಡದಿದೆ. ಧ್ಯಾನದ ಇನ್ನೊಂದು ಹೆಸರು ಏಕಾಗ್ರತೆ. ಧ್ಯಾನದ ಸಂಬಂಧ ಆತ್ಮನೊಂದಿಗಿದೆ. ಧ್ಯಾನವು ವಿಶ್ವದಲ್ಲಿ ಎಲ್ಲರಿಗೂ ಆಗುತ್ತದೆ. ಆದರೆ ಆಧ್ಯಾತ್ಮಿಕ ಧ್ಯಾನ ಕೇವಲ ಜ್ಞಾನಿ ಸಾಧು–ಸಂತರಿಗೆ ಆಗುತ್ತದೆ. ಆಧ್ಯಾತ್ಮಿಕ ಧ್ಯಾನದಿಂದ ಕರ್ಮಗಳ ನಿರ್ಜರೆಯಾಗುತ್ತದೆ. ಅದು ವೀತರಾಗತೆಯ ಕಡೆಗೆ ಕೊಂಡೊಯ್ಯುತ್ತದೆ. ಕರ್ಮಗಳ ನಿರ್ಜರೆಯಿಂದ ಆತ್ಮನಿಗೆ ಮೋಕ್ಷ ದೊರೆಯುತ್ತದೆ. ಇನ್ನೊಂದು ವ್ಯವಹಾರಿಕ ಧ್ಯಾನವಿದ್ದು ಅದು ಜೀವಗಳ ಮೇಲೆ ದಯೆ ಹಾಗೂ ಕರುಣೆಯ ಕಡೆಗೆ ಕೊಂಡೊಯ್ಯುತ್ತದೆ. ಇದು ಪ್ರಶಸ್ತ ರಾಗ ಧ್ಯಾನದಲ್ಲಿ ಬರುತ್ತಿದ್ದು ಪುಣ್ಯ ಬಂಧಕ್ಕೆ ಕಾರಣವಾಗಿದೆ.

ಧ್ಯಾನವು ಕ್ರಿಯಾತ್ಮಕ ಮತ್ತು ನಿಷ್ಕ್ರಿಯಾತ್ಮಕವೆಂದು ಎರಡು ವಿಧವಾಗಿದೆ. ಇಲ್ಲಿ ನಿಷ್ಕ್ರಿಯಾತ್ಮಕ ಧ್ಯಾನವು ತನ್ನ ಕಾಯ ಹಾಗೂ ವಚನ ವ್ಯಾಪಾರವನ್ನು ತಡೆಗಟ್ಟುತ್ತಾ ಆತ್ಮನ ಮೇಲೆ ಮನವನ್ನು ಸ್ಥಿರವಾಗಿಟ್ಟು ಮಾಡಬೇಕು. ಈ ಧ್ಯಾನವು ಸಾಧುಗಳಿಗೆ ಆಗುತ್ತದೆ. ಇದು ಸಂಪೂರ್ಣವಾಗಿ ನಿಶ್ಚಯದೆಡೆಗೆ ಕೊಂಡೊಯ್ಯುತ್ತದೆ.

ಧ್ಯಾನವು ಆ್ಯಕ್ಷನ್‌ನಿಂದಾಗದೆ ಇನ್‌ಟೆನ್‌ಷನ್‌ದಿಂದಾಗುತ್ತದೆ. ಆದ್ದರಿಂದ ದ್ರವ್ಯ, ಕ್ಷೇತ್ರ, ಕಾಲ, ಭಾವಗಳಿಂದ ಧ್ಯಾನವಾಗುತ್ತದೆ. ಭಾವವು ಆತ್ಮನನ್ನು ಪರಮಾತ್ಮನೊಂದಿಗೆ ಜೋಡಿಸುವುದಕ್ಕೆ ಇರಬೇಕು. ಕಾಲ ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಾಯಂಕಾಲ ಇರಬೇಕು. ಕ್ಷೇತ್ರ ಶುದ್ಧ ಪ್ರಶಸ್ತ ಮತ್ತು ಏಕಾಂತವಾಗಿರಬೇಕು ಹಾಗೂ ದ್ರವ್ಯರೂಪ ತಮ್ಮ ಶರೀರ ಪದ್ಮಾಸನ, ಖಡ್ಗಾಸನ, ವಜ್ರಾಸನದ ರೂಪಗಳಲ್ಲಿ ಸೌಮ್ಯ ಮುದ್ರೆಯೊಂದಿಗಿರಬೇಕು ಹಾಗೂ ನಮ್ಮ ಆಹಾರವು ಸಹ ಶುದ್ಧವಾಗಿರಬೇಕು. ಇಂತಹ ಉತ್ಕೃಷ್ಟ ಅಭಿಪ್ರಾಯದಿಂದಲೇ ಧ್ಯಾನದ ಸಿದ್ಧಿಯು ಸರಳತೆಯಿಂದಲೇ ಆಗಬಲ್ಲದು.

# 100. ಪೃಥ್ವಿ, ಅಗ್ನಿ ಇತ್ಯಾದಿ ಪಂಚಧಾರಣೆಗಳಿಂದ ಮನಸ್ಸಿನ ಮೇಲೆ ವಿಜಯ

ಮನಸ್ಸಿನ ಮೇಲೆ ವಿಜಯ ಸಾಧಿಸಲು ತ್ಯಾಗಿ ಜನರು ಪಂಚಧಾರಣಾಗಳ ಆಲಂಬನ ಪಡೆಯುತ್ತಾರೆ. ಈ ಕಾರಣದಿಂದಾಗಿ ಅವರ ಮನಸ್ಸು ತಮ್ಮ ಆತ್ಮನ ಧ್ಯಾನದಲ್ಲಿ ಲೀನವಾಗಿ ಸಮತೆಯನ್ನು ಪಡೆಯುತ್ತದೆ. ಇದರ ಹೆಸರೇ

ಶುದ್ಧೋಪಯೋಗವೆಂದು ಹೇಳಿದ್ದಾರೆ. ಸಾಮಾಯಿಕದ ಕಾಲದಲ್ಲಿ ಪೃಥ್ವಿಯ ಧಾರಣೆ ಮಾಡುವಾಗ ಯೋಗಿಯು ಒಂದು ಪರ್ವತದ ಮೇಲೆ ಕಮಲಾಸನದಲ್ಲಿ ವಿರಾಜಮಾನನಾಗಿರುವ ರೂಪದ ಚಿಂತನೆ ಮಾಡುತ್ತಾನೆ. ಇದರ ಹೆಸರೇ ಪೃಥ್ವಿಧಾರಣೆ ಹಾಗೂ ನಾಭಿಸ್ಥಾನದಲ್ಲಿ 'ಹ್ರಂ'ದಿಂದ ಧ್ಯಾನಾಗ್ನಿ ಉತ್ಪನ್ನವಾದಾಗ ಕರ್ಮ ಇಂಧನವು ಸುಡುತ್ತಿರುವಂತೆ ಅನಿಸಿದಾಗ ಇದರ ಹೆಸರನ್ನು ಅಗ್ನಿಧಾರಣೆ ಎಂದು ಕರೆಯುತ್ತಾರೆ. ಕರ್ಮವು ಬೂದಿಯಾಗಿ ವಾಯುವಿನ ಮೂಲಕ ದೂರ ಹೋದಾಗ ಇದರ ಹೆಸರು ವಾಯುಧಾರಣೆಯಾಗಿದೆ. ಹೀಗೆ ಕರ್ಮದ ಬೂದಿಯ ಸ್ಥಳವನ್ನು ಮೇಘದಿಂದ ತೊಳೆಯುತ್ತಿರುವಂತೆ ಧ್ಯಾನ ಮಾಡುವುದರ ಹೆಸರು ಜಲಧಾರಣೆಯಾಗಿದೆ. ಹೀಗೆಯೇ ನಾನು ಜ್ಞಾನ, ದರ್ಶನ ಹಾಗೂ ಶುದ್ಧ ಸ್ವರೂಪಿ ಹಾಗೂ ಅಖಂಡ ಚೈತನ್ಯ ಸ್ವರೂಪಿ ಎಂದು ಚಿಂತನೆ ಮಾಡುವುದು ತತ್ತ್ವಧಾರಣಾ ಎಂದು ಕರೆಯಲಾಗುತ್ತದೆ. ಈ ರೀತಿಯ ಧಾರಣಾಗಳು ನಮ್ಮ ಅಲೆದಾಡುವ ಮನಸ್ಸನ್ನು ಏಕಾಗ್ರಗೊಳಿಸಿ ಆರೋಗ್ಯಕರ ಮನಸ್ಸನ್ನು ರೂಪಿಸುತ್ತದೆ. ಪ್ರತಿಯೊಬ್ಬ ಮನುಷ್ಯನು ಧ್ಯಾನಧಾರಣೆ ಮತ್ತು ಯೋಗಗಳ ಮಾಧ್ಯಮದಿಂದ ಅವಶ್ಯವಾಗಿ ನಮ್ಮವನ್ನಾಗಿ ಮಾಡಿಕೊಂಡಾಗ ಜೀವನ ಅಧ್ಯಾತ್ಮಿಕ ಎತ್ತರವನ್ನು ಸ್ಪರ್ಶಿಸುತ್ತದೆ.

## 101. ಜ್ಞಾನಿಯ ಆಭಾಮಂಡಲ ಪ್ರಭಾವಕವಾಗಿರುತ್ತದೆ

ಪರಮಾತ್ಮನ ಆಭಾ ಮಂಡಲದಲ್ಲಿ ಶಾಂತಿ ದೊರೆಯುತ್ತದೆ. ವಿಶ್ವದ ಪ್ರತಿಯೊಬ್ಬ ವ್ಯಕ್ತಿಗೂ ಆಭಾಮಂಡಲವಿರುತ್ತದೆ. ಆತನ ಮನಸ್ಸಿನಲ್ಲಿ ಜರುಗುವ ಆಚಾರ–ವಿಚಾರಗಳ ತರಂಗಗಳು ಆತನ ನಾಲ್ಕೂ ದಿಕ್ಕಿನಲ್ಲಿ ಇರುತ್ತವೆ. ಬಿಸಿ ವಸ್ತುವಿನ ಬಿಸಿಯು ಅದರ ನಾಲ್ಕೂ ಕಡೆಗೆ ಇರುತ್ತಿದ್ದರೆ ತಂಪಾದ ವಸ್ತುವಿನ ತಂಪು ಅದರ ನಾಲ್ಕೂ ಕಡೆಗೂ ಇರುತ್ತದೆ. ಹೀಗೆಯೇ ಧಾರ್ಮಿಕ ಹಾಗೂ ದಯಾಳು ವಸ್ತುವಿನ ಬಳಿ ಅವರ ಆಭಾಮಂಡಲದ ಪ್ರಭಾವ ಅಷ್ಟೇ ಇರುತ್ತದೆ. ಅರ್ಥಾತ್ ಅಂತಹ ವ್ಯಕ್ತಿಗಳ ಬಳಿ ಇರುವುದರಿಂದ ನಮಗೆ ಅಷ್ಟೇ ಉತ್ತಮ ಶಾಂತಿ ದೊರೆಯುತ್ತದೆ.

ಆಭಾಮಂಡಲವು ಒಂದು ಶಕ್ತಿಯಾಗಿದೆ. ಭಗವಂತನ ಆಭಾಮಂಡಲದ ಬಳಿ ಒಂದು ಹುಲಿ ಮತ್ತು ಹಸು ಒಂದೇ ಪಾತ್ರೆಯಲ್ಲಿ ನೀರು ಕುಡಿಯುತ್ತವೆ. ಅದೇ ಪ್ರಕಾರ ತೀರ್ಥಂಕರ ಭಗವಂತರ ಸಮವಸರಣದಲ್ಲಿ ಹನ್ನೆರಡು ಸಭೆಗಳಲ್ಲಿ ದೇವಿ ದೇವತೆ ಮನುಷ್ಯ ಹಾಗೂ ತಿರ್ಯಂಚ ಎಲ್ಲರೂ ಜೊತೆಯಾಗಿ ಕುಳಿತು ಭಗವಂತನ ಗುಣಗಳ ಚಿಂತನೆ ಮಾಡುತ್ತಾ ಪ್ರಭುವಿನ ವಾಣಿಯನ್ನು ಕೇಳುತ್ತಾರೆ. ಇದಕ್ಕೆ ವಿರುದ್ಧವಾಗಿ ಹಿಂಸಕ, ವ್ಯಸನಿ ಹಾಗೂ ಕ್ರೋಧಿ ವ್ಯಕ್ತಿಗಳ ಬಳಿ ಕುಳಿತುಕೊಂಡಾಗ ನಮ್ಮ ಮನಸ್ಸಿನಲ್ಲಿಯೂ ಸಹ ಕ್ರೂರತೆಯ ಭಾವ ಬರುತ್ತದೆ. ಆದ್ದರಿಂದ ನಮ್ಮ ಆಭಾಮಂಡಲವನ್ನು ಚೆನ್ನಾಗಿರುವಂತೆ ಮಾಡಲು ಉತ್ತಮ ಪರಿಣಾಮಗಳ ಸಿದ್ಧಿಮಾಡಿಕೊಳ್ಳಬೇಕು ಹಾಗೂ ಕೆಟ್ಟ ಭಾವನೆಗಳನ್ನು ವಿಸರ್ಜಿಸಿಕೊಳ್ಳಬೇಕು.

# 102. ಶಿಕ್ಷಣದಲ್ಲಿ ಸಂಸ್ಕಾರ ಹಾಗೂ ಶಾಕಾಹಾರಗಳ ಸಂದೇಶವಿರಲಿ

ತಾಯಿ–ತಂದೆಗಳ ನಂತರ ಶಿಕ್ಷಕರೇ ಮಕ್ಕಳಿಗೆ ಸರಿಯಾದ ಜ್ಞಾನ ಹಾಗೂ ಸಂಸ್ಕಾರ ನೀಡಬಲ್ಲರು. ಮಕ್ಕಳಲ್ಲಿ ಸರಿಯಾದ ಜ್ಞಾನದ ವಿಕಾಸವೇ ಅವರ ಭವಿಷ್ಯ ನಿರ್ಮಾಣದಲ್ಲಿ ಸಹಾಯಕವಾಗುತ್ತದೆ. ನಮ್ಮ ಭಾರತೀಯ ಸಂಸ್ಕೃತಿಯೇ ಹಾಗಿದ್ದು ಜ್ಞಾನ, ತಪ, ಅಹಿಂಸೆ, ಧರ್ಮ ಹಾಗೂ ದಯೆಯ ಪಾಠಗಳನ್ನು ಓದಿಸಲಾಗುತ್ತದೆ.

ಅಹಿಂಸೆಯ ಬಲದ ಮೇಲೆಯೇ ಮಹಾತ್ಮಾ ಗಾಂಧೀಜಿಯವರು ಈ ದೇಶಕ್ಕೆ ಸ್ವಾತಂತ್ರ್ಯತೆಯನ್ನು ಕೊಡಿಸಿದರು. ನಮ್ಮ ಧರ್ಮದಲ್ಲಿಯೂ ಸಹ ದಯೆಯನ್ನೇ ಧರ್ಮದ ಮೂಲವೆಂದು ಹೇಳಿದ್ದಾರೆ. “ಬದುಕು ಮತ್ತು ಬದುಕಲು ಬಿಡು”ಎಂಬ ಮಾನ್ಯತೆ ಇರುವ ಸಂದೇಶವನ್ನು ಸಂಪೂರ್ಣ ವಿಶ್ವದಲ್ಲಿ ಶಾಂತಿಯ ಪಾಠವನ್ನು ಓದಿಸುತ್ತಿದ್ದಾರೆ.

ಮಕ್ಕಳಿಗೆ ಶಿಕ್ಷಣದಲ್ಲಿ ಸಂಸ್ಕಾರದ ಜೊತೆಯಲ್ಲಿ ಶಾಕಾಹಾರದ ಪಾಠಗಳನ್ನು ಓದಿಸಿರಿ. ಶುದ್ಧ ಆಹಾರದಿಂದ ಮನಸ್ಸು ಹಾಗೂ ಚಿತ್ತವು ಶಾಂತಿ ಹಾಗೂ ಪ್ರಸನ್ನವಾಗಿರುತ್ತದೆ. ಹಾಗೂ ಆರೋಗ್ಯವನ್ನು ನೀಡುತ್ತದೆ. ಮಾಂಸಾಹಾರದಿಂದ ಮೂಕ ಪ್ರಾಣಿಗಳ ವಧೆಯಾಗುತ್ತದೆ ಹಾಗೂ ತರಹ ತರಹದ ರೋಗಗಳು ಹರಡುತ್ತಲಿವೆ. ಆದ್ದರಿಂದ ಎಲ್ಲರೂ ಮಾಂಸಾಹಾರವನ್ನು ತಡೆಗಟ್ಟುವಲ್ಲಿ ಜಾಗೃತರಾಗಬೇಕು. ಒಂದು ಮೊಟ್ಟೆಯ ಅಧ್ಯಯನದಿಂದ ಅದರಲ್ಲಿ 15,000 ರಂಧ್ರಗಳಿದ್ದು ಅದು ಆ ರಂಧ್ರಗಳ ಮೂಲಕ ಶ್ವಾಸ ತೆಗೆದುಕೊಳ್ಳುತ್ತದೆ ಎಂದು ತಿಳಿದುಬಂದಿದೆ. ಆದ್ದರಿಂದ ಅದರಲ್ಲಿ ಜೀವವಿದೆ ಎಂದು ತಿಳಿದುಬರುತ್ತದೆ.

ಸೌಂದರ್ಯ ಪ್ರಸಾಧನಗಳಲ್ಲಿಯೂ ಸಹ ಹಸುವಿನ ನೆಣ ಹಾಗೂ ಅಸಂಖ್ಯ ಪ್ರಾಣಿಗಳ ರಕ್ತ ಹಾಗೂ ಮೂಳೆಯ ಪ್ರಯೋಗ ಮಾಡಲಾಗುತ್ತದೆ. ಆದ್ದರಿಂದ ಅಂತಹ ವಸ್ತುಗಳನ್ನು ಕೂಡಲೇ ತ್ಯಾಗ ಮಾಡಬೇಕು ಅದರಿಂದ ಮೂಕ ಜೀವಗಳ ರಕ್ಷಣೆಯಾಗಬಲ್ಲದು ಹಾಗೂ ನಮ್ಮ ದೇಶ ಎಲ್ಲೆಡೆ ಅಹಿಂಸಾಮಯವಾಗಬಲ್ಲದು.

# 103. ಆದಿನಾಥರು 'ಕರ್ಮ' ಮಾಡುವ ಉಪದೇಶ ನೀಡಿದರು

ಯುಗದ ಆದಿಯಲ್ಲಿ ಆದಿನಾಥ ವೃಷಭ ದೇವರು ಭೋಗಭೂಮಿಯ ಅಂತ್ಯದಲ್ಲಿ, ಕರ್ಮಭೂಮಿಯ ಪ್ರಾರಂಭದಲ್ಲಿ ಎಲ್ಲರಿಗೂ ಅಸಿ, ಮಸಿ, ಕೃಷ್ಷಿ, ಶಿಲ್ಪ, ವಾಣಿಜ್ಯ ಮತ್ತು ವಿದ್ಯಾ ರೂಪದ ಆರು 'ಕರ್ಮ'ಗಳನ್ನು ಕಲಿಸಿದರು. ಎಲ್ಲ ಕರ್ಮಗಳಲ್ಲಿ ಕೃಷಿಯನ್ನು ಉತ್ತಮವೆಂದು ಹೇಳಿದರು. ಕೃಷಿ ಮಾಡುವವರು–ನ್ಯಾಯ–ನೀತಿಗಳಿಂದ ವ್ಯವಸಾಯದ ಮಾಧ್ಯಮದಿಂದ ದೇಶದ ಜನರ ಜೀವನವು ಸುಖಮಯವಾಗುತ್ತದೆ. ಧಾನ್ಯ ಹಾಗೂ ಫಲ ಮುಂತಾದ ಶಾಕಾಹಾರ ಬೆಳೆಗಳನ್ನು ಬೆಳೆಯಲಾಗುವಲ್ಲಿ ಪ್ರಭು ಭಕ್ತಿ, ದಾನ–ಧರ್ಮ, ಧ್ಯಾನ–ಯೋಗಿ ಮುಂತಾದ ರೂಪಗಳ ಆಧ್ಯಾತ್ಮಿಕ ಭಾವನೆಗಳು ವ್ಯಕ್ತವಾಗುತ್ತವೆ. ಆದ್ದರಿಂದ ಆದಿನಾಥರು ಕೃಷಿ ಮಾಡಿರಿ ಇಲ್ಲವೇ ಋಷಿಗಳಾಗಿ ಎಂದು ಹೇಳಿದರು. ಆದಿನಾಥ ಪ್ರಭುಗಳು ಎಲ್ಲಕ್ಕಿಂತ ಮೊದಲು ಕಬ್ಬಿನ ಬೆಳೆ ಬೆಳೆಯುವುದನ್ನು ಕಲಿಸಿದ್ದರು ಹಾಗೂ ಋಷಿ–ಮುನಿಗಳಾದ ಮೇಲೆ ಪ್ರಥಮ ಆಹಾರವನ್ನು ಕಬ್ಬಿನ ರಸವನ್ನೇ ಸ್ವೀಕರಿಸಿದರು. ಅವರ ಪ್ರಥಮ ಆಹಾರವನ್ನು ಶ್ರೇಯಾಂಸ ಸೋಮರಾಜ (ಚಕ್ರವರ್ತಿ)ರ ಪರಿವಾರದಲ್ಲಿ ಆಗಿದ್ದಿತು. ಅದರಿಂದ ಪ್ರಭಾವಿತರಾಗಿ ಮುನಿಗಳಾಗಿದ್ದ ಅನೇಕ ರಾಜರು ಸಹ ಅವರ ಮಾರ್ಗದಲ್ಲಿಯೇ ನಡೆದರು. ಯಾಕೆಂದರೆ ಭಾವನೆಯು ಶಿಲೆಯನ್ನು ಭಗವಂತನನ್ನಾಗಿ ಮಾಡುತ್ತದೆ ಹಾಗೂ ವಿವೇಕದ ಸ್ತರದಿಂದ ಕೆಳಗಿಳಿದಾಗ ವಾಸನಾದ ಕಾರಣ ಮನುಷ್ಯನನ್ನು ಸೈತಾನನ್ನಾಗಿ ಮಾಡುತ್ತದೆ.

# 104. ಸಂಯಮಪೂರ್ಣ ಜೀವನದಿಂದ ಆತ್ಮಿಕ ಶುದ್ಧಿ

ನಮ್ಮ ಜೀವನದಲ್ಲಿ ಸಂಯಮದಿಂದ ಆತ್ಮಶುದ್ಧಿ ಹಾಗೂ ಅಹಿಂಸಾಧರ್ಮದ ಪಾಲನೆಯಿಂದಲೂ ಸಂಯಮದ ಪಾಲನೆಯಾಗುತ್ತದೆ. ನಾವು ಅಹಿಂಸೆಯ ಪಾಲನೆ ಮಾಡುವಾಗ ನಾಲ್ಕು ಪ್ರಕಾರದ ಹಿಂಸೆಗಳು–ಸಂಕಲ್ಪೀ, ಉದ್ಯೋಗಿ ಮತ್ತು ವಿರೋಧಿ ಹಿಂಸೆಗಳಿಂದ ರಕ್ಷಿಸಿಕೊಳ್ಳಬೇಕು. ನಮ್ಮ ಸ್ವಾರ್ಥಕ್ಕೊಳಗಾಗಿ ಇತರರನ್ನು ಹೊಡೆಯುವುದು ಸಂಕಲ್ಪೀ ಹಿಂಸೆಯಾಗಿದೆ. ಕೃಷಿ ಮುಂತಾದ ಹಾಗೂ ಮನೆಯ ಸ್ವಚ್ಛತೆ–ಶುದ್ಧತೆ ಮಾಡುವಾಗ ಆಗುವುದು ಆರಂಭಿ ಹಿಂಸೆ, ದೊಡ್ಡ ದೊಡ್ಡ ವ್ಯಾಪಾರ–ಉದ್ಯೋಗಗಳಲ್ಲಿ ದೊಡ್ಡ ದೊಡ್ಡ ಯಂತ್ರಗಳಿಂದ ಆಗುವ ಹಿಂಸೆ ಉದ್ಯೋಗಿ ಹಿಂಸೆ ಹಾಗೂ ತನ್ನ ರಕ್ಷಣೆಗಾಗಿ ಮಾಡಿಕೊಳ್ಳುವ ಪ್ರಯತ್ನ ವಿರೋಧಿ ಹಿಂಸೆಯಾಗಿದೆ. ಹೀಗೆ ನಾಲ್ಕು ಪ್ರಕಾರದ ಹಿಂಸೆಯ ತ್ಯಾಗ ಮಾಡುವುದು ಹಾಗೂ ಜೀವನದಲ್ಲಿ ಅಹಿಂಸೆಯನ್ನು ಅಳವಡಿಸಿಕೊಳ್ಳುವುದು ಅಹಿಂಸೆಯ ಪಾಲನೆಯಾಗಿದೆ.

ಜಯಪುರದ ದೊರೆಯ ದಿವಾನ ಅಮರಚಂದರು ತಮ್ಮ ಅಹಿಂಸೆಯ ಪಾಲನೆಯಿಂದಾಗಿ ಒಂದು ಸಿಂಹಕ್ಕೆ ಜಿಲೇಬಿಯನ್ನು ತಿನ್ನಿಸಿ ಶಾಕಾಹಾರಿಯನ್ನಾಗಿ ಮಾಡಿದ್ದರು. ಅದರಿಂದ ಪ್ರಭಾವಿತನಾಗಿದ್ದ ರಾಜನು ಸಹ ಅಹಿಂಸಕನಾಗಿದ್ದನು. ಹೀಗೆ ಅಹಿಂಸಾಧರ್ಮದ ಮಹಿಮೆಯನ್ನು ತಿಳಿದಾಗ, ಓರ್ವ ಶುದ್ಧ ಹೃದಯವುಳ್ಳ ವ್ಯಕ್ತಿಯಲ್ಲಿ ಸಾವಿರ ವ್ಯಕ್ತಿಗಳಿಗಿಂತಲೂ ಹೆಚ್ಚಿನ ಶಕ್ತಿ ಇರುತ್ತದೆ, ಓರ್ವ ಸಾಧುವಿನಲ್ಲಿ ಸಾವಿರ ವಿದ್ವಾಂಸರಿಗಿಂತಲೂ ಹೆಚ್ಚಿನ ಶಕ್ತಿ ಇರುತ್ತದೆ.

ಆದ್ದರಿಂದ ದಯೆಯು ಧರ್ಮದ ಮೂಲವಾಗಿದ್ದು, ನಾವು ಹಿಂಸೆಯನ್ನು ತ್ಯಾಗ ಮಾಡದಿದ್ದರೆ ಮೂಕ, ಪ್ರಾಣಿಗಳಿಗೆ ಆಗುವ ಹಿಂಸೆಯಿಂದ ಸಂಕಲ್ಪೀ ಹಿಂಸೆ ಆಗುತ್ತಲೇ ಇರುತ್ತದೆ. ಆದ್ದರಿಂದ ನಾವು ಎಲ್ಲ ಪ್ರಕಾರದ ಹಿಂಸೆಯನ್ನು ತಡೆಗಟ್ಟುವ ಸಂಕಲ್ಪವನ್ನು ಮಾಡಬೇಕು.

# 105. ತೆಂಗಿನಕಾಯಿಯಿಂದ ಮೋಕ್ಷಮಾರ್ಗದ ಶಿಕ್ಷಣ ಸಿಗುತ್ತದೆ

ಸಂಯಮದ ಪಾಲಕರಿಗೆ ಶ್ರೀಫಲವನ್ನು ಏಕೆ ಏರಿಸುತ್ತಾರೆ. ಯಾಕೆಂದರೆ ಶ್ರೀಫಲ ಅರ್ಥಾತ್ ತೆಂಗಿನಕಾಯಿ ಸಹ ಮೋಕ್ಷಮಾರ್ಗದ ಶಿಕ್ಷಣವನ್ನು ನೀಡುತ್ತದೆ. ತೆಂಗಿನಕಾಯಿಯ ಮೇಲಿನ ಹಳದಿ ಬಣ್ಣದ ಸಿಪ್ಪೆಯನ್ನು ತೆಗೆದಾಗ ಅದರಿಂದ ಸಂಯಮ ವ್ಯಕ್ತಿಯು ದೀಕ್ಷೆಯ ಧಾರಣೆ ಮಾಡಲು ತನ್ನ ಬಟ್ಟೆಗಳನ್ನು ಕಳಚಿದ, ತೆಂಗಿನಕಾಯಿಯ ನಾರನ್ನು ತೆಗೆದಾಗ ಆ ಸಂಯಮಿಯು ತಪಶ್ಚರ್ಯದ ಮಾಧ್ಯಮದಿಂದ ಕಠೋರತೆಯನ್ನು ಹೊಂದಿದರೂ ತೆಂಗಿನಕಾಯಿಯ ಒಳಗಿನ ಕೊಬ್ಬರಿಯಂತೆ ನಿರ್ಮಲ, ಪವಿತ್ರ ಹಾಗೂ ಉಜ್ವಲನಾಗಿರುತ್ತಾನೆ. ಮುಂದೆ ಆ ಕೊಬ್ಬರಿ ಒಣಗಿದಾಗ ಕೈವಲ್ಯದ ಪ್ರಾಪ್ತಿಯನ್ನು ಸೂಚಿಸುತ್ತದೆ. ಆ ಕೊಬ್ಬರಿಯಿಂದ ತೆಗೆಯಲಾಗುವ ಎಣ್ಣೆ, ಹಾಲು ಹಾಗೂ ನೀರಿನಿಂದ ಮೇಲ್ಮಟ್ಟದಲ್ಲಿದ್ದ ಮುನಿರಾಜರು ರತ್ನತ್ರಯದ ಧಾರಣೆ ಮಾಡಿ ಕೈವಲ್ಯದ ಪ್ರಾಪ್ತಿಯಿಂದ ಕರ್ಮಗಳ ಕ್ಷಯ ಮಾಡಿ ಎಣ್ಣೆಯಂತೆ ಎಲ್ಲಕ್ಕಿಂತ ಮೇಲೆ ಸಿದ್ಧಶಿಲೆಯಲ್ಲಿ ವಿರಾಜಮಾನರಾಗುತ್ತಾರೆ. ಹೀಗೆ ಸಂಯಮಿಗಳಿಗೆ ತೆಂಗಿನಕಾಯಿಯನ್ನು ಸಮರ್ಪಿಸಿದಾಗ ಅದರ ಶಿಖರವನ್ನು ಮೇಲ್ಮುಖವಾಗಿಯೇ ಇಡುತ್ತಾರೆ. ಇದರಿಂದ ಅದು ಸಿದ್ಧಶಿಲೆಯೆಡೆಗೆ ಸಾಗುವ ಭಾವನೆಯನ್ನು ಪ್ರಕಟಿಸುತ್ತದೆ. ಇದಕ್ಕೆ ಶ್ರೀಫಲವೆಂದು ಯಾಕೆ ಕರೆಯುತ್ತಾರೆಂದರೆ 'ಶ್ರೀ'ದ ಅರ್ಥ ಲಕ್ಷ್ಮಿ ಎಂದಿದೆ. ಆದ್ದರಿಂದ ಅದು ಶ್ರೀಫಲ ಎಂಬ ಸಾರ್ಥಕ ಹೆಸರನ್ನು ಹೊಂದಿದೆ ಹಾಗೂ ಇದು ಮೋಕ್ಷಫಲದ ಪ್ರಾಪ್ತಿಯ ಭಾವನೆಯಿಂದ ಏರಿಸಲಾಗುತ್ತದೆ.

# 106. ಶಾಸ್ತ್ರಗಳಲ್ಲಿ ಧರ್ಮದ ಮಹಿಮೆಯನ್ನು ಹಾಡಿದ್ದಾರೆ

ಇಂದಿಗೂ ಭಾರತ ದೇಶದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಶಾಸ್ತ್ರಗಳ ಭಂಡಾರಗಳಿವೆ. ಅವುಗಳಲ್ಲಿರುವ ಶಾಸ್ತ್ರವು ಧಾರ್ಮಿಕ, ಆಧ್ಯಾತ್ಮಿಕ ಜ್ಞಾನದಿಂದ ತುಂಬಿದ್ದು ಅವುಗಳ ಸ್ವಾಧ್ಯಾಯವನ್ನು ಸಾಧು ಜನರು ನಿತ್ಯ-ಪ್ರತಿದಿನ ತಮ್ಮ ಆತ್ಮನನ್ನು ಮಹಾನ್‌ಗೊಳಿಸಲು ಹಾಗೂ ದೇಶದ ಸಂಸ್ಕೃತಿಯ ರಕ್ಷಣೆಗಾಗಿ ಮಾಡುತ್ತಾರೆ. ಜನ ಸಾಮಾನ್ಯರು ಸಹ ಜೀವನಲ್ಲಿ ಒಂದೆರಡು ಶಾಸ್ತ್ರಗಳನ್ನು ಓದುತ್ತಾ ಬಂದರೆ ಧರ್ಮದ ಮಾರ್ಗವು ಪ್ರಶಸ್ತವಾಗುತ್ತದೆ, ಜೀವನವೇ ಸಾರ್ಥಕವಾಗುತ್ತದೆ ಹಾಗೂ ಪ್ರತಿಯೊಬ್ಬ ವ್ಯಕ್ತಿಯ ದಿನದಲ್ಲಿ ಆಧ್ಯಾತ್ಮಿಕ ಜ್ಞಾನದ ಗಂಗೆ ಹರಿಯ ತೊಡಗುತ್ತಾಳೆ.

ಜ್ಯೇಷ್ಠ ಶುಕ್ಲ ಪಂಚಮಿಯಂದು ಬರುವ-ಆಚರಿಸಲಾಗುವ ಶ್ರುತ ಪಂಚಮಿ ಪರ್ವವು ಅತ್ಯಂತ ಮಹತ್ವದ ಪರ್ವವಾಗಿದ್ದು, ಇಂದಿಗೆ ಎರಡು ಸಾವಿರ ವರ್ಷಗಳ ಪೂರ್ವದಲ್ಲಿ ಆಚಾರ್ಯ ಧರಸೇನಸ್ವಾಮಿಗಳು ತಮ್ಮ ಶಿಷ್ಯಂದಿರಾದ ಪುಷ್ಪದಂತ ಹಾಗೂ ಭೂತಬಲಿ ಆಚಾರ್ಯರುಗಳಿಂದ ದ್ವಾದಶಾಂಗ ವಾಣಿಯ ಶಾಸ್ತ್ರಗಳಲ್ಲಿಂದ ಸ್ವಲ್ಪ ವಿಶೇಷ ಜ್ಞಾನ ನೀಡಿದ್ದರು. ಅದೇ ಜ್ಞಾನದಿಂದ ಆ ಆಚಾರ್ಯರುಗಳು ಷಟ್‌ಖಂಡಾಗಮ ಹೆಸರಿನಿಂದ ವಿಶಾಲ ಶಾಸ್ತ್ರದ ರಚನೆ ಮಾಡಿ ಈ ದಿನದಂದು (ಶ್ರುತ ಪಂಚಮಿ) ಪೂರ್ಣಗೊಳಿಸಿದ್ದರು. ಈ ಶಾಸ್ತ್ರಗಳಲ್ಲಿ ಆಚಾರ-ವಿಚಾರ, ಯೋಗ-ಧ್ಯಾನ ಹಾಗೂ ಮೋಕ್ಷದ ಜ್ಞಾನ ಪರಿಪೂರ್ಣವಾಗಿದ್ದು ಇದೇ ಸಂತಸದಲ್ಲಿ ದೇವತೆಗಳು-ಮನುಷ್ಯರು ಇವುಗಳ ವಿಶೇಷ ಪೂಜೆ ಮಾಡಿದರು ಹಾಗೂ ಇದರ ನೆನಪಿನಲ್ಲಿ ಈ ಪರ್ವವನ್ನು ಆಚರಿಸತೊಡಗಿದರು. ಜೈನಧರ್ಮದಲ್ಲಿ ಈ ಪರ್ವಕ್ಕೆ ಹೆಚ್ಚಿನ ಮಹತ್ವವಿದೆ.

# 107. ಕರ್ಮಗಳ ಮಹಾನತೆಯಲ್ಲಿ ಜನ್ಮದ ಸಾರ್ಥಕತೆ

ನಮ್ಮ ದೇಶದ ಜ್ಞಾನಿ ಜನರು "ಆವಶ್ಯಕತೆಯು ಅವಿಷ್ಕಾರದ ಜನನಿ" ಎಂದು ಹೇಳಿದ್ದಾರೆ. 2500 ವರ್ಷಗಳಿಗಿಂತ ಮೊದಲು ಮಾನವನು ದಾನವನಾಗಿದ್ದ ಒಂದು ಕಾಲವಿದ್ದಿತು. ದೇಶದಲ್ಲಿ ಹಿಂಸೆಯ ತಾಂಡವ ನೃತ್ಯ ನಡೆದಿದ್ದಿತು. ಧರ್ಮದ ಹೆಸರಿನಲ್ಲಿ ಪಶುಗಳ ಬಲಿ ಹಾಗೂ ಕುರಿ-ಆಡು-ಕುದುರೆ ಹೇಳುವುದಾದರೆ ನರ ಮನುಷ್ಯರ ಹೋಮ ಯಜ್ಞಗಳಾಗುತ್ತಿದ್ದವು. ಜೊತೆಯಲ್ಲಿ ಹೀಗೆ ಮಾಡವುದರಿಂದ ಪರಲೋಕದ ಜೀವನ ಸುಧಾರಿಸುತ್ತದೆ ಎನ್ನುವ ಭಾವನೆಯು ಪ್ರಚಾರದಲ್ಲಿದ್ದಿತು. ಆದರೆ ಕೇವಲ ಜೈನಧರ್ಮವಷ್ಟೇ ಅಲ್ಲ ಎಲ್ಲ ಧರ್ಮಗಳು ಅಹಿಂಸೆಯ ಶಿಕ್ಷಣ ನೀಡುತ್ತಿದ್ದವು. ಆದರೆ ಧರ್ಮಗ್ರಂಥಗಳ ಉಪದೇಶ ಕೇವಲ ಶಾಸ್ತ್ರಗಳಿಗೆ ಸೀಮಿತವಾಗಿದ್ದಿತು. ಕೇವಲ ಭಾರತದಲ್ಲಿ ಕೆಲವು ಜೈನಧರ್ಮದ ಅಹಿಂಸಕರು ಇದನ್ನು

ಜಾರಿಗೆ ತಂದಿದ್ದರು. ಮತ್ತೆ ಕೆಲವರು ತಿಳಿದು ಸಹ ಉಪದೇಶ ನೀಡುವಲ್ಲಿ ಭಯಭೀತರಾಗಿದ್ದರು. ಸಮಯದ ಗಾಳಿ ಏಕಸ್ವರೂಪದ್ದಾಗಿರುವುದಿಲ್ಲವೆಂದು ಹೇಳುತ್ತಾರೆ. ಪ್ರಕೃತಿಯಲ್ಲಿಯು ಸಹ ಏರಿಳಿತಗಳಿದ್ದು ಕೆಲವೊಮ್ಮೆ ಮಳೆ, ಕೆಲವೊಮ್ಮೆ ಛಳಿ ಮತ್ತು ಕೆಲವೊಮ್ಮೆ ಶೀತ ಹಾಗೂ ಉಷ್ಣಗಳಿರುತ್ತವೆ. ಒಂದು ದಿನ ಜನರು ಅತಿಯಾಗಿ ಜರುಗುತ್ತಿದ್ದ ಹಿಂಸೆ ಯಾವಾಗ ನಿಂತಿತು ಎಂದು ಯೋಚಿಸುತ್ತಾ ವರ್ತಮಾನದಲ್ಲಿ ವರ್ಧಮಾನರ ಅವಶ್ಯಕತೆ ಇದೆ ಎಂದು ಭಾವಿಸಿದರು. ಆಗ ಬಿಹಾರಿನ ವೈಶಾಲಿ ನಗರದಲ್ಲಿ ರಾಜಾ ಸಿದ್ಧಾರ್ಥನಲ್ಲಿ ರಾಜಾ ಚೇಟಕನ ಪುತ್ರಿ ತ್ರಿಶಲಾ (ಪ್ರಿಯಕಾರಿಣಿ) ರಾಜಾ ಸಿದ್ಧಾರ್ಥನ ಪತ್ನಿಯ ಗರ್ಭದಲ್ಲಿ ಸ್ವರ್ಗದಿಂದ ಬಂದ ವರ್ಧಮಾನ ಮಹಾವೀರನು ಚೈತ್ರ–ಶುಕ್ಲ ತ್ರಯೋದಶಿ ದಿನದಂದು ಉತ್ಪನ್ನನಾದನು. ಸಮಸ್ತ ಜನರಲ್ಲಿ ಸಂತೋಷ ಹರಡಿತು. ದೇವಲೋಕದಲ್ಲಿ ಗಂಟೆ ಹಾಗೂ ಮನೆಗಳಲ್ಲಿ ವಾದ್ಯಗಳು ಮೊಳಗ ತೊಡಗಿದವು. ರಾಜ ಭವನದಲ್ಲಿ, ರತ್ನಗಳ ಮಳೆಗರೆಯಲಾರಂಭಿಸಿತು. ಇಂದ್ರನು ಮಂಗಲ–ತಾಂಡವ ನೃತ್ಯವನ್ನು ಪ್ರಾರಂಭಿಸಿ ಜನ್ಮಾಭಿಷೇಕ ಹಾಗೂ ಶಚಿದೇವಿ ಹಾಗೂ ದೇವತೆಗಳಿಂದ ಮಾಡಲ್ಪಟ್ಟ ಸೇವೆಯೊಂದಿಗೆ ವರ್ಧಮಾನರ ಜ್ಞಾನ–ವಿದ್ಯೆ ಪರಾಕ್ರಮವನ್ನು ಕ್ರಮವಾಗಿ ವೃದ್ಧಿಂಗತ ವಾಗ ತೊಡಗಿದವು.

ಇಂತಹ ವಿಕಟ ವಾತಾವರಣದಲ್ಲಿ ಭಗವಾನ ಮಹಾವೀರನು ಬಾಲಬ್ರಹ್ಮಚಾರಿಯಾಗಿ ಮುನಿ ದೀಕ್ಷಾ ಪೂರ್ವಕ ಸಂಯಮಧಾರಣೆ ಮಾಡಿ ಸ್ವಪರ ಕಲ್ಯಾಣ ಮಾಡಲು "ಬದುಕು–ಬದುಕಲು ಬಿಡು" ಸಂದೇಶದೊಂದಿಗೆ ಅಹಿಂಸಾಮಯ ಜಗತ್ತನ್ನು ರೂಪಿಸಲು ಈ ಭೂಮಿಯ ಮೇಲೆ ಸ್ವರ್ಗದಿಂದ ಅವತರಿಸಿ ತುಂಬಿದ ಯೌವನದಲ್ಲಿ ಮುನಿ ಆಗಿ ಉತ್ಕೃಷ್ಟ ಧ್ಯಾನದಿಂದ ಕೈವಲ್ಯ ಪಡೆದು ಅರ್ಹಂತ ಭಗವಂತರ ಪದವಿಯನ್ನು ಪಡೆದದ್ದು ಅತಿದೊಡ್ಡ ಸಾರ್ಥಕವೆಂದು ಸಿದ್ಧವಾಯಿತು. ಹಿಂಸೆಯಿಂದ ಕೂಡಿದ ಎಲ್ಲ ಯಜ್ಞಗಳು ನಿಂತು ಹೋದವು ಹಾಗೂ ಅಹಿಂಸೆಯು ಧ್ವಜ ಹಾರಾಡಿತು. ಹಾಗೇ ನೋಡಿದರೆ ಭಾರತದ ಪ್ರತಿಯೊಂದು ಧರ್ಮದಲ್ಲಿ ಅಹಿಂಸೆಯ ಸಂದೇಶವನ್ನು ಹಾಡುತ್ತಾ ಬರಲಾಗಿದೆ. ಆದರೆ ಅದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಅವಶ್ಯಕತೆ ಇದೆ. ಇಂದಿಗೂ ಸಹ ಮಹಾಪುರುಷರ ಧರ್ಮಸೂತ್ರವನ್ನು ಜ್ಞಾಪಿಸಿಕೊಂಡರೆ ರಾಮ ಮತ್ತು ಮಹಾವೀರರ ರಾಜ್ಯವನ್ನು ಪಡೆಯಲು ತಡವಾಗುವುದಿಲ್ಲ. ಅಹಿಂಸೆ ಹಾಗೂ ತ್ಯಾಗದಲ್ಲಿ ಆ ಶಕ್ತಿ ಇದೆ. ಅದು ದಾನವನಿಂದ ಮಾನವನೇನು? ಭಕ್ತನಿಂದ ಭಗವಂತನನ್ನೆ ಮಾಡಿ ಬಿಡುತ್ತದೆ. ಮಾನವನು ಜನ್ಮದಿಂದ ಮಹಾನ್ ಆಗದೇ ಕಾರ್ಯದಿಂದ ಮಾನವನಾಗುತ್ತಾನೆ ಎಂಬ ಸೂಕ್ತಿಯು ಸಹ ಚರಿತಾರ್ಥವಾಗುತ್ತದೆ. ಯಾಕೆಂದರೆ ಕರ್ಮಗಳ ಮಹಾನತೆಯಲ್ಲಿಯೇ ಜನ್ಮದ ಸಾರ್ಥಕತೆ ಅಡಗಿದೆ.

# 108. ಸ್ಯಾದ್ವಾದ ಶೈಲಿಯು ವಚನಗಳ ಪಷ್ಕರಣೆ ಮಾಡುತ್ತದೆ

ಜೈನಧರ್ಮದಲ್ಲಿ ಸ್ಯಾದ್ವಾದದ ಸಿದ್ಧಾಂತವು ಬಹಳ ಮಹತ್ವಪೂರ್ಣ ಭೂಮಿಕೆಯನ್ನು ಹೊಂದಿದೆ. ಸ್ಯಾದ್ವಾದ ಶಬ್ದವು 'ಸ್ಯಾತ್' ಮತ್ತು 'ವಾದ' ಎಂಬ ಎರಡು ಶಬ್ದಗಳು ಸೇರಿ ಆಗಿದೆ. ಸ್ಯಾದ್'ದ ಅರ್ಥ ಆಗಾಗ ಅಥವಾ ಯಾವುದೋ ಒಂದು ಅಪೇಕ್ಷೆಯಿಂದ ಹಾಗೂ 'ವಾದ' ಅರ್ಥಾತ್ ವಿವರಿಸುವುದು ಎಂದಾಗಿದೆ.

ಸ್ಯಾದ್ವಾದ ಶೈಲಿಯಿಂದ ವಿವರಿಸುವಾಗ ವಿಶ್ವದಲ್ಲಿರುವ ಪ್ರತಿಯೊಂದು ವಸ್ತುವಿನಲ್ಲಿ ಇರುವ ಅನೇಕ ಗುಣ-ಧರ್ಮಗಳಲ್ಲಿ ಯಾವುದಾದರೊಂದು ಧರ್ಮದ ವಿವರಣೆ ಮಾಡುವಾಗ ಅನ್ಯ ಗುಣಧರ್ಮಗಳ ಅಸ್ತಿತ್ವವನ್ನು ಅಲ್ಲಗಳೆಯುವುದಿಲ್ಲ. ಆದ್ದರಿಂದ ಸ್ಯಾದ್ವಾದದ ಸಿದ್ಧಾಂತವು ನಮ್ಮ ವಚನ ಶೈಲಿಯ ಶುದ್ಧತೆಯನ್ನು ಶಾಶ್ವತವಾಗಿಡುತ್ತದೆ.

ಯಾವಾಗಲಾದರೂ ಯಾವುದೇ ವ್ಯಕ್ತಿ ಸ್ಯಾದ್ವಾದದ ವಿಶಿಷ್ಟತೆಯನ್ನು ಅರಿಯದೆ ಯಾವುದೇ ವಸ್ತು ಅಥವಾ ಆತ್ಮನ ಯಾವುದೇ ಗುಣಧರ್ಮವನ್ನು ನಿರಾಕರಣೆ ಮಾಡುತ್ತಾ ವಿವರಿಸಿದರೆ ಹಾಗೂ ಅಪೇಕ್ಷೆಯನ್ನು ತಿಳಿಯದೇ ಏಕಾಂತ ಪಕ್ಷದ ಹಠ ಸಾಧಿಸಿದರೆ ಅವರ ಅಲ್ಲಿಯ ಆ ವಿವರಣೆಯ ಸದೋಷತೆ, ನಿರ್ಲಜ್ಯತಾಮಯ, ಸ್ವಚ್ಛಂದತೆಯು ಅಶೋಭನೀಯ ಅಜ್ಞಾನಮಯವೆಂದೆನಿಸುತ್ತದೆ. ಆಗ ಸ್ಯಾದ್ವಾದ ಸಿದ್ಧಾಂತವು ಸಕಾರಾತ್ಮಕ, ಬಹಳ ಉದಾರವಾದ, ವಿನಯ ಹಾಗೂ ಗುಣಧರ್ಮಗಳ ಅಪೇಕ್ಷೆಯಿಂದ ಪರಸ್ಪರ ಪೂರಕವೆಂದು ಭಾವಿಸಲಾಗಿದೆ. ಇಲ್ಲಿ ಯಾವುದೇ ವಸ್ತುವಿನ ಅಸ್ತಿತ್ವ ಅಥವಾ ಧರ್ಮವನ್ನು ನಿರಾಕರಿಸದೆ ಯಾವುದೇ ಅಪೇಕ್ಷೆಯಿಂದ ಪ್ರತಿಯೊಂದು ವಸ್ತುವಿನ ಅನೇಕ ಗುಣಧರ್ಮ ಹಾಗೂ ಮಗ್ಗಲುಗಳನ್ನು ಅಸ್ತಿತ್ವರೂಪದಿಂದ ಸ್ವೀಕರಿಸುತ್ತಾ ಅದನ್ನು ತಮ್ಮ ಗುಣಧರ್ಮಗಳ ಅಪೇಕ್ಷೆಯಿಂದ ಮರ್ಯಾದೆಯಲ್ಲಿ ಇರುವ ಶಿಕ್ಷಣವನ್ನು ನೀಡುತ್ತದೆ. ಇಂತಹ ಸ್ಯಾದ್ವಾದವನ್ನು ತಿಳಿಯಲು ಎಲ್ಲಕ್ಕಿಂತ ಮೊದಲು ಅನೇಕಾಂತ ಧರ್ಮವನ್ನು ತಿಳಿಯುವುದು ಅವಶ್ಯಕವಾಗಿದೆ. ಆಚಾರ್ಯರು ಅನೇಕಾಂತದ ಪರಿಭಾಷೆಯನ್ನು ತಿಳಿಸುತ್ತಾ-

"ಅನೇಕೇ ಅಂತಃ ಧರ್ಮಃ ಯಸ್ಮಿನ ಸಃ ಅನೇಕಾಂತಃ"

ಎಂದಿದ್ದಾರೆ.

ಅನೇಕ ಅಂತಗಳು ಅರ್ಥಾತ್ ಧರ್ಮ (ಗುಣಧರ್ಮ) ಇರುವ ವಸ್ತುಗಳು ಅನೇಕಾಂತಗಳಾಗಿವೆ ಅಥವಾ ಅಂತಹ ವಿವರಣಾ ಶೈಲಿಯು ಅನೇಕಾಂತವೆಂದು ಹೇಳಲಾಗುತ್ತದೆ.

ಇದನ್ನು 'ರಾಮ'ನ ಉದಾಹರಣೆಯಿಂದ ತಿಳಿಯಬಹುದು. ಓರ್ವ ರಾಮನಲ್ಲಿ ಅನೇಕ ಅವಸ್ಥೆಗಳಿವೆ. ರಾಮನು ತಂದೆಯೂ ಆಗಿದ್ದಾನೆ, ಸಹೋದರನೂ ಆಗಿದ್ದಾನೆ. ರಾಮನು ರಾಜನೂ ಆಗಿದ್ದಾನೆ, ಪತಿಯೂ ಆಗಿದ್ದಾನೆ, ಪುತ್ರನೂ ಆಗಿದ್ದಾನೆ. ಅಳಿಯನೂ ಆಗಿದ್ದಾನೆ. ಈ ಎಲ್ಲ ಅವಸ್ಥೆಗಳು ಓರ್ವ ರಾಮನಲ್ಲಿಯೇ ವಿಭಿನ್ನ ವ್ಯಕ್ತಿಗಳ ಅಪೇಕ್ಷೆಗಳಿಂದ ಇದ್ದರೂ ಸಹ ತಂದೆ ಇತ್ಯಾದಿ ಯಾವುದೇ ಅವಸ್ಥೆಯನ್ನು ಮುಖ್ಯವನ್ನಾಗಿ ಹೇಳಬಹುದು ಆಗ ಉಳಿದ ಅವಸ್ಥೆಗಳು ಆ ಸಮಯದಲ್ಲಿ ಗೌಣ ಅಥವಾ ಅಮುಖ್ಯವೆಂದು ತಿಳಿಯಲಾಗುತ್ತದೆ ಹಾಗೂ 'ಸಹ' ಶಬ್ದದ ಸ್ಥಾನದಲ್ಲಿ 'ಯೇ' ಶಬ್ದದ ಪ್ರಯೋಗ ಮಾಡುತ್ತಾ ಕೇವಲ ತಂದೆಯೇ ಆಗಿದ್ದಾನೆ ಆಗ ಅವನು ಲವ–ಕುಶರ ಅಪೇಕ್ಷೆಯಿಂದ ತಂದೆ ಎಂದು ಸಿದ್ಧವಾಗುತ್ತದೆ. ಆದರೆ ಮತ್ತೆ 'ಲಕ್ಷ್ಮಣ' ಇತ್ಯಾದಿಗಳ ಅಪೇಕ್ಷೆಯಿಂದಲೂ ಕರೆದರೆ ಆ ವಿವರಣೆ ಅನುಚಿತ ಅಥವಾ ಮಿಥ್ಯಾ ಆಗುತ್ತದೆ. ಆದ್ದರಿಂದ 'ಸಹ'ದ ಸ್ಥಾನದಲ್ಲಿ 'ಯೇ' ಶಬ್ದದ ಪ್ರಯೋಗ ಸ್ಯಾದ್ವಾದ ಅಥವಾ ಅನೇಕಾಂತದ ಶೈಲಿಯಲ್ಲಿ ಬರುತ್ತದೆ. ರಾಮನಲ್ಲಿ ಆಗುವ ಸಹೋದರ, ರಾಜಾ, ಮುಂತಾದ ಅವಸ್ಥೆಗಳು ಅಥವಾ ಗುಣ ಧರ್ಮಗಳನ್ನು ಸಹ ಸ್ವೀಕರಿಸುತ್ತಾ ಸಾಗುತ್ತದೆ. ಆದ್ದರಿಂದ 'ಸಹ'ದ ಹೊಟ್ಟೆ ದೊಡ್ಡದಾಗಿದ್ದು ಅದರಲ್ಲಿ ಅನೇಕ ಗುಣಧರ್ಮಗಳು ಅವಸ್ಥೆಗಳು, ರೂಪಗಳು ಸಮಾವೇಶಗೊಂಡಿವೆ. ಆದರೆ 'ಯೇ'ದ ಹೊಟ್ಟೆ ಚಿಕ್ಕದಾಗಿದ್ದು ಇದರಲ್ಲಿ ಏಕತನ ಅಥವಾ ಏಕಾಂತತೆ ಇದೆ ಎಂದು ಹೇಳುತ್ತಾರೆ. 'ಯೇ' ಜೊತೆ ಅಪೇಕ್ಷಾ ದೃಷ್ಟಿಯನ್ನು ಸೇರಿದಾಗ ಉದಾ: ರಾಮನು ಲವಕುಶರ ಅಪೇಕ್ಷೆಯಿಂದ ತಂದೆಯೇ ಆಗಿರುತ್ತಾನೆ. ಬೇರೆ ಸಹೋದರ ಮುಂತಾದ ಅಪೇಕ್ಷೆಗಳಿಂದ ಅಲ್ಲ ಎಂದಾಗ 'ಯೇ' ಸಮ್ಯಕ್ ಆಗುತ್ತದೆ. ಹೀಗೆ ಅಪೇಕ್ಷೆ ಸಹಿತವಾಗಿ ಮಾಡಿದ 'ಯೇ' ಸಮ್ಯಕ್ ಆಗುತ್ತದೆ. ಹೀಗೆ ಅಪೇಕ್ಷೆ ಸಹಿತವಾಗಿ ಮಾಡಿದ 'ಯೇ' ಯ ಪ್ರಯೋಗ ಸಮ್ಯಕ್ ಏಕಾಂತದಲ್ಲಿಯೇ ಬರುತ್ತದೆ. ಇದನ್ನೇ ಅನೇಕಾಂತವೆಂದು ಕರೆಯಲಾಗುತ್ತದೆ. ಇದಕ್ಕೆ ವಿಪರೀತವಾಗಿ ಅಪೇಕ್ಷೆ ಇಲ್ಲದೇ 'ಯೇ'ದ ಪ್ರಯೋಗ ಮಿಥ್ಯಾ ಏಕಾಂತವೆಂದು ಕರೆಯಲ್ಪಡುತ್ತದೆ.

ಇದೇ ವಿಷಯದ ಪುಷ್ಟಿಗಾಗಿ ಆಗಮದಲ್ಲಿ ಹೇಳಿರುವ ನ್ಯಾಯಕ್ಕೆ ಸಂಬಂಧಿಸಿದಂತೆ ಅಪೇಕ್ಷಾ ದೃಷ್ಟಿ ಎನ್ನಿ ಅಥವಾ ವಿವಕ್ಷಾ ಅಥವಾ ಅರ್ಪಿತ ಹಾಗೂ ಮುಖ್ಯ ಈ ಎಲ್ಲ ಶಬ್ದಗಳು ಒಂದೇ ಆಗಾಗ ಅರ್ಥಾತ್ ಯಾವುದೋ ಒಂದು ಅಪೇಕ್ಷಾ ರೂಪ ಅರ್ಥದ ಧ್ಯೋತಕವಾಗಿವೆ, ಪ್ರಯೋಗಕ್ಕಾಗಿ ಒಂದು ವಸ್ತು ರೂಪ ಆತ್ಮನನ್ನು ತೆಗೆದುಕೊಂಡಾಗ ಆ ಆತ್ಮ ಆಗಾಗ ತಿಳಿಯುತ್ತದೆ ಎಂದು ಹೇಳುವುದು ಅದರ ಜ್ಞಾನ ಗುಣವನ್ನು ಮುಖ್ಯ ಮಾಡಿ ಗೌಣ ರೂಪ ದರ್ಶನಗುಣವನ್ನು ಸಹ ಸ್ವೀಕಾರ ಮಾಡುವುದಿದೆ ಅರ್ಥಾತ್ ಆತ್ಮನು ಜ್ಞಾನ ಗುಣದ ದೃಷ್ಟಿಯಿಂದ ಅಥವಾ ಅಪೇಕ್ಷೆಯಿಂದ ಅಥವಾ ವಿವಕ್ಷೆ ಅಥವಾ ಅರ್ಪಿತತ್ವ ಹಾಗೂ ಮುಖ್ಯತನದಿಂದ ಆಗಾಗ (ಯಾವುದೋ ಒಂದು ಅಪೇಕ್ಷೆಯಿಂದ) ತಿಳಿಯುತ್ತದೆ. ಆದರೂ ಸಹ ಅದರಲ್ಲಿ ಬೇರೆ ಬೇರೆ ಅಪೇಕ್ಷೆಗಳಿಂದ ದರ್ಶನ ಮುಂತಾದ ಗುಣಗಳು ಸಹ


ಗೌಣರೂಪದಿಂದ ಇವೆ. ದರ್ಶನ ಗುಣದ ಅಪೇಕ್ಷೆಯಿಂದ ನೋಡಿದಾಗ ನೋಡುವುದು ಪ್ರಮುಖವಾಗುತ್ತದೆ. ಆಗ ಜ್ಞಾನ ಗುಣದಿಂದ ತಿಳಿಯುವ ರೂಪ ವಿವರಣೆ ಗೌಣವಾಗಿ ಬಿಡುತ್ತದೆ. ಆದರೆ ಅವಿವಕ್ಷಿತ ಅಥವಾ ಪ್ರತಿಪಕ್ಷಿ ಗುಣವಸ್ತುವಿನಿಂದ ಪೂರ್ಣರೂಪದಲ್ಲಿ ವಿಷಯವಾಗುವುದಿಲ್ಲ, ಎಲ್ಲವುಗಳ ಅಸ್ತಿತ್ವ ಶಾಶ್ವತವಾಗಿರುತ್ತದೆ. ಇಂತಹ ಅನೇಕಾಂತಮಯ ವಿವರಣಾ ವಸ್ತುವಿನ ಯಾವುದೇ ಗುಣಧರ್ಮವನ್ನು ನಿರಾಕರಣೆ ಮಾಡದೇ ಸ್ಯಾದ್ವಾದ ಶೈಲಿಯಲ್ಲಿ ಮಾಡಿದರೆ ರಾಮ ಮುಂತಾದವುಗಳಲ್ಲಿ ಆಗುವ ಎಲ್ಲ ಅವಸ್ಥೆಗಳು ಹಾಗೂ ಆತ್ಮದಂತಹ ವಸ್ತುವಿನಲ್ಲಿ ಆಗುವ ಜ್ಞಾನ, ದರ್ಶಕ, ಶುದ್ಧ, ಅಶುದ್ಧ, ಸಂಸಾರಿ ಹಾಗೂ ಮುಕ್ತದಂತಹ ವಿಭಿನ್ನ ಅವಸ್ಥೆಗಳು ಅಪೇಕ್ಷಾ ದೃಷ್ಟಿಯಿಂದ ತಿಳುವಳಿಕೆಗೆ ಬರುತ್ತವೆ ಹಾಗೂ ಇಂತಹ ಸ್ಯಾದ್ವಾದದ ವಿವರಣಾ ಶೈಲಿಯಿಂದ ಹೇಳುವವರ ಮಾತು ಅವಿರೋಧಿ, ನಿರ್ದೋಷ ಹಾಗೂ ನಿರ್ಮಲವಾಗಿರುವುದರಿಂದ ಪರಿಷ್ಕೃತವೆಂದು ಭಾವಿಸಲಾಗುತ್ತದೆ.

'ಯೇ' ದಿಂದ 'ಸಹ'ದ ಕಡೆಗೆ ನಾವೆಲ್ಲರೂ ಸಾಗಿದರೆ ।
ಆರರ ಮುಂದೆ ಮೂರು ಇದ್ದರೆ ವಿಶ್ವಶಾಂತಿಯ ಯೋಗ ॥

## ಆಚಾರ್ಯ ಶ್ರೀ 108 ಆರ್ಜವಸಾಗರ ಮಹಾರಾಜರ ಚಾತುರ್ಮಾಸ ಸ್ಥಳಗಳು


| | |
|---|---|
| 1985 | : ಸಿದ್ಧಕ್ಷೇತ್ರ ಆಹಾರ್‌ಜೀ (ಮಧ್ಯಪ್ರದೇಶ) |
| 1986 | : ಅತಿಶಯ ಕ್ಷೇತ್ರ ಪಪೌರಾಜೀ (ಮಧ್ಯಪ್ರದೇಶ) |
| 1987 | : ಅತಿಶಯ ಕ್ಷೇತ್ರ ಥೂಬೋನಜೀ (ಮಧ್ಯಪ್ರದೇಶ) |
| 1988 | : ಮಡಿಯಾಜೀ ಜಬ್ಬಲ್‌ಪುರ (ಮಧ್ಯಪ್ರದೇಶ) |
| 1989 | : ಸಿದ್ಧಕ್ಷೇತ್ರ ಕುಂಡಲಪುರ (ಮಧ್ಯಪ್ರದೇಶ) |
| 1990 | : ಸಿದ್ಧಕ್ಷೇತ್ರ ಮುಕ್ತಾಗಿರಿ (ಮಹಾರಾಷ್ಟ್ರ) |
| 1991 | : ಕೋಪರಗಾಂವ್ (ಮಹಾರಾಷ್ಟ್ರ) |
| 1992 | : ಸಾಂಗ್ಲಿ, ನೇಮಿನಾಥನಗರ (ಮಹಾರಾಷ್ಟ್ರ) |
| 1993 | : ಶ್ರವಣಬೆಳಗೊಳ (ಕರ್ನಾಟಕ) |
| 1994 | : ದಾವಣಗೆರೆ (ಕರ್ನಾಟಕ) |
| 1995 | : ಪೊನ್ನೂರುಮಲೈ (ತಮಿಳುನಾಡು) |
| 1996 | : ಪೊನ್ನೂರುಮಲೈ (ತಮಿಳುನಾಡು) |
| 1997 | : ಕನ್ನಲಮ್ (ತಮಿಳುನಾಡು) |
| 1998 | : ವಿಶಾಖಾಚಾರ್ಯ ತಪೋನಿಲಯ (ತಮಿಳುನಾಡು) |
| 1999 | : ನಲ್ಲವನ ಪಾಲೈಯಮ್, (ತಮಿಳುನಾಡು) |
| 2000 | : ವಿಶಾಖಾಚಾರ್ಯ ತಪೋನಿಲಯ (ತಮಿಳುನಾಡು) |
| 2001 | : ಆರಣಿ (ತಮಿಳುನಾಡು) |
| 2002 | : ಶಿವಮೊಗ್ಗ (ಕರ್ನಾಟಕ) |
| 2003 | : ಕೋಪರಗಾಂವ್ (ಮಹಾರಾಷ್ಟ್ರ) |
| 2004 | : ಟಿ.ಟಿ. ನಗರ, ಭೋಪಾಲ (ಮಧ್ಯಪ್ರದೇಶ) |
| 2005 | : ಅಶೋಕ್‌ನಗರ (ಮಧ್ಯಪ್ರದೇಶ) |
| 2006 | : ರಾಂಚಿ (ಝಾರ್‌ಖಂಡ್) |
| 2007 | : ದಮೋಹ (ಮಧ್ಯಪ್ರದೇಶ) |
| 2008 | : ಗ್ವಾಲಿಯರ್ (ಮಧ್ಯಪ್ರದೇಶ) |
| 2009 | : ಅಜಮೇರ (ರಾಜಸ್ಥಾನ) |
| 2010 | : ಜಯಪುರ (ರಾಜಸ್ಥಾನ) |
| 2011 | : ರಾಮಗಂಜ ಮಂಡಿ (ರಾಜಸ್ಥಾನ) |
| 2012 | : ಸೂರತ್ (ಗುಜರಾತ) |
| 2013 | : ಇಂದೋರ್ (ಮಧ್ಯಪ್ರದೇಶ) |
| 2014 | : ಖಾತೇಗಾಂವ್ (ಮಧ್ಯಪ್ರದೇಶ) |
| 2015 | : ತಾರಂಗಾಜೀ ಸಿದ್ಧಕ್ಷೇತ್ರ (ಗುಜರಾತ) |
| 2016 | : ಮಂಡಿದೀಪ, ಭೋಪಾಲ (ಮಧ್ಯಪ್ರದೇಶ) |

## ನಮ್ಮ ಪರಂಪರೆಯ ಪ್ರಥಮಾಚಾರ್ಯರು



ಚಾರಿತ್ರ ಚಕ್ರವರ್ತಿ ಆಚಾರ್ಯ ಶ್ರೀ
108 ಶಾಂತಿಸಾಗರ ಮಹಾರಾಜರು

## ನಮ್ಮ ದೀಕ್ಷಾಗುರುಗಳು



ಸಂತ ಶಿರೋಮಣಿ ಆಚಾರ್ಯ ಶ್ರೀ
108 ವಿದ್ಯಾಸಾಗರ ಮಹಾರಾಜರು

## ಆಚಾರ್ಯ ಪದವಿ ನೀಡಿದವರು



ಆಚಾರ್ಯ ಶ್ರೀ 108
ಸೀಮಂಧರಸಾಗರ ಮಹಾರಾಜರು

## ಆಚಾರ್ಯಶ್ರೀ

ಜನ್ಮ: 11.09.1967 ಮುನಿದೀಕ್ಷೆ: 31.03.1988
ಆಚಾರ್ಯ ಪದ : 25.01.2015



ಆಚಾರ್ಯ ಶ್ರೀ 108
ಆರ್ಜವಸಾಗರ ಮಹಾರಾಜರು